ಕಸ್ತೂರಿ

ಮಾರ್ಚ್, ೧೯೭೭




ಸದಾ ಲವಲವಿಕೆಯಿಂದಿರಿ
ಸತ್ವಭರಿತ ಉತ್ತೇಜಕರ ನೆಸ್‌ಕ ಫೆಯ
ರುಚಿ ಸವಿಯಿರಿ
ನೆಸ್‌ಕಾಫೆ®
NESTLE
NESCAFE
instant coffee
100% ಶುದ್ಧವಾದ ಕಾಫಿಯಿಂದ
ತಯಾರಿಸಲ್ಪಟ್ಟ ಏಕಮಾತ್ರ
ಇನ್‌ಸ್ಟೆಂಟ್ ಕಾಫಿ
ವಿಶ್ವದಲ್ಲೇ
ಅತ್ಯಂತ ಹೆಚ್ಚು
ಮಾರಾಟವಾಗುವ
ಇನ್‌ಸ್ಟೆಂಟ್ ಕಾಫಿ
NSC-1/77 KAN

ಕಸ್ತೂರಿ



ವ್ಯವಸ್ಥಾಪಕ ಸಂಪಾದಕ:
ರಂಗನಾಥ ದಿವಾಕರ

ಪ್ರಧಾನ ಸಂಪಾದಕರು:
ಖಾದ್ರಿ ಶಾಮಣ್ಣ

ಕಲೆ:
ಕೆ. ಬಿ. ಕುಲಕರ್ಣಿ

ಮುಖಪುಟ:
ಬಸ್ತಾರ್ ಡಮರುಗ
ಗೋಪಾಲ ಸುಬೇದಾರ

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟಣೆಗಾಗಿ ಕಳುಹಿಸುವ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಕಾಗದದ ಒಂದೇ ಮಗ್ಗುಲಿಗೆ ವಿರಳವಾಗಿ ಬರೆದಿರಬೇಕು. ಲೇಖಕರ ಹೆಸರು ವಿಳಾಸ ಸ್ಪಷ್ಟವಿರಬೇಕು. ಅನುವಾದ ರೂಪಾಂತರ ಇಲ್ಲವೆ ಸಾಧಾರ ಲೇಖನಗಳಾದರೆ ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರು ವಿಳಾಸಗಳಿರಬೇಕು. ಇಂಥ ಲೇಖನಗಳಿಗೆ ಪೂರ್ವಾನುಮತಿ ದೊರಕಿಸಿಕೊಂಡರೆ ಉತ್ತಮ. ಅಸ್ವೀಕೃತ ಲೇಖನಗಳು ತಿರುಗಿ ಬೇಕಾಗಿದ್ದರೆ, ಜತೆಗೆ ಸಾಕಷ್ಟು ಅಂಚೆ ಚೀಟಿಗಳನ್ನು ಇರಿಸಿ. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗೆ ಇದೆ.

ಚಂದಾದಾರರಿಗೆ ಸೂಚನೆ

ಕಸ್ತೂರಿ ತಿಂಗಳ ಒಂದನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲುಕಟ್ಟೆಯಲ್ಲಿ ಮೊದಲು ವಿಚಾರಿಸಿ, ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಚಂದಾ ದರ

೩ ವರ್ಷ	(ಅಂಚೆ ಸೇರಿ)	ರೂ. ೩೫-೦೦
೨ ವರ್ಷ	,,	ರೂ. ೨೫-೦೦
೧ ವರ್ಷ	,,	ರೂ. ೧೪-೦೦
ಅರ್ಧ ವರ್ಷ	,,	ರೂ. ೭-೫೦

KASTURI March 1977

ಈ ಸಂಚಿಕೆಯಲ್ಲಿ

ಯಾರ ಉಡಿಯಲ್ಲಿ ಬೀಳಬಹುದೆಂಬುದು ಹೇಳಲಸಾಧ್ಯವಾದಂಥ ಅನಿಶ್ಚಿತತೆಯುಂಟಾಯಿತು. ಅಲ್ಲದೆ ಫೋರ್ಡ್‌ರಿಗೆ ಯಾವ ಕ್ಷಣಕ್ಕೂ ಅನುಕೂಲವಾಗಿ ಪರಿಣಮಿಸಬಹುದಾದಂಥ ಇನ್ನೊಂದು ಮಹತ್ವದ ಅಂಶವೂ ಇತ್ತು. ಅದೆಂದರೆ ಫೋರ್ಡ್ ಯಾರು, ಅವರು ಅದುವರೆಗೆ ಗೈದ ಸಾಧನೆಯೇನು ಎಂಬುದು ಅಮೇರಿಕನ್ ಮತದಾರನಿಗದು ಸುಸ್ಪಷ್ಟವಾಗಿತ್ತು. ಆದರೆ ಎಷ್ಟೆಲ್ಲ ಪ್ರಚಾರ ಮಾಡಿದಾಗಲೂ ಜಿಮ್ಮಿ ಕಾರ್ಟರ್ ತಮ್ಮ ರಾಜ್ಯದ ಹೊರಗಡೆ ಇನ್ನೂ ಅಪರಿಚಿತರಾಗಿಯೇ ಉಳಿದಿದ್ದರು. ಮತದಾರರನ್ನು ಒಲಿಸಿಕೊಳ್ಳುವುದಕ್ಕಾಗಿ, ತಮ್ಮ ಮೂಲ ನಿಲುವಿಗೆ ದೃಢವಾಗಿ ಅಂಟಿಕೊಂಡಿರುವಾಗಲೂ, ಕಾರ್ಟರ್ ಹತ್ತಾರು ಬಗೆಯ ಆಶ್ವಾಸನೆ ಕೊಡಬೇಕಾಗುತ್ತಿತ್ತು. ಅದರ ಪರಿಣಾಮ ಅವರ ಹೇಳಿಕೆಗಳಲ್ಲಿ ವಿರೋಧಾಭಾಸ ವ್ಯಕ್ತವಾಗುವುದು. "ಕಾರ್ಟರ್ ? ಯಾರೀತ ?" ಎಂಬ ಪ್ರಶ್ನೆ

ಇವರಿಂದು ಪ್ರಥಮ ಮಹಿಳೆ

ಜಿಮ್ಮಿ ಕಾರ್ಟರ್ ಅಮೇರಿಕನ್ ಜನಕ್ಕೆ ಹೊಸಬ, ಅಪರಿಚಿತ. ಆದರೂ ಅವರು ಚುನಾವಣೆಯಲ್ಲಿ ಗೆದ್ದರು. ಅವರ ಯಶಸ್ಸಿಗಾಗಿ ದುಡಿದವರು ಅನೇಕರು. ಆದರೆ ಆ ಅನೇಕರಲ್ಲೂ ಒಂದು ವ್ಯಕ್ತಿಯ ಹೆಸರು ಮಾತ್ರ ಪ್ರತ್ಯೇಕವಾಗಿಯೇ ಗೋಚರಿಸುತ್ತವೆ. ಆ ವ್ಯಕ್ತಿಯೇ ಇಂದು ಅಮೇರಿಕದ ಪ್ರಥಮ ಮಹಿಳೆ, ಅಧ್ಯಕ್ಷರ ಧರ್ಮಪತ್ನಿ. ಈ ಮುನ್ನ ಕೆಲವು ಹಿರಿಯಾಳುಗಳ ಹೆಂಡತಿಯರು ಚುನಾವಣೆಗಳಲ್ಲಿ ಗಂಡನ ಯಶಸ್ಸಿಗಾಗಿ ದುಡಿದ ಉದಾಹರಣೆಗಳು ಅಮೇರಿಕನ್ ಇತಿಹಾಸದಲ್ಲಿ ಸಿಕ್ಕುತ್ತವೆ. ಆದರೆ ಜಿಮ್ಮಿ ಕಾರ್ಟರರ ಹೆಂಡತಿ ರೋಸ್‌ಲಿನ್ ಇನ್ನೆಲ್ಲರಿಗಿಂತಲೂ ಉಚ್ಚ ಸ್ಥಾನದಲ್ಲಿ ಖಂಡಿತ ನಿಲ್ಲುತ್ತಾರೆ.

ರೋಸ್‌ಲಿನ್ ಕೂಡ ಜಿಮ್ಮಿಯ ಊರವರೇ. ಚಿಕ್ಕಂದಿನಿಂದಲೂ ಜಿಮ್ಮಿಯನ್ನು ಬಲ್ಲವರು. ಅವರಿಬ್ಬರ ಜೊತೆ ಬಹುಶಃ ಅಮೇರಿಕದ ಇತಿಹಾಸದಲ್ಲಿ ಯಾವುದೇ ಪತಿ-ಪತ್ನಿಯರು ಸಾಧಿಸಲಸಾಧ್ಯವಾದದ್ದನ್ನು ಸಾಧಿಸಿದೆ. ಹದಿನೆಂಟು ತಿಂಗಳಲ್ಲಿ ಸುಮಾರು ೫೦೦೦ ಮೈಲುಗಳಷ್ಟು ಪ್ರವಾಸ ಮಾಡಿ ಗಂಡನಿಗಾಗಿ ಲಕ್ಷಾವಧಿ ಮತಗಳನ್ನು ರೋಸ್‌ಲಿನ್ ಗಳಿಸಿರಬೇಕು. ಜಿಮ್ಮಿ, ರೋಸ್‌ಲಿನ್ ಇಬ್ಬರೂ ಮುಂಗಡ ಯೋಚಿಸದೇ ಏನನ್ನೂ ಮಾಡುವವರಲ್ಲ. ಒಮ್ಮೆ ಜಿಮ್ಮಿ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸುವುದೆಂದು ನಿರ್ಧಾರವಾದೊಡನೆಯೇ ದೇಶವನ್ನು ಎರಡು ಭಾಗಗಳಾಗಿ ಹಂಚಿಕೊಂಡು ಇಬ್ಬರೂ ಪ್ರತ್ಯೇಕವಾಗಿಯೇ ಪ್ರಚಾರಸತ್ರ ಕೈಕೊಂಡರು. ಇಬ್ಬರೂ ಜೊತೆಯಾಗಿ ತಿರುಗುವುದು ವ್ಯರ್ಥ ಕಾಲಹರಣ ಎಂದವರು ಬಗೆದರು. ಪ್ರತಿ ವಾರದಲ್ಲಿಯೂ ಐದು ದಿನಗಳನ್ನವರು ಹೊರಗೆ ಅಲೆಯುತ್ತಲೇ ಕಳೆಯಬೇಕಾಗುತ್ತಿತ್ತು. ನಿತ್ಯ ನಸುಕಿನ ಐದು ಗಂಟೆಗೆದ್ದು ದಿನವನ್ನು ಆರಂಭಿಸುತ್ತಿದ್ದ ರೋಸ್‌ಲಿನ್ ಮಧ್ಯರಾತ್ರಿ ಮೀರಿದ ನಂತರವೇ ವಿಶ್ರಾಂತಿ ಪಡೆಯುತ್ತಿದ್ದರು. ಸದಾ ನಗುಮೊಗದಿಂದಿರುತ್ತಿದ್ದ ಅವರು ಗಂಡನಂತೆಯೇ ಅವಶ್ಯವೆನಿಸಿದಾಗ ಉಕ್ಕಿನಷ್ಟೇ ಕಠಿಣರಾಗಬಲ್ಲರು.

ಕೂಡ ಒಂದು ವೈಚಿತ್ರ್ಯವೇ!

ನಿಕ್ಸನ್ನರ ಉಪಾಧ್ಯಕ್ಷರಾಗಿದ್ದ ಅಗ್ನ್ಯೂರಿಗೆ ವಾಟರ್‌ಗೇಟ್ ಪ್ರಕರಣ ಅಧ್ಯಕ್ಷರ ಬಲಿ ತೆರೆದುಕೊಳ್ಳಬಹುದೆಂಬ ವಾಸನೆ ಬಡಿದಿತ್ತು. ಶ್ವೇತಭವನದ ಅಗ್ರಪೀಠವನ್ನು ತಾವು ಅಲಂಕರಿಸುವ ಕನಸನ್ನವರಾಗಲೇ ಕಾಣತೊಡಗಿದ್ದರು: ಅತ್ಯಾತುರದ ಭರದಲ್ಲಿ ನಿಕ್ಸನ್ನರನ್ನು ಟೀಕಿಸಲೂ ಅವರು ಮುಂದಾದರು. ಮುಂದೆ ಅಧಿಕಾರಸ್ಥಾನದಲ್ಲಿಯು ಅವರ ಆರೋಪ್ಯ ತುಂಬಿಬರಲು ಹೆಚ್ಚು ಹೊತ್ತು ಹಿಡಿಯಲಿಲ್ಲ; ಭಾರಿ ಭ್ರಷ್ಟಾಚಾರದ ಆಪಾದನೆ ಅವರ ವಿರುದ್ಧ ಕೇಳಿಬರುವುದೇ ತಡ, ಹುಲ್ಲ ಬಣವೆಗೆ ಬೆಂಕಿ ಬಿದ್ದಾಗ ಅದು ಬೂದಿಯಾಗುವಷ್ಟು ಭರದಿಂದಲೇ ಅವರ ರಾಜಕೀಯ ಜೀವನ ಹೇಳಹೆಸರಿಲ್ಲದಂತಾಗಿಬಿಟ್ಟಿತು.

ಅಂಥ ಅನಿಶ್ಚಿತ ಪರಿಸ್ಥಿತಿಯಲ್ಲಿ ನಿಕ್ಸನ್ ಜೆರ್ರಿ ಫೋರ್ಡರನ್ನು ತಮ್ಮ ಉಪಾಧ್ಯಕ್ಷರನ್ನಾಗಿ ನೇಮಿಸಿಕೊಂಡರು. ಮುಂದೆ ನಿಕ್ಸನ್ ಕೆಳಗಿಳಿಯಲೇಬೇಕಾದಾಗ ಸ್ವಾಭಾವಿಕವಾಗಿಯೇ ಲೋಕನಿಯುಕ್ತರಲ್ಲದ ಫೋರ್ಡ್ ಅಧ್ಯಕ್ಷರಾದರು. ತಾವು ಮತದಾರರಿಂದ ಆಯ್ಕೆಗೊಂಡವರಲ್ಲವೆಂಬ ಅರಿವು ಅವರಿಗೆ ಪೂರ್ತಿ ಇತ್ತು. ಆದ್ದರಿಂದ ಲೋಕನಿಯುಕ್ತಿಯ ಮುದ್ರೆಯೊತ್ತಿಕೊಂಡು ಅಧ್ಯಕ್ಷರಾಗಬೇಕೆಂಬ ಬಲವಾದ ಹಂಬಲದಿಂದ ಅವರು ಕಣಕ್ಕಿಳಿದಿದ್ದರು. ಅಲ್ಲದೆ ತಮ್ಮ ಎರಡು ವರ್ಷಗಳ ಅಧಿಕಾರಾವಧಿಯಲ್ಲಿ ವಾಟರ್‌ಗೇಟಿನ ದುಷ್ಪರಿಣಾಮಗಳನ್ನು ತೊಡೆದು ಹಾಕಿ ದೇಶಕ್ಕೆ ಹೊಸ ಚೈತನ್ಯ ನೀಡುವಲ್ಲಿ, ಸರಕಾರ ಯಂತ್ರದ ಚಕ್ರಗಳು ಮತ್ತೆ ಸುಸೂತ್ರವಾಗಿ ಸುತ್ತುವಂತೆ ಮಾಡುವಲ್ಲಿ, ಒಟ್ಟಿನಲ್ಲಿ ರಾಷ್ಟ್ರಕ್ಕೆ ಆತ್ಮಗೌರವವನ್ನು ಪುನಃ ತಂದುಕೊಡುವಲ್ಲ ಫೋರ್ಡ್ ಬಹಳ ಮೆಚ್ಚಬಹುದಾದ ಮಟ್ಟಿಗೆ ಯಶಸ್ವಿಯಾಗಿದ್ದರು.

ಆದರೆ ಫೋರ್ಡರ ಎರಡು ಕೃತಿಗಳು ಮಾತ್ರ ಅನೇಕ ಅಮೇರಿಕನ್ನರ ದೃಷ್ಟಿಯಲ್ಲಿ ಅಕ್ಷಮ್ಯ ಅಪರಾಧಗಳಾಗಿ ಪರಿಣಮಿಸಿದುವು. ಮೊದಲನೆಯದು, ಅವರು ನಿಕ್ಸನ್ನರಿಗೆ ಪೂರ್ಣ ಕ್ಷಮಾಪಣೆ ನೀಡಿದ್ದು; ಎರಡನೆಯದು, ಅಮೇರಿಕದ ವಿದೇಶನೀತಿಯನ್ನು ನಿರ್ವಹಿಸಿದ ಕಿಸಿಂಜರ್ ರೀತಿ. ನಿಕ್ಸನ್ನರು ತಮ್ಮ ಅಧ್ಯಕ್ಷಾವಧಿಯಲ್ಲಿ ಮಾಡಿದ ಅಪರಾಧಗಳಿಗಾಗಿ ಅವಮರ್ಯಾದೆಯಿಂದ ಅವರು ಅಧಿಕಾರ ಗದ್ದುಗೆಯಿಂದ ಕೆಳಕ್ಕಿಳಿಯಬೇಕಾದದ್ದು ಅವರಿಗಾದ ಸಾಕಷ್ಟು ಕಠಿಣ ಶಿಕ್ಷೆಯೇ ಎಂದು ಬಗೆದು ಫೋರ್ಡ್ ಅವರನ್ನು ಕ್ಷಮಿಸಿದರು. ನಿಕ್ಸನ್ನರ ಸಮೀಪವರ್ತಿಯಾಗಿದ್ದರೂ ವಾಟರ್‌ಗೇಟ್ ಹಗರಣದ ದೋಷ ತಟ್ಟದೆ ಉಳಿದುಕೊಂಡಿದ್ದ ವಿದೇಶಮಂತ್ರಿ ಡಾ. ಕಿಸಿಂಜರ್ ವಿದೇಶ ವ್ಯವಹಾರಗಳ ವಿಷಯದಲ್ಲಿ ಫೋರ್ಡರಿಗೂ ದೊಡ್ಡ ಶಕ್ತಿಯೆನಿಸಿದ್ದರು. ಆದರೆ ಲೋಕನಿಯುಕ್ತರಲ್ಲದ ಅಮೇರಿಕನ್ ಮಂತ್ರಿಗಳು ಯಾವಾಗಲೂ ಅಧ್ಯಕ್ಷರಿಗೆ ಮಾತ್ರ ಹೊಣೆಗಾರರಾಗಿರುತ್ತಾರೆ. ಆಗಲೇ ವಿದೇಶ ಇಲಾಖೆಯಲ್ಲಿ ಭದ್ರವಾಗಿ ಬೇರೂರಿದ್ದ ಅವರು ಅದು ತಮ್ಮ ವೈಯಕ್ತಿಕ ಗುತ್ತಿಗೆಯೋ ಎಂಬಂತೆ ವ್ಯವಹರಿಸತೊಡಗಿದ್ದರು, ಅಲ್ಲದೆ ವಿದೇಶಿ ನಾಯಕರುಗಳೊಂದಿಗೆ ಅವರು ಅತ್ಯಂತ ರಹಸ್ಯ ರೀತಿಯಲ್ಲಿ ವ್ಯವಹರಿಸುವುದು—ಅವರಿಗೆ ಅನೇಕ ಸಲ ಯಶಸ್ಸು ದೊರೆತರೂ—ಮುಕ್ತ ಸಮಾಜದ ಬಹುಜನ ಅಮೇರಿಕನ್ನರಿಗೆ ಅಷ್ಟಾಗಿ ರುಚಿಸಲಿಲ್ಲ. ಕಿಸಿಂಜರರು ಅಧ್ಯಕ್ಷರನ್ನೂ ಮೀರಿ, ಅಲ್ಲದಿದ್ದರೆ ಎಷ್ಟೋ ವಿಷಯಗಳಲ್ಲಿ ಅವರನ್ನು ಅಜ್ಞಾನದಲ್ಲಿಟ್ಟು, ವ್ಯವಹರಿಸುತ್ತಾರೆಯೆ ? ಎಂಬ ದೊಡ್ಡ ಪ್ರಶ್ನೆ ಅಮೇರಿಕನ್ನರನ್ನು ಕಾಡುತ್ತಿತ್ತು.

ಜಿಮ್ಮಿ ಕಾರ್ಟರ್ ಇವೆರಡೂ ಸಮಸ್ಯೆಗಳನ್ನು ಬಹು ಸಮರ್ಥ ರೀತಿಯಲ್ಲಿ ಬಳಸಿಕೊಂಡರು. ಆದರೂ ಚುನಾವಣೆಯ ದಿನ ಸಮೀಪಿಸಿದಂತೆ ಫೋರ್ಡ್ ಮತ್ತು ಕಾರ್ಟರರಲ್ಲಿಯ ಅಂತರ ಬಹಳ ಮಟ್ಟಿಗೆ ಕ್ಷೀಣಿಸುತ್ತಲೇ ನಡೆದು ಕಾರ್ಟರ್ ಕಡೆಗಿದ್ದ ಜನಮತದ ಒಲವು ಸಾಂಕೇತಿಕವೆಂಬಷ್ಟರ ಮಟ್ಟಿಗೆ ಸಂಕುಚಿತಗೊಂಡು ವಿಜಯಶ್ರೀ

ಅರ್ಲ್) ಕಾರ್ಟರರನ್ನು ಅರಿಸಿದ್ದು ಹೆಚ್ಚಿನ ಅದ್ಭುತವೆನಿಸಿದೆ.

ಡೆಮಾಕ್ರೆಟಿಕ್ ಪಕ್ಷವನ್ನು ಈ ಹಿಂದೆ ಕೆನ್ನಡಿ ಕಾಲದಲ್ಲಿ ಕೂಡ ಇಲ್ಲದಷ್ಟು ಬಲವಾಗಿ ತಮ್ಮ ಹಿಂದೆ ಸಂಘಟಿಸಿ ಎಂಟು ವರ್ಷಗಳಲ್ಲಿ ಕಂಡಿರದಿದ್ದಂಥ ಯಶಸ್ಸನ್ನು ಸಂಪಾದಿಸಿ ಹಿಂದಿನ ರಾಜಕೀಯ ಭಾಷ್ಯಕಾರರ ಲೆಕ್ಕವನ್ನೆಲ್ಲ ತಿರುವು ಮುರುವು ಮಾಡಿದ ಜಿಮ್ಮಿ ಕಾರ್ಟರ್ ಅನೇಕ ದೃಷ್ಟಿಗಳಿಂದ ಅದ್ವಿತೀಯರೆನಿಸಿದ್ದಾರೆ. ಒಂದೂವರೆ ಶತಮಾನಗಳ ನಂತರ ಅಮೇರಿಕದ ಅಧ್ಯಕ್ಷಪೀಠವನ್ನಲಂಕರಿಸಿದ ದಾಕ್ಷಿಣಾತ್ಯರಿವರು ಎಂಬುದಕ್ಕಿಂತ ಹೆಚ್ಚಾಗಿ ಅಮೇರಿಕದ ರಾಷ್ಟ್ರೀಯ ನಾಯಕತ್ವಕ್ಕೆ ಇದು ತೀರ ಹೊಸ ಮುಖ, ಇವರು ತೀರ ಅಪರಿಚಿತ ವ್ಯಕ್ತಿ ಎಂಬುದು ಮುಖ್ಯ. ಡೆಮಾಕ್ರೆಟಿಕ್ ಪಕ್ಷದಲ್ಲಿ ಕೂಡ ರಾಷ್ಟ್ರೀಯ ಮಟ್ಟದಲ್ಲಿ ಕೆನ್ನಡಿ, ಹಂಫ್ರಿ, ಮಸ್ಕಿಗಳಂತಹ ಅತಿರಥಿ-ಮಹಾರಥಿಗಳ ಸಾಲಿನಲ್ಲಿ ಕಾರ್ಟರ್ ಹೆಸರು ಹಿಂದೆ ಎಂದೂ ಕೇಳಿಬಂದಿರಲಿಲ್ಲ. ಈ ಮೊದಲಿನ ಅವರ ರಾಜಕೀಯ ಅನುಭವವೆಂದರೆ ಜಾರ್ಜಿಯಂಥ ಪುಟ್ಟ ರಾಜ್ಯದ ಸೆನೇಟರ್ ಮತ್ತು ಅದೇ ರಾಜ್ಯದ ಗವರ್ನರ್ ಎಂದು ಆಯ್ಕೆಯಾಗಿದ್ದ ಆರೆಂಟು ವರ್ಷಗಳಿಗೆ ಮಾತ್ರ ಸೀಮಿತವಾಗಿತ್ತು. ಜಾರ್ಜಿಯಂದ ಹೊರಗೆಲ್ಲ ಜನ "ಯಾರೀತ?" ಎಂದು ಕೇಳುವ ಮಟ್ಟಿಗೆ ಹೊಸಬ, ಅಪರಿಚಿತ. ಆದರೂ ಆತ್ಮವಿಶ್ವಾಸ ಹಾಗೂ ಜನಸಾಮಾನ್ಯದಲ್ಲಿ ಅಪರಿಮಿತ ನಂಬುಗೆಯನ್ನೇ ದೊಡ್ಡ ಬಂಡವಾಳವಾಗಿಟ್ಟುಕೊಂಡ ಜಿಮ್ಮಿ ಕಾರ್ಟರ್ ನಾಲ್ಕು ವರ್ಷಗಳ ಹಿಂದೆ ತಮ್ಮ ತಾಯಿಗೊಮ್ಮೆ ಹೇಳಿದರಂತೆ, "ಅಮ್ಮಾ, ನಾನು ಅಧ್ಯಕ್ಷನಾಗುತ್ತೇನೆ," ಎಂದು. "ಯಾತರ ಅಧ್ಯಕ್ಷ?" ತಾಯಿ ಲಿಲಿಯನ್ ಚಕಿತರಾಗಿ ಕೇಳಿದರು. "ಅಮೇರಿಕದ ಅಧ್ಯಕ್ಷ," ಚಟ್ಟನೆ ಬಂತು ಉತ್ತರ. ಮಗ ಏನೋ ಬಡಬಡಿಸುತ್ತಿದ್ದಾನೆಂದು ಕ್ಷಣಾರ್ಧ ತಾಯಿ ಭಾವಿಸಿರಬೇಕು, ಆದರೂ ಮಗನ ಕಂಗಳಲ್ಲಿಯ ಮಿಂಚು, ಅವನ ಧ್ವನಿಯಲ್ಲಿ ಹಾಸು ಹೊಕ್ಕಾಗಿದ್ದ ದೃಢನಿರ್ಧಾರ ಅವನ ನಿಶ್ಚಯವನ್ನು ತಕ್ಷಣ ತಾಯಿಗೆ ಮನವರಿಕೆ ಮಾಡಿಕೊಟ್ಟುವು. ಜಿಮ್ಮಿ ಆ ನಿರ್ಧಾರವನ್ನೊಮ್ಮೆ ಕೈಕೊಂಡ ನಂತರ ಅದನ್ನು ಕಾರ್ಯರೂಪಕ್ಕಿಳಿಸಲು ಮಾಡಬೇಕಿದ್ದ ಯೋಜನೆಗಳೆಲ್ಲ ರೂಪುಗೊಳ್ಳತೊಡಗಿದುವು. ಡೆಮಾಕ್ರೆಟಿಕ್ ಪಕ್ಷದ ಪ್ರೈಮರಿಗಳಲ್ಲಿ ಬೆಂಬಲಿಗರನ್ನು ಕಲೆಹಾಕುವುದರಿಂದ ಮೊದಲ್ಗೊಂಡು ಕಳೆದ ನವೆಂಬರಿನಲ್ಲಿ ಚುನಾವಣೆಯಲ್ಲಿ ವಿಜಯಮಾಲೆಯನ್ನು ಧರಿಸುವ ವರೆಗಿನ ಕ್ರಿಯೆಗಳೆಲ್ಲ ಕಬ್ಬಿಣದ ಅದಿರನ್ನು ಕುಲಿಮೆಯಲ್ಲಿ ಹಾಕಿ ಪಕ್ಕಾ ಉಕ್ಕನ್ನು ಹೊರದೆಗೆಯುವ ವರೆಗಿನ ಘಟನೆಗಳಂತೆ ಅವರಿಗೆ ಸೂತ್ರಬದ್ಧ ರೀತಿಯಲ್ಲಿ ಕೈಗೂಡಿದುವು.

ಚುನಾವಣೆಗೆ ಮುನ್ನ ಡೆಮಾಕ್ರೆಟಿಕ್ ಪಕ್ಷ ಅವರನ್ನು ತನ್ನ ಆಯ್ಕೆಯೆಂದು ಸಾರಿದಾಗ ಜಿಮ್ಮಿ ಕಾರ್ಟರ್ ಜನಪ್ರಿಯತೆಯ ತುತ್ತತುದಿಯಲ್ಲಿದ್ದರು. ಆಗಲೇ ಚುನಾವಣೆಯಾಗಿದ್ದರೆ ಮುಕ್ಕಾಲು ಪಾಲು ಮತಗಳು ಅವರಿಗೆ ಸಿಕ್ಕುತ್ತಿದ್ದುವೇನೋ. ರಿಪಬ್ಲಿಕನ್ ಪಕ್ಷ ರಾಷ್ಟ್ರದ ಅಧ್ಯಕ್ಷರಾಗಿದ್ದ ಫೋರ್ಡ್ ಮತ್ತು ರೀಗನ್ ಈ ಇಬ್ಬರಲ್ಲಿ ತನ್ನ ಅಭ್ಯರ್ಥಿಯೆಂದು ಯಾರನ್ನಾರಿಸಬಹುದೆಂಬುದು ಆಗಿನ್ನೂ ಅನಿಶ್ಚಿತವಿತ್ತು. ಆದರೆ ಫೋರ್ಡ್ ರಿಪಬ್ಲಿಕನ್ ಪ್ರತಿಸ್ಪರ್ಧಿಯೆಂದು ನಿರ್ಧಾರವಾದ ನಂತರ ಮಾತ್ರ ಚುನಾವಣೆಗೆ ತುರುಸೇರತೊಡಗಿತು. ಫೋರ್ಡ್ ನೂರಕ್ಕೆ ನೂರರಷ್ಟು ಸದ್ಗೃಹಸ್ಥ ಎಂಬುದನ್ನು ಜಿಮ್ಮಿ ಕಾರ್ಟರ್ ಮೊದಲ್ಗೊಂಡು ಎಲ್ಲರೂ ಒಪ್ಪುತ್ತಾರೆ. ವಾಟರ್‌ಗೇಟ್ ಹಗರಣದಿಂದ ರಾಷ್ಟ್ರದ ನೆಲಗಟ್ಟೇ ಕುಸಿದುಹೋದಂಥ ಪರಿಸ್ಥಿತಿ ಉಂಟಾಗಿದ್ದಾಗ, ರಿಪಬ್ಲಿಕನ್ ಪಕ್ಷದ ಬೆಲೆ ಪಾತಾಳಕ್ಕಿಳಿದು ಹೋಗಿದ್ದಾಗ, ದೇಶದ ಸಾರ್ವಭೌಮಾಧಿಕಾರದ ಕೇಂದ್ರಬಿಂದುವಿನ ನಿಯಂತ್ರಣ ತಪ್ಪಿ ಸರಕಾರಯಂತ್ರದ ಹತ್ತಾರು, ನೂರಾರು ಅಂಗಗಳು ಸಿಡಿಸಿಡಿದು ಚೆಲ್ಲಾಪಿಲ್ಲಿಯಾಗುತ್ತಿದ್ದಾಗ ನೇತೃತ್ವವನ್ನು ಅವರು ವಹಿಸಿಕೊಳ್ಳಬೇಕಾಗಿ ಬಂದುದು

ನವೋದಯಾದ
ಹರಿಕಾರನಾಹಾರೇ ...?



ಜಿಮ್ಮಿ ಕಾರ್ಟರ್

ಮಾಧವ ನಾ. ಮಹಿಷಿ

ಬರಿ ನಾಲ್ಕೂವರೆ ವರ್ಷಗಳ ಹಿಂದೆ ಡೆಮಾಕ್ರೆಟಿಕ್ ಅಭ್ಯರ್ಥಿಯನ್ನು ಮಣ್ಣು ಮುಕ್ಕಿಸಿ ರಿಚರ್ಡ್ ನಿಕ್ಸನ್ ಅಮೇರಿಕದ ಅಧ್ಯಕ್ಷರಾಗಿ ಆಯ್ಕೆಯಾದಾಗ ಡೆಮಾಕ್ರೆಟಿಕ್ ಪಕ್ಷವಿನ್ನೆಂದೂ ತಲೆಯೆತ್ತಲಾರದು; ಒಳ ಜಗಳಗಳಿಂದಲೇ ತನ್ನ ಕೊಣಿಯನ್ನದು ತಾನೇ ತೋಡಿಕೊಂಡಿದೆ, ಗೋರಿ ಕಟ್ಟುವುದು ಮಾತ್ರ ಬಾಕಿ ಉಳಿದಿದೆ ಎಂದೆಲ್ಲ ರಾಜಕೀಯ ಭಾಷ್ಯಕಾರರು ಕಣಿ ನುಡಿದಿದ್ದರು. ಆದರೆ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಕೂಡ ಕ್ರಿಕೆಟ್ಟಿನಷ್ಟೇ ಅನಿಶ್ಚಿತ ಆಶ್ಚರ್ಯಗಳಿಂದ ಕೂಡಿದ ಕ್ಷೇತ್ರ. ನಾಲ್ಕು ತಿಂಗಳ ಹಿಂದೆ ಅಮೇರಿಕ ಅಂಥದೊಂದು ಆಶ್ಚರ್ಯವನ್ನು ಮತ್ತೆ ಸಾಧಿಸಿತು. ಪರಮಾಣು ವಿಜ್ಞಾನದಲ್ಲಾಗಲಿ ಖಗೋಲಶಾಸ್ತ್ರದಲ್ಲಾಗಲಿ, ಕಿಸಿಂಜರ್ ಪ್ರಣೀತ ವಿದೇಶಾಂಗ ನೀತಿಯಲ್ಲಾಗಲಿ ಅಮೇರಿಕ ಇದುವರೆಗೆ ಸಾಧಿಸಿದ ಇನ್ನಾವುದೇ 'ಅದ್ಭುತ'ಕ್ಕಿಂತಲೂ ಆ ದೇಶದ ೩೯ನೆಯ ಅಧ್ಯಕ್ಷರಾಗಿ ಜಿಮ್ಮಿ (ಜೇಮ್ಸ್

ರುವ ಊರುಗಳಿಗೆ ಹೊಳೆ ಎಂಬ ಶಬ್ದವನ್ನು ಹಚ್ಚಿ ಹೇಳುವ ಪರಂಪರೆ ಕರ್ನಾಟಕದಲ್ಲಿದೆ. (ಹಟ್ಟಿ+ಹೊಳೆ=ಹೊಳೆಯ ಮೇಲಿದ್ದ ಹಟ್ಟಿ=ಹಟ್ಟಿಹೊಳೆ; ಹಂಪಿ+ಹೊಳೆ=ಹೊಳೆಯ ಮೇಲಿದ್ದ ಹಂಪಿ=ಹಂಪಿಹೊಳೆ, ಇತ್ಯಾದಿ). ಅಯ್ಯಾವೊಳೆ ಸಂಸ್ಕೃತ ರೂಪದಲ್ಲಿ ಆರ್ಯಪುರ; ಅಂದರೆ ಅಯ್ಯಗಳ ಪಟ್ಟಣ ಎಂದಾಗಿದೆ. ಆರ್ಯಪುರವೆಂಬ ಹೆಸರನ್ನು-ಪ್ರಯೋಗಿಸಿದ್ದು ಐಹೊಳೆಯ ಲಾಡಖಾನ ಮತ್ತು ಗೌಡರ ಗುಡಿ ಶಾಸನಗಳಲ್ಲಿ ಕಂಡು ಬಂದಿದೆ. ಐಹೊಳೆಯನ್ನು ಐಪುರಿಯೆಂದೂ ಕರೆಯಲಾಗುತ್ತಿತ್ತು. 'ಐಪುರೀಶ್ವರ ಶತಕ'-ವನ್ನು ಬರೆದ ಮಂಗ್ಗಯಿ ಮಾಯಿದೇವನು ಈ ಊರಿನವನೇ ಎಂದು ಇಲ್ಲಿಯವರು ಹೇಳುತ್ತಾರೆ.

ಐಹೊಳೆಯ ದೇವಾಲಯಗಳಲ್ಲಿ ಮೂರು ಧಾರ್ಮಿಕ ಸಂಪ್ರದಾಯಗಳಿಗೆ ಸೇರಿದ ರಚನೆಗಳಿವೆ. ಬ್ರಾಹ್ಮಣ, ಜೈನ ಮತ್ತು ಬೌದ್ಧ. ಇವೇ ಆ ಮೂರು ಸಂಪ್ರದಾಯಗಳು. ಬ್ರಾಹ್ಮಣ ದೇವಾಲಯಗಳು ಹೆಚ್ಚಾಗಿ ಪೂರ್ವ ಅಥವಾ ಪಶ್ಚಿಮಾಭಿಮುಖವಾಗಿವೆ. ತೀರ ಕ್ವಚಿತ್ತಾಗಿ ಮಾತ್ರ ದಕ್ಷಿಣೋತ್ತರವಾಗಿ ಮುಖ ಮಾಡಿಕೊಂಡಿರುವ ಗುಡಿಗಳು ಸಿಕ್ಕುತ್ತವೆ. ಜೈನ, ಬೌದ್ಧ ವಾಸ್ತುಶಿಲ್ಪಗಳು ಈ ಬಗೆಯ ನಿರ್ಬಂಧದಿಂದ ಬಂಧಿತವಾಗಿಲ್ಲ.

ಐಹೊಳೆಯಲ್ಲಿ ಕಂಡುಬರುವ ಇನ್ನೊಂದು ಮಹತ್ವದ ಅಂಶವೆಂದರೆ ವೈದಿಕ ದೇವರು-ಗಳಲ್ಲಿ ಪ್ರಮುಖರಾದ ಬ್ರಹ್ಮ, ವಿಷ್ಣು, ಮಹೇಶ್ವರ ಈ ಮೂವರನ್ನೂ ಒಂದೇ ರೀತಿಯಲ್ಲಿ, ಅಷ್ಟೇ ಮಹತ್ವದಿಂದ ಪೂಜಿಸುವುದು. ಐಹೊಳೆಯ ದೇವಾಲಯಗಳಲ್ಲಿ ಯಾವ ಗುಡಿ ಯಾರದು ಎಂಬುದನ್ನು ಗೊತ್ತುಮಾಡಿಕೊಳ್ಳಲು ನಟ್ಟನಡುವೆ ಯಾವ ದೇವರ ಮೂರ್ತಿಯನ್ನು ಕೊರೆದಿದ್ದಾರೆ ಎಂಬುದನ್ನು ನೋಡಿದರೆ ಸಾಕು.


ವಾಸ್ತುಶಿಲ್ಪಜ್ಞರು ಐಹೊಳೆಯನ್ನು ಭಾರತದ ದೇಗುಲಗಳ ತೊಟ್ಟಿಲೆಂದು ಕರೆದಿದ್ದಾರೆ. ಈ ಬಗೆಯ ಅಭಿಪ್ರಾಯ ಮೂಡುವುದಕ್ಕೆ ಕಾರಣ ಇದೊಂದೇ ಊರಲ್ಲಿ ಹಲವಾರು ಪ್ರಾಚೀನ ದೇವಾಲಯಗಳಿರುವುದು ಮಾತ್ರವಲ್ಲ, ಅವುಗಳನ್ನು ಕಟ್ಟಿದ ಕಾಲವು ಕೂಡ ತುಂಬ ವಿಸ್ತಾರವಾದುದಾಗಿದೆ. ಕ್ರಿ. ಶ. ೪೫೦ ರಿಂದ ೧೨ನೆಯ ಶತಮಾನದವರೆಗೂ ಇವುಗಳ ರಚನೆಯಾಗಿವೆ. ಇದುವರೆಗೆ ಇಲ್ಲಿನ ಕಟ್ಟಡಗಳಲ್ಲಿ ಅತಿ ಪ್ರಾಚೀನವೆಂದು ನಂಬಿದ್ದ ಲಾಡಖಾನ ಗುಡಿಗಿಂತಲೂ ಪುರಾತನ ಕಟ್ಟಡ ಅಲ್ಲಿ ಉತ್ಖನನದಿಂದ ದೊರೆತಿವೆ. ಅದು ಮಣ್ಣಲ್ಲಿ ಹೂತು ಹೋಗಿದ್ದ ಗೌಡರ ಗುಡಿ. ತೀರ ಇತ್ತೀಚೆ ೩.೦೫ ಮೀಟರುಗಳಷ್ಟು ಆಳ ಮಣ್ಣಲ್ಲಿ ಹೂತು ಹೋಗಿದ್ದ ಅಂಬಿಗೇರ ಗುಡಿಯೆಂಬ ಕಟ್ಟಡವನ್ನು ಹೊರದೆಗೆದಿದ್ದಾರೆ. ಇದು ಚಾಲುಕ್ಯ ಪೂರ್ವ ಅಂದರೆ ಶಾತವಾಹನರ ಕಾಲದ್ದು ಎಂದು ತಜ್ಞರ ಮತವಾಗಿದೆ.

ಇಲ್ಲಿ ಮಾದರಿಗಾಗಿ ಆಯ್ದುಕೊಂಡಿರುವುದು ಎರಡು ದೇವಾಲಯಗಳಲ್ಲಿಯ ಶಿಲ್ಪವನ್ನು ಮಾತ್ರ– ಒಂದು ದುರ್ಗದ ಗುಡಿ, ಇನ್ನೊಂದು ರಾವಳಫಡಿ. ಮೊದಲ ಚಿತ್ರ ರಾವಳಫಡಿ ಗುಡಿಯಲ್ಲಿಯ ಅರ್ಧನಾರೀಶ್ವರನದಾದರೆ ಎರಡನೆಯದು ದುರ್ಗದ ದೇವಾ-ಲಯದಲ್ಲಿಯ ಮಿಥುನ ಚಿತ್ರ. ಮೂರನೆಯ ಚಿತ್ರದಲ್ಲಿ ದುರ್ಗದ ದೇವಾಲಯದಲ್ಲಿ ನರ-ಸಿಂಹಾವತಾರಿ ವಿಷ್ಣು. ನಾಲ್ಕನೆಯದು ಒಂದು ಕಂಬದಲ್ಲಿಯ ಸೂಕ್ಷ್ಮ ಕೆತ್ತನೆಯ ಸಾಲು. ಐದನೆಯದು ದುರ್ಗದ ಗುಡಿಯ ಅರ್ಧ ವರ್ತುಲಾಕೃತಿಯ ಬಾಹ್ಯ ನೋಟ, ಆರನೆಯ ಚಿತ್ರ ವೃಷಭವಾಹನ ಶಿವಮೂರ್ತಿ-ಯಾದರೆ, ಕೊನೆಯದು ರಾವಳಫಡಿಯಲ್ಲಿಯ ಮುದ್ದು ಗಣೇಶ. ✡










ಹೊಯ್ಸಳ ಶಿಲ್ಪ







ಐಹೊಳೆ ಶಿಲ್ಪ

ಬನವಾಸಿಯ ಕದಂಬರನ್ನು ಮೂಲೆಗುಂಪಾಗಿಸಿದರೆ ಕರ್ನಾಟಕವನ್ನಾಳಿದ ಅತಿ ಪ್ರಾಚೀನ ಕನ್ನಡ ರಾಜಮನೆತನವೆಂದರೆ ಬಾದಾಮಿಯ ಚಾಲುಕ್ಯರದು. ಕ್ರಿಸ್ತಶಕ ಆರನೆಯ ಶತಮಾನದಲ್ಲಿ ಉಚ್ಛ್ರಾಯಕ್ಕೆ ಬಂದ ಚಾಲುಕ್ಯರಿಗೆ ಭಾರತೀಯ ಇತಿಹಾಸದಲ್ಲಿ ಬಲು ಮಹತ್ವದ ಸ್ಥಾನವಿದೆ. ಕ್ರಿ. ಶ. ೫೦೦ರ ಸುಮಾರಿಗೆ ಇದ್ದ ಜಯಸಿಂಹ ಹಾಗೂ ಅವನ ನಂತರ ಬಂದ ರಣರಾಗ ಇವರ ಕಾಲದಲ್ಲಿ ಐಹೊಳೆಯಲ್ಲಿ ಇಂದು ಕಂಡುಬರುವ ವಾಸ್ತುಶಿಲ್ಪದ ಅತಿ ಪ್ರಾಚೀನ ಮಾದರಿಗಳು ರಚನೆಯಾಗಿರಬೇಕೆಂದು ಹಲವು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಆದರೆ ಐಹೊಳೆಯಲ್ಲಿಯ ಅತ್ಯಂತ ಪುರಾತನ ಕಟ್ಟಡ ಅಲ್ಲಿಯ ಲಾಡಖಾನ ಗುಡಿ. ಆದರೆ ಇದರ ಪ್ರಾಚೀನತೆಯನ್ನು ಶಿಲ್ಪಶಾಸ್ತ್ರಜ್ಞರು ಇನ್ನೂ ಅರ್ಧ ಶತಮಾನದಷ್ಟು ಹಿಂದೆಳೆಯುತ್ತಾರೆ. ಅಂದರೆ ಈ ಗುಡಿಯನ್ನು ಕಟ್ಟಿದ್ದು ಕ್ರಿ. ಶ. ೪೫೦ರ ಸುಮಾರಿಗೆ ಎಂದವರ ಮತ. ಇತಿಹಾಸಕ್ಕೆ ಗೊತ್ತಿರುವ ಮೊದಲ ಚಾಲುಕ್ಯ ವಂಶದ ಅರಸ ಜಯಸಿಂಹ ೪೫೦ರಲ್ಲಿ ಇರಲಿಲ್ಲ. ಅಂದಾಗ ಅವನ ಪೂರ್ವಜರು ಕಟ್ಟಿಸಿದ ಕಟ್ಟಡ ಲಾಡಖಾನ ಗುಡಿ ಎಂದು ಹೇಳಬಹುದಾಗಿದೆ.

ಭಾರತೀಯ ವಾಸ್ತುಶಿಲ್ಪದಲ್ಲಿ ಚಾಲುಕ್ಯ ಮಾದರಿಗೆ ಒಂದು ವಿಶಿಷ್ಟವೂ ಮಹತ್ವದ್ದೂ ಆದ ಸ್ಥಾನವಿದೆ. ಕರ್ನಾಟಕದಲ್ಲಿ ಒಂದೂ ವಾಸ್ತುಶಿಲ್ಪದಲ್ಲಿ ಮೂರು ಮಹತ್ವದ ಶಾಖೆಗಳನ್ನು ಗುರುತಿಸಲಾಗುತ್ತದೆ. ಮೊದಲನೆಯದು ಚಾಲುಕ್ಯ, ಎರಡನೆಯದು ಹೊಯ್ಸಳ ಹಾಗೂ ಮೂರನೆಯದು ವಿಜಯನಗರ. ಚಾಲುಕ್ಯ ಮಾದರಿಯ ವಾಸ್ತುಶಿಲ್ಪ ಈಗ ನಮಗೆ ನೋಡಸಿಕ್ಕುವುದು ಅವರ ರಾಜಧಾನಿಯಾಗಿದ್ದ ಬಾದಾಮಿಯ ಸುತ್ತಲಿನ ಪರಿಸರದಲ್ಲಿ— ಮುಖ್ಯತಃ ಬಾದಾಮಿ, ಪಟ್ಟದಕಲ್ಲು, ಮಹಾಕೂಟ ಮತ್ತು ಐಹೊಳೆಗಳಲ್ಲಿ. ಈ ನಾಲ್ಕು ಕೇಂದ್ರಗಳಲ್ಲಿ ಕೂಡ ಐಹೊಳೆಯೇ ಹೆಚ್ಚು ಪ್ರಾಚೀನವೆಂದು ಪರಿಗಣಿಸಲಾಗುತ್ತಿದೆ.

ಐಹೊಳೆ ಇಂದಿನ ವಿಜಾಪುರ ಜಿಲ್ಲೆಯ ಹುನಗುಂದ ತಾಲೂಕಿನಲ್ಲಿ ಮಲಪ್ರಭಾ ನದಿಯ ದಂಡೆಯ ಮೇಲೆ ಇರುವಂಥ ಒಂದು ಚಿಕ್ಕ ಹಳ್ಳಿ. ಐಹೊಳೆ ಹೆಸರಿನ ಮೂಲರೂಪ ಅಯ್ಯಾವೊಳೆ-ಅರ್ಥಾತ್ ಅಯ್ಯಗಳ ಹೊಳೆ, ಅಯ್ಯಗಳ ಊರು. ನದಿಗಳ ದಂಡೆಗಳ ಮೇಲಿ-

ಇದ್ದೀತು. ಪ್ರಜೆಯ ನೇರವಾದ ಪ್ರಭಾವ ಆತನ ಮೇಲೆ ಇರದು. ಪ್ರತಿನಿಧಿಗಳಲ್ಲಿ ಕೆಲವರು ನೇರ ಹಾದಿಯಲ್ಲಿ ಹೋದಾರು. ಅನೇಕರು ವಕ್ರಮಾರ್ಗದಲ್ಲೇ ಹೋಗಬಹುದು. ಸರಿದಾರಿಯಲ್ಲಿ ನಡೆಯುವ ಪ್ರತಿನಿಧಿಯನ್ನು ಹಾಗೆ ಹಚ್ಚುವುದು ಹೇಗೆ? ಪ್ರಜೆಯ ಭಯ ಪ್ರತಿನಿಧಿಗೆ ಇದ್ದಾಗ ಮಾತ್ರ ಇದು ಸಾಧ್ಯ.

ಮತಾಧಿಕಾರ ಪವಿತ್ರ. ಅದನ್ನು ಹಣಕ್ಕೆ, ಹೆಂಡಕ್ಕೆ, ಜಾತಿಗೆ ಮಾರಿಕೊಳ್ಳಬಾರದು. ನೀತಿಯಿಂದ ನಡೆಯುವವರಿಗೆ ಮಾತ್ರ ನೀಡಬೇಕು. ನಾನೊಬ್ಬ ಮತ ಕೊಡದಿದ್ದರೇನಂತೆ ಎಂದು ಎಷ್ಟೋ ಜನ ಭಾವಿಸುತ್ತಾರೆ. ಈ ಆಲಸ್ಯ, ಉದಾಸೀನಭಾವ ಸಲ್ಲದು. ಐದು ವರ್ಷಕಾಲ ನಮ್ಮ ಗತಿ ಏನಾಗಬೇಕೆಂಬುದನ್ನು ಚುನಾವಣೆ ನಿರ್ಧರಿಸುತ್ತದೆ. ಕೆಲವೊಂದು ಪ್ರಸಂಗಗಳಲ್ಲಿ ನೂರಾರು ವರ್ಷ ಕಾಲದ ವಿದ್ಯಮಾನವನ್ನೂ ಚುನಾವಣೆ ನಿರ್ಧರಿಸೀತು. ಮತ ನೀಡಲೇಬೇಕಾದುದು ಪ್ರತಿಪ್ರಜೆಯ ಅನಿವಾರ್ಯ, ಪವಿತ್ರ ಧರ್ಮ. ಎಣ್ಣೆ ಒಡೆದಾಗ ಕಣ್ಣು ಮುಚ್ಚಿಕೊಂಡರು ಎಂಬಂತೆ ಮಾಡಿ ಮತ ನೀಡಬೇಕಾದಾಗ ನೀಡದೆ ಅನಂತರ ಚಡಪಡಿಸಿದರೆ ಏನು ಪ್ರಯೋಜನ?

ಮತದಾನ ರಹಸ್ಯ ಪ್ರಕ್ರಿಯೆ. ಯಾರು ಯಾವ ಅಭ್ಯರ್ಥಿಗೆ ಮತ ಕೊಟ್ಟ ಎಂಬುದು ಯಾರಿಗೂ ಗೊತ್ತಾಗದು. ಯಾವ ಮತದಾರನೂ ಯಾರ ಹಂಗಿಗೂ ಒಳಗಾಗಬೇಕಿಲ್ಲ, ಯಾರಿಗೂ ಅಂಜಬೇಕಿಲ್ಲ. ಯಾವ ಆತಂಕವೂ ಬೇಕಿಲ್ಲ. ನಿರ್ಭಯವಾಗಿ, ನಿರ್ದಾಕ್ಷಿಣ್ಯವಾಗಿ ಮತ ನೀಡಬಹುದು, ನೀಡಬೇಕು.

ನಮಗೇಕೆ ರಾಜಕೀಯ ?– ಎಂದುಕೊಳ್ಳುತ್ತಾರೆ ಕೆಲವರು. ಪ್ರತಿಪ್ರಜೆಯ ಬದುಕಿಗೂ ರಾಜಕೀಯಕ್ಕೂ ಅಂಟಿದ ನಂಟು, ನಾವು ಕೊಳ್ಳುವ ಒಂದು ಕಡ್ಡಿ ಪೆಟ್ಟಿಗೆಯಲ್ಲೂ ರಾಜಕೀಯ ಅಡಗಿದೆ. ಅನ್ನ, ಬಟ್ಟೆ, ವಸತಿ, ವಿದ್ಯೆ, ವೈದ್ಯಕೀಯ ವ್ಯವಸ್ಥೆ ಎಲ್ಲವೂ ರಾಜಕೀಯಕ್ಕೆ ಸಂಬಂಧಪಟ್ಟಿದೆ. ಹಿಂದೊಂದು ಕಾಲದಲ್ಲಿ "ರಾಮನಿಗೆ ರಾಜ್ಯವಾದರೆ ರಾಗಿ ಬೀಸುವುದು ತಪ್ಪೀತೆ?" ಎಂಬುದು ಉಚಿತವೋ ಏನೋ, ಇಂದು ಹಾಗಿಲ್ಲ. ಬದುಕಿನ ಪ್ರತಿಯೊಂದು ವಿಭಾಗವೂ ರಾಜಕೀಯದಿಂದಲೇ ತೀರ್ಮಾನ ಆಗುತ್ತದೆ. ಪ್ರಜಾತಂತ್ರದಲ್ಲಂತೂ ಪ್ರಜೆ ದೂರ ಸರಿದು ನಿಲ್ಲುವಂತೆಯೇ ಇಲ್ಲ.

ಹಲವು ಹುರಿಯಾಳುಗಳು, ಅನೇಕ ಪಕ್ಷಗಳವರು ನಮ್ಮ ಮುಂದೆ ಬರುತ್ತಾರೆ. ಎಲ್ಲರ ಮಾತನ್ನೂ ಲಕ್ಷ್ಯಗೊಟ್ಟು ಕೇಳಬೇಕು, ಅವರಿಗೆ ಹಾಕುವ ಪ್ರಶ್ನೆಗಳನ್ನು ಹಾಕೋಣ. ಅವರ ನುಡಿಗಿಂತ ನಡೆಯನ್ನು ಪರೀಕ್ಷಿಸೋಣ. ನಮ್ಮ ನಿರ್ಣಯಕ್ಕೆ ನಾವೇ ಬರೋಣ, ಪ್ರಲೋಭನ, ಪ್ರಚೋದನೆ ಪ್ರಕಾರಗಳಿಗೆ ಒಳಗಾಗುವುದು ಬೇಡ.

ಇದು ಇರುವುದು ಜನತಂತ್ರದ ಆಕಾರ, ಚೌಕಟ್ಟು. ಇದಕ್ಕೆ ಶಿರಗಳು ತುಂಬುವ ಕೆಲಸವೂ ಆಗಬೇಕು. ಮತ ನೀಡಿದ ಬಳಿಕ ಅತಂತ್ರನಾಗುವ ಪ್ರಜೆಯ ದನಿ ಅನಂತರವೂ ಕೇಳುವುದು ಹೇಗೆ? ನಾವೆಲ್ಲ ವಿಚಾರ ಮಾಡಬೇಕಾದ ಪ್ರಶ್ನೆ. ನಮ್ಮ ಅಂಕುಶ ಪ್ರತಿನಿಧಿಯ ಮೇಲೆ ನಿತ್ಯ ನಿರಂತರ ಇರುವ ಕ್ರಮ ಯಾವುದು? ಪ್ರತಿನಿಧಿ ನಿರಂಕುಶನಾಗದಂತೆ ತಕ್ಕ ವ್ಯವಸ್ಥೆ ಮಾಡಬೇಕಾಗಿತ್ತು.

ನಮಗೆ ಇರುವ ಸ್ವಾತಂತ್ರ್ಯಕ್ಕೆ ಅನವರತ ಎಚ್ಚರವೇ ನಾವು ತೆರಬೇಕಾದ ಬೆಲೆ. ಸ್ವಲ್ಪ ಪರಿವೆ ತಪ್ಪಿದರೂ ಅದು ಜಾರಿಹೋದೀತು. ಇದನ್ನು ಪ್ರತಿ ಪ್ರಜೆಯೂ ತಿಳಿದುಕೊಂಡರೆ ಮಾತ್ರ ಚುನಾವಣೆ ಸಾರ್ಥಕ; ಜನತಂತ್ರ ಸಫಲ, ಅರ್ಥಪೂರ್ಣ.

★

ಸಂಚಿಕೆ: ೭ ಕಸ್ತೂರಿ, ಮಾರ್ಚ್ ೧೯೭೭ ವರ್ಷ: ೨೧

ಪವಿತ್ರ ಧರ್ಮ

ಖಾ. ಶಾ.

ಚುನಾವಣೆ ಜನತಂತ್ರದಲ್ಲಿ ಮಹತ್ವದ ಅಂಗಸಾಧನೆ. ಅದು ನಡೆಯಬೇಕಾದ ಕಾಲದಲ್ಲಿ ನಡೆಯುತ್ತಲೇ ಇರಬೇಕು. ಜನತಂತ್ರ ಎಂದರೆ ಒಬ್ಬಿಬ್ಬರ ರಾಜ್ಯಭಾರವಲ್ಲ. ಸಮಸ್ತ ಜನಕೋಟಿ ತಮ್ಮ ಇಚ್ಛೆ ವ್ಯಕ್ತಪಡಿಸುವ ಅವಕಾಶ. ಅದರ ಸದುಪಯೋಗ ಮಾಡಿಕೊಂಡು ಜನತೆ ತಮ್ಮ ನಿಜವಾದ ಪ್ರತಿನಿಧಿಗಳನ್ನು ಆರಿಸಬೇಕು.

ಈಗ ನಮ್ಮ ದೇಶದ ಸಂಸತ್ತಿನ ಮುಖ್ಯ ಸದನವಾದ ಲೋಕಸಭೆಗೆ ಸಾರ್ವತ್ರಿಕ ಚುನಾವಣೆ ನಡೆಯುತ್ತಿದೆ. ನಾವು ಸ್ವತಂತ್ರರಾಗಿ ಸಂವಿಧಾನ ರಚಿಸಿಕೊಂಡ ಬಳಿಕ ಐದು ಬಾರಿ ಲೋಕಸಭೆಯ ಚುನಾವಣೆ ನಡೆದುಹೋಗಿದೆ. ಇದು ಆರನೆಯ ಬಾರಿಯ ಆಯ್ಕೆ. ಸಾರ್ವಭೌಮ ಸಂಸತ್ತಿನ ಕೆಳ-ಮನೆಗೆ ೫೪೨ ಮಂದಿ ಪ್ರತಿನಿಧಿಗಳನ್ನು ಆರಿಸುವ ಕೆಲಸದಲ್ಲಿ ಈಗ ತೊಡಗಿದ್ದೇವೆ.

ಪ್ರಜಾತಂತ್ರದಲ್ಲಿ ಪ್ರಜೆಯೇ ಪ್ರಭು. ಈ ಪ್ರಭುತ್ವ ಎಷ್ಟು ಕಾಲ ಸ್ಥಿರ? ಮತದ ಪೆಟ್ಟಿಗೆಯಲ್ಲಿ ಮತದ ಚೀಟಿಯನ್ನು ಇಳಿಬಿಡುವವನೆ ಮತದಾರ. ಪ್ರಭುವಿಗೆ ಎಲ್ಲಿಲ್ಲದ ಮರ್ಯಾದೆ. ಎಲ್ಲರೂ ಆತನನ್ನು ಅರಸಿಕೊಂಡು ಬರುವವರೇ. ಆ ಕೆಲಸ ಆಗಿಹೋದ ಮೇಲೆ ಪ್ರಜಾಪ್ರಭು ತೆಪ್ಪಗಾಗಿಬಿಡುತ್ತಾನೆ. ಪ್ರತಿನಿಧಿ ಪ್ರಭುವಾಗುತ್ತಾನೆ. ಒಂದೆ ಐದು ವರ್ಷ ಕಾಲ ಪ್ರತಿನಿಧಿಯ ಪಾರುಪತ್ಯ ಅನಿರ್ಬಂಧಿತವಾಗಿ ಸಾಗುತ್ತಿತ್ತು. ಈಗ ಅದು ಆರು ವರ್ಷ ಕಾಲ.

ಚುನಾವಣೆ ಒಮ್ಮೆ ಮುಗಿಯಿತೆಂದರೆ ಪ್ರಭುವಾದ ಪ್ರಜೆ ಪರತಂತ್ರ. ಪ್ರತಿನಿಧಿ ಒಂದು ರೀತಿಯಲ್ಲಿ ಸರ್ವತಂತ್ರ ಸ್ವತಂತ್ರ. ಆತ ಸೇರಿಕೊಂಡಿರುವ ಪಕ್ಷದ ಅಂಕುಶ

ಗಣಪುಲೆ

ನರಹರ ಗೋವಿಂದ ಗಣಪುಲೆಯವರ ಪರಿಚಯ ಮಾಡಿಕೊಟ್ಟ (ಕಸ್ತೂರಿ, ಫೆಬ್ರುವರಿ) ರಂಗನಾಥ ದಿವಾಕರರು ನಿಜಕ್ಕೂ ಅಭಿನಂದನಾರ್ಹರು. ಹೆಚ್ಚು ಮಟ್ಟಿಗೆ ಕನ್ನಡಿಗರಿಗೇ ಅಪರಿಚಿತರಾದ ಈ ಅಪ್ರತಿಮ ದೇಶಭಕ್ತನ ಪರಿಚಯ ಸ್ವಾನುಭವದ ಘಟನೆಗಳನ್ನು ಇನ್ನೂ ಹೆಚ್ಚಾಗಿ ಆಧರಿಸಿದ್ದರೆ ಒಳ್ಳೆಯದಾಗುತ್ತಿತ್ತು.

ಬೆಳಗಾವಿ —ಅಪ್ಸರಾ ನಾಯಕ

ನಗೆಮಲ್ಲಿಗೆ

ಫೆಬ್ರುವರಿಯ 'ನಗೆಮಲ್ಲಿಗೆ'ಯನ್ನು ನೋಡಿ ನಗು ಬಂತು-ಅಲ್ಲಿ ಪ್ರಕಟವಾದ ನಗೆಹನಿಗಳಿಂದಲ್ಲ. ಆದರೆ ಅವು ಓದುಗರಿಗೆ ನಗೆ ತರಿಸಬಹುದೆಂದು ನೀವು ಭಾವಿಸಿದ್ದರಿಂದ.

ಮೈಸೂರು —ಎಸ್. ಎಂ. ಸುಭದ್ರ

ವಿಜ್ಞಾನಿಗಳ ಎಚ್ಚರಿಕೆ

ಅಂಕಿಸಂಖ್ಯೆಗಳು ಎರಡು ಅಲುಗಿನ ಕತ್ತಿಯಂತೆ. ಅವುಗಳನ್ನು ಹೇಗೆ ಬೇಕಾದರೂ ಅರ್ಥವಿಸಬಹುದು. ಅಲ್ಲದೆ ಯಾವೊಂದು ವಿಷಯದ ಬಗೆಗೆ ತೀರ್ಮಾನಕ್ಕೆ ಬರುವಾಗ ಅದಕ್ಕೆ ಸಂಬಂಧಿಸಿದ ಅಂಕಿಸಂಖ್ಯೆಗಳು ನಿಖರವಾಗಿರಬೇಕಲ್ಲದೆ ಅವುಗಳನ್ನು ಸಂಗ್ರಹಿಸಿದ ವಿಧಾನವೂ ಶುದ್ಧವಾಗಿರಬೇಕು. ವೈಜ್ಞಾನಿಕ ತಥ್ಯ-ಗಳನ್ನು ಇದರ ಆಧಾರದಿಂದ ತೀರ್ಮಾನಿಸಬೇಕಾದಾಗ ಎಲ್ಲ ವೈಜ್ಞಾನಿಕರ ತೀರ್ಮಾನಗಳು ತಪ್ಪು, ವೇರಿಯೋ-ವಿಟ್ಸರ ತೀರ್ಮಾನಗಳೇ ಸರಿ ಎಂದು ನಂಬಲು ಕಷ್ಟವಾಗುತ್ತದೆ.

ಮಡಿಕೇರಿ —ಎಸ್. ಎಂ. ರಾಮಪ್ಪ

ವಿಜ್ಞಾನಿಗಳ ಎಚ್ಚರಿಕೆಗಳಿಂದ ಧೃತಿಗೆಡಬಾರದು ನಿಜ ಆದರೆ ಈ ಎಚ್ಚರಿಕೆಗಳನ್ನು ಮೇಲಿಂದ ಮೇಲೆ ಪ್ರಕಟಿಸಿ ನಮ್ಮನ್ನು ಧೃತಿಗೆಡಿಸುವವರು ಯಾರು ಮಹಾಸ್ವಾಮಿ? ನೀವೇ ಅಲ್ಲವೇ?

ಬಾಗಿಲುಕೋಟೆ —ಎನ್. ಕೆ. ಕಲ್ಲಂಭಟ್ಟ

ನಕಲು?

ನಿಮ್ಮ ಫೆಬ್ರುವರಿ ೭೭ ರ ಸಂಚಿಕೆಯಲ್ಲಿ ನಗೆಮಲ್ಲಿ-ಗೆಯ ವಿಭಾಗದಲ್ಲಿ ಪ್ರಕಟವಾದ ವಿಜಯಲಕ್ಷ್ಮಿಯವರು ಬರೆದ "ಸೋತು ಗೆದ್ದವರು" ಗೋರೂರರವರು ಬರೆದ "ಹಳ್ಳಿಯ ಬದುಕು" ಪುಸ್ತಕದ ಕೆಲವು ಪುಟಗಳ ಯಥಾವತ್ತಾದ ನಕಲು ಎಂದು ಭಾವಿ... ಪತ್ರಿಕೆಗಳ... ಕಳಿಸುವ ಹುಮ್ಮಸ್ಸಿರಲಿ-ಆದರೆ ಈ ರೀತಿಯಲ್ಲಿ ಅ... ಸಂಗ್ರಹವೆಂದಿದ್ದರೆ ಅಪಚಾರವೇನೂ ಆಗುತ್ತಿರಲಿಲ್ಲ.

ದಾವಣಗೆರೆ —ಮೂಕಿ...

ಎಲ್ಲವೂ ಸುಳ್ಳು; ಎಲ್ಲರೂ ಸುಳ್ಳರು

'ಕಸ್ತೂರಿ'ಯ ಈ ಹಿಂದಿನ ಕೆಲವು ತಿಂಗಳುಗ... ಸಂಚಿಕೆಗಳಲ್ಲಿ ಪ್ರಕಟಗೊಂಡ ಶ್ರೀ ಪು. ... ಚನ್ನಬಸಪ್ಪನವರ ಲೇಖನಗಳ ಬಗ್ಗೆ ಸಹಚಿಂತ... ವಿಭಾಗದಲ್ಲಿ ಕೆಲವರು ತಮ್ಮ ಅನಿಸಿಕೆಗಳನ... ವ್ಯಕ್ತಪಡಿಸಿರುವುದು ಸರಿಯಷ್ಟೆ. ಫೆಬ್ರುವರಿಯ... ಸಂಚಿಕೆಯಲ್ಲಿ ಸಾಗರದ ಶ್ರೀ ಮಂಜು ಕೆ. ಎಚ್. ಸುಬ್ರಹ್ಮ... ಅವರು ತಿಳಿಸಿರುವಂತೆ ಅವುಗಳಿಂದ 'ಕಸ್ತೂರಿ'ಯ... ಗುಣಮಟ್ಟ ಇಳಿದಿದೆ ಎಂಬ ಮಾತು ತೀರಾ ಅಸಂಬದ್ಧ... ವಾದುದು. ಶ್ರೀ ಚನ್ನಬಸಪ್ಪನವರ ಬರವಣಿಗೆಯ... ಒಳತೋಟಿಯನ್ನು ಅರ್ಥ ಮಾಡಿಕೊಳ್ಳದೆ ... ಅವರು ಬಳಸಿರುವ ಶಬ್ದಗಳನ್ನು ಯಥಾವತ್... ಅರ್ಥವಿಸುವ ಈ ಓದುಗರಲ್ಲಿ ಸಾಹಿತ್ಯವನ್ನು ... ಯತೆಯಿಂದ ಓದುವ ಪ್ರವೃತ್ತಿಯೇ ಇಲ್ಲವೆಂದು... ಭಾಸವಾಗುತ್ತದೆ. ಲೇಖಕರು ಸಾಂಕೇತಿಕವಾಗಿ ಸೂಚಿ-ಸಿರುವ ಪ್ರತಿ ಕುಟುಂಬಕ್ಕೆ ಎರಡು ಎಕರೆ ಎಂಬ ಅಂಶವು... ಮಾನವನ ಕನಿಷ್ಠ ಅಗತ್ಯದ ಸಂಕೇತವೇ ಹೊರತು... ಯಥಾವತ್ ಹಂಚಿಕೆಯಾಗಲಾರದು.

ಅವರು ಉದ್ಗರಿಸುವ ವೈಜ್ಞಾನಿಕ ಮುನ್ನಡೆಯ... ದುಷ್ಪರಿಣಾಮ ಬುದ್ಧಿಜೀವಿಗಳ, ರಾಜಕಾರಣಿಗ... ಶೋಷಣೆಯ ಮಾರ್ಗ-ಇವೆಲ್ಲಾ ಮಾನವನಲ್ಲಿ ... ಕೃತಕತನವನ್ನು ಉಂಟುಮಾಡಿವೆ ಎಂದು ಹೇಳುವುದ... ಆಗದೆ. ಅವರು ಪ್ರಬಲವಾಗಿ ಖಂಡಿಸುವ ಸರ್ವಾಧಿ-ಕಾರಿ ರಾಜ್ಯವ್ಯವಸ್ಥೆ, ವ್ಯಕ್ತಿ ವ್ಯಕ್ತಿಗಳ ನಡುವಿನ... ತಾರತಮ್ಯ ಇವೆಲ್ಲಾ ಕ್ರಾಂತಿಕಾರಕ ಹಾಗೂ ಪ್ರಗತಿ-ಪರವಲ್ಲವೆಂದು ಯಾರು ತಾನೇ ಹೇಳಿಯಾರು?

ಪ್ರತಿಯೊಬ್ಬನೂ ಅವನವನ ಕ್ಷೇತ್ರದಲ್ಲಿ ಪರಿ-ಪೂರ್ಣನೇ ಇರುವಾಗ ಕೇವಲ ಕೆಲವರಿಗೆ ಮಾತ್ರ... ಕೊಡುವ ಗೌರವ ಪ್ರಶಸ್ತಿಗಳು ಸಮಾನತೆಯ... ತತ್ವಕ್ಕೆ ವಿರೋಧವಲ್ಲವೇ? ಪ್ರಜಾಪ್ರಭುತ್ವದಲ್ಲಿ... ಯಾರಿಗೂ ವಿಶೇಷ ಸಾಮಾಜಿಕ ಸ್ಥಾನಮಾನಗಳು ಅನುಚಿತವಾದಾ-ದಾಗ ಗೌರವ ಡಾಕ್ಟರೇಟ್‌ಗಳೂ ರಾಷ್ಟ್ರಪ್ರಶಸ್ತಿಗಳೂ... ಅಸಂಗತವೆನಿಸುವುದಿಲ್ಲವೇ?

ಪರಿಸ್ಥಿತಿಯ ಒತ್ತಡಕ್ಕೆ ಮಣಿದು ಎಲ್ಲವೂ ಸರಿ... ಎಲ್ಲರೂ ಒಳ್ಳೆಯವರು ಎನ್ನುವುದಕ್ಕಿಂತ 'ಎಲ್ಲವೂ... ಸುಳ್ಳು ಎಲ್ಲರೂ ಸುಳ್ಳರು' ಎಂಬ ಲೇಖಕರ ಉದ್ಗಾರ... ಕ್ರಾಂತಿಯ ಕಿಡಿಯೆಂದು ಎಂದರೆ ತಪ್ಪಾಗಲಾರದು.

ಭದ್ರಾವತಿ —ಕೆ. ಎಸ್. ಕೆ. ಮೂರ್ತಿ...

ಬದುಕಲು ಕಲಿಯಿರಿ

ಫೆಬ್ರುವರಿ ಸಂಚಿಕೆಯ ಪುಸ್ತಕ ವಿಭಾಗದಲ್ಲಿ ಪ್ರಕಟವಾದ 'ಬದುಕಲು ಕಲಿಯಿರಿ' ತುಂಬಾ ಪರಿಣಾಮಕಾರಿಯಾಗಿತ್ತು. ಅದರಲ್ಲಿನ ಸೂತ್ರಗಳು ನಿರಾಶಾವಾದಿಗಳಿಗೆ ದಾರಿದೀಪವಾಗಿವೆ. ಪ್ರತಿಯೊಬ್ಬರೂ ಜೀವನವಿಡೀ ಅನುಸರಿಸಬೇಕಾದ ಸೂತ್ರಗಳನ್ನು ಲೇಖನ ರೂಪದಲ್ಲಿ ಸಂಗ್ರಹಿಸಿದ ಸಂಪ್ರಕಾಶಕರಿಗೂ ಉದಾರವಾಗಿಯೂ ಪ್ರಕಟಿಸಿದ 'ಕಸ್ತೂರಿ'ಗೂ ಧನ್ಯವಾದಗಳು.

ಹರಪನಹಳ್ಳಿ -ಜಿ. ಕೆ. ಕಂಪ್ಲಿ

ಏನು ಸ್ವಾಮಿ, 'ಬದುಕಲು ಕಲಿಯಿರಿ' ಲೇಖನ ಓದಿಯೇ ನಾವು ಬದುಕಲು ಕಲಿಯಬೇಕೆ?

ಹೊಸಪೇಟೆ -ಎಂ. ಹರೀಶ

ಹಮ್ಮುರಾಬಿ

'ಕಸ್ತೂರಿ'ಯ ಫೆಬ್ರುವರಿ ಸಂಚಿಕೆಯಲ್ಲಿ 'ಹಮ್ಮುರಾಬಿಯ ಆಧುನಿಕ ಶಾಸನಗಳು' ಎಂಬ ಲೇಖನವನ್ನು ಪ್ರಕಟಿಸಿದ್ದೀರಿ. ನಾಲ್ಕುಸಾವಿರ ವರ್ಷಗಳ ಹಿಂದೆ ಬಾಬಿಲೋನಿಯದಲ್ಲಿ ಹಮ್ಮುರಾಬಿಯು ಈ ಶಾಸನಗಳನ್ನು ಜಾರಿಗೊಳಿಸಿದನೆಂದು ಆ ಲೇಖನದ ಮೊದಲನೆಯ ಪ್ಯಾರಾದಲ್ಲಿಯೇ ಹೇಳಲಾಗಿದೆ. ನಾಲ್ಕುಸಾವಿರ ವರ್ಷಗಳ ಹಿಂದೆ ರಚಿತವಾದ ಶಾಸನಗಳು ಹೇಗೆ ಆಧುನಿಕವಾಗುತ್ತವೆ? ಅಥವಾ ಪ್ರಸ್ತುತ ಸಮಯದಲ್ಲಿಯೂ ಇಂತಹ ಶಾಸನಗಳು ಆಧುನಿಕ ರೂಪದಲ್ಲಿ ಬರಬಹುದೆಂಬುದನ್ನು ಲೇಖನದ ತಲೆಬರಹ ಪರ್ಯಾಯವಾಗಿ ಸೂಚಿಸುತ್ತದೆಯೇ? ತಲೆಬರಹ ಕೊಡುವಾಗ ತಲೆ ಇನ್ನೂ ಸ್ವಲ್ಪ ಚುರುಕಾಗಿರಲಿ.

ಬೆಂಗಳೂರು -ಎಂ. ಎಸ್. ಶರ್ಮ

ತುರ್ತು ಪರಿಸ್ಥಿತಿಯನ್ನು ಘೋಷಿಸಿ ಅನೇಕ ಉಗ್ರ ಕ್ರಮಗಳನ್ನು ಕೈಕೊಂಡರೂ ಕಳ್ಳಸಂತೆಕೋರರ, ತೆರಿಗೆಗಳ್ಳರ, ಕಳ್ಳಸಾಗಾಣಿಕೆದಾರರ ಸಾವೇ ಇನ್ನೂ ಸಂಪೂರ್ಣವಾಗಿ ನಿಂತಿಲ್ಲವಲ್ಲಾ ಎಂದು ಪೇಚಾಡುವ ಮಹಾಪ್ರಭುಗಳು ಇತಿಹಾಸವನ್ನು ತೆರೆದು ಹಮ್ಮುರಾಬಿಯ ಚರಿತ್ರೆಯನ್ನು ಇನ್ನೊಮ್ಮೆ ಓದಲಿ.

ಮಂಡ್ಯ -ಕೆ. ಎಂ. ಕಲ್ಲಪ್ಪ

ನಿವೇದನೆ

ಕಳೆದ ಡಿಸೆಂಬರ್ 'ಕಸ್ತೂರಿ'ಯ ೧೦೫ನೆಯ ಪುಟದಲ್ಲಿ ಪ್ರಕಟವಾದ ಒಂದು ಕವನ 'ಹೊಲೆಯರು' ನಮ್ಮ ಕೆಲವು ಅಭಿಮಾನಿ ಓದುಗರಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆಯೆಂದು ನಮಗೆ ತುಂಬ ತಡವಾಗಿ ತಿಳಿದುಬಂತು. ವಸ್ತುತಃ ಓದುಗರಿಂದ ಈ ಬಗೆಯ ಪ್ರತಿಕ್ರಿಯೆ ನಮ್ಮ ಪಾಲಿಗೆ ತೀರ ಅನಿರೀಕ್ಷಿತವಾಗಿತ್ತು. ಆದರೆ ನಮ್ಮ ಓದುಗರಲ್ಲಿ ಕೆಲವರಾದರೂ ಈ ಕವನದ ತಲೆಕಟ್ಟು ಒಂದು ಪಂಗಡವನ್ನು ಸೂಚಿಸುತ್ತದೆಂದು ತಪ್ಪು ಭಾವಿಸಿ ಕವನದಲ್ಲಿಯ ಪ್ರತಿ ಸಾಲನ್ನೂ ಅರ್ಥೈಸಿರುವುದು ತಿಳಿದಾಗ ನಿಜಕ್ಕೂ ನಮಗೆ ವಿಷಾದವೆನಿಸುತ್ತದೆ.

ಪ್ರಸ್ತುತ ಕವನದ ಹಸ್ತಪ್ರತಿ ನಮ್ಮ ಕೈಗೆ ಬಂದಾಗ ನಾವು ಅದನ್ನೋದಿ ಮೆಚ್ಚಿರುವುದಕ್ಕೆ ಕಾರಣ ಕವಿಯ ಸಮರ್ಥ ಶೈಲಿ ಮತ್ತು ಭ್ರಷ್ಟಾಚಾರಗಳನ್ನು ಖಂಡಿಸಲು ಅವರು ಬಳಸಿದ ಅಲಂಕಾರಿಕ ಮಾರ್ಗ. 'ಹೊಲೆಯರು' ಶಬ್ದವನ್ನು ಜಾತಿವಾಚಕವಾಗಿ ಇಲ್ಲಿ ಸರ್ವಥಾ ಉಪಯೋಗಿಸಿಲ್ಲ. ವೀರಶೈವವನ್ನು, ಅದನ್ನು ನಂಬಿ ಸೇರ ಬಯಸಿದ ಎಲ್ಲರಿಗೂ ತೆರೆದಿಟ್ಟ ಆ ಬಸವಣ್ಣನವರು "ಹೊಲಸು ತಿಂಬುವನೆ ಹೊಲೆಯ" ಎನ್ನುವಾಗ ಹೊಲೆಯ ಎಂಬುದನ್ನು ಯಾವ ಒಂದು ಕೋಮನ್ನೂ ಉದ್ದೇಶಿಸಿ ಹೇಳಿರುವುದು ಅಶಕ್ಯ. ಈ ಕವನದಲ್ಲಿ ಕವಿ ಈ ಶಬ್ದವನ್ನು ಅಲಂಕಾರಿಕವಾಗಿ ಮಾತ್ರ ಬಸವಣ್ಣನವರ ತೆರದಲ್ಲೇ ಬಳಸಿದ್ದಾರಷ್ಟೇ ಹೊರತು ಯಾವುದೇ ಪಂಗಡವನ್ನು ಅದು ಸೂಚಿಸುವುದಿಲ್ಲ.

ಇಷ್ಟೆಲ್ಲ ವಿವರಣೆಯನ್ನು ಸಂದೇಹ ನಿವಾರಣೆಗಾಗಿ ನೀಡಬೇಕಾಯಿತು. ಆದರೂ ಯಾವುದೇ ಉದ್ದೇಶವಿಲ್ಲದಿರುವಾಗಲೂ ಈ ಕವನದ ಪ್ರಕಟಣೆಯಿಂದ ಯಾರನ್ನಾದರೂ ನಾವು ನೋಯಿಸಿದ್ದರೆ ನಾವೂ ಕವಿ ಶ್ರೀ ರಾಘವೇಂದ್ರ ಕುಲಕರ್ಣಿಯವರೂ ಓದುಗರ ಕ್ಷಮೆ ಕೋರುತ್ತೇವೆ. –ಸಂಪಾದಕ

ಲೂತ್ರವಿಸಲು ಅಸಾಧ್ಯವೆಂಬಷ್ಟರ ಮಟ್ಟಿಗೆ ಗಾತ್ರದಲ್ಲಿ ಬಿಗ್ಗಿಬಿಟ್ಟಿತು. ಆದರೆ ಕಾರ್ಟರಿಗೆ ಕೊನೆಗೂ ಜಯ ತಂದಿತ್ತ ಅಂಶವೆಂದರೆ ಅಮೇರಿಕನ್ನರಿಗೆ ಸ್ಥೂಲವಾಗಿ, ಬದಲಾವಣೆ ಅವಶ್ಯವೆನಿಸತೊಡಗಿತ್ತು; ಎಂಟು ವರ್ಷಗಳ ರಿಪಬ್ಲಿಕನ್ ಆಡಳಿತದಿಂದ ಅವರು ಬೇಸತ್ತು-ಬಿಟ್ಟಿದ್ದರು ಎಂಬುದು. ಅದಕ್ಕೆ ಪೂರಕವಾಗಿ ಅಮೇರಿಕದ ಕಪ್ಪು ಜನ ಪೂರ್ತಿಯೆಂದು ಹೇಳಬಹುದಾದ ಮಟ್ಟಿಗೆ ಕಾರ್ಟರರ ಕಡೆಗಿದ್ದರು. ಫೋರ್ಡ್ ೨೭ ರಾಜ್ಯಗಳನ್ನು ಗೆದ್ದು ೨೪೦ ಮತಗಳನ್ನು ಪಡೆದರೆ ಕಾರ್ಟರ್ ೨೩ ರಾಜ್ಯಗಳನ್ನು ಜಯಿಸಿ ೨೯೭ ಮತ ಪಡೆದರು. (ಅಮೇರಿಕದಲ್ಲಿ ಪ್ರತಿ ರಾಜ್ಯಕ್ಕೆ ಇಷ್ಟು ಮತ ಎಂದು ಜನಸಂಖ್ಯೆಯ ಪ್ರಮಾಣದ ಆಧಾರದಿಂದ ಮೊದಲೇ ನಿರ್ಧರಿಸಿರಲಾಗುತ್ತದೆ. ಒಂದು ರಾಜ್ಯದಲ್ಲಿ ಯಾರಿಗೆ ಬಹುಮತ ದೊರೆಯುತ್ತದೋ ಅವರಿಗೆ ಆ ರಾಜ್ಯದ ಪೂರ್ಣ ಮತಗಳು ಸಿಗುತ್ತವೆ.) ಒಟ್ಟು ಮತದಾನದಲ್ಲಿ ಕಾರ್ಟರರಿಗೆ ಸುಮಾರು ೨೦ ಲಕ್ಷ ಮತಗಳು ಹೆಚ್ಚಿಗೆ ದೊರೆತು ಕಾರ್ಟರ್-ಫೋರ್ಡ್ ನಡುವಿನ ಅಂತರ ೫೧% — ೪೮% ಎಂದಾಯಿತು. ಬಹುಶಃ ಇತ್ತೀಚಿನ ವರ್ಷಗಳಲ್ಲಿ ಕೆನ್ನಡಿ-ನಿಕ್ಸನ್, ನಿಕ್ಸನ್-ಹಂಫ್ರಿ ಚುನಾವಣೆಗಳಿಗಿಂತ ಹೆಚ್ಚಿನ ಅಂತರದಿಂದ ಕಾರ್ಟರ್ ಗೆದ್ದರು.

ಈ ಹಿಂದೆ ಜಿಮ್ಮಿ ಕಾರ್ಟರ್ ಜಾರ್ಜಿಯಾದ ಗವರ್ನರ್ ಆಗಿದ್ದಾಗ ಮಾಡಿದ ಕಾರ್ಯವನ್ನು ನೋಡಿದರೆ ಅಧ್ಯಕ್ಷರ ಅಧಿಕಾರಾವಧಿಯಲ್ಲಿ ಅವರು ಜನತೆಗೆ ಇತ್ತ ವಚನಗಳನ್ನು ನಡೆಸಿಕೊಡಲು ಸಾಕಷ್ಟು ಪರಿಶ್ರಮಿಸುವರೆಂಬುದಂತೂ ನಿಸ್ಸಂದೇಹವೆನಿಸುತ್ತದೆ.

*

"ಕಾರ್ಟರ್ ಯಾರೀತ?" ಎಂಬ

ಪ್ರಶ್ನೆಗೆ ಅವರ ವ್ಯಕ್ತಿತ್ವದ ಸಾರದರ್ಶನ ಮಾಡಿಸುವಂಥ ಒಂದೆರಡು ಘಟನೆಗಳು ಅವರ ಅಧಿಕಾರಸ್ವೀಕಾರದ ದಿನವೇ ಸಂಭವಿಸಿದುವು. ಅಮೇರಿಕನ್ ಅಧ್ಯಕ್ಷರ ಅಧಿಕಾರ ಸ್ವೀಕಾರ ಸಮಾರಂಭ ನಡೆಯುವುದು ರಾಷ್ಟ್ರದ ಶಾಸಕಾಂಗದ ಕೇಂದ್ರವಾದ ಕ್ಯಾಪಿಟಾಲ್ ಭವನದ ಆವಾರದಲ್ಲಿ. ಕ್ಯಾಪಿಟಾಲ್ ಅಮೇರಿಕನ್ ಕಾಂಗ್ರೆಸ್ಸಿನ ಎರಡೂ ಸದನಗಳುಳ್ಳ ಭವನ. ಅಲ್ಲಿ ಪ್ರತಿಜ್ಞಾವಿಧಿ ಜರುಗಿದ ನಂತರ ಹೊಸ ಅಧ್ಯಕ್ಷರು ಮೆರವಣಿಗೆಯಲ್ಲಿ ತಮ್ಮ ನಿವಾಸವಾದ ಶ್ವೇತಭವನಕ್ಕೆ ಹೋಗುವುದು ವಾಡಿಕೆ. ಜನವರಿಯಲ್ಲಿ ವಾಶಿಂಗ್ಟನ್ನಿನ ಹವಾಮಾನ ಶೂನ್ಯಾಂಶದ ಒಳಹೊರಗೆ ಇರುತ್ತದೆ. ಅಂಥ ವಿಪರೀತ ಚಳಿಯಲ್ಲೂ ಬಯಲಲ್ಲೇ ಈ ಸಮಾರಂಭ ನಡೆಯುತ್ತದೆ. ಪ್ರತಿಜ್ಞೆ ಸ್ವೀಕರಿಸಿದ ನಂತರ ಜಿಮ್ಮಿ ಕಾರ್ಟರ್ ರಾಷ್ಟ್ರವನ್ನುದ್ದೇಶಿಸಿ ಮಾತಾಡುವಾಗ ಹಿಂದಿನ ಯಾವುದೇ ಅಧ್ಯಕ್ಷರು ಮಾಡದಿದ್ದುದನ್ನು ಮಾಡಿ ಎಲ್ಲರನ್ನೂ ಚಕಿತಗೊಳಿಸಿದರು. ಅಧ್ಯಕ್ಷ ಫೋರ್ಡ್‌ರಿಂದ ಅಧಿಕಾರ ಸ್ವೀಕರಿಸುತ್ತ ಕಾರ್ಟರ್ ನಿಕ್ಸನ್ ಅವಧಿಯಲ್ಲಿ ಭಯಂಕರ ಗಾಯಗಳಿಂದ ಗಾಸಿಗೊಂಡಿದ್ದ ಅಮೇರಿಕವನ್ನು, ಅದಕ್ಕೆ ಹೊಸ ಚೈತನ್ಯ ನೀಡಿ ಗಾಯಗಳನ್ನು ಮಾಯಿಸಿದ್ದಕ್ಕಾಗಿ, ಹಸ್ತಾಂತರ ತುಂಬ ಸುಗಮವಾಗುವಂತೆ ಮಾಡಿದ್ದಕ್ಕಾಗಿ ಅವರಿಗೆ ಹೃತ್ಪೂರ್ವಕ ಕೃತಜ್ಞತೆಯನ್ನರ್ಪಿಸಿದರು; ಫೋರ್ಡ್ ಅಪ್ಪಟ ಸದ್ಗೃಹಸ್ಥ ಎಂದು ಮೆಚ್ಚಿ ನುಡಿದರು. ಅಧ್ಯಕ್ಷಪೀಠದಿಂದ ಇಳಿದುಹೋಗುವಾಗಿನ ಕಹಿ ಫೋರ್ಡರ ಮಟ್ಟಿಗೆ ಬಹುಪಾಲು ಅಳಿಸಿಹೋಗುವಂತೆ ಕಾರ್ಟರ್ ಮಾಡಿದರು. ಮುಂದೆ ಕ್ಯಾಪಿಟಾಲ್ ನಿಂದ ಶ್ವೇತಭವನಕ್ಕೆ ಹೋಗಲು ಸಿದ್ಧರಾಗಿ ಹೆಂಡತಿ ರೋಸ್‌ಲನ್ ಹಾಗೂ ಒಂಭತ್ತು ವರ್ಷದ ಚಿಕ್ಕ ಮಗಳೊಂದಿಗೆ ಕಾರನ್ನೇರಿದ್ದ ಜಿಮ್ಮಿ ಕಾರ್ಟರ್ ತಟ್ಟನೆ ಮನಸ್ಸು ಬದಲಿಸಿ ಅವರಿಬ್ಬರೊಂದಿಗೆ ಕೆಳಕ್ಕಿಳಿದು ರಸ್ತೆಯ ಎಡಬಲಕ್ಕೆ ನೆರೆದಿದ್ದ ಜನಸ್ತೋಮಕ್ಕೆ ಕೈಬೀಸುತ್ತ, ನಗುತ್ತ ನಡೆದು ಬಿಟ್ಟರು. ಅಧ್ಯಕ್ಷರ ರಕ್ಷಣೆಯನ್ನು ಗಮನದಲ್ಲಿರಿಸಿಕೊಂಡು ಮೊದಲು ಮಾಡಿದ್ದ ಯೋಜನೆಗಳೆಲ್ಲ ತಲೆಕೆಳಗಾದುವಾದರೂ ಅದರೆಡೆ ಅವರ ಗಮನ ಹೋಗಲೇಯಿಲ್ಲ. ಇನ್ನು ಮುಂದೆ ಜಗತ್ತಿನ ಅತ್ಯಂತ ಪ್ರಬಲ ವ್ಯಕ್ತಿಯ –ಅಮೇರಿಕದ ಅಧ್ಯಕ್ಷರ– ನಿವಾಸವೂ ಅಧಿಕಾರ ಕೇಂದ್ರವೂ ಆಗಿರುವ ಶ್ವೇತಭವನ ಜನಸಾಮಾನ್ಯಕ್ಕೆ ರಹಸ್ಯಮಯ ಭದ್ರ ಕೋಟೆಯಾಗಿ ಉಳಿಯುವುದಿಲ್ಲ. ಆ ದೇಶದ ರಾಜಕೀಯ ವ್ಯವಹಾರಗಳನ್ನು ನೂತನ ಅಧ್ಯಕ್ಷ ಜಿಮ್ಮಿ ಕಾರ್ಟರ್ ಹೆಚ್ಚುಹೆಚ್ಚು ಮುಕ್ತ ರೀತಿಯಲ್ಲಿ, ಜನಕ್ಕೆ ಅರ್ಥವಾಗುವ ತೆರದಲ್ಲಿ ನಡೆಸಿಕೊಂಡು ಹೋಗುತ್ತಾರೆ.

ದುಂದು ವೆಚ್ಚಕ್ಕೆ ಹೆಸರಾದಿರುವ ಶ್ವೇತಭವನದ ಅನಾವಶ್ಯಕ ವೆಚ್ಚಗಳಿಗೆ ಕಾರ್ಟರ್ ಪ್ರಾರಂಭದಲ್ಲೇ ತಡೆಯೊಡ್ಡಿದ್ದಾರೆ. ೧೯೭೩ರಲ್ಲಿ ನಿಕ್ಸನ್ನರ ಪ್ರತಿಜ್ಞಾವಿಧಿ ಸಮಾರಂಭ ಇತಿಹಾಸದಲ್ಲಿ ಯಾವುದೇ ಮಹಾನ್ ಚಕ್ರವರ್ತಿಯ ಪಟ್ಟಾಭಿಷೇಕವನ್ನೂ ಮೀರಿಸುವ ತೆರದ ವೈಭವದಿಂದ ನಡೆಯಿತು. ಕಾರ್ಟರ್ ಸಮಾರಂಭ ಅದನ್ನೆಲ್ಲ ಬದಿಗೆ ಸರಿಸಿ ಹೆಚ್ಚು ಸಾದಾ ಸೀದಾ ತೆರದಲ್ಲಿ ನಡೆಯಿತು. ಇನ್ನು ಮುಂದೆ ಕಾರ್ಟರ್ ಅಧಿಕಾರಾವಧಿಯಲ್ಲಿ ಶ್ವೇತಭವನದಲ್ಲಿ ನಿಶೆಯೇರಬಹುದಾದಂಥ ಅತಿರೇಕ ಸುರಾಪಾನಕ್ಕೆ ಅವಕಾಶವಿಲ್ಲ. ಸ್ವತಃ ಜಿಮ್ಮಿ ಕಾರ್ಟರ್ ಕಿತ್ತಳೆ ಹಣ್ಣಿನ ರಸ ಸೇವಿಸಿ ದಿನದ ವ್ಯವಹಾರಕ್ಕೆ ಮೊದಲು ಮಾಡುತ್ತಾರೆ. ಇದುವರೆಗೆ ಅಧ್ಯಕ್ಷರ ಹಿರಿಯ ಅಧಿಕಾರಿವರ್ಗಕ್ಕೆಲ್ಲ ಶ್ವೇತಭವನದ ಲೆಕ್ಕದಲ್ಲಿ ಐಷಾರಾಮೀ ಕಾರುಗಳು ಬೇಕೆಂದಾಗ ಉಪಯೋಗಕ್ಕೆ ದೊರೆಯುತ್ತಿದ್ದುವು. ಇನ್ನು ಕಚೇರಿ ಕೆಲಸಕ್ಕೆ ಸಂಬಂಧಿಸಿದಂತೆ ಕೆಲಸದ ಮಟ್ಟಿಗೆ ಮಾತ್ರ ಅವರು ಸರಕಾರಿ ವೆಚ್ಚದಲ್ಲಿ ಕಾರುಗಳನ್ನು ಬಳಸಬಹುದು; ಖಾಸಗಿ ಕೆಲಸಕ್ಕೆ ಸ್ವಂತ ವಾಹನವನ್ನೋ ಬಾಡಿಗೆಯದನ್ನೋ ಬಳಸಬೇಕು.

ಆದರೆ ಇದೆಲ್ಲಕ್ಕಿಂತಲೂ ಹೆಚ್ಚು ಮಹತ್ವದ ಒಂದು ನಿರ್ಧಾರವನ್ನು ಜಿಮ್ಮಿ ಕಾರ್ಟರ್

ತಮ್ಮ ಮಂತ್ರಿ ಮಂಡಳದ ಪ್ರಪ್ರಥಮ ಸಭೆಯಲ್ಲಿ ಘೋಷಿಸಿದರು. ಅದೆಂದರೆ ಅವರ ಮಂತ್ರಿಗಳೆಲ್ಲ ಅವರವರ ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಕ್ಷರಿಗೆ ಪ್ರಪ್ರಮುಖ ಸಲಹೆಗಾರರು. ಅವರವರ ಶಾಖೆಗಳನ್ನು ನಿರ್ವಹಿಸುವಲ್ಲಿ ಮಂತ್ರಿಗಳೆಲ್ಲರೂ ಪೂರ್ಣ ಸ್ವಾತಂತ್ರ್ಯದಿಂದ ವರ್ತಿಸಬಹುದು. "ನಾನು ಅಧ್ಯಕ್ಷನಾಗಿರುವಷ್ಟು ಕಾಲವೂ ಶ್ವೇತ ಭವನದ ಅಧಿಕಾರಿವರ್ಗದಲ್ಲಿರುವ ಯಾರೂ ಮಂತ್ರಿಗಳ ಕಾರ್ಯದಲ್ಲಿ, ಕಾರ್ಯ ನಿರ್ವಹಣೆಯಲ್ಲಿ ಕೈ ಹಾಕುವಂತಿಲ್ಲ. ಹಾಗು ಮಂತ್ರಿಗಳಿಗಿಂತ ತಾವು ಹೆಚ್ಚಿನವರು ಎಂಬಂಥ ಭಾವನೆಯನ್ನು ಕೂಡ ತೋರ್ಪಡಿಸುವಂತಿಲ್ಲ." ಎಂದು ಸ್ಪಷ್ಟವಾಗಿ ಘೋಷಿಸಿದರು.

ಹಿಂದಿನ ಅಧ್ಯಕ್ಷರ ಅಧಿಕಾರಾವಧಿಗಳಲ್ಲಿ ಅಧ್ಯಕ್ಷರ ಕ್ಯಾಬಿನೆಟ್ ಮಂತ್ರಿಗಳ ಸ್ಥಿತಿ ಒಮ್ಮೊಮ್ಮೆ ಒಂದೊಂದು ರೀತಿಯಾಗಿದೆ. ಡಾ. ಕಿಸಿಂಜರ್‌ರಂಥವರು ಅಧ್ಯಕ್ಷರನ್ನೂ ಮೀರಿ ಬೆಳೆದ ಮಂತ್ರಿಯಾಗಿದ್ದರೆ ನಿಕ್ಸನ್ನರ ಕಾಲದಲ್ಲೇ ಎರ್ಲಿಕ್‌ಮನ್, ಹಾಲ್ಡೆಮನ್ನರಂಥ ಶ್ವೇತಭವನದ ಅಧಿಕಾರಿಗಳಿದ್ದುದರಿಂದ ಬಹ್ವಂಶ ಮಂತ್ರಿಗಳು ನಿರ್ಣಯದಂತೆ ವರ್ತಿಸಬೇಕಾಗುತ್ತಿತ್ತು. ಇಂಥ ಪರಿಸ್ಥಿತಿಯಲ್ಲಿ ಕಾರ್ಟರ್ ಮಂತ್ರಿಗಳಿಗೆ ತಕ್ಕ ಸ್ಥಾನದ ಭರವಸೆ ನೀಡಿದ್ದು ಅರ್ಥಪೂರ್ಣವಾಗಿದೆ. ಇದಕ್ಕಿಂತ ಹೆಚ್ಚಾಗಿ ಹಿಂದಿನ ಉಪಾಧ್ಯಕ್ಷರಲ್ಲಿ ಹೆಚ್ಚಿನವರು ಅಧಿಕಾರಕೇಂದ್ರದಿಂದ ದೂರ ಉಳಿದು ಅಲಂಕಾರಕ್ಕೆ ಮಾತ್ರವಾಗಿ ಇರುತ್ತಿದ್ದರು. ಆದರೆ ಕಾರ್ಟರರ ಉಪಾಧ್ಯಕ್ಷರಿಗೆ ಸಧ್ಯದ ಸರಕಾರದಲ್ಲಿ ಸಕ್ರಿಯ ಪಾತ್ರವಿದೆ. ಮಂತ್ರಿಮಂಡಳದ ಪ್ರತಿ ಸಭೆಯಲ್ಲೂ ಅವರು ಭಾಗವಹಿಸುವ ಅಧಿಕಾರ ಹೊಂದಿರುತ್ತಾರೆ

ಜಿಮ್ಮಿ ಕಾರ್ಟರ್ ತಮ್ಮ ಪೂರ್ಣಾಧಿಕಾರದ ಮೊದಲ ವಾರದಲ್ಲೇ ತಾವು ಮುಂದೆ ಮಾಡಲು ಉದ್ದೇಶಿಸಿದ್ದೇನು? ಎಂಬ ಬಗ್ಗೆ ಸಾಕಷ್ಟು ಮುನ್ಸೂಚನೆಗಳನ್ನು ಒದಗಿಸಿದ್ದಾರೆ. ಅವರ ವಿದೇಶಮಂತ್ರಿ ಇನ್ನು ಯಾವುದೇ ಅಮೇರಿಕನ್ ರಾಯಭಾರಿ ಕಚೇರಿಗಳಲ್ಲಿ ಯಾವುದೇ ಸಂಭಾಷಣೆಯನ್ನು ಕದ್ದು ಧ್ವನಿಮುದ್ರಿಸಿಕೊಳ್ಳುವಂತಿಲ್ಲವೆಂದು ಆಜ್ಞೆ ಹೊರಡಿಸಿದರು. ದಿನಕ್ಕೆ ೧೪ ತಾಸು ಕೆಲಸ ಮಾಡುವ ಅವರ ರಕ್ಷಣಾಮಂತ್ರಿ ಅನಾವಶ್ಯಕವೆನಿಸಿದ ಕೆಲವು ರಕ್ಷಣಾ ಸಾಮಗ್ರಿಗಳಿಗಿದ್ದ ಬೇಡಿಕೆಗಳಲ್ಲಿ ಕೂಡಲೆ ಕಡಿತ ಮಾಡಿದರು. ಆರೋಗ್ಯ, ಶಿಕ್ಷಣ ಮತ್ತು ಕಲ್ಯಾಣ ಶಾಖೆಯ ಮಂತ್ರಿ ತಮ್ಮ ಸಿಬ್ಬಂದಿಯಲ್ಲಿ ೧/೩ ದಷ್ಟು ಜನರನ್ನು ಕಡಿಮೆ ಮಾಡಿದರು. ನಗರಾಭಿವೃದ್ಧಿಮಂತ್ರಿ, ತಮ್ಮ ಶಾಖೆಯ ನೌಕರರಿಗಾಗಿರುವ ಕ್ಯಾಂಟೀನಿನಲ್ಲೇ ಎಲ್ಲರೊಂದಿಗೆ ಬೆರೆತು ತಾವೂ ಊಟ ಮಾಡುವುದಕ್ಕಾರಂಭಿಸಿದರು.

ಇದೆಲ್ಲ ಸಾಂಕೇತಿಕವೆಂದೂ ಜನರನ್ನು ಮರುಳುಗೊಳಿಸುವ ಸಾಧನವೆಂದೂ ಟೀಕಾಕಾರರು ವಿಮರ್ಶಿಸಬಹುದು ಆದರೆ ಪ್ರಾರಂಭದಲ್ಲಿ ಮಾಡಿದ ಇಂಥ ಸಾಂಕೇತಿಕ ನಿರ್ಧಾರಗಳೇ ಅಲ್ಲಿ, ಅಮೇರಿಕದ ಅಧಿಕಾರ ಕೇಂದ್ರದಲ್ಲಿ, ಆಗುತ್ತಿರುವ ಬದಲಾವಣೆಗಳಿಗೆ ಹಿತಕರ ಮಾರ್ಪಾಡುಗಳಿಗೆ ಸೂಚನೆಯೆನಿಸಬಹುದಲ್ಲವೆ?

ಇವೆಲ್ಲಕ್ಕಿಂತ ಹೆಚ್ಚಿನ ಒಂದು ಘಟನೆಯು ಕಾರ್ಟರರ ಹೊಸ ಪ್ರಪಂಚದಲ್ಲಿ ನಡೆದುದು ಅರ್ಥಪೂರ್ಣವಾಗಿದೆ. ಅವರ ಒಂಭತ್ತು ವರ್ಷಗಳ ಕಿರಿಯ ಮಗಳು ಏಮಿ ಸಮೀಪದ ಒಂದು ಖಾಸಗಿ ಪ್ರಾಥಮಿಕ ಶಾಲೆಗೆ ಹೋಗತೊಡಗಿದ್ದಾಳೆ. ತಾಯಿ 'ರೋಸ್'ಲಿನ್ ಮೊದಲ ದಿನ ಮಗಳೊಂದಿಗೆ ಹೋಗಿ ಆಕೆಯ ಹೆಸರು ಹಚ್ಚಿಬಂದರು. ಈ ಶಾಲೆಯ ಒಟ್ಟು ೨೦೭ ವಿದ್ಯಾರ್ಥಿಗಳಲ್ಲಿ ಶೇಕಡಾ ೬೦ ರಷ್ಟು ವಿದ್ಯಾರ್ಥಿಗಳು ಕಪ್ಪು ವರ್ಣೀಯರು. ೩೦ರಷ್ಟು ವಿದ್ಯಾರ್ಥಿಗಳು ವಿದೇಶೀಯರು!

ಇವರು ಈಜಿಪ್ಟಿನ ಪ್ರಾಚೀನ ದೇವತೆಗಳು

ಸಂಪಟೂರು ವಿಶ್ವನಾಥ

ಪ್ರಾಚೀನ ಈಜಿಪ್ಟ್ ದೇಶದ ಮತಧರ್ಮದ ಪ್ರಕಾರ, ಆದಿಯಲ್ಲಿ ಇಡೀ ಜಗತ್ತು ಚಲಿಸದ ನೀರಿನ ಸಾಗರವಾಗಿತ್ತು. ಇದರ ಮೇಲೆ ಭೂಮಿಯು ತೇಲುತ್ತಿತ್ತು. ಭೂಮಿಯಲ್ಲಿ ಎಲ್ಲ ಜೀವಿಗಳೂ ಭ್ರೂಣಸ್ಥಿತಿಯಲ್ಲಿದ್ದುವು. ಇದಕ್ಕೆ 'ನನ್' ಎಂಬ ಹೆಸರಿತ್ತು. 'ನನ್' ಸ್ತ್ರೀಯೆಂದೂ ಆಕೆಯು ಮೊದಲನೆಯ ಶಿಶು ಸೂರ್ಯದೇವನಾದ 'ರಾ' ಪ್ರತಿನಿತ್ಯ ಬೆಳಗ್ಗೆ ಆಕೆಯ ವಕ್ಷಸ್ಥಳದಿಂದ ಹುಟ್ಟಿ ಮತ್ತೆ ಸಂಜೆಗೆ ಅದರೊಳಗೆ ಸೇರಿ ಹೋಗುತ್ತಿದ್ದನೆಂದೂ ನಂಬಿಕೆ.

ಬಹಳ ಕಾಲ 'ರಾ' ಪ್ರಮುಖ ಸೂರ್ಯದೇವನೆಂದು ಪೂಜಿಸಲ್ಪಡುತ್ತಿದ್ದ. ನಂತರ 'ಒಸಿರಿಸ್'ನು 'ರಾ'ನನ್ನು ಹಿಂದಕ್ಕೆ ಹಾಕಿ ತಾನೇ ಪ್ರಮುಖ ದೇವರಾದ. 'ರಾ' ಹಿಂದೆ ಬೀಳಲು ಒಂದು ಕಾರಣವೆಂದರೆ ದಿನಪ್ರತಿ ಸುತ್ತಿ ಸುತ್ತಿ ಸಾಕಾಗಿ ವಿಶ್ರಾಂತಿ ಪಡೆಯಲು, ಶಾಂತಿಯನ್ನು ಹೊಂದಲು ನಿರ್ಧರಿಸಿದ. ಇದೇ ಸಮಯದಲ್ಲಿ ಇಡೀ ಭೂಲೋಕವನ್ನು ನಾಶಮಾಡುವ ಸಲುವಾಗಿ 'ರಾ' ತನ್ನ ಜೊತೆಗಾತಿ 'ಹಾಥಾರ್'ಳನ್ನು ಕಳಿಸಿದ. 'ಹಾಥಾರ್' ಎಷ್ಟು ಚೆನ್ನಾಗಿ ಕೆಲಸಮಾಡಿದಳೆಂದರೆ ಮುಕ್ಕಾಲು ಪಾಲು ಮಾನವ ಜನಾಂಗವನ್ನೆಲ್ಲಾ ಅಳಿಸಿಹಾಕಿದಳು. ಕೊನೆಯ ಗಳಿಗೆಯಲ್ಲಿ ಮಾನವಕುಲದ ಸಂಪೂರ್ಣ ನಾಶವನ್ನು ತಡೆಯಲು 'ರಾ' ಭೂಮಿಯ ಮೇಲೆ ಮದ್ಯದ ಪ್ರವಾಹವನ್ನು ಹರಿಸಿದ. ಇದನ್ನು ಕುಡಿದು ಉನ್ಮತ್ತಳಾದ 'ಹಾಥಾರ್' ತಾನು ಪ್ರಾರಂಭಿಸಿದ ಹತ್ಯಾಕಾಂಡವನ್ನು ಮರೆತಳು. ಇದರಿಂದ ಬದುಕಿ ಉಳಿದ ಕೆಲವೇ ಮನುಷ್ಯರಿಂದ ಮತ್ತೆ ಭೂಮಿ ಜನನಿಬಿಡವಾಯಿತು.

ಆಗ 'ರಾ' ದೇವರು ನಿವೃತ್ತನಾಗಿ ಸ್ವರ್ಗಕ್ಕೆ ಹಿಂದಿರುಗಿದ.

ಈಗ 'ಒಸಿರಿಸ್' ಸೂರ್ಯದೇವರಾದ ಈತ 'ನಟ್' ಎಂಬ ಆಕಾಶದೇವತೆ ಮತ್ತು 'ಸೆಬ್' ಎಂಬ ಭೂಮಿದೇವರ ಪುತ್ರ. ಈತನ ಜನನ ಕಾಲದಲ್ಲಿ ತಾಯಿಗೆ ಬಹಳ ಕಷ್ಟವಾಯಿತಂತೆ. ಇದಕ್ಕೆ ಕಾರಣ ಹೀಗಿದೆ. 'ರಾ' ದೇವರು ಕೂಡ 'ನಟ್' ದೇವತೆಯನ್ನು ಪ್ರೀತಿಸುತ್ತಿದ್ದನಂತೆ. ಆಕೆ ಇನ್ನೊಬ್ಬ ದೇವರಿನ ಮಗುವಿಗೆ ಜನ್ಮಕೊಡುತ್ತಾಳೆಂದು ತಿಳಿದು ಬಂದಾಗ 'ರಾ' ದೇವರು, ಆಕೆಯ ಮಗು ವರ್ಷದ ಯಾವ ತಿಂಗಳಲ್ಲೂ ಹುಟ್ಟದಿರಲಿ ಎಂದು ಶಪಿಸಿದನಂತೆ. ಹೀಗಾದ ಮೇಲೆ 'ನಟ್' ಮಗುವನ್ನು ಯಾವಾಗಲೂ ಗರ್ಭದಲ್ಲಿಯೇ ಇಟ್ಟುಕೊಂಡಿರಬೇಕಾಗಿ ಬಂತು. ಇಂಥ ಸಂದಿಗ್ಧ ಸಮಯದಲ್ಲಿ ಆಕೆ ತನ್ನ ಇನ್ನೊಬ್ಬ ಪ್ರೀತಿಪಾತ್ರನಾದ, ಬುದ್ಧಿವಂತಿಕೆ ಮತ್ತು ಮಂತ್ರವಾದಿಗಳ ದೇವರಾದ

'ತೋತ್'ನ ಸಹಾಯವನ್ನು ಕೋರಿದಳು. 'ತೋತ್' ಚಂದ್ರದೇವತೆಯನ್ನು ಒಂದು ಬುದ್ಧಿವಂತಿಕೆಯ ಆಟಕ್ಕೆ ಕರೆದು ಸೋಲಿಸಿದ. ಚಂದ್ರದೇವತೆ, ತಾನು ಸೋತರೆ ತನ್ನ ಸ್ವಲ್ಪ ಬೆಳಕನ್ನು ಬಿಟ್ಟುಕೊಡುವುದಾಗಿ ಒಪ್ಪಿದಳು. ಹೀಗೆ ಪಡೆದ ಬೆಳಕಿನಿಂದ 'ತೋತ್' ದೇವರು ಐದು ದಿನಗಳನ್ನು ಸೃಷ್ಟಿಸಿ ವರ್ಷಕ್ಕೆ ಸೇರಿಸಿದ. ಅಲ್ಲಿಯವರೆಗೆ ವರ್ಷದಲ್ಲಿ ಮುನ್ನೂರ ಅರವತ್ತೇ ದಿನಗಳಿದ್ದವು. ಈಗ ಮುನ್ನೂರ ಅರವತ್ತೈದು ದಿನಗಳಾದವು. ಹೀಗೆ ಸಿಕ್ಕಿದ ಐದು ಹೊಸ ದಿನಗಳಲ್ಲಿ 'ನಟ್' ದೇವತೆ 'ಒಸಿರಿಸ್' 'ಹೋರಸ್' 'ಸೆಟ್' 'ಐಸಿಸ್' ಮತ್ತು 'ನೆಫ್ತಿಸ್' ಎಂಬ ಐವರು ಮಕ್ಕಳನ್ನು ಹೆತ್ತಳು.

ಅಂದಿನಿಂದ ಚಂದ್ರನ ಬೆಳಕು ಕೆಲವು ಬಾರಿ ಕಡಿಮೆಯಾಗುತ್ತಲೂ ಮತ್ತೆ ಕೆಲವು ಬಾರಿ ಹೆಚ್ಚಾಗುತ್ತಲೂ ಇರುವುದು. ಈಜಿಪ್ಟಿನ ಪುರಾಣ ಕಥೆಗಳು ಅಮಾವಾಸ್ಯೆ ಮತ್ತು ಹುಣ್ಣಿಮೆಗೆ ಇದೇ ಕಾರಣವೆಂದು ಹೇಳುತ್ತವೆ.

'ನಟ್'ಳ ಮೊದಲನೆಯ ಮಗುವಾದ 'ಒಸಿರಿಸ್' ಹುಟ್ಟಿದಾಗ ಆಕಾಶದಲ್ಲಿ ಬೆಳಕುಂಟಾಗಿ ದಿವ್ಯವಾಣಿ ಮೊಳಗಿತು, "ಭೂಮಿಯ ಸಮಸ್ತ ವಸ್ತುಗಳಿಗೂ ಒಡೆಯ, ಅಧಿಪತಿ ಈಗ ಜನಿಸಿದ್ದಾನೆ," ಎಂದು. ಈ ಭವಿಷ್ಯವಾಣಿ 'ರಾ' ದೇವರು ನಿವೃತ್ತಿಯಾದಾಗ ನಿಜವಾಯಿತು. 'ಒಸಿರಿಸ್'ನ ಆಳಿಕೆಯಲ್ಲಿ ಈಜಿಪ್ಟ್ ದೇಶ ಹಿಂದೆಂದೂ ಆಗದಷ್ಟು ಅಭಿವೃದ್ಧಿಯಾಯಿತು. ಅವನು ಜನರಿಗೆ ಉತ್ತು, ಬಿತ್ತಿ, ಬೆಳೆ ತೆಗೆದು ಧಾನ್ಯಗಳನ್ನು ಆಹಾರವಾಗಿ ಬಳಸುವುದನ್ನು ಕಲಿಸಿದ. ಇದಕ್ಕೆ ಮುಂಚೆ ಅವರು ನರಮಾಂಸವನ್ನು ತಿನ್ನುತ್ತಿದ್ದರು. ಒಬ್ಬ ಮನುಷ್ಯ ಇನ್ನೊಬ್ಬನನ್ನು ಹೆಚ್ಚು ಕರುಣೆ, ವಿಶ್ವಾಸದಿಂದ ಕಾಣುವುದನ್ನು ಕಲಿಸಿದ. ಹೀಗೆ 'ಒಸಿರಿಸ್'ನಿಂದಾಗಿ ಈಜಿಪ್ಟ್ ಸುವರ್ಣ ಯುಗವನ್ನು ಕಂಡಿತು.

'ಒಸಿರಿಸ್' ಪ್ರವರ್ಧಮಾನಕ್ಕೆ ಬಂದದ್ದನ್ನು ಕಂಡು ಅವನ ತಮ್ಮ 'ಸೆಟ್'ಗೆ ಅಸೂಯೆ ಹೆಚ್ಚಾಯಿತು. ಇದರಿಂದ ಅಣ್ಣನನ್ನು ಕೊಲ್ಲಿಸಲು ಅವನು ತಂತ್ರ ಹೂಡಿದ. 'ಒಸಿರಿಸ್'ನ ದೇಹದಷ್ಟೇ ಉದ್ದಕ್ಕೆ ಚೆನ್ನಾಗಿ ಕೆತ್ತನೆಯ ಕೆಲಸ ಮಾಡಲ್ಪಟ್ಟ ಗಟ್ಟಿಯಾದ ಪೆಟ್ಟಿಗೆಯೊಂದನ್ನು ಮಾಡಿಸಿದ. ನಂತರ ಹಬ್ಬಕ್ಕೆ ಅನೇಕರನ್ನು ತನ್ನ ಮನೆಗೆ ಕರೆದ. 'ಒಸಿರಿಸ್'ನೂ ಈ ಹಬ್ಬಕ್ಕೆ ಆಹ್ವಾನಿತನಾಗಿದ್ದ. ಹಬ್ಬದೂಟ ಮಾಡುತ್ತಿದ್ದಾಗ ಪೆಟ್ಟಿಗೆಯನ್ನು ತೋರಿಸಿ, ಯಾರು ಈ ಪೆಟ್ಟಿಗೆಯಲ್ಲಿ ಮಲಗಿದಾಗ ಉದ್ದ ಸರಿ ಹೋಗುವುದೋ ಅವರಿಗೇ ಪೆಟ್ಟಿಗೆಯನ್ನು ಉಡುಗೊರೆಯಾಗಿ ಕೊಡುವುದಾಗಿ ಸಾರಿದ. ಅನೇಕ ಅಥಿತಿಗಳು ಬಂದು ಮಲಗಿ ಸರಿಹೋಗದೆ ಎದ್ದು ಹೋದರು. 'ಒಸಿರಿಸ್' ಎಲ್ಲರಂತೆ ಬಂದು ಮಲಗಿದ. ಕೂಡಲೆ 'ಸೆಟ್' ಮತ್ತು ಅವನ ದುಷ್ಟ ಗೆಳೆಯರು, ಪೆಟ್ಟಿಗೆಯ ಬಾಗಿಲನ್ನು ಮುಚ್ಚಿ ಬೀಗ ಹಾಕಿದರು. ಗಾಳಿಯು ಸ್ವಲ್ಪವೂ ಒಳಕ್ಕೆ ಹೋಗದಂತೆ ಕಾಯಿಸಿದ ಸೀಸವನ್ನು ಹಾಕಿ ರಂಧ್ರಗಳನ್ನೆಲ್ಲಾ ಮುಚ್ಚಿದರು. ನಂತರ ಪೆಟ್ಟಿಗೆಯನ್ನು ತೆಗೆದುಕೊಂಡು ಹೋಗಿ ನೈಲ್ ನದಿಯಲ್ಲಿ ಎಸೆದರು. ನದಿಯ ಪ್ರವಾಹ ಪೆಟ್ಟಿಗೆಯನ್ನು ರಭಸದಿಂದ ಕೊಂಡೊಯ್ಯಿತು.

'ಒಸಿರಿಸ್'ನ ಹೆಂಡತಿಯಾದ ಐಸಿಸ್'ಗೆ ಇದು ತಿಳಿದಾಗ ಅವಳು ಬಹಳ ದುಃಖಿಸಿದಳು. ಗಂಡನ ದೇಹಕ್ಕೆ ಕ್ರಮವಾದ ಅಂತ್ಯಸಂಸ್ಕಾರ ಮಾಡುವವರೆಗೂ ಅವನ ಆತ್ಮಕ್ಕೆ ಶಾಂತಿ ದೊರೆಯುವುದಿಲ್ಲವೆಂದು ತಿಳಿದು, ಪೆಟ್ಟಿಗೆಯನ್ನು ಹುಡುಕಿಕೊಂಡು ಹೊರಟಳು. ಬಹಳ ಕಾಲ 'ಐಸಿಸ್'ಗೆ ಪೆಟ್ಟಿಗೆಯ ಸುಳಿವು ಸಿಗಲಿಲ್ಲ. ಕೊನೆಗೊಂದು ದಿನ ಸೇವಕರು, ಆ ಪೆಟ್ಟಿಗೆ 'ಬೈಬ್ಲೊಸ್' ಎಂಬಲ್ಲಿ 'ಟಾಮರಿಸ್ಕ್' ಪೊದೆಯೊಳಕ್ಕೆ ಹೋಗಿ ಬಿದ್ದಿತೆಂದೂ, ಕೂಡಲೆ ಆ ಪೊದೆ ಪೆಟ್ಟಿಗೆಯನ್ನೂ ಒಳಗೊಂಡು ಹೆಮ್ಮರವಾಗಿ ಬೆಳೆಯಿತೆಂದೂ, [illegible] ರಾಜ ಆ ಮರವನ್ನು ಕಡಿಸಿ, ಅದರ ಬೃಹದಾಕಾರಕ್ಕೆ ಆಶ್ಚರ್ಯಪಟ್ಟು ತನ್ನ ಅರಮನೆಯ

ಮೋಲ್ಛಾವಣಿಗೆ ಆಧಾರವಾಗಿ ನಿಲ್ಲಿಸಿದ್ದಾನೆಂದೂ ತಿಳಿಸಿದರು. ಕೂಡಲೆ 'ಐಸಿಸ್' ಆ ರಾಜನ ಬಳಿಗೆ ಹೋಗಿ ಅವನ ಮಗುವಿಗೆ ದಾದಿಯಾಗಿ ಸೇರಿಕೊಂಡಳು. ಅವನ ಮಗನನ್ನು ಅಮರನನ್ನಾಗಿ ಮಾಡಲು ನಿರ್ಧರಿಸಿದಳು. 'ಐಸಿಸ್' ಮಗುವನ್ನು ವಿಚಿತ್ರ ರೀತಿಯಲ್ಲಿ ಪಾಲಿಸುತ್ತಿದ್ದಾಳೆಂದು ರಾಣಿಗೆ ಸುದ್ದಿ ಮುಟ್ಟಿತು. ಒಂದು ರಾತ್ರಿ, ಖುದ್ದಾಗಿ ತಾನೇ ಪರೀಕ್ಷಿಸಲು 'ಐಸಿಸ್' ಮತ್ತು ಮಗು ಇದ್ದ ಕೋಣೆಯಲ್ಲಿ ಬಚ್ಚಿಟ್ಟುಕೊಂಡಳು. 'ಐಸಿಸ್' ಒಲೆಗೆ ಚೆನ್ನಾಗಿ ಸೌದೆ ಹಾಕಿ ಧಗಧಗನೆ ಉರಿಯುತ್ತಿದ್ದ ಒಲೆಯ ಬಳಿಗೆ ಮಗುವನ್ನೆತ್ತಿಕೊಂಡು ಹೋದಳು. ರಾಣಿಗೆ ಮುಂದೆ ಕಾದು ನೋಡುವಷ್ಟು ಸಹನೆಯಿರಲಿಲ್ಲ. ಕೂಡಲೆ ಬಚ್ಚಿಟ್ಟುಕೊಂಡಿದ್ದ ಸ್ಥಳದಿಂದ ದಾವಿಸಿ ಬಂದು ಮಗುವನ್ನು ಕಿತ್ತುಕೊಂಡಳು. ಆಗ 'ಐಸಿಸ್' ದೇವತೆ ಹೇಳಿದಳು: "ಇನ್ನೊಂದು ದಿನ ಮಾಂತ್ರಿಕ ಶ್ರಮಕ್ಕೆ ನೀನು ಅಡ್ಡಿ ಬರದಿದ್ದರೆ ನಿನ್ನ ಮಗ ಅಮರನಾಗುತ್ತಿದ್ದ. ಆದರೆ ಈಗ ಅವನೂ ಎಲ್ಲರಂತೆ ಸಾಯಬೇಕು!" ರಾಣಿಗೆ ದಾದಿ ಯಾರೆಂದು ತಿಳಿದಾಗ ಕ್ಷಮಾಪಣೆ ಕೇಳಿಕೊಂಡು, ತಪ್ಪಿಗಾಗಿ ಯಾವ ಪ್ರತಿಫಲವನ್ನಾದರೂ ಕೊಡುವುದಾಗಿ ಹೇಳಿದಳು. 'ಐಸಿಸ್' ದೇವತೆ ಕೇಳಿದಳು, "ಅರಮನೆಯ ಮೋಲ್ಛಾವಣಿಗೆ ಆಧಾರವಾಗಿ ನಿಲ್ಲಿಸಿರುವ ಕಂಬವನ್ನು ಸೀಳಿ ಅದರಲ್ಲಿ ಅಡಗಿರುವ ಉದ್ದದ ಮರದ ಪೆಟ್ಟಿಗೆಯನ್ನು ಕೊಡಿ," ಎಂದು. ರಾಣಿ ಅವಳ ಮಾತಿಗೆ ತಪ್ಪಲಿಲ್ಲ. 'ಐಸಿಸ' ತನ್ನ ಗಂಡನ ಶವವಿದ್ದ ಪೆಟ್ಟಿಗೆಯನ್ನು ತೆಗೆದುಕೊಂಡು ಅದನ್ನು ಒಂದು ಗುಟ್ಟಾದ ಸ್ಥಳದಲ್ಲಿ ಮುಚ್ಚಿಟ್ಟು ತನ್ನ ಮಗ 'ಹೋರಸ'ನನ್ನು ಹುಡುಕಿಕೊಂಡು ಹೊರಟಳು. ಐಸಿಸ್ ಹೋರಸ್‌ನನ್ನು ಹುಡುಕುತ್ತಾ ಹೊರಟಾಗ, 'ಸೆಟ್' ತನ್ನ ಅಣ್ಣನ ಹೆಣವಿದ್ದ ಪೆಟ್ಟಿಗೆಯನ್ನು ನೋಡಿಬಿಟ್ಟ. 'ಐಸಿಸ್' ಮತ್ತೆ ಅವನನ್ನು ಬದುಕಿಸಿಬಿಡಬಹುದೆಂಬ ಭಯದಿಂದ ಹೆಣವನ್ನು ಹದಿನಾಲ್ಕು ತುಂಡುಗಳನ್ನಾಗಿ ಮಾಡಿ ಅದನ್ನು ದೇಶದ ಹದಿನಾಲ್ಕು ಕಡೆಗಳಲ್ಲಿ ಎಸೆದ. 'ಐಸಿಸ್' ಮತ್ತೆ ಹುಡುಕಲು ಆರಂಭಿಸಿದಳು. ಅನೇಕ ವರ್ಷಗಳ ನಂತರ ಹದಿನಾಲ್ಕು ತುಂಡುಗಳೂ ಸಿಕ್ಕಿದವು. ಒಂದೊಂದು ತುಂಡು ಸಿಕ್ಕದಾಗಲೂ ಅದನ್ನು ಶಾಸ್ತ್ರೋಕ್ತವಾಗಿ ಸಂಸ್ಕಾರ ಮಾಡಿ ಆ ಸ್ಥಳದಲ್ಲಿ ಒಂದು ದೇವಾಲಯವನ್ನು ಕಟ್ಟಿಸಿದಳು.

ಇದರಿಂದ 'ಒಸಿರಿಸ್'ನ ಆತ್ಮಕ್ಕೆ ಶಾಂತಿ ದೊರೆಯಿತು. ದೇವಲೋಕದಲ್ಲಿ ಈತ, ಮೃತನಾದವರ ಒಳಿತು ಕೆಡುಕುಗಳನ್ನು, ಪಾಪ ಪುಣ್ಯಗಳನ್ನು ನಿರ್ಧರಿಸುವ ನ್ಯಾಯಾಧಿಪತಿಯೂ ಮಾನವರೆಲ್ಲರಿಗೆ ಮೋಕ್ಷಕ್ಕೆ ಮಾರ್ಗದರ್ಶಕನೂ ಆದನು. ಈತ ತನ್ನ ಮಗನಾದ 'ಹೋರಸ್'ನ ದೇಹವನ್ನು ಭೂತದ ರೂಪದಲ್ಲಿ ಹೊಕ್ಕು ತನ್ನ ತಮ್ಮನ ಹೀನ ಕಾರ್ಯಕ್ಕೆ ಸೇಡು ತೀರಿಸಿಕೊಳ್ಳಲು ಆಜ್ಞಾಪಿಸಿದ. ಅಂತೆಯೆ 'ಹೋರಸ್' ಸೇಡು ತೀರಿಸಿಕೊಂಡ. ಈಗ 'ಹೋರಸ್' ಸೂರ್ಯದೇವರ ಪದವಿಯನ್ನು ಪಡೆದಿದ್ದರಿಂದ ಅನೇಕ ಬಾರಿ 'ಸೆಟ್'ನೊಂದಿಗೆ (ಈಗ 'ಸೆಟ್' ಕೆಡುಕು ಮತ್ತು ಕತ್ತಲೆಯ ದೇವರೆಂದು ಸುಪ್ರಸಿದ್ಧನಾಗಿದ್ದ) ಯುದ್ಧಮಾಡಿದ. ಕೆಲವು ಸಾರಿ 'ಹೋರಸ್' ಗೆದ್ದರೆ, ಮತ್ತೆ ಕೆಲವು ಸಾರಿ 'ಸೆಟ್' ಗೆಲ್ಲುತ್ತಿದ್ದ. ಕೊನೆಯದಾಗಿ, ಅಂತಿಮ ಜಯ 'ಹೋರಸ್'ನದಾಗುವವರೆಗೂ ಕಾದಾಡುತ್ತಲೇ ಇರುತ್ತಾರೆ. ನಂತರ 'ಒಸಿರಿಸ್' ಭೂಮಿಗೆ ಹಿಂದಿರುಗುತ್ತಾನೆ. ಈಜಿಪ್ಟ್‌ನಲ್ಲಿ ಸುವರ್ಣಯುಗ ಮತ್ತೊಮ್ಮೆ ಆರಂಭವಾಗುತ್ತದೆ.

★



ಎಂಟು ಗಂಟೆಗಳ ವರೆಗೆ ಅತಿ ಸಂಕಟ ಸ್ಥಿತಿಯಲ್ಲಿದ್ದ

ಮೃತ್ಯುವಿನ ಮುಖದಲ್ಲಿ

ಎಸ್. ಕೆ. ವೀರಭದ್ರಸ್ವಾಮಿ

೪೦ ಅಡಿ ಎತ್ತರದ ಆ ಹೊಗೆಕೊಳವೆಯನ್ನು ೨೦ ವರ್ಷಗಳಿಂದಲೂ ದುರಸ್ತಿ ಮಾಡಿಸಿರಲಿಲ್ಲ. ಉತ್ತರ ಇಂಗ್ಲೆಂಡಿನ ಲ್ಯಾಂಕ್‌ಶಯರಿನ ಗ್ರಾಮೀಣ ಪ್ರದೇಶದಲ್ಲಿದ್ದ ಈ ಹೊಗೆಕೊಳವೆಯನ್ನು ದುರಸ್ತಿ ಮಾಡಲು ಪಟ್ಟಣದ ಕೆಲಸಗಾರರಾರೂ ಒಪ್ಪಿರಲಿಲ್ಲ. ಕೊನೆಗೆ ಜಾಕ್ಸನ್ ಎಂಬವ ಈ ಕಾರ್ಯಕ್ಕೆ ಕೈಹಚ್ಚಿದ.

ಅಂದು ೭-೧೦-೧೯೫೭, ಬೆಳಗ್ಗೆ ಕೆಲಸವನ್ನು ವಹಿಸಿಕೊಂಡ ಜಾಕ್ಸನ್ ಸಂಜೆ ಮೂರೂವರೆ ಗಂಟೆಗೆ ಕೆಲಸಕ್ಕೆ ತೊಡಗಿದ. ಆತನ ಸಹಾಯಕ ಸೆಸಿಲ್ ರೈಟನೂ ಅವನೊಡನೆ ಇದ್ದ. ಒಮ್ಮೆಗೇ, ಕೆಳಗಿನಿಂದ ಹೊಗೆಕೊಳವೆಯನ್ನು ಕೆಡಹುವುದು ಅನರ್ಥಕಾರಿಯಾಗಿತ್ತು. ಅದಕ್ಕಾಗಿ ಇಬ್ಬರೂ ಸೇರಿ ಕಬ್ಬಿಣದ ಏಣಿಗಳನ್ನು ಕೊಳವೆಯ ತುದಿಯವರೆಗೆ ಜೋಡಿಸಿದರು. ಜಾಕ್ಸನ್ ಹೊಗೆಕೊಳವೆಯ ತುದಿಯನ್ನೇರಿ, ಅದರ ಕಬ್ಬಿಣದ ಬೆಲ್ಟನ್ನು ಬಿಚ್ಚಿ, ಕಲ್ಲುಗಳನ್ನು ತನ್ನಲ್ಲಿದ್ದ ಕಬ್ಬಿಣದ ಕೊಂಡಿಯಿಂದ ಏರಿಸತೊಡಗಿದ. ಏಣಿಯ ತುದಿಯಲ್ಲಿ ರೈಟ್ ನಿಂತಿದ್ದ. ಜಾಕ್ಸನ್ನನ ಯೋಚನೆಗೆ ವಿರುದ್ಧವಾಗಿಯೇ ಎನ್ನಬೇಕು— ಒಂದು ಕಲ್ಲು ಅದನ್ನು ಮೇಲೆ ಎಬ್ಬಿಸುವುದಕ್ಕಿಂತ ಮೊದಲೇ ಜಾರಿ ಕೆಳಗೆ ಬಿತ್ತು. ಪುಣ್ಯಕ್ಕೆ ಅದು ರೈಟ್‌ನ ಮೇಲೆ ಬೀಳಲಿಲ್ಲ. ಬೀಳುವಾಗ ಆತನ ಅಂಗಿ ತೆರೆದದ್ದರಿಂದ ಅದೇ ಒರಸಿಕೊಂಡು ಕೊಂಚ ಹರಿಯಿತು.

ಜಾಕ್ಸನ್ನನಿಗೆ ಹಾಯಾಗಿ ಕೂಡಲು ಆ ಹೊಗೆಕೊಳವೆಯ ತುದಿಯಲ್ಲಿ ಸ್ಥಳವಾದರೂ ಹೇಗೆ ದೊರೆಯಬೇಕು? ಆತ ಒಂದು ಕಾಲನ್ನು ಕೊಳವೆಯ ಒಳಗೂ ಇನ್ನೊಂದನ್ನು ಹೊರಗೂ ಹಾಕಿ ಕಲ್ಲಿನ ಮೇಲೆ ಡೋಲಾಯಮಾನವಾಗಿಯೇ ಕುಳಿತ. ಒಂದು ಕಲ್ಲು ಬಿದ್ದೊಡನೆಯೇ ಏಣಿಯನ್ನು ಜೋಡಿಸಿದ. ಬದಿಯ ಕಲ್ಲುಗಳು ಬಹಳವಾಗಿ ಅಲ್ಲಾಡುತ್ತಿರುವುದು ಜಾಕ್ಸನನಿಗೆ ತಿಳಿಯಿತು. ಬೇಗನೇ ಇಳಿದು ಅಗ್ನಿಶಾಮಕ ದಳದವರಿಗೆ ತಿಳಿಸಲು ರೈಟರನಿಗೆ ಹೇಳಿದ.

ಹತ್ತಿರವೆಲ್ಲೂ ಫೋನಿರಲಿಲ್ಲ. ಹಾಗೇ ಸ್ವಲ್ಪ ದೂರದ ಹಳ್ಳಿಗೆ ಓಡಿ ಹೋಗಿ ರೈಟ್ ಅಗ್ನಿಶಾಮಕ ದಳದವರಿಗೆ ಸಹಾಯ ಮಾಡಲು ಕೇಳಿದ. ಸ್ವಲ್ಪ ಸಮಯದ ನಂತರ ದೊಡ್ಡ ಏಣಿಗಳೊಡನೆ ಅಗ್ನಿಶಾಮಕ ದಳದವರು ಬಂದರು. ಆ ಭಾರೀ ಏಣಿಗಳನ್ನು ಜೋಡಿಸಬೇಕೆಂದರೆ ಅಲ್ಲಿನ ನೆಲ ಏರು ತಗ್ಗುಗಳಿಂದ ಕೂಡಿತ್ತು. ಅದನ್ನು ಬೇಗ ಬೇಗನೆ ಸರಿ ಮಾಡಿ ಏಣಿಗಳನ್ನು ಜೋಡಿಸಲಾಯಿತು. ಆದರೇನು? ಇನ್ನೂ ತುದಿಗೆ ಮುಟ್ಟಲು ೪೦ ಅಡಿಗಳ ಅಂತರವಿತ್ತು.

ದಳದ ಮುಖಂಡನಾಗಿದ್ದ ಕೆಲ್ಲಿ ಏಣಿಯನ್ನು ಹತ್ತಿದ. ತುದಿಯಿಂದ ಜಾಕ್ಸನ್ನನನ್ನು ನೋಡಬಹುದಿತ್ತು. ಬಹಳ ಚಳಿಯಿದ್ದರೂ ಆತ ಗಾಬರಿಪಡುತ್ತ ಕುಳಿತಿದ್ದ. ಇದನ್ನು ಕಂಡ ಕೆಲ್ಲಿ ಸಂತೋಷಪಟ್ಟ. ಆದರೆ ಆತನನ್ನು ಇಳಿಸುವ ಬಗೆಯೆಂತು? ೪೦ ಅಡಿಗಳ ಏಣಿ ಅಲ್ಲೆಲ್ಲೂ ಇದ್ದ ಹಾಗಿರಲಿಲ್ಲ.

"ಮಿಸ್ಟರ್, ನಿನ್ನ ಏಣಿಯ ಮುಖಾಂತರವೇ ನಿನ್ನನ್ನು ಇಳಿಸುವ ಪ್ರಯತ್ನ ಮಾಡಲೆ?'' ಕೆಲ್ಲಿ ಕೇಳಿದ.

"ಬೇಡ, ಬೇಡ," ಜಾಕ್ಸನ್ ಕೂಗಿದ,



"ಹಾಗೆ ಪ್ರಯತ್ನ ಮಾಡಿದರೆ ನಾವಿಬ್ಬರೂ ಬಿದ್ದಂತೆಯೇ."

ಆ ವೇಳೆಗೆ ೪-೪೫ ಆಗಿತ್ತು. ಡಿವಿಜನಲ್ ಫೈರ್ ಅಧಿಕಾರಿಗಳಾದ ಕೀಟ್ರಾಲ್ ಸಹ ಅಲ್ಲಿಗೆ ಬಂದು ಆತನ ಯೋಜನೆಯಂತೆ ತಳವನ್ನು ಇನ್ನೂ ಸ್ವಲ್ಪ ಸಮತಟ್ಟು ಮಾಡಿದರೆ ಏಣಿಯನ್ನು ಇನ್ನೂ ಸ್ವಲ್ಪ ಮೇಲೆತ್ತುವುದು ಸಾಧ್ಯವಿತ್ತು. ಅಷ್ಟರಲ್ಲಿ ಪಕ್ಕದ ಹಳ್ಳಿಯವರೆಲ್ಲಾ ಅಲ್ಲಿ ನೆರೆದಿದ್ದರು. ಬೇಗ ಬೇಗನೆ ಸಮತಟ್ಟು ಮಾಡಲಾಯಿತು. ತನ್ಮಧ್ಯೆ ಹೊಗೆಕೊಳವೆ ಕೆಲಸಗಾರರು ತಮ್ಮ ಏಣಿಗಳೊಂದಿಗೆ ಸಹಾಯಕ್ಕೆ ಬರಬೇಕೆಂಬ ರೇಡಿಯೋ ಸಂದೇಶವನ್ನು ಕೀಟ್ರಾಲ್ ಕಳುಹಿಸಿದರು. ಪೋಲಿಸ್ ಸ್ಟೇಶನ್ನುಗಳಿಗೂ ವಿವರಗಳು ಹೋದವು; ಆದರೆ ಆ ಕೆಲಸಕ್ಕೆ ಯೋಗ್ಯವಾದ ಕಬ್ಬಿಣದ ಅಷ್ಟು ಉದ್ದ ಏಣಿ ಸಿಗಲೇಯಿಲ್ಲ.

ಆಗಲೇ ಘಂಟೆ ೫-೩೦ ಆಗಿತ್ತು. ಸೂರ್ಯ ಪರ್ವತದಗಳೆಡೆಗಳಲ್ಲಿ ಆಗಲೇ ಮರೆಯಾಗಿದ್ದ. ಮಂಜು ಬೀಳತೊಡಗಿತ್ತು. ಚಳಿ ಪ್ರಬಲವಾದತೊಡಗಿತ್ತು. ಜಾಕ್ಸನ್ನನ ಪಾಡು ಹೇಳಲಾಸಲ್ಲ. ಆತನ ಎಡಗಾಲು ಆಗಲೇ ಮರಗಟ್ಟಿತ್ತು. ಮೈಮೇಲೆ ಉಣ್ಣೆ ಬಟ್ಟೆಯೂ ಇರಲಿಲ್ಲ. ಕಾಲು ಉಳುಕಿದಂತಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಅಕಸ್ಮಾತ್ತಾಗಿ ಹಿಡಿತ ತಪ್ಪಿದರೆ ಹೇಗೆಂದು ಒಳಗೊಳಗೇ ಗಾಬರಿಯಾಗಿದ್ದ.

ಕೆಳಗೆ ಕೆಲಸವನ್ನು ಆದಷ್ಟು ಶೀಘ್ರವಾಗಿ ಮುಗಿಸುವ ಅವಶ್ಯಕತೆಯನ್ನು ಕೀಟ್ರಾಲ್ ಮನಗಂಡಿದ್ದ. ಇಷ್ಟರಲ್ಲೇ ಫುಲ್‌ವುಡ್‌ನಲ್ಲಿರುವ ಅಗ್ನಿಶಾಮಕ ದಳದವರಿಗೆ ಒಂದು ಹೆಲಿಕಾಪ್ಟರು ಕಳುಹಿಸಲು ರೇಡಿಯೋ ಸಂದೇಶ ಕಳುಹಿಸಲಾಗಿದ್ದಿತು. ಕತ್ತಲೆ ಮುಸುಕು ಮುಸುಕಾಗಿ ಎಲ್ಲೆಡೆ ಆವರಿಸತೊಡಗಿತ್ತು. ಕೆಲಸವನ್ನು ಅರ್ಧಕ್ಕೇ ಬಿಡುವಂತಿರಲಿಲ್ಲ. ಆದ್ದರಿಂದ ಕೀಟ್ರಾಲ್ ವಿದ್ಯುದ್ದೀಪ ಸಲಕರಣೆಯವರಿಗೂ ತುರ್ತಾಗಿ ಬರಹೇಳಿದ. ಅಷ್ಟರಲ್ಲಿ ಫುಲ್‌ವುಡ್ಡಿನ ಅಗ್ನಿಶಾಮಕ ದಳದವರಿಂದ ಹೆಲಿಕಾಪ್ಟರ್ ಸಿಗಲಿಲ್ಲವೆಂಬ ನಿರಾಶಾದಾಯಕ ಸುದ್ದಿ ಬಂದಿತ್ತು.

ಆ ವೇಳೆಗೆ ಕೇಟ್ರ್ಯಾಲನ ದಳದವರು ಜೋಜೆಫ್ ಫ್ರಯರ್ ಎಂಬ ಕೊಳವೆ ದುರಸ್ತಿ ಕೆಲಸದವನನ್ನು ಕರೆದುಕೊಂಡು ಬಂದಿದ್ದರು. ಆತನನ್ನು ನೋಡಿದರೆ ಆ ಕೆಲಸಕ್ಕೆ ಉಪಯೋಗಕ್ಕೆ ಬೀಳುವನೆಂದು ಯಾರಾದರೂ ಊಹೆ ಮಾಡಿದರೂ ನಂಬುವಂತಿರಲಿಲ್ಲ. ಆದರೆ ಆ ಸಂದರ್ಭಕ್ಕೆ ಅಗತ್ಯವಾದ ಧೈರ್ಯ ಮತ್ತು ಉಪಾಯಗಳೆರಡೂ ಆತನ ಬಳಿ ಇದ್ದವು. ಕಬ್ಬಿಣದ ಕೆಲವು ಬಳೆಗಳು, ಕೆಲವು ದೊಡ್ಡ ದೊಡ್ಡ ಮೊಳೆಗಳು, ಕೆಲವು ಐದು ಅಡಿ ಉದ್ದವಾದ ಏಣಿಗಳಿಂದ ಸನ್ನದ್ಧನಾಗಿ ಬಂದಿದ್ದ. ಇವುಗಳ ಪೈಕಿ ತನಗೆ ಅಗತ್ಯವಾದ ಸಲಕರಣೆಗಳನ್ನು ಮಾತ್ರ ತೆಗೆದುಕೊಂಡು ಅಗ್ನಿಶಾಮಕದಳದವರ ಆ ಏಣಿಯನ್ನು ಏರಿ ಮೇಲೆ ಹೋದ.

ಕತ್ತಲು ಇನ್ನು ಹೆಚ್ಚಾಗಿತ್ತು.

ಜಾಕ್ಸನ್ ಚಳಿಯಿಂದ ನಡುಗುತ್ತಿದ್ದ. ಆದರೆ ಆತನ ಗಟ್ಟಿಮುಟ್ಟಾದ ದೇಹ, ಈ ಕೆಲಸಕ್ಕೆ ಸಂಬಂಧಿಸಿದಂತೆ ಆತ ಸೈನ್ಯದಲ್ಲಿ ಪಳೆಂಟು ವರ್ಷಗಳ ಅನುಭವಗಳೇ ಜಾಕ್ಸನ್ನನನ್ನು ಕೆಳಗೆ ಬೀಳದಂತೆ ಹಿಡಿದಿಟ್ಟಿದ್ದವೆನ್ನಬೇಕು.

ಫ್ರಯರ್ ಒಂದರ ಮೇಲೊಂದರಂತೆ ಪಟ್ಟಿಗಳನ್ನು ಮೊಳೆ ಹೊಡೆದು ಜೋಡಿಸುತ್ತಾ ಹಳೆಯ ಹಾಗೂ ಕೊನೆಯ ಏಣಿಯನ್ನು ಜೋಡಿಸಿದ. ಆದರೆ ಜಾಕ್ಸನ್ನನನ್ನು ತಲುಪಲು ಇನ್ನು ಕೆಲವು ಅಡಿಗಳಷ್ಟು ಅಂತರವಿತ್ತು.

ಒಂದು ಮರದ ಅಗಲವಾದ ಹಲಗೆಯನ್ನು ಬೇಗನೆ ತರಲು ಫ್ರಯರ್ ಇಬ್ಬರನ್ನು ಅಟ್ಟಿದ. ಅದನ್ನುಪಯೋಗಿಸಿ ಜಾಕ್ಸನ್ನನನ್ನು ಇಳಿಸುವ ಯೋಚನೆ ಅವನಿಗಿತ್ತು.

ಗಡಿಯಾರದ ಮುಳ್ಳು ಏಳನ್ನು ದಾಟಿದ್ದನ್ನು ತೋರಿಸುತ್ತಿತ್ತು. ಜಾಕ್ಸನ್ನನಲ್ಲಿ ಈಗ ಸ್ವಲ್ಪ ನಿರಾಶೆ ಮೂಡತೊಡಗಿತು. ಆದರೂ ಆತ ಹಿಡಿತವನ್ನು ಸ್ವಲ್ಪವಾದರೂ ಸಡಿಲಿಸುವಂತಿರಲಿಲ್ಲ. ಹಾಗೆಯೇ ಅವನು ಅಲುಗಾಡುವಂತೆಯೂ ಇರಲಿಲ್ಲ. ಹಾಗೆ ಮಾಡಿದರೆ ಆತನ ಮೃತ್ಯುವಿಗೆ ಆಮಂತ್ರಣ ಕೊಟ್ಟಂತೆಯೇ ಆಗುತ್ತಿತ್ತು.


ಅಷ್ಟರಲ್ಲಿ ಇಬ್ಬರು ಕೆಳಗಿನಿಂದ ಮರದ ಹಲಗೆಯನ್ನು ತಂದಂತೆ ಕಾಣಿಸಿತು. ಲಕ್ಷ್ಯಗೊಟ್ಟು ನೋಡಿದಾಗ ಅದು ಹಲಗೆಯಾಗಿರದೆ, ಬರೇ ಮರದ ಕಾಂಡವಾಗಿತ್ತು. ಇದೇನೂ ಪ್ರಯೋಜನಕ್ಕೆ ಬರುವುದಿಲ್ಲವೆಂದು ಜಾಕ್ಸನ್ ಮೇಲಿನಿಂದಲೇ ಫ್ರಯರಿಗೆ ಕೂಗಿ ಹೇಳಿದ. ಈ ವೇಳೆಗೆ ಜಾಕ್ಸನ್ನನಿಗೆ ತುಂಬಾ ನಿರಾಶೆಯಾಗಿತ್ತು. ಆದರೆ ನಿರಾಶೆಯ ಕ್ಷಣಗಳಲ್ಲೂ ಆತನಿಗೆ ಉಪಾಯವೊಂದು ಹೊಳೆದು ಆತ ಫ್ರಯರಿಗೆ ಒಂದು ಗಟ್ಟಿಯಾದ ಹಗ್ಗವನ್ನು ತನ್ನತ್ತ ಎಸೆಯಲು ಹೇಳಿದ. ಅದನ್ನು ಮೇಲೆ ಗಟ್ಟಿಯಾದೆಡೆ ಬಿಗಿದು ಅದರ ಇನ್ನೊಂದು ತುದಿಯನ್ನು ಫ್ರಯರನಿಗೆ ಕೊಟ್ಟು ಅದರ ಮೂಲಕ ಇಳಿಯಬೇಕೆಂದು ಆತ ಯೋಚಿಸಿದ. ಯೋಚನೆಯೇನೋ ಸರಿ. ಆದರೆ ಆತ ಅದರ ಗುಂಟ ಜಾರುವಾಗ ಅಕಸ್ಮಾತ್ತಾಗಿ ಕಾಲುಗಳೇನಾದರೂ ಕೆಳಗಿನ ಕಲ್ಲುಗಳಿಗೆ ತಾಗಿದರೆ ಕೆಳಗಿನ ೧೫ ಕಲ್ಲುಗಳೂ ಫ್ರಯರಿಯ ಏಣಿಯ ಮೇಲೆ ಬೀಳಬಹುದಿತ್ತು. ಆದರೂ ಹಗ್ಗವನ್ನು ಬಿಗಿದು ಜಾಕ್ಸನ್ ಸಾಹಸಕ್ಕೆ ಅಣಿಯಾದ.

"ಅಯ್ಯೋSS ಆತ ಬಿದ್ದ" ಜನಸಂದಣಿಯಿಂದ ಹೆಂಗಸೊಬ್ಬಳು ಚೀರಿದಳು. ಕೆಲವು ಭಾರವಾದ ವಸ್ತುಗಳು ಧೂಳಿನೊಂದಿಗೆ ಧುಸ್ಸೆಂದು ಕೆಳಗೆ ಬಿದ್ದವು. ಆದರೆ ಕೆಲವೇ ನಿಮಿಷಗಳಲ್ಲಿ ಕೆಲವು ಜನ ಮೇಲಿನಿಂದ ಏಣಿಯಲ್ಲಿ ಇಳಿದು ಬರುತ್ತಿದ್ದರು. ಅವರೊಂದಿಗೆ ನಗೆಮುಖದಿಂದ ಜಾಕ್ಸನ್ನನೂ ಇದ್ದುದನ್ನು ನೋಡಿ ಜನ ಹರ್ಷೋದ್ಗಾರ ಮಾಡಿದರು.

ಎಂಟು ಗಂಟೆಗಳನ್ನಾತ ತ್ರಿಶಂಕು ಸ್ವರ್ಗದಲ್ಲಿ ಕಳೆದಿದ್ದ; ಆದರೆ ವಿಶ್ವಾಮಿತ್ರನಿಂದಲ್ಲ; ವಿಧಿಯಿಂದ.

✡


ಹೊಸ
ಪಾಯಿಂಟ್
ಡಿಟರ್ಜೆಂಟ್
ವಾಷಿಂಗ್
ಕೇಕ್
ಮೈಸೂರು
ಸ್ಯಾಂಡಲ್
ಸೋಪ್
ತಯಾರಕರಿಂದ
Point
Point
DETERGENT WASHING CAKE
Point
ರೂ. 1·29
ಸ್ಥಳೀಯ ತೆರಿಗೆಗಳು ಪ್ರತ್ಯೇಕ



ಬೆಂಕಿಯ ಮೇಲೆ ನಿಂತ ಪಟ್ಟಣ

ಪಿ. ಆರ್. ಆಚಾರ್ಯ

"ಎಚ್ಚರಿಕೆ! ರಸ್ತೆಯ ತಳದಲ್ಲಿ ಬೆಂಕಿ!"


ಹೀಗೆ ಎಚ್ಚರಿಸುವ ಹಲಗೆಗಳು ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಝರಿಯಾದ ಅನೇಕ ಪ್ರಮುಖ ಸ್ಥಳಗಳಲ್ಲಿ ನಿಂತಿವೆ. ಝರಿಯಾ ಎಂಬುದು ಬಿಹಾರದಲ್ಲಿ ಒಂದು ಪ್ರಮುಖ ಕಲ್ಲಿದ್ದಲಿ ಪಟ್ಟಣ. ಶತಮಾನದ ಆರಂಭದಲ್ಲಿ ೪,೫೦೦ ಜನಸಂಖ್ಯೆಯ ತೂಕಡಿಸುವ ಹಳ್ಳಿಯಾಗಿದ್ದ ಅದು ಈಗ ೧,೦೦,೦೦೦ ಮೇಲ್ಪಟ್ಟ ಜನಸಂಖ್ಯೆಯ ಹಿರಿಯ ಪಟ್ಟಣವಾಗಿ ಬೆಳೆಯುವುದಕ್ಕೆ ಅದರ ತಳದಲ್ಲಿ "ಅತ್ಯುತ್ತಮ ಮತ್ತು ಸುಲಭ ಗ್ರಾಹ್ಯವಾದ ಕಲ್ಲಿದ್ದಲಿ ಸಿಕ್ಕೇಪಟ್ಟೆ ಇರುವುದು" ಕಾರಣವಾಗಿದೆ. ಮತ್ತು ಬಹುಶಃ ಇದೇ ಕಾರಣದಿಂದ ಅದು ಈಗ ಭೂಗರ್ಭದಲ್ಲಿ ಧಗಧಗಿಸುವ ಬೆಂಕಿಯ ಮೇಲೆ ಕುಳಿತು ತನ್ನ ಅವಸಾನವನ್ನು ನಿರೀಕ್ಷಿಸುತ್ತಿದೆ. ಪಟ್ಟಣ ಮತ್ತು ಹೊರ ವಲಯದಲ್ಲಿ ಅನೇಕ ಕಡೆಗಳಲ್ಲಿ ಈ ಭೂಗರ್ಭ ಜ್ವಾಲೆ ಹೊರಹೊಮ್ಮಿ ಉರಿಯುತ್ತಿದೆ. ಅಧಿಕಾರಿವರ್ಗದ ಪ್ರಕಾರ ಈ ಬೆಂಕಿಯನ್ನು ನಂದಿಸುವ ಸಾಧ್ಯತೆ ಬಹಳ ಕಡಿಮೆ. ಇಂದಲ್ಲ ಒಂದು ದಿನ ಅದು ಪಟ್ಟಣವನ್ನು ಪೂರ್ತಿ ನಿರ್ನಾಮ ಮಾಡುವುದು ಹೆಚ್ಚು ಕಮ್ಮಿ ಖಂಡಿತ.

೧೯೧೦ರ ಸುಮಾರಿಗೆ ಇಲ್ಲಿ ಒಳ್ಳೇ ಕಲ್ಲಿದ್ದಲಿ ಇರುವುದು ಗಮನಕ್ಕೆ ಬಂದಿತ್ತು. ಕೆಲ ವರ್ಷಗಳಲ್ಲೇ ಅದನ್ನು ತೆಗೆಯುವ ಕೆಲಸವೂ ಆರಂಭವಾಯಿತು. ಮತ್ತು ೧೯೪೦ರ ಸುಮಾರಿಗೆ ಪ್ರಥಮತಃ ಜ್ವಾಲೆಗಳು ಹೊರಗೆ ಪ್ರತ್ಯಕ್ಷವಾದವು. ಅಂದಿನಿಂದ ಇಂದಿನ ವರೆಗೆ ಹೊರಗೆ ಹೊಗೆ–ಧಗೆಯಾಡುತ್ತಿರುವ ಅಗ್ನಿ ದೃಶ್ಯಗಳ ಸಂಖ್ಯೆ ೨೩ಕ್ಕೆ ಏರಿದೆ. ಝರಿಯಾ ಪಟ್ಟಣದಲ್ಲಿನ ಬೇರೆ ಬೇರೆ ಸ್ಥಳಗಳಲ್ಲಿ ಅವುಗಳ ರಭಸ ಹೆಚ್ಚು ಉಗ್ರವಾಗಿದ್ದರೂ ಧನಬಾದ್ ಮತ್ತು ನೆರೆಯ ಗಿರ್ದೀ ಜಿಲ್ಲೆಯ ಅನೇಕ ಸ್ಥಳಗಳಲ್ಲಿಯೂ ಭೂಗರ್ಭದಿಂದ ಹೊರಗೆ ತಲೆಯಿಕ್ಕಿವೆ. ಬೆಂಕಿ ಇನ್ನೂ ಹಬ್ಬುತ್ತಲೇ ಇದೆ.

ಭೂಗರ್ಭದಲ್ಲಿ ಧಗಧಗಿಸುವ ಬೆಂಕಿ ಹೊರಗೆ ಕಾಣಿಸುವುದಕ್ಕೆ ಕಾರಣ ಮೇಲಿನ ನೆಲ ಕುಸಿದು ಬೀಳುವುದು. ಹಾಗಾಗದೆ ನೆಲ ಸರಿಯಾಗಿ ಇರುವ ಸ್ಥಳಗಳ ಕೆಳಗೆ ಬೆಂಕಿ ಇರುವುದು ಪತ್ತೆಯೇ ಆಗುವುದಿಲ್ಲ. ನೆಲ ಕುಸಿದಾಗ ಜ್ವಾಲೆ ಹೊರಹೊಮ್ಮುತ್ತದೆ. ಹೀಗೆ ಈ ವರೆಗೆ ನೆಲ ಕುಸಿತವಾದ ೨೩ ಸ್ಥಳಗಳಲ್ಲಿ ಹಗಲಲ್ಲಿ ಹೊಗೆಯಾಟ ರಾತ್ರಿ ಜ್ವಾಲೆಯ ಧಗೆಯನ್ನು ಕಾಣಬಹುದು.

ಬೆಂಕಿ ಹೀಗೆ ಹೊರಗೆ ಪ್ರತ್ಯಕ್ಷವಾದಾಗೆಲ್ಲ ಹೊರಗೆ ಅದು ಹಬ್ಬದಂತೆ ತಡೆಯುವ ಯತ್ನವನ್ನು ಗಣಿಗಳ ಸುರಕ್ಷಿತತೆಯ ಪಡೆ ಪ್ರಾರಂಭಿಸುತ್ತದೆ. "ಒಳಗಿನ ಬೆಂಕಿಯನ್ನು ನಂದಿಸಲು ಬೇಕಾದ ತಾಂತ್ರಿಕ ಜ್ಞಾನ ಇನ್ನೂ ಲಭ್ಯವಿಲ್ಲ," ಎಂದು ಇದರ ಅಧಿಕಾರಿಗಳು ಹೇಳುತ್ತಾರೆ. ಅವರು ಮಾಡಬಹುದಾದ್ದೆಂದರೆ ಹೊಗೆಯಾಡುವ ಕಣಿಗಳಲ್ಲಿ ಉಸುಬು, ಮಣ್ಣು ಮತ್ತು ನೀರು ತುಂಬುವುದು. ಆದರೆ ಇದು "ಕಡದಲ್ಲಿ ತುರಿಸಿಕೊಳ್ಳುವ" ವ್ಯಾಪಾರ, ಅಷ್ಟೆ. ಕೆಲವೆಡೆ ಲಕ್ಷಗಟ್ಟಲೆ ಗ್ಯಾಲನ್ ನೀರು ಹೊಡೆದರೂ ಇನ್ನೂ ಭೂಮಿತಾಯಿಯ ಹೊಟ್ಟೆಯುರಿ ಶಾಂತವಾಗಿಲ್ಲ. ಮಳೆಗಾಲದಲ್ಲಿ ಅಲ್ಲಿ ಎಂಥಾ ಉಗಿಯ ಮೋಡಗಳು ಏಳುತ್ತವೆಂದರೆ ಸುತ್ತಮುತ್ತ ವಾಹನಗಳ ಓಡಾಟವನ್ನು ತಡೆಯಬೇಕಾಗುತ್ತದೆ.

ಝರಿಯಾ ಪಟ್ಟಣದಲ್ಲೇ ಇಂಥ ಅತಿ ಅಪಾಯಕರ ಬೆಂಕಿಯ ಕಣಿಯೊಂದಿದೆ. ಅದರ ಅಕ್ಕಪಕ್ಕದಲ್ಲೆಲ್ಲ ಎಚ್ಚರಿಕೆಯ ಹಲಗೆಗಳನ್ನು ನಟ್ಟಿದ್ದಾರೆ. ಅದಕ್ಕೆ "ಬೆಂಕಿ ಪ್ರದೇಶ"ವೆಂದೇ ಹೆಸರಿಟ್ಟಿದ್ದಾರೆ. ಬೆಂಕಿ ಬೇರೆಡೆ ಹಬ್ಬದಂತೆ ೨೫ ಅಡಿ ಅಗಲದ ಕಣಿಯನ್ನು ತೋಡಿದ್ದಾರೆ.



ಬಿಹಾರ

ಅಲ್ಲಿ ಈಗ ಮೂವತ್ತು ವರ್ಷಗಳಿಂದ ಬೆಂಕಿ ಉರಿಯುತ್ತಿದೆ. ಇನ್ನೂ ಶಾಂತವಾಗಿಲ್ಲ. ನೆಲದಲ್ಲಿ ಅಲ್ಲಲ್ಲಿ ಬಿರುಕು ಬಿಟ್ಟು ಕೋಡೊಲೆಯಿಂದ ಬೆಂಕಿಯ ನಾಲಗೆಗಳು ಹೊರಗೆ ನೀಡುವಂತೆ ನೀಡುತ್ತಿದ್ದುದರಿಂದ ಈ ಕಣಿ ತೋಡಿದರಂತೆ.

ಈ ಬೆಂಕಿಗೆ ಕಾರಣವೇನು? ಅದರ ಮೂಲವೇನು? ಇದೊಂದೂ ಸರಿಯಾಗಿ ಗೊತ್ತಿಲ್ಲವೆಂದು ಅಧಿಕಾರಿಗಳು ಹೇಳುತ್ತಾರೆ. "ಬಹುಶಃ ಅತಿಯಾಗಿ ಕಲ್ಲಿದ್ದಲಿ ತೋಡಿ ತೆಗೆದದ್ದರಿಂದ" ಈ ಅನಾಹುತ ಬಂದಿರಬಹುದೆಂದು ಅವರಲ್ಲಿ ಕೆಲವರು ಅಸ್ಪಷ್ಟವಾಗಿ ಸೂಚಿಸುತ್ತಾರೆ. ಆದರೆ ನೆಲದ ತಳದಲ್ಲಿ ವಿಸ್ತಾರವಾದ ಪ್ರದೇಶದಲ್ಲಿ ಬೆಂಕಿ ಉರಿಯುತ್ತಿದೆ ಅನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ಕೆಲ ವಿದೇಶಿ ತಜ್ಞರ ತಂಡಗಳೂ ಈಚೆಗೆ ಭೆಟ್ಟಿ ಕೊಟ್ಟು ಹೋಗಿವೆ. ಅವುಗಳ ವರದಿ ಇನ್ನೂ ಲಭ್ಯವಿಲ್ಲ. ಬೆಂಕಿಯ ಕಾರಣಗಳ ಶೋಧಕ್ಕೆ ವ್ಯವಸ್ಥಿತವಾದ ವೈಜ್ಞಾನಿಕ ಪ್ರಯತ್ನವೂ ಆಗಿಲ್ಲವಂತೆ.

ಕಲ್ಲಿದ್ದಲಿ ಗಣಿಗಳಲ್ಲಿ ಬೆಂಕಿ ಅನಾಹುತ ಅಪರೂಪವಾದದ್ದೇನೂ ಅಲ್ಲ. ಜ್ಞಾನಕೋಶಗಳಲ್ಲಿ - ಈ ಬಗ್ಗೆ ಹೇಳಿರುವ ಅಂಶಗಳ ಸಾರಾಂಶ ಇಷ್ಟು: ಕಲ್ಲಿದ್ದಲಿ ನಿಕ್ಷೇಪಗಳಲ್ಲಿ ವಿಪುಲವಾಗಿ ಮಿಥೇನ್ ಅನಿಲ ಇರುತ್ತದೆ. ಕೆಲ ಅದಿರುಗಳಲ್ಲಿ ಒಂದು ಟನ್ ಕಲ್ಲಿದ್ದಲಿನಿಂದ ೫,೦೦೦ ಘನ ಅಡಿ ಅನಿಲ ಹೊರಹೊಮ್ಮಬಹುದು. ಗಾಳಿಯಲ್ಲಿ ಸೇಕಡಾ ೫ ರಿಂದ ೧೫ರಷ್ಟು ಅಂಶದಲ್ಲಿ ಈ ಅನಿಲ ಬೆರೆತಿದ್ದರೆ ಅದು ಅತ್ಯಂತ ಜ್ವಲನಶೀಲವಾಗುತ್ತದೆ. ಕಲ್ಲಿದ್ದಲಿ ಕೀಳುವಾಗ ಹಾರಬಹುದಾದ ಕಿಡಿಗಳಿಂದ ಈ ಅನಿಲಕ್ಕೆ ಬೆಂಕಿ ಹತ್ತಿದರೆ ಭಾರಿ ಅಪಘಾತಗಳಾಗುವುದುಂಟು. ಈ ಅನಿಲವನ್ನು ಅಪಾಯಕರ ಪ್ರಮಾಣ ತಲುಪದಂತೆ ಮಾಡಲು ಈ ಶತಮಾನದಲ್ಲಿ ಅನೇಕ ವಿಧಾನಗಳನ್ನು ಯೋಜಿಸಲಾಗಿದೆ. ಆದರೂ ಅಪಘಾತಗಳು ಆಗಿ ಪ್ರಾಣಹಾನಿ ಈಗಲೂ ಆಗುವುದುಂಟು.

ಮಿಥೇನ್ ಅನಿಲಕ್ಕಿಂತಲೂ ಘೋರ ಅಪ-

ಸ್ಫೋಟಗಳಿಗೆ ಕಾರಣವಾದ ಇನ್ನೊಂದು ಪದಾರ್ಥವೆಂದರೆ ಕಲ್ಲಿದ್ದಲಿ ಧೂಳು. ಗಣಿಗಳಲ್ಲಿ ತುಂಬುವ ಈ ಧೂಳಿಗೆ ಹೇಗಾದರೂ ಬೆಂಕಿ ಹತ್ತಿದರೆ ಭಯಂಕರ ಸ್ಫೋಟಗಳಾಗಿ ಒಳಗೆ ಕೆಲಸ ಮಾಡುವ ಕೆಲಸಗಾರರು ಮೃತ್ಯುವಶರಾಗುವುದುಂಟು. ೧೯೦೬ರಲ್ಲಿ ಫ್ರಾನ್ಸಿನಲ್ಲಿ ಆದ ಇಂಥ ಒಂದು ಸ್ಫೋಟದಲ್ಲಿ ೧೦೯೯ ಜನರು ಜೀವ ಕಳೆದುಕೊಂಡರು. ೧೯೪೨ರಲ್ಲಿ ಮಂಚೂರಿಯಾದಲ್ಲಿ ೧೫೪೯ ಜನರನ್ನು ಕೊಂದ ಒಂದು ಸ್ಫೋಟದ ವರದಿ ಇದೆ. ೧೯೬೨ರಷ್ಟು ಈಚೆಗೆ ಪಶ್ಚಿಮ ಜರ್ಮನಿಯಲ್ಲಿ ಒಂದು ಕಲ್ಲಿದ್ದಲಿ ಧೂಳಿನ ಸ್ಫೋಟಕ್ಕೆ ೨೯೯ ಜನ ಬಲಿಯಾದರು.

ಝರಿಯಾ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಭೂಗರ್ಭದಲ್ಲಿ ಕಲ್ಲಿದ್ದಲಿ ತೋಡಿ ತೆಗೆದು ಬಿಟ್ಟುಹೋದ ಸುರಂಗ ಮಾರ್ಗದಲ್ಲಿ ತುಂಬಿದ್ದ ಇಂಥ ಅನಿಲ ಅಥವಾ ಧೂಳಿಗೆ ಯಾವುದಾದರೊಂದು ಕಾರಣದಿಂದ ಬೆಂಕಿ ತಗುಲಿ ಕಲ್ಲಿದ್ದಲಿ ಪದರಿನ ತರಗಳ ಗುಂಟ ಅದು ವ್ಯಾಪಕವಾಗಿ ಹಬ್ಬಿರಬಹುದೆ? ಇನ್ನೂ ಹಬ್ಬುತ್ತಿರಬಹುದೆ?

ಆದರೆ ಝರಿಯಾದಿಂದ ದೂರದೂರಕ್ಕಿರುವ ಕಲ್ಲಿದ್ದಲಿ ಪ್ರದೇಶಗಳಾದ ಜೋಗಟಾ, ನವಾಗಢ ಮೊದಲಾದೆಡೆಗಳಲ್ಲಿ ಕೂಡ ನೆಲ ಬಿರಿದು ಅಗ್ನಿದರ್ಶನವಾಗಿ, ಇಂಥ ಹತ್ತಾರು ಸ್ಥಳಗಳನ್ನು ಗುರುತಿಸಲಾಗಿದೆ. ಇವೆಲ್ಲವು-ಗಳು ಪ್ರತ್ಯೇಕ ಪ್ರತ್ಯೇಕ ಬೆಂಕಿಗಳೋ ಒಂದ-ಕ್ಕೊಂದು ಸಂಬಂಧಿಸಿ ಹಬ್ಬಿದವುಗಳೋ ಎಂಬುದು ಕೂಡ ಯಾರಿಗೂ ತಿಳಿಯದು. ಅವು ಪ್ರತ್ಯೇಕವಾಗಿದ್ದರೆ ಅವುಗಳನ್ನು ಹತ್ತಿ-ಕ್ಕುವುದಕ್ಕೆ ಉಪಾಯ ಗಳಿರಬಹುದು. ಒಂದ-ಕ್ಕೊಂದು ಕೂಡಿದ್ದರೆ ಮಾತ್ರ ಪರಿಹಾರವಿಲ್ಲ ಎಂಬುದಾಗಿ ಭಾವಿಸಲ್ಪಟ್ಟಿದೆ.

ಝರಿಯಾ ಪಟ್ಟಣ ಮತ್ತು ಸುತ್ತಲ ಕಾರ್ಮಿಕ ವಸತಿ ಪ್ರದೇಶಗಳು ಟೊಳ್ಳು ನೆಲದ ಮೇಲೆ ನಿಂತಿವೆಯೆಂದು ಹೇಳಲಾಗಿದೆ. ಈ ಟೊಳ್ಳು ನೆಲ, ಒಳಗೆ ಸುರಂಗ ಮಾಡಿ ಕಲ್ಲಿ-ದ್ದಲು ತೆಗೆದುದರಿಂದ ಆದದ್ದು. "ಅತಿಯಾಗಿ"

ಕನಸು

ಮುಂಬರುವ ಕ್ಷಣದ
ಸೀರೆ ಸೆರಗು
ಮೈಹಾಸಿದುಡುಗೆಯು
ಅಡಿಯೊಳಗಣ ಸೌಂದರ್ಯವನ್ನು
ಈ ಎರಡು ಚಕ್ಷುಗಳ ಅಂಚಿಂಚಿಗೂ
ಅಷ್ಟಿಷ್ಟು ತುಂಬಿಸಿಕೊಳ್ಳುವ
ತವಕ,
ಎದೆ ಬಡಿತ,
ಮನ ಮಿಡಿತ.
ಆ ಕ್ಷಣ ತೆರೆದುಕೊಂಡರಳಿದಾಗ,
ಮುಂದಿನ ಹೆಜ್ಜೆ
ಮೊಗ್ಗಾದಾಗ,
ಅರಳಿ ಉದುರಿದ್ದು
ಎಲ್ಲ ಭೂತ, ವರ್ತಮಾನ-
ಸಾರವಿಲ್ಲದ್ದು.
ಇಂತಹ ಕಡಿತದಲ್ಲೂ
ತುಡಿಯುವ ಮನಕ್ಕೆ
ಸಾಲು-ಸಾಲಾಗಿ
ಹೆಸರಿಸಲಾಗದ
ಮೊಗ್ಗುಗಳದ್ದೇ ಕನಸು.


ಕನ್ನಿಕಾ ಹೆಗಡೆ

ಕಲ್ಲಿದ್ದಲಿ ತೆಗೆದದ್ದರಿಂದ ಸುರಂಗಗಳ ಛಾವಣಿಗಳು ದುರ್ಬಲವಾಗಿರಬಹುದು. ಕೆಲ ವರ್ಷಗಳ ಹಿಂದೆ, ಕೆಳಗೆ ಕಲ್ಲಿದ್ದಲಿ ಗಣಿಗಳಲ್ಲಿ ಸ್ಫೋಟವಾದಾಗೆಲ್ಲ ಹಗಲೂ ರಾತ್ರಿ ಮೇಲಿನ ವಸತಿಗಳಲ್ಲಿ ಭೂಕಂಪನವಾಗುತ್ತಿತ್ತಂತೆ. ಏನಿಲ್ಲೆಂದರೂ ಝರಿಯಾದ ನೆಲ ತುಂಬಾ ದುರ್ಬಲವಾಗಿದೆಯೆಂಬುದು ಖಂಡಿತ.

ಅತ್ತ ಈ ಬೆಂಕಿಯ ಕಾರಣಗಳು ಊಹಾಪೋಹದ ವಸ್ತುವಾಗಿರುವಾಗ, ಇತ್ತ ಹೊಸ ನೆಲ ಕುಸಿತಗಳು ಮತ್ತು ಅಷ್ಟಿಷ್ಟು ಪ್ರಾಣಹಾನಿ ಆಗುತ್ತಲೇ ಇದೆ. ೧೯೬೪ ರಲ್ಲಿ ಧನಬಾದ _ ಕಟ್ರಾ ಪಕ್ಕಾ ರಸ್ತೆಯ ಒಂದು ಭಾಗವೇ ಕೆಳಗೆ ಕುಸಿದು ಬಿದ್ದುಬಿಟ್ಟಿತು. ನಾಲ್ಕು ವರ್ಷಗಳ ಹಿಂದೆ ಝರಿಯಾ-ಸಿಂದ್ರಿ ರಸ್ತೆಯ ಒಂದಂಶವೇ ಬನಿಯಾಹೀರ್ ಎಂಬಲ್ಲಿ ಸ್ಫೋಟಗೊಂಡು ಕೆಳಗಿಂದ ಹೊಗೆ ಮೋಡಗಳು ಹೊಮ್ಮಿದವು. ಅಲ್ಲಿ ಕೆಳಗೆ ಇನ್ನೂ ಬೆಂಕಿ ಉರಿಯುತ್ತಿದೆಯೆಂದು ನಂಬಲಾಗಿದೆ. ಹತ್ತು ವರ್ಷಗಳ ಕೆಳಗೆ ಚಂದ್ರಪುರಾ-ಧನಬಾದ್ ರಸ್ತೆಯ ಪಕ್ಕದಲ್ಲಿ ಕೆಲ ಮನೆಗಳೇ ಕುಸಿದುಬಿದ್ದು ಇಬ್ಬರು ಸತ್ತರು. ಅಲ್ಲಿ ಇನ್ನೂ ಬೆಂಕಿ ಕಾಣಿಸುತ್ತಿದೆ. ೧೯೭೫ ರಷ್ಟು ಈಚೆಗೆ ಕುಜಮಾ ಕಲ್ಲಿದ್ದಲಿಗಣಿ ಪಟ್ಟಣದಲ್ಲಿ ೨೦,೦೦೦ ಚದರ ಮೀಟರ್ ನೆಲವೇ ಕುಸಿದು ಅದರ ಮೇಲೆ ನಿಂತಿದ್ದ ಎರಡಂತಸ್ತಿನ ಒಂದು ಮನೆಯೂ ಅನೇಕ ಕಾರ್ಮಿಕ ಬಿಡಾರಗಳೂ ಕುಪ್ಪರಿಸಿ ಎರಡು ಜೀವಹಾನಿ ಆಯಿತು.

ಝರಿಯಾ ಪಟ್ಟಣದ ಅಧಿಕಾರಿಗಳಿಗೂ ಗಣಿ ಕಾರ್ಮಿಕರೇ ಮೊದಲಾದ ಜನರಿಗೂ ತಾವು ಅಕ್ಷರಶಃ ಬೆಂಕಿಯ ಮೇಲೆಯೇ ಇದ್ದೇವೆಂದು ಪೂರ್ಣ ಅರಿವು ಇದೆ. ಪ್ರತಿಯೊಬ್ಬರೂ ಇದನ್ನು ಹೇಳುತ್ತಾರೆ. ಕೆಲ ಬೆಂಕಿ ಪ್ರದೇಶಗಳಿಂದ ವಸತಿಗಳನ್ನು ತೆರವು ಮಾಡಬೇಕೆಂದು ಅಧಿಕಾರಿಗಳು ಸೂಚಿಸಿಯೂ ಇದ್ದಾರೆ. ಕೆಲವೊಮ್ಮೆ ಜನರು ಅಧಿಕಾರಿಗಳ ಬಗ್ಗೆ ಕೋಪದ ಮಾತುಗಳನ್ನೂ ಆಡುತ್ತಾರೆ. ಆದರೆ ತೆರವು ಮಾಡಿ ಹೋಗುವುದಕ್ಕೆ ಯಾರೂ ಆತುರರಾಗಿಲ್ಲ. ಅವರು ತಮ್ಮದೇ ಸುರಕ್ಷಿತತೆಯ ವಿಷಯದಲ್ಲಿ ಒಂದು ಬಗೆಯ ಹತಾಶ ಭಾವವನ್ನೂ ಅದೃಷ್ಟ ಭಾವವನ್ನೂ ತಾಳಿದ್ದಾರೆ. ಅಧಿಕಾರಿಗಳ ಅಭಿಪ್ರಾಯದಲ್ಲಿ ಬೆಂಕಿ ಭೂಗರ್ಭದಲ್ಲಿ ವರ್ಷಕ್ಕೆ ಒಂದುಗುಲದಷ್ಟು ಮಾತ್ರ ಮುನ್ನಡೆಯುತ್ತಿದೆಯಾದ್ದರಿಂದ ಬೆಂಕಿ ಕಾಣಿಸಿಕೊಂಡ ಪ್ರದೇಶದಿಂದ ಕೆಲವಾರು ಗಜ ದೂರವಿರುವವರು ಕೂಡ ತಮಗೆ ತತ್‌ಕ್ಷಣ ಅಪಾಯವಿಲ್ಲವೆಂದು ಈ ಜನರು ಹುಚ್ಚು ಧೈರ್ಯದಲ್ಲಿದ್ದಾರೆ!

ಪ್ರಾಣಹಾನಿ, ಆಸ್ತಿಹಾನಿಗಳು ಸಣ್ಣಗೆ ಆಗುತ್ತಲೇ ಇವೆ. ಆದರೆ ಅದಕ್ಕಿಂತ ಗಂಭೀರ ಎಂದರೆ ಕೆಲವೊಂದು ಕಲ್ಲಿದ್ದಲಿ ಗಣಿಗಳ ಹತ್ತಿರವೇ ಬೆಂಕಿಯ ಮೂಲಗಳಿರುವುದರಿಂದ ಅವುಗಳಿಗೆ ಗಂಡಾಂತರವುಂಟು. ಅತ್ತ ಭೂಗರ್ಭದಲ್ಲಿನ ಬೆಲೆಬಾಳುವ ಕಲ್ಲಿದ್ದಲಿ ನಿಕ್ಷೇಪಗಳು ಮೆಲ್ಲಮೆಲ್ಲನೆ ಸುಟ್ಟು ನಾಶವಾಗುತ್ತಿವೆ. ಬಹುಶಃ ಈ ಬೆಂಕಿಗೆ ಇವೇ ಮುಖ್ಯ ಇಂಧನ. ★



'ನಾಗರಿಕತೆಯ ಅನಿಷ್ಟಗಳನ್ನು ನಿವಾರಿಸಲು' ಉಪಯೋಗಿಸಬೇಕೆಂಬ ಕರಾರಿನ ಮೇಲೆ ಶಿಕಾಗೋದ ಒಂದು ಚರ್ಚಿಗೆ ಪಶ್ಚಿಮ ಆಫ್ರಿಕದ ಖೈಲೂನಿನ ಮೂಲನಿವಾಸಿಗಳು ಒಮ್ಮೆ ೨೨.೫೦ ಡಾಲರುಗಳ ಡೊನೇಶನ್ ಕಳಿಸಿದರು.

'ನ್ಯೂಯಾರ್ಕ್ ಟೈಮ್ಸ್'ನ ಹಳೆ ಸಂಚಿಕೆಯಿಂದ

ಕನ್ನಡಿ: ಅದರ ಹಿಂದು-ಇಂದು

ಮೂಲ: ಎಲ್. ಹಯಾವತ್
ಕನ್ನಡಕ್ಕೆ: ರಾಖಿ

ಇಂದಿನ ನಿತ್ಯ ಜೀವನದಲ್ಲಿ ಕನ್ನಡಿಯೆಂಬುದು ಎಷ್ಟು ಸರ್ವಸಾಮಾನ್ಯ ಸಂಗತಿಯೆಂದರೆ, ಅದು ಬಳಕೆಯಲ್ಲಿಲ್ಲದ ಕಾಲ ಯಾವಾಗ ಇತ್ತು ಎಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟದ ಸಂಗತಿಯೇ. ಒಂದೆ ಕನ್ನಡಿಯೊಂದನ್ನು ಕಾಣಿಕೆಯಾಗಿ ಕೊಡುವುದೆಂದರೆ ಒಬ್ಬ ಚಕ್ರವರ್ತಿಗೆ ಸಲ್ಲಿಸಬಹುದಾಗಿದ್ದ ಅತಿ ಹೆಚ್ಚಿನ ಗೌರವ ಎಂದು ಭಾವಿಸುವಷ್ಟು ಅದು ಅಮೂಲ್ಯವಾಗಿತ್ತು. ಆದರೆ ಇದು ಇತಿಹಾಸದ ಯಾವ ಘಟ್ಟದಲ್ಲಿ ಎಂದು ಇನ್ನೂ ಸರಿಯಾಗಿ ತಿಳಿದುಬಂದಿಲ್ಲ. ವಜ್ರಗಳು ಬೆಳೆಕಾಳಿನಷ್ಟು ಸಾಮಾನ್ಯವಾಗುವ ದಿನವೊಂದು ಭವಿಷ್ಯದಲ್ಲಿದೆ ಎಂದರೆ ನಮಗೆ ಹೇಗೆ ನಂಬಲಸಾಧ್ಯವೋ ಹಾಗೇ ಕನ್ನಡಿಯನ್ನು ಯಾವುದೇ ಅಗ್ಗದ ಆಹಾರ ವಸ್ತುವಿನಂತೆ ಬೀದಿಬೀದಿಗಳಲ್ಲಿ ಮಾರಾಟಮಾಡುವ ಸೋಜಿಗವನ್ನು ಆ ಕಾಲದ ಜನರು ಕಲ್ಪಿಸಲೂ ಅಸಮರ್ಥರಾಗಿದ್ದರು.

ಅಂತೂ ಆ ಒಂದು ಕಾಲವಿತ್ತು. ಕನ್ನಡಿಯ ತಯಾರಿಕೆಯೆಂಬುದು ಒಂದು ಅಪರೂಪ ಹಾಗೂ ನಿಗೂಢ ರಹಸ್ಯವಾಗಿತ್ತು. ಬೇರೆಯವರು ಅಸೂಯೆಪಡುತ್ತಿದ್ದ ಈ ಕಲೆಯ ಏಕಸ್ವಾಮ್ಯದ ಗೌಪ್ಯವನ್ನು ಕಠಿಣ ಜಾಗರೂಕತೆಯಿಂದ ಕಾಪಾಡಿಕೊಳ್ಳಲಾಗಿತ್ತು. ಆರಾಮಜೀವಿಗಳ ವಿಹಾರದ ರಮ್ಯತಾಣವೆಂದೂ ಪ್ರಣಯಿಗಳ ಸಂಧ್ಯಾ ಸ್ವರ್ಗವೆಂದೂ ದರೋಡೆಕೋರರ ಗುಪ್ತನೆಲೆಯೆಂದೂ ಹೆಸರಾಗಿದ್ದ ವೆನಿಸ್‌ನಗರ ಈ ಸೂತ್ರದ ಏಕೈಕ ಅಧಿಪತಿಯಾಗಿತ್ತು. ಕನ್ನಡಿಯನ್ನು ವಾಣಿಜ್ಯ ಮಟ್ಟದಲ್ಲಿ ಪ್ರಪ್ರಥಮವಾಗಿ ತಯಾರಿಸಿದವರೇ ವೆನಿಸಿಯನ್ನರು. ಇದಕ್ಕಾಗಿ ದರ್ಪಣ ಕುಶಲಕರ್ಮಿಗಳನ್ನು ನಗರದೊಳಗೇ ಇರುವಂತೆ ಮಾಡಲು ಅಪಾರ ಮೊತ್ತದ ಹಣ ವ್ಯಯಿಸಲಾಯಿತು. ಅವರಿಗೆ ಅತ್ಯಧಿಕ ಪ್ರತಿಫಲದ ಆಸೆ ತೋರಿಸುವುದರ ಜತೆಗೆ, ಬೇರೆಡೆಗೆ ತಪ್ಪಿಸಿಕೊಂಡು ಹೋಗಲು ಕನಸಿನಲ್ಲಾದರೂ ಯೋಚಿಸಿದರೆ ಉಗ್ರಶಿಕ್ಷೆಯು, ಇನ್ನೂ ಮುಂದರಿದರೆ ಸಾವಿನ ಬೆದರಿಕೆ ಹಾಕಲಾಗಿತ್ತು.

೧೫೦೭ರಲ್ಲಿ ಮುರಾನೋದ ಇಬ್ಬರು ನಿವಾಸಿಗಳು ದರ್ಪಣ ತಯಾರಿಕೆಯ ವಿಶೇಷ ರಹಸ್ಯವೊಂದು ತಮಗೆ ತಿಳಿದಿರುವುದಾಗಿ ಮುಂದೆ ಬಂದರು. ಅದುವರೆಗೆ, ಜರ್ಮನಿಯ ಒಂದೇ ಒಂದು ತಯಾರಿಕಾ ಕೇಂದ್ರಕ್ಕೆ ಆ ಸೂತ್ರ ಕರಗತವಾಗಿತ್ತು. ಸುಮಾರು ಇಪ್ಪತ್ತು ವರ್ಷಗಳ ವರೆಗೆ ಈ ಉದ್ಯೋಗಿಗಳು ತಮ್ಮ ಜ್ಞಾನದ ಪರಿಣಾಮವಾಗಿ ಸಂಪೂರ್ಣ ಸುಖ ಸೌಲಭ್ಯಗಳನ್ನು ಅನುಭವಿಸಿ

ದರು. ಮುಂದೆ ಈ ಕೈಗಾರಿಕೆ ಸ್ವಲ್ಪ ವಿಸ್ತರಿಸಿದಾಗ ಎಲ್ಲಾ ತಯಾರಕರು ಒಟ್ಟಾಗಿ ಒಂದು ಸಂಸ್ಥೆ ರಚಿಸಿಕೊಂಡು ಬಹಳ ಪ್ರಭಾವಶಾಲಿಗಳೆನಿಸಿದರು.

ಬೇರೆ ದೇಶಗಳು ತಮ್ಮ ಈ ಅಪರೂಪ ಸ್ವಾಮ್ಯವನ್ನು ಅಪಹರಿಸಬಹುದೆಂಬ ಅಂಶ ಸರಕಾರವನ್ನು ವಿಶೇಷ ಯೋಚನೆಗೀಡು ಮಾಡಿತು. ಆದುದರಿಂದ ಈ ವ್ಯಾಪಾರದಲ್ಲಿ ಕೆಲಸ ಮಾಡುವ ಯಾರೇ ಆಗಲಿ ಬೇರೆ ಕಡೆಗೆ ವಲಸೆ ಹೋಗುವುದನ್ನು ನಿಷೇಧಿಸಿ ಕಟ್ಟುನಿಟ್ಟಾದ ಕಾನೂನು ವಿಧಿಸಿತು. ಅಂತಹ ಯೋಚನೆ ಯಾರಿಗಾದರೂ ಇತ್ತೆಂದು ತಿಳಿದರೇ ಸಾಕು, ಅವರು ಮರುಕ್ಷಣ ಸೆರೆಮನೆಯಲ್ಲಿರುತ್ತಿದ್ದರು ಅಥವಾ ಕದ್ದು ಪಾರಾಗುವ ಯತ್ನದಲ್ಲಿರುವಾಗಲೇ ಸಿಕ್ಕಿಬಿದ್ದರೆ ಸ್ಥಳದಲ್ಲೇ ಅವರನ್ನು ತೀರಿಸಿಬಿಡುತ್ತಿದ್ದರು. ಅವರ ಈ ಕೃತ್ಯದ ಫಲವನ್ನುಣ್ಣುವ ಸಲುವಾಗಿ ಅವರ ಸಂಬಂಧಿಕರೆಲ್ಲರನ್ನು ನಿರ್ಜನ ಬಂದೀಖಾನೆಗಳಲ್ಲಿ ಕೊಳೆಹಾಕಲಾಗುತ್ತಿತ್ತು.

ಹೀಗೆ ಕನ್ನಡಿ ತಯಾರಿಸುವಲ್ಲಿನ ತಮ್ಮ ವಿಶೇಷ ಬುದ್ಧಿವಂತಿಕೆಯೇ ತಮ್ಮ ಸ್ವಾತಂತ್ರ್ಯ ಹಾಗೂ ಸಂತೋಷಕ್ಕೆ ಕಂಟಕಪ್ರಾಯವಾದಾಗ ವ್ಯಕ್ತಿಗಳು ಅಧೀರರಾಗತೊಡಗಿದರು. ಕೆಲವರಂತೂ ತಮಗೆ ಈ ವಿದ್ಯೆ ಗೊತ್ತೆಂದು ತಿಳಿಸಿದರೆ ಕಟ್ಟುಪಾಡಿನ ಜೀವನಕ್ಕೆ ಬಲಿಯಾಗಬೇಕಾದೀತೋ ಎಂದು ಹೆದರಿ ಸತ್ಯ ಸಂಗತಿ ಮುಚ್ಚಿಡತೊಡಗಿದರು.

ಆಗ ಫ್ರಾನ್ಸ್‌ನಲ್ಲಿ ಹದಿನಾಲ್ಕನೇ ಲೂಯಿಯ ಅಧಿಕಾರ. ಆತನ ಮಹತ್ವಾಕಾಂಕ್ಷಿ ಮಂತ್ರಿ ಕಾಲ್ಬರ್ಟ್ ವೆನಿಸಿಯನ್ನರ ಕಠೋರ ಕಾನೂನುಗಳನ್ನು ತಿಳಿದೂ ಕೂಡ, ವೆನಿಸಿನ ಕನ್ನಡಿ ತಯಾರಿಕೆಯ ಶಿಲ್ಪಿಗಳಿಗೆ ನಂಬಲಸಾಧ್ಯವಾದ ದೊಡ್ಡ ಮೊತ್ತದ ಸಂಭಾವನೆಯ ಆಸೆ ತೋರಿಸಿ ತನ್ನ ದೇಶಕ್ಕೆ ಸೆಳೆದೊಯ್ಯಲು ಯತ್ನಿಸಿದ. ಲಂಚ ನೀಡಿಕೆ, ಒಳಸಂಚು, ರಕ್ತಪಾತ, ಕೊನೆಗೆ ಗುಪ್ತಚರ್ಯೆ ಕೂಡ ನಡೆಸಿ ಈ ಕುಶಲಕರ್ಮಿಗಳ ಒಂದು ಚಿಕ್ಕ ತಂಡವನ್ನು ಮುರಾನೋದಿಂದ ಪ್ಯಾರಿಸ್ಸಿಗೆ ಹೊರಡಿಸಲು ಸಫಲನಾದ. ಹದಿನಾಲ್ಕನೆಯ ಲೂಯಿ ಸ್ವಭಾವತಃ ಫ್ಯಾಶನ್ ಪ್ರಿಯ. ಕೇಶವಿನ್ಯಾಸದಿಂದ ಹಿಡಿದು ಉಗುರುಗಳ ಕೋಮಲತೆಯ ವರೆಗೆ ಸ್ವತಃ ವಿಶೇಷ ಗಮನ ನೀಡುತ್ತಿದ್ದ. ಆತನ ಆಸ್ಥಾನ ಕೂಡ ನಾಜೂಕು ನಾಗರಿಕತೆಗೆ ಪ್ರಸಿದ್ಧವಾಗಿತ್ತು. ಆದುದರಿಂದ ಆತ ಫ್ರಾನ್ಸಿನಲ್ಲಿ ಕನ್ನಡಿ ತಯಾರಿಕೆಯ ಕೈಗಾರಿಕೆಯನ್ನು ಸ್ಥಾಪಿಸಲು ನಡೆಸಿದ ಹೋರಾಟ ಸೂಕ್ತವೇ ಆಗಿತ್ತು.

ಆದರೆ ಈ ಹಂಚಿಕೆ ಭಾಗಶಃ ಮಾತ್ರ ಯಶಸ್ವಿಯಾಯಿತು. ವೆನಿಸಿಯನ್ನರ ಪಡೆಗಳು ಪಲಾಯನ ಮಾಡುತ್ತಿರುವ ಕೆಲಸಗಾರರನ್ನು ಬೆನ್ನಟ್ಟಿದವು. ವಿದೇಶಿ ಶಕ್ತಿಯೊಂದು ಅವರನ್ನು ಲಪಟಾಯಿಸುವುದಕ್ಕಿಂತ ಮುಂಚೆಯೇ ಅವರನ್ನು ಇಲ್ಲವಾಗಿಸಲು ಅವು ಸಿದ್ಧವಾಗಿ ಬಂದಿದ್ದವು. ಕೆಲಸಗಾರರಲ್ಲಿ ಇಬ್ಬರಿಗೆ ವಿಷ ಕೊಟ್ಟು ಕೊಲ್ಲಲಾಯಿತು. ಸೆರೆಸಿಕ್ಕದ ಉಳಿದವರು ತಾವು ಮುರಾನೋಗೆ ವಾಪಸು ಬರುವುದಾಗಿ ವಾಗ್ದಾನ ಮಾಡಿ ತಮ್ಮ ಜೀವ ಉಳಿಸಿಕೊಂಡರು. ಸಹೋದ್ಯೋಗಿಗಳಿಗೆ ಒದಗಿದ ದುಃಸ್ಥಿತಿಯಿಂದ ಕಂಗೆಟ್ಟು ಅವರು ನಿರುಪಾಯರಾಗಿ ಸೈನಿಕರೊಂದಿಗೆ ಊರಿಗೆ ಮರಳಿದರು. ಫ್ರೆಂಚರಿಗೆ ಸೋಲು ದೊರೆತಂತೆ ತೋರಿದರೂ ಅವರು ಪೂರ್ತಿ ಸೋತಿರಲಿಲ್ಲ. ಯಾಕೆಂದರೆ ಕಾಲ್ಬರ್ಟ್ ವೆನಿಸಿಗೆ ಕಳುಹಿಸಿದ್ದ ದೂತರು ತುಂಬ ಚಾಣಾಕ್ಷರಾಗಿದ್ದರು. ಕುಶಲಕರ್ಮಿಗಳ ತಂಡವೊಂದಿಗೆ ಪಲಾಯನ ಮಾಡುವಾಗ ಮುಂದೆ ವೆನೀಸಿಯನ್ ಪಡೆ ತಮ್ಮನ್ನು ಸೋಲಿಸಬಹುದೆಂಬ ಶಂಕೆ ಇದ್ದ ಅವರು, ದಾರಿಯಲ್ಲೇ ಆ ವೃತ್ತಿರಹಸ್ಯವನ್ನು ಅವರಿಂದ ಹೊರಗೆಳೆಯುವುದರಲ್ಲಿ ಯಶಸ್ವಿಯಾಗಿದ್ದರು! ಆದುದರಿಂದ ವೆನೀಸಿಯನರಿಗೆ ವಿಜಯದ ಹೆಮ್ಮೆ ದೊರಕಿದರೂ ತಮ್ಮ ಅಮೂಲ್ಯ ಗುಟ್ಟನ್ನು ಅವರು ಇಷ್ಟರೊಳಗಾಗಿ ಫ್ರೆಂಚರಿಗೆ ಬಿಟ್ಟುಕೊಟ್ಟಿದ್ದರು. ಅನಂತರ ಕನ್ನಡಿಯ ಕೈಗಾರಿಕೆ ಕೇವಲ ವೆನಿಸಿನ ಏಕಸ್ವಾಮ್ಯವಾಗಿ ಉಳಿಯಲಿಲ್ಲ.

ಗ್ರೀಕರಲ್ಲಿ ಕನ್ನಡಿಗೆ ದೈವಿಕ ಸ್ಥಾನವಿದೆ. ಅದಕ್ಕೆ ಭವಿಷ್ಯ ನುಡಿಯುವ ಶಕ್ತಿಯೂ ಇದೆ ಎಂದು ಗ್ರೀಕರ ನಂಬಿಕೆ. ಒಬ್ಬ ವ್ಯಕ್ತಿ ಸಾಯುವ ಸ್ಥಿತಿಯಲ್ಲಿದ್ದರೆ ಅಥವಾ ಕಾಯಿಲೆಯಿಂದ ನರಳುತ್ತಿದ್ದರೆ ಜನರು ಕನ್ನಡಿಗಳ ಸಹಾಯದಿಂದ ಒಂದು ದೀರ್ಘವಾದ ವಿಧಿಯನ್ನು ನಡೆಸುತ್ತಿದ್ದರು. ಹಗ್ಗಕ್ಕೆ ಕನ್ನಡಿಗಳನ್ನು ಕಟ್ಟಿ ಬಾವಿಯೊಳಗೆ ಇಳಿಬಿಡುತ್ತಿದ್ದರು. ಅವುಗಳನ್ನು ಪುನಃ ಮೇಲಕ್ಕೆತ್ತಿದಾಗ, ಯಾರ ಹೆಸರಿನಲ್ಲಿ ಈ ವಿಧಿ ನಡೆಸಲಾಗಿತ್ತೋ ಆ ವ್ಯಕ್ತಿ ಕೆಲವು ವರ್ಷಗಳ ನಂತರ ಹೇಗೆ ತೋರುವನೆಂದು ಆ ಕನ್ನಡಿಗಳು ತೋರಿಸುತ್ತವೆಂದು ತಿಳಿಯಲಾಗಿತ್ತು.

ಕನ್ನಡಿಯ ಉಗಮ ಅತಿ ಪ್ರಾಚೀನ ಕಾಲದಲ್ಲೇ ಆಗಿತ್ತೇ ಎಂಬುದಕ್ಕೆ ಸ್ಪಷ್ಟ ನಿದರ್ಶನಗಳಿಲ್ಲ. ಗ್ರೀಸ್‌ನಲ್ಲಿ ಪ್ರಚಲಿತವಿರುವ ಐತಿಹ್ಯವೊಂದರ ಪ್ರಕಾರ ನಾರ್ಸಿಸಸ್ ಎಂಬ ಸುಂದರ ಯುವಕ ತಿಳಿಗೊಳವೊಂದರಲ್ಲಿ ತನ್ನ ಪ್ರತಿಬಿಂಬ ನೋಡಿ ಅದು ತನ್ನದೇ ಎಂದು ತಿಳಿಯದೇ ಆ ಮುಖವನ್ನು ಪ್ರೇಮಿಸಲಾರಂಭಿಸಿದನಂತೆ. ಅಂದರೆ ಆಗಿನ್ನೂ ಗ್ರೀಸ್‌ನಲ್ಲಿ ಕನ್ನಡಿಯ ಬಳಕೆ ಇದ್ದಿರಲಿಲ್ಲವೆಂದು ತಿಳಿಯುತ್ತದೆ. ಸಾಮಾನ್ಯ ತಿಳುವಳಿಕೆಯ ಪ್ರಕಾರ, ಕನ್ನಡಿಯ ಉಪಯೋಗ ತತ್ತ್ವಶಃ ಆರಂಭವಾದುದು ೨೦೦೦ ವರ್ಷಗಳ ಹಿಂದೆ. ಚೆನ್ನಾಗಿ ತಿಕ್ಕಿ ಮೆರುಗು ನೀಡಿದ ಕಂಚಿನಿಂದ ಮಾಡಿದ ಕನ್ನಡಿಗಳನ್ನು ಗ್ರೀಸ್ ಮತ್ತು ರೋಮಿನ ಕರಿಲಿನ ಚೆಲುವೆಯರು ಉಪಯೋಗಿಸುತ್ತಿದ್ದರು. ಇತ್ತೀಚೆಗೆ ಈಜಿಪ್ಷಿಯನ್ ರಾಜಕುಮಾರಿಯರ ಗೋರಿಗಳಲ್ಲೂ ಇಂತಹದೇ ಮಾದರಿಯ ಕನ್ನಡಿಗಳು ದೊರಕಿವೆ.

ಸಾಮಾನ್ಯವಾಗಿ ಎಟ್ರೂಸ್ಕನ್ನರು, ಗ್ರೀಕರು, ಮತ್ತು ರೋಮನ್ನರು ಉಪಯೋಗಿಸುತ್ತಿದ್ದ ಕನ್ನಡಿ ಯಾವುದಾದರೂ ಒಂದು ಲೋಹದಿಂದ ಮಾಡಿರುತ್ತಿದ್ದು ವೃತ್ತಾಕಾರವಾಗಿರುತ್ತಿತ್ತು. ಮಧ್ಯದಲ್ಲಿ ತುಸು ಉಬ್ಬಿರುತ್ತಿದ್ದ (ಪೀನಾಕಾರ) ಇದರ ಸುತ್ತಲೂ ಕಂಚಿನ ಅಲಂಕಾರವಿರುತ್ತಿತ್ತು. ಒಂದು ಬದಿಯಲ್ಲಿ ಚೆನ್ನಾಗಿ ಮೆರುಗು ನೀಡಿರುತ್ತಿದ್ದ ಇಂತಹ ಕನ್ನಡಿಗಳ ಇನ್ನೊಂದು ಬದಿಯಲ್ಲಿ ಆ ಜನರ ವರ್ಣಮಯ ಪುರಾಣ ಕಥೆಗಳ ಯಾವುದಾದರೊಂದು ಭಾಗವನ್ನೋ ಅಥವಾ ಬೇಟೆಯ ದೃಶ್ಯಗಳನ್ನೋ ಸೂಚಿಸುವಂತಹ ವಿನ್ಯಾಸಗಳನ್ನು ವೈವಿಧ್ಯಮಯವಾಗಿ ಅಳವಡಿಸುತ್ತಿದ್ದರು. ಹೋಮರನ ಯಾವ ಕೃತಿಯಲ್ಲೂ ಕನ್ನಡಿಯ ಪ್ರಸ್ತಾಪ ಇಲ್ಲವಾದರೂ, ಅನಂತರದ ಲೇಖಕರು ಅನೇಕ ಬಾರಿ ಇದರ ಬಗ್ಗೆ ಉಲ್ಲೇಖಿಸಿದ್ದಾರೆ. ಪಾಂಪೆಯ ಕಾಲಕ್ಕೆ ಸೇರಿದ ಕೆಲವು ಬೆಳ್ಳಿಯ ಕನ್ನಡಿಗಳೂ ಇತ್ತೀಚೆಗೆ ಬೆಳಕಿಗೆ ಬಂದಿವೆ.

ಕೊರಿಂಥ್‌ನಲ್ಲಿ ಮೊದಲ ಬಾರಿಗೆ ಗ್ರೀಕ್ ಮಾದರಿಯ ಕನ್ನಡಿಗಳನ್ನು ೧೮೭೭ ರಲ್ಲಿ ಹೊರತೆಗೆಯಲಾಯಿತು. ನಂತರದ ವರ್ಷಗಳಲ್ಲಿ ನಡೆದ ಅನೇಕ ಭೂ-ಅಗೆತಗಳಲ್ಲಿ ಇಂತಹದೇ ಅನೇಕ ಕನ್ನಡಿಗಳು ಕಂಡು ಬಂದವು. ಸಾಮಾನ್ಯವಾಗಿ ಇವೆಲ್ಲವೂ ಸಣ್ಣ ಪ್ರತಿಮೆಗಳ ರೂಪದಲ್ಲಿ ರಚಿತವಾದವು. ಇವುಗಳಲ್ಲಿ ಗ್ರೀಕ್ ಸೌಂದರ್ಯದೇವತೆ ವೀನಸ್‌ಳ ಮೂರ್ತಿಯಿರುವ ಕನ್ನಡಿಗಳೇ ಹೆಚ್ಚು. ಹೊರ ಹೊದಿಕೆಯನ್ನು ಅನೇಕ ವಿಧದ ವಿನ್ಯಾಸಗಳಿಂದ ಸಿಂಗರಿಸಲಾಗಿದ್ದರೆ ಒಳಮೈಯನ್ನು ಪ್ರತಿಬಿಂಬ ಮೂಡುವಂತೆ ಚೆನ್ನಾಗಿ ಮೆರುಗು ನೀಡಲಾಗಿದೆ. ಮೂರನೇ ಮತ್ತು ನಾಲ್ಕನೇ ಶತಮಾನಗಳಿಗೆ ಸೇರಿದ ಎಟ್ರುಸ್ಕನ್ ಕನ್ನಡಿಗಳು ಹೋಲಿಕೆಯಲ್ಲಿ ಗ್ರೀಕ್ ಕನ್ನಡಿಗಳಿಗೆ ತೀರ ನಿಕಟವಾಗಿವೆ. ಗ್ರೀಕ್ ದಂತಕಥೆಗಳ ಘಟನೆಗಳನ್ನು ಮತ್ತು ನಿತ್ಯ ಜೀವನಕ್ಕೆ ಸಂಬಂಧಿಸಿದ ಅನೇಕ ಉಪಕಥೆಗಳನ್ನು ಆಧರಿಸಿ ಅವುಗಳ ಮೇಲೆ ಚಿತ್ರಗಳನ್ನು ಕೆತ್ತಲಾಗಿದೆ.


ಮಧ್ಯಯುಗದಲ್ಲಿ ಅತಿ ನುಣುಪಿನ ಮೆರುಗು ನೀಡಿದ ಚಿಕ್ಕ ಕೈಗನ್ನಡಿಗಳು ತೀರಾ ಸಾಮಾನ್ಯವಾಗಿದ್ದವು. ಅವು ತುಂಬ ಬೆಲೆ ಬಾಳುತ್ತಿದ್ದುದರಿಂದ ಪೌರಾಣಿಕ ಪ್ರಣಯ ಕಥೆಗಳ ಕೆತ್ತನೆಗಳುಳ್ಳ ದಂತದ ಪೆಟ್ಟಿಗೆಗಳಲ್ಲಿ

ಇಡುತ್ತಿದ್ದರು. ಧನಾಢ್ಯರು ಇಂತಹ ಪೆಟ್ಟಿಗೆಗಳ ಆಡಂಬರದ ಅಲಂಕಾರಕ್ಕೆ ಚಿನ್ನ, ಬೆಳ್ಳಿ, ಕರಿಮರವೇ ಅಲ್ಲದೆ ಅಮೂಲ್ಯ ಹರಳುಗಳನ್ನು ಕೂಡ ಉಪಯೋಗಿಸುತ್ತಿದ್ದರು. ಕಲೆ ಮತ್ತು ಸೌಂದರ್ಯ ಪ್ರೇಮಿಗಳೆಂದು ಜಗತ್ಪ್ರಸಿದ್ಧರಾಗಿದ್ದ ಮೊಘಲರು ತಾವು ಧರಿಸಿರುವ ಉಂಗುರದಲ್ಲಿ ಉತ್ಕೃಷ್ಟವಾದ ಕನ್ನಡಿಗಳನ್ನು ಅಳವಡಿಸುತ್ತಿದ್ದರಂತೆ. ಇವು ಒಂದೇ ಬಾರಿಗೆ ಎರಡೆರಡು ಉದ್ದೇಶಗಳನ್ನು ಪೂರೈಸುತ್ತಿದ್ದವು. ರಾಜಸ್ಥಾನದ ಕನ್ನಡಿಯ ಕಸೂತಿ ಇರುವ ಲಂಗಗಳು ಅವರ ಕಲಾತ್ಮಕ ಸಂಸ್ಕೃತಿಯ ಸೊಬಗನ್ನೆತ್ತಿ ತೋರಿಸುತ್ತವೆ.

ಆಧುನಿಕ ವಿಜ್ಞಾನವೂ ಕನ್ನಡಿಯ ಉಪಯೋಗದಿಂದ ಹೊರತಾಗಿಲ್ಲ. ಅದು ಬಹು ಮಟ್ಟಿಗೆ ಕನ್ನಡಿಯನ್ನು ಅವಲಂಬಿಸಿದೆ ಎಂದರೂ ತಪ್ಪಾಗದು. ಅಣು ಸಂಶೋಧನಾ ಪ್ರಯೋಗಾಲಯಗಳಲ್ಲಿ 'ರೇಡಿಯೋ ಆಕ್ಟಿವ್ ಐಸೋಟೋಪ್'ಗಳನ್ನು ಸಂಗ್ರಹಿಸುವ ಚತುರ ಕಾರ್ಯದಲ್ಲಿ ತೀವ್ರ ವಿಚಕ್ಷಣತೆ ಬೇಕಾಗುತ್ತದೆ. ಇದರಲ್ಲಿ ಕೆಲಸ ಮಾಡುವ ಜನರು ಸೀಸದ ದಪ್ಪ ಗೋಡೆಯೊಂದರ ಹಿಂದೆ ಮರೆಯಾಗಿ ನಿಂತು ಯಂತ್ರಗಳ ಮೇಲೆ ಇರಿಸಲಾಗುವ ಕನ್ನಡಿಗಳಲ್ಲಿ ವೀಕ್ಷಿಸುತ್ತ ತಮ್ಮ ಪ್ರಯೋಗ ನಡೆಸುತ್ತಾರೆ.

ವೈದ್ಯಕೀಯ ಕ್ಷೇತ್ರದಲ್ಲೂ ಕನ್ನಡಿ ಅತ್ಯಂತ ಅಮೂಲ್ಯವೆನಿಸಿದೆ. ಪೋಲಿಯೋ ಪೀಡಿತ ರೋಗಿಗಳನ್ನು ಆಳೆತ್ತರದ ಕನ್ನಡಿಗಳ ಎದುರಿನಲ್ಲಿ ಅತ್ತಿತ್ತ ನಡೆದಾಡಿಸಿದಾಗ ಅವರು ಕನ್ನಡಿಯಲ್ಲಿ ತಮ್ಮ ಚಲವೆ ನೋಡಿ ಧೈರ್ಯಗೊಳ್ಳುವುದರಿಂದ ಬೇಗ ನಡೆಯಲು ಕಲಿಯಲು ಸಹಾಯವಾಗುತ್ತದೆ. ಕೆಲವೊಂದು ಕಾರಣಗಳಿಂದ ಕುತ್ತಿಗೆ ಅತ್ತಿತ್ತ ಚಲಿಸಲಾಗದೆ ಹಾಸಿಗೆಯಲ್ಲೇ ಮಲಗಿಸಬೇಕಾದಂತಹ ಸ್ಥಿತಿಯಲ್ಲಿರುವ ವ್ಯಕ್ತಿಗೆ ವಿಶೇಷ ರೀತಿಯಲ್ಲಿ ಜೋಡಿಸಿದ ಕನ್ನಡಿಗಳ ಸಹಾಯದಿಂದ ಓದಲು ಸಾಧ್ಯ. ಶಸ್ತ್ರಕ್ರಿಯೆಗೆ ಗುರಿಯಾಗುವವರು ಗಟ್ಟಿ ಮನಸ್ಸಿನವರಾದರೆ, ತಮ್ಮ ಮೇಲಾಗುವ ಶಸ್ತ್ರಕ್ರಿಯೆಯನ್ನು ಛಾವಣಿಗೆ ಜೋಡಿಸಿದ ಕನ್ನಡಿಯೊಂದರ ಮೂಲಕ, ಆಪರೇಶನ್ ಟೇಬಲ್ ಮೇಲೆ ಮಲಗಿಕೊಂಡೇ ನೋಡಬಹುದು.

ಹೀಗೆ ಜೀವನದ ಪ್ರತಿಯೊಂದು ಸ್ತರದಲ್ಲೂ ಕನ್ನಡಿಯ ಪಾತ್ರ ಮಹತ್ತರವಾದದ್ದು. ಅನೇಕ ಕುತೂಹಲಕಾರಿ ಚಾರಿತ್ರಿಕ ಘಟನೆಗಳ ಹಿನ್ನೆಲೆಯುಳ್ಳ ಕನ್ನಡಿ ಮನುಷ್ಯನಿಗೆ ಲೆಕ್ಕವಿಲ್ಲದಷ್ಟು ರೀತಿಯಲ್ಲಿ ಸೇವೆ ಸಲ್ಲಿಸಿದೆ. ಅದೇನೇ ಇದ್ದರೂ, ಇಂದು ಪ್ರಸಿದ್ಧ ನ್ಯೂಯಾರ್ಕ್ ನಗರ ನಿಂತಿರುವ ಸ್ಥಳ, ೧೭ನೇ ಶತಮಾನದಲ್ಲಿ ವೆಸ್ಟ್ ಇಂಡಿಯನ್ನರಿಂದ ಕೆಲವೇ ಚೂರು ಈ 'ಜಂಭದ ಸಾಮಗ್ರಿ'ಗೆ ಬದಲಾಗಿ ಕೊಂಡದ್ದೆಂದರೆ ಯಾರಿಗಾದರೂ ಆಶ್ಚರ್ಯಾಘಾತವಾಗದಿರದು.



ಒಬ್ಬಾತ ಬಂದು ಹೊಸ ವಿಚಾರವನ್ನು ಕಾರ್ಯರೂಪಕ್ಕಿಳಿಸಿ ಪ್ರಖ್ಯಾತನಾದಾಗ ಆ ವಿಚಾರ ಆ ಮೊದಲೆ ಹತ್ತಾರು ಜನರಿಗೆ ಬಂದುಹೋದದ್ದು ಅವನ ಗಮನಕ್ಕೆ ಬರುತ್ತದೆ. ಆದರೆ ಅವರಾರೂ ಅವನ ಹಾಗೆ ಪ್ರಸಿದ್ಧಿಯನ್ನಾಗಲಿ ಹಣವನ್ನಾಗಲಿ ಗಳಿಸಿರುವುದಿಲ್ಲ. ಏಕೆಂದರೆ ಅವರು ಆ ವಿಚಾರವನ್ನು ಬರೇ ಯೋಚಿಸಿರುತ್ತಾರೆ.

—ಟ್ಯಾಪಿಂಗ್ ಪಾಟ್

ಪಣ

ಮೂಲ: ಆ್ಯಂಟೊನಿ ಚೆಕೊವ್
ಕನ್ನಡಕ್ಕೆ : ಜಿ. ನಾರಾಯಣ

ಶರತ್ಕಾಲದ ಕಗ್ಗತ್ತಲೆಯ ಒಂದು ರಾತ್ರಿ ಮುದುಕ ಸಾಹುಕಾರ ತನ್ನ ವ್ಯಾಸಂಗದ ಕೋಣೆಯಲ್ಲಿ ಅತ್ತಿತ್ತ ತಿರುಗುತ್ತ, ಹದಿನೈದು ವರ್ಷದ ಹಿಂದೊಂದು ಶರತ್ಕಾಲದ ಸಂಜೆ ತಾನು ಹೇಗೆ ಒಂದು ಔತಣಕೂಟವನ್ನೇರ್ಪಡಿಸಿದ್ದ ಎಂಬುದನ್ನು ಜ್ಞಾಪಿಸಿಕೊಳ್ಳುತ್ತಿದ್ದ.

■

ಆ ಪಾರ್ಟಿಯಲ್ಲಿ ಹಲವಾರು ಬುದ್ಧಿವಂತರಿದ್ದುದರಿಂದ ಸಂಭಾಷಣೆ ಬಹಳ ರುಚಿಕಟ್ಟಾಗಿತ್ತು. ಇತರ ಹಲವಾರು ವಿಷಯಗಳ ಜೊತೆ ಅವರು ಮರಣದಂಡನೆಯ ಬಗ್ಗೂ ಚರ್ಚಿಸಿದರು. ಪತ್ರಿಕೋದ್ಯಮಿಗಳು ಹಾಗೂ ಬುದ್ಧಿಜೀವಿಗಳೇ ಇದ್ದ ಬಹುಪಾಲು ಅತಿಥಿಗಳು ಮರಣದಂಡನೆಯನ್ನು ಒಪ್ಪಲಿಲ್ಲ. ಆ ರೀತಿಯ ಶಿಕ್ಷೆ ಅಸಮರ್ಪಕವಾದುದೆಂದೂ ಅನೈತಿಕವಾದುದೆಂದೂ ಕ್ರಿಶ್ಚಿಯನ್ ದೇಶಗಳಿಗೆ ಅದು ಹೊಂದಲಾರದೆಂದೂ ಅವರು ಪರಿಗಣಿಸಿದರು. ಮರಣದಂಡನೆಯ ಬದಲು ಜೀವಾವಧಿ ಶಿಕ್ಷೆಯನ್ನೇ ಎಲ್ಲೆಡೆ ಜಾರಿಯಲ್ಲಿ ತರಬೇಕೆಂದು ಅವರಲ್ಲಿ ಕೆಲವರ ಅಭಿಪ್ರಾಯವಾಗಿತ್ತು.

“ನಿಮ್ ಜೊತೆ ನಾನೊಪ್ಪೋಲ್ಲ. ನಂಗೆ ಮರಣದಂಡನೇದಾಗ್ಲೀ ಜೀವಾವಧಿ ಶಿಕ್ಷೇದಾಗ್ಲಿ ಅನುಭವ ಏನೂ ಇಲ್ಲ. ಆದ್ರೂ ಅವುಗಳಲ್ಲಿ ಯಾವ್ದನ್ ಆರ್ಸ್ಕೋಬೇಕು ಅನ್ನೋ ಪ್ರಸಂಗ ಬಂದ್ರೆ ಮರಣದಂಡನೇನೇ ಒಳ್ಳೇದು. ಹೆಚ್ಚು ನೀತಿಯುತವಾದದ್ದು ಮನುಷ್ಯತ್ವ ಇರೋದು. ಮರಣದಂಡನೆ ಮನುಷ್ಯನ್ನ ಒಮ್ಮೆಗೇ ಕೊಂದ್ಬಿಡತ್ತೆ ಆದ್ರೆ ಜೀವಾವಧಿ ಶಿಕ್ಷೆ ಅಷ್ಟಷ್ಟಾಗಿ ಕೊಲ್ಲುತ್ತೆ. ಕೊಲ್ಲೋದರಲ್ಲಿ ಯಾರು ಹೆಚ್ಚು ಮನುಷ್ಯನತ್ತ ಇರೋರು, ಕೆಲವೇ ನಿಮಿಷದಲ್ಲಿ ನಿಮ್ಮನ್ನ ಕೊಲ್ಲೋನೋ, ಅಥ್ವಾ ಹಲವಾರು ವರ್ಷದ ಅವಧೀಲಿ ನಿಮ್ಮ ಜೀವಾನ ಅಷ್ಟಷ್ಟಾಗಿ ತೊಗೊಳ್ಳೋನೋ ?” ಆತಿಥೇಯ ಸಾಹುಕಾರ ಹೇಳಿದ.

“ಎರಡೂ ಅಷ್ಟೇ ಅನೈತಿಕವಾದೋವು. ಯಾಕೇಂದ್ರೆ ಅವೆರಡರ ಗುರೀನೂ ಜೀವ ತೆಗೆಯೋದೊಂದೇ. ದೇಶವೆಂದ್ರೆ ದೇವ್ರಲ್ಲ. ಬೇಕು ಅಂದಾಗ ಮರಳಿ ಯಾವ್ದನ್ನ ತಂದು ಕೊಡೋಕೆ ಅಸಾಧ್ಯವೋ, ಅದಕ್ಕೆ ಕಿತ್ಕೊಳ್ಳೋ ಅಧಿಕಾರಾನೂ ಅದ್ಕಿಲ್ಲ.” ಅತಿಥಿಗಳಲ್ಲೊಬ್ಬ ವಿಶ್ಲೇಷಿಸಿದ.

ಅತಿಥಿಗಳ ಮಧ್ಯೆ ಒಬ್ಬ ಯುವಕ ವಕೀಲನಿದ್ದ. ಅವನ ಅಭಿಪ್ರಾಯ ಕೇಳಿದಾಗ ಆತನೆಂದ: "ಜೀವಾವಧಿ ಶಿಕ್ಷೆ ಮರಣದಂಡನೆ ಎರಡೂ ನೀತಿ ಇಲ್ದೇ ಇರೋವೇ. ಒಂದ್ವೇಳೆ ನಾನೇನಾದ್ರೂ ಮರಣದಂಡನೆ ಜೀವಾವಧಿ ಶಿಕ್ಷೆ ಮಧ್ಯೆ ಆಯ್ಕೆ ಮಾಡ್ಕೋಬೇಕಾಗಿ ಬಂದ್ರೆ, ನಾನು ಖಂಡಿತ ಎರಡನೇದ್ನೇ ಆರಿಸ್ಕೋತೀನಿ. ಹೇಗೋ ಬದುಕೋದು ಇಲ್ಲ ಅಂತಾಗೋದಕ್ಕಿಂತ ಇದು ಉತ್ತಮ."

ಇವನ ಮಾತಿನಿಂದ ಸಾಹುಕಾರ ಉದ್ವಿಗ್ನನಾದ. ಅದೇ ಹರೆಯದಲ್ಲಿ ಕಾಲಿರಿಸಿದ್ದ ಅವನು ತೀರ ಚಿಕ್ಕ ಕಾರಣಕ್ಕಾಗಿಯೂ ತಟ್ಟನೆ ಸಿಟ್ಟಿಗೇಳುತ್ತಿದ್ದ. ಈಗೊಮ್ಮೆಲೆ ಅವನು ಮೇಜನ್ನು ಮುಷ್ಟಿಯಿಂದ ಕುಟ್ಟುತ್ತ ಯುವಕನ್ನುದ್ದೇಶಿಸಿ ಚೀರಿದ: "ಸುಳ್ಳು, ಅದ್ಸುಳ್ಳು! ಏಕಾಂತ ಬಂಧನದಲ್ಲಿ, ಯಾರೊಡನೂ ಒಂದಕ್ಷರಾನೂ ಮಾತಾಡದ್ಹಾಗೆ ಐದು ವರ್ಷ ಇರ್ತೀಯಾ ಹೇಳು; ಇಪ್ಪತ್ತು ಲಕ್ಷ ಪಣ ಒಡ್ತೀನಿ!"

"ನೀವು ಈ ಮಾತನ್ನ ಮನಃಪೂರ್ವಕ ಹೇಳ್ತಿದ್ದರೆ ನಾನು ಈ ಪಣ ಒಪ್ಕೋತೀನಿ: ಐದು ವರ್ಷಗಳಲ್ಲ, ಹದಿನೈದು ವರ್ಷ ಏಕಾಂತ ಬಂಧನದಲ್ಲಿರ್ತೀನಿ." ಯುವಕ ವಕೀಲ ಹೇಳಿದ.

"ಹದಿನೈದು!? ಹಾಳಾಯ್ತು! ತಕೋ ಇಷ್ಟು ಜನರೆದುರಲ್ಲೇ ಇಪ್ಪತ್ತು ಲಕ್ಷ ಪಣಕ್ಕೆ ಕಟ್ಟಿದೀನಿ," ಕೂಗಿದ ಸಾಹುಕಾರ.

"ಒಪ್ಪೆ! ನೀವು ನಿಮ್ಮ ಲಕ್ಷಗಳನ್ನ ಪಣಕ್ಕೊಡ್ಡಿ. ನಾನು ನನ್ನ ಸ್ವಾತಂತ್ರ್ಯನ ಪಣಕ್ಕೆ ಒಡ್ತೀನಿ," ವಕೀಲ ನುಡಿದ.

ಈ ರೀತಿ, ಕ್ರೂರವಾದ, ಅರ್ಥಹೀನ ಪಣವೊಂದು ನಡೆಯಿತು. ಲಕ್ಷಗಳು ಲೆಕ್ಕವಿಲ್ಲದ ನೀತಿಹೀನ, ತಿಳಿಗೇಡಿ ಸಾಹುಕಾರ ಪಣದಿಂದ ಖುಷಿಪಟ್ಟ. ರಾತ್ರಿ ಊಟದ ಸಮಯದಲ್ಲಿ ಆತ ತರುಣ ವಕೀಲನನ್ನು ಪೀಡಿಸುತ್ತ ಹೇಳಿದ: "ಏ ಹುಡ್ಗಾ, ಸರಿಯಾಗಿ ಇದ್ನ ಕಾಲ ಮಿಂಚೋಕ್ ಮುಂಚೆ ಯೋಚ್ನೆ ಮಾಡು. ನಂಗೆ ಇಪ್ಪತ್ ಲಕ್ಷ ಅಂದ್ರೆ ಕ್ಷುಲ್ಲಕ. ಆದ್ರೆ ನೀನು ನಿನ್ನ ಜೀವನದಲ್ಲಿ ಅಮೂಲ್ಯವಾದ ಮೂರ್ನಾಲ್ಕು ವರ್ಷಗಳನ್ನ ಕಳ್ಕೋತೀಯ; ನಾನು ಮೂರ್ನಾಲ್ಕು



ಅಂತಿದೀನಿ. ಯಾಕೆಂದ್ರೆ ಅದ್ಕಿಂತ ಹೆಚ್ಚು ಹಣ ಅಲ್ಲಿಲ್ಲ. ನೋಡಪ್ಪ, ಸ್ವಂತ ಇಚ್ಛೆಯಿಂದ ಸೆರೆಯಲ್ಲಿರೋದು ಅನಿವಾರ್ಯವಾಗಿ ಸೆರೆಯಲ್ಲಿರೋದಕ್ಕಿಂತ ತುಂಬಾ ಕಷ್ಟ ಅನ್ನೋದನ್ನೇ ಮರೀಬ್ಯಾಡ. ನಂಗೆ ಯಾವ್ ಕ್ಷಣದಲ್ಲಾದ್ರೂ ಸ್ವತಂತ್ರವಾಗಿ ಹೊರಗೆ ಹೋಗೋ ಹಕ್ಕಿದೆ ಅನ್ನೋ ಯೋಚ್ನೆ ನಿನ್ನ ಸೆರೆಮನೆಯ ಬದುಕನ್ನೇ ಹಾಳ್ ಮಾಡಿಬಿಡುತ್ತೆ. ನಿನ್ನ ನೋಡಿ ನಿಜವಾಗಿ ನಂಗೆ ಬೇಸರವಾಗುತ್ತೆ."

■

ಈಗ ಸಾಹುಕಾರ ಅತ್ತಿತ್ತ ಅಡ್ಡಾಡುತ್ತ ಇದನ್ನೆಲ್ಲ ಜ್ಞಾಪಿಸಿಕೊಂಡು ತನ್ನಲ್ಲೇ ಕೇಳಿಕೊಂಡ: 'ಆ ಪಣದ ಉದ್ದೇಶ ಏನಿತ್ತು? ಆ ಮನುಷ್ಯ ತನ್ನ ಹದಿನೈದು ವರ್ಷಗಳನ್ನ ಕಳಕೊಳ್ಳೋದ್ರಲ್ಲಿ, ನಾನು ಇಪ್ಪತ್ ಲಕ್ಷ ಚೆಲ್ಲೋದ್ರಲ್ಲಿ ಏನು ಹುರುಳಿದೆ? ಇದು ಮರಣದಂಡನೆ ಜೀವಾವಧಿ ಶಿಕ್ಷೆಗಿಂತ ಉತ್ತಮ ಅಂತಾಗ್ಲೀ, ಕೀಳೆಂದಾಗ್ಲೀ ಸಾಧಿಸ್ತೇ? ಇಲ್ಲ, ಖಂಡಿತ ಇಲ್ಲ. ಇದೆಲ್ಲ ಅರ್ಥಹೀನ ವಿಚಾರಹೀನವಾಗಿತ್ತು. ನನ್ನ ಬಗ್ಗೆ ಹೇಳೋದಾದ್ರೆ ನನ್ನ ವಿಷಯಾಸಕ್ತ ಚಂಚಲ ಚಿತ್ತವೇ ಕಾರಣ; ಅವನಿಗೆ ಹಣದ ದುರಾಶೆ.'

■

ಆಮೇಲೆ ಆತ ಆ ಸಂಜೆಯ ನಂತರ ಏನೇನು ನಡೆಯಿತೆಂದು ಜ್ಞಾಪಿಸಿಕೊಂಡ. ಆ ಯುವಕ, ಸಾಹುಕಾರನ ತೋಟದಲ್ಲಿರುವ ಮನೆಯೊಂದರಲ್ಲಿ ಆತನ ಮೇಲ್ವಿಚಾರಣೆಯಲ್ಲಿ ಸೆರೆಯಲ್ಲಿರಬೇಕೆಂದು ತೀರ್ಮಾನವಾಯಿತು. ಹದಿನೈದು ವರ್ಷಗಳ ಕಾಲ ಮನುಷ್ಯರ ಮುಖ ನೋಡುವುದಕ್ಕಾಗಲಿ ಮಾನವ ಧ್ವನಿ ಕೇಳುವುದಕ್ಕಾಗಲಿ ಕಾಗದ ಅಥವಾ ವೃತ್ತಪತ್ರಿಕೆಯನ್ನು ನೋಡುವುದಕ್ಕಾಗಲಿ ಅವನಿಗೆ ಸಾಧ್ಯವಿಲ್ಲ; ತನ್ನನ್ನಿಟ್ಟ ಮನೆಯ ಹೊಸ್ತಿಲನ್ನು ದಾಟುವ ಸ್ವಾತಂತ್ರ್ಯ ಕೂಡ ಇಲ್ಲವೆಂಬುದನ್ನು ಆತ ಒಪ್ಪಿದ. ಸಂಗೀತೋಪಕರಣಗಳನ್ನೂ ಪುಸ್ತಕಗಳನ್ನೂ ಇಟ್ಟುಕೊಳ್ಳಲು, ಪತ್ರ ಬರೆಯಲು, ವೈನನ್ನು ಕುಡಿಯಲು, ಧೂಮಪಾನ ಮಾಡಲು ಅವನಿಗೆ ಅನುಮತಿ ದೊರೆಯಿತು. ಒಪ್ಪಂದದ ನಿಯಮದ ಪ್ರಕಾರ, ಅದೇ ಉದ್ದೇಶಕ್ಕಾಗಿ ನಿರ್ಮಿಸಿದ ಒಂದು ಸಣ್ಣ ಕಿಟಕಿಯೊಂದರಿಂದ ಬಾಹ್ಯ ಪ್ರಪಂಚದ ಸಂಪರ್ಕವನ್ನು ಆತ ಇಟ್ಟುಕೊಳ್ಳಬಹುದಿತ್ತು. ಆತ ಒಂದು ಬೇಡಿಕೆ ಬರೆದು ತನಗೆ ಬೇಕಾದ ಪುಸ್ತಕ, ಸಂಗೀತ, ವೈನ್ ಇತ್ಯಾದಿ ಎಲ್ಲವನ್ನೂ ಯಥೇಚ್ಛವಾಗಿ ಪಡೆಯಬಹುದಿತ್ತು. ಆದರೆ ಅವೆಲ್ಲವನ್ನೂ ಆತ ಕಿಟಕಿಯ ಮೂಲಕವೇ ಪಡೆಯಬೇಕಿತ್ತು. ಆ ಒಪ್ಪಂದದಲ್ಲಿ ಆತನ ಸೆರೆಮನೆ ವಾಸ ತೀರ ಏಕಾಂತವಾಗಿರುವಂತೆ ಮಾಡಲು, ಎಲ್ಲ ಸೂಕ್ಷ್ಮ ವಿಚಾರಗಳಿಗೂ ವಿವರವಾಗಿ ಲಕ್ಷ್ಯವೀಯಲಾಗಿತ್ತು. ೧೮೭೦ ನವೆಂಬರ್ ೧೪ ರ ಮಧ್ಯಾಹ್ನ ಹನ್ನೆರಡು ಗಂಟೆಗೆ ಆರಂಭವಾಗಿ ನವೆಂಬರ್ ೧೪, ೧೮೮೫ ರ ಮಧ್ಯಾಹ್ನ ಹನ್ನೆರಡಕ್ಕೆ ಪೂರ್ಣಗೊಳ್ಳುವ ಹದಿನೈದು ವರ್ಷಗಳೂ ಆತ ಅಲ್ಲಿ ವಾಸಿಸಬೇಕಿತ್ತು. ಆತ, ನಿಯಮಗಳನ್ನು ಕೊಂಚವಾದರೂ ಅದು ಕೊನೆಯ ಎರಡೇ ನಿಮಿಷಗಳ ಮಟ್ಟಿಗಾದರೂ ಉಲ್ಲಂಘಿಸಿದ್ದೇ ಆದರೆ ಸಾಹುಕಾರ ಆತನಿಗೆ ಇಪ್ಪತ್ತು ಲಕ್ಷವನ್ನು ಕೊಡಬೇಕಾಗಿರಲಿಲ್ಲ.

ಆತನು ಬರೆದಿಟ್ಟ ಟಿಪ್ಪಣಿಗಳ ಪ್ರಕಾರ ಹೇಳುವುದಾದರೆ ತನ್ನ ಬಂಧನದ ಮೊದಲ ವರ್ಷ ಏಕಾಕಿತನ ಹಾಗೂ ಮಾನಸಿಕ ಖಿನ್ನತೆಗಳಿಂದ ಆತ ತೀವ್ರವಾಗಿ ಬಳಲಿದ. ಆತನ ವಾಸಗೃಹದಿಂದ ಪಿಯಾನೋ ಧ್ವನಿಯನ್ನು ಹಗಲು ರಾತ್ರಿ ನಿರಂತರವಾಗಿ ಕೇಳಬಹುದಿತ್ತು. ಆತ ವೈನನ್ನೂ ತಂಬಾಕನ್ನೂ ಬಿಟ್ಟುಬಿಟ್ಟ. 'ವೈನು ಬಯಕೆಯನ್ನು ಉದ್ರೇಕಗೊಳಿಸುತ್ತದೆ. ಬಯಕೆಗಳೇ ಬಂದಿಯ ಅತಿ ಹೀನ ಶತ್ರುಗಳು. ಅದಕ್ಕಿಂತ ಹೆಚ್ಚಾಗಿ, ಒಳ್ಳೆಯ ವೈನನ್ನು ಕುಡಿದು ಯಾರನ್ನೂ ನೋಡದಿರುವುದಕ್ಕಿಂತ ಬೇಸರ ಇನ್ನೊಂದಿಲ್ಲ. ತಂಬಾಕು ಕೋಣೆಯ ವಾತಾವರಣವನ್ನು ಕೆಡಿಸುತ್ತದೆ' ಎಂದು ಆತ ಬರೆದ. ಮೊದಲ ವರ್ಷ ಆತ ಜಟಿಲವಾದ ಪ್ರಣಯ ಕಥಾ

ವಸ್ತುವುಳ್ಳ ಕಾದಂಬರಿಗಳನ್ನೂ, ಸಂವೇದನಾಪೂರ್ಣ ಅದ್ಭುತ ಕಥೆಗಳನ್ನೂ, ಲಘು ಬರಹಗಳ ಪುಸ್ತಕಗಳನ್ನೂ ಬಯಸಿದ.

ಎರಡನೆಯ ವರ್ಷ, ಆತನ ವಸತಿಯಲ್ಲಿ ಪಿಯಾನೋ ಸ್ತಬ್ಧವಾಗಿತ್ತು. ಬಂದಿ ಕೇವಲ ಶ್ರೇಷ್ಠತಮ ಗ್ರಂಥಗಳನ್ನು ಮಾತ್ರ ಬೇಡುತ್ತಿದ್ದ. ಐದನೆಯ ವರ್ಷ ಸಂಗೀತ ಮತ್ತೆ ಕೇಳಿಸಿತು. ಬಂದಿ ವೈನನ್ನು ಯಾಚಿಸಿದ. ಕಿಟಕಿಯ ಮೂಲಕ ನೋಡಿದವರು, ಆತ ತಿನ್ನುತ್ತ, ಕುಡಿಯುತ್ತ, ಹಾಸಿಗೆಯ ಮೇಲೆ ಮಲಗುತ್ತ, ಪದೇ ಪದೇ ಆಕಳಿಸುತ್ತ, ಕೋಪದಿಂದ ತನ್ನಲ್ಲಿ ತಾನೇ ಮಾತಾಡುತ್ತ, ಇಡೀ ವರ್ಷ ಕಳೆದ ಎನ್ನುತ್ತಿದ್ದರು. ಆತ ಪುಸ್ತಕಗಳನ್ನು ಓದುತ್ತಿರಲಿಲ್ಲ. ಕೆಲವು ವೇಳೆ ರಾತ್ರಿ ಬರೆಯಲು ಕುಳಿತುಕೊಳ್ಳುತ್ತಿದ್ದ, ಗಂಟೆಗಟ್ಟಲೆ ಬರೆಯುತ್ತ ಕಳೆಯುತ್ತಿದ್ದ, ಬರೆದುದೆಲ್ಲವನ್ನೂ ಬೆಳಗ್ಗೆ ಹರಿದೆಸೆಯುತ್ತಿದ್ದ. ಕೆಲವೊಮ್ಮೆ ಆತ ಶೋಕಿಸುವುದೂ ಕೇಳುತ್ತಿತ್ತು.

ಆರನೆಯ ವರ್ಷದ ಕೊನೆಯರ್ಧ ಭಾಗದಲ್ಲಿ ಬಂದಿ ಹುಚ್ಚು ಹಿಡಿದವನಂತೆ ಭಾಷೆಗಳನ್ನು, ತತ್ತ್ವಶಾಸ್ತ್ರವನ್ನು, ಇತಿಹಾಸವನ್ನು ಅಭ್ಯಾಸ ಮಾಡಲಾರಂಭಿಸಿದ. ಆತ ಎಷ್ಟು ಕುತೂಹಲಾಸಕ್ತಿಯಿಂದ ಈ ಅಭ್ಯಾಸಗಳಲ್ಲಿ ತೊಡಗಿದ್ದನೆಂದರೆ, ಸಾಹುಕಾರ ಆತ ಕೇಳಿದ ಪುಸ್ತಕಗಳನ್ನು ದೊರಕಿಸಲು ತುಂಬಾ ಕಷ್ಟಪಡಬೇಕಾಗುತ್ತಿತ್ತು. ನಾಲ್ಕು ವರ್ಷಗಳ ಅವಧಿಯಲ್ಲಿ ಆತನ ಬೇಡಿಕೆಯಂತೆ ಸುಮಾರು ನಾನೂರು ಪುಸ್ತಕಗಳನ್ನು ದೊರಕಿಸಲಾಯಿತು. ಇದೇ ಅವಧಿಯಲ್ಲಿ ಬಂದಿ ಸಾಹುಕಾರನಿಗೆ ಈ ರೀತಿ ಕಾಗದ ಬರೆದ:

'ಪ್ರಿಯ ಜೈಲರ್, ನಾನು ಈ ಕಾಗದವನ್ನು ಆರು ಭಾಷೆಗಳಲ್ಲಿ ಬರೆಯುತ್ತಿದ್ದೇನೆ. ಅವುಗಳಲ್ಲಿ ಆಯಾ ಭಾಷೆ ಬಲ್ಲವರಿಗೆ ತೋರಿಸಿ. ಅವರು ಅದನ್ನೋದಲಿ. ಒಂದೇ ತಪ್ಪನ್ನವರು ಅದರಲ್ಲಿ ಕಂಡುಹಿಡಿದುದಾದರೂ ನೀವು ನಿಮ್ಮ ತೋಟದಲ್ಲಿ ಒಂದು ಬಾರಿ ಗುಂಡು ಹಾರಿಸಬೇಕಾಗಿ ಬೇಡಿಕೊಳ್ಳುತ್ತೇನೆ. ಆ ಸ್ಫೋಟವನ್ನು, ಪ್ರಯತ್ನವನ್ನು (ಅವರು) ನಿರ್ಲಕ್ಷಿಸಿಲ್ಲ ಎಂದು ತೋರಿಸುತ್ತದೆ. ಎಲ್ಲ ಕಾಲದ, ಎಲ್ಲ ದೇಶದ ಪ್ರಾಜ್ಞರೂ ಬೇರೆ ಬೇರೆ ಭಾಷೆಗಳನ್ನು ಮಾತಾಡುತ್ತಾರೆ. ಆದರೆ ಅವರೆಲ್ಲರಲ್ಲಿ ಉರಿಯುವ (ಜ್ಞಾನ) ಜ್ಯೋತಿ ಒಂದೇ. ಆಹಾ! ಇವೆಲ್ಲವನ್ನು ಅರ್ಥ ಮಾಡಿಕೊಂಡ ನನ್ನಾತ್ಮ ಎಂತಹ ಅಲೌಕಿಕ ಆನಂದವನ್ನು ಅನುಭವಿಸುತ್ತಿದೆ ಎಂದು ನಿಮಗೆ ತಿಳಿದಿದ್ದರೆ!'. ಬಂದಿಯ ಆಸೆ ಪೂರೈಸಲು ಸಾಹುಕಾರ ತೋಟದಲ್ಲಿ ಎರಡು ಬಾರಿ ಗುಂಡು ಹಾರಿಸಲು ಆಜ್ಞಾಪಿಸಿದ.

ಅನಂತರ, ಹತ್ತನೆಯ ವರ್ಷದ ಬಳಿಕ ಬಂದಿ ವಸ್ತುವಿನ ಸುವಾರ್ತೆಯೊಂದನ್ನೇ ಓದುತ್ತ ಮೇಜಿನ ಬಳಿ ಅಚಲನಾಗಿ ಕುಳಿತ. ನಾಲ್ಕು ವರ್ಷಗಳ ಕಾಲ ಆರುನೂರು ವಿದ್ವತ್ಪೂರ್ಣ ಹೊತ್ತಿಗೆಗಳನ್ನೋದಿ ಪ್ರಭುತ ಗಳಿಸಿದ ವ್ಯಕ್ತಿ, ಈಗ ಇಡೀ ವರ್ಷವನ್ನು, ಚಿಕ್ಕದಾಗಿ ಸುಲಭಗ್ರಾಹ್ಯವಾದ ಸುವಾರ್ತೆಯನ್ನು ಓದಿ ವ್ಯರ್ಥ ಮಾಡುವುದು ಸಾಹುಕಾರನಿಗೆ ವಿಚಿತ್ರವೆನಿಸಿತು.

ತನ್ನ ಬಂಧನದ ಕೊನೆಯ ವರ್ಷ ಬಂದಿ ತಾರತಮ್ಯವಿಲ್ಲದೆ ಬಹಳಷ್ಟು ಪುಸ್ತಕಗಳನ್ನು ಓದಿದ. ಒಮ್ಮೆ ಪ್ರಕೃತಿ ವಿಜ್ಞಾನದಲ್ಲಿ ಆತ ಮಗ್ನನಾಗಿದ್ದರೆ ನಂತರ ಆತ ಬೈರನ್ ಅಥವಾ ಶೇಕ್ಸ್‌ಪಿಯರರ ಕೃತಿಗಳನ್ನು ಓದುತ್ತಿದ್ದ. ಏಕಕಾಲದಲ್ಲಿ ರಸಾಯನಶಾಸ್ತ್ರ, ವೈದ್ಯಕೀಯ ಕೈಹೊತ್ತಿಗೆಗಳು, ಕಾದಂಬರಿಗಳು, ತತ್ತ್ವಶಾಸ್ತ್ರ ಅಥವಾ ವೇದಾಂತಗಳ ಮೇಲಿನ ಪ್ರಬಂಧಗಳು ಇವುಗಳ ಬೇಡಿಕೆಯ ಪಟ್ಟಿಯನ್ನು ಕಳಿಸುತ್ತಿದ್ದ. ಆತನು ಓದುವ ರೀತಿ ಸಮುದ್ರದಲ್ಲಿ ಒಡೆದ ಹಡಗಿನ ಮಧ್ಯೆ ಈಜುವ ಒಬ್ಬ ವ್ಯಕ್ತಿ ಜೀವ ರಕ್ಷಣೆಗಾಗಿ ಒಮ್ಮೆ ಒಂದು ಜಂತಿಯನ್ನೂ ಇನ್ನೊಮ್ಮೆ ಇನ್ನೊಂದನ್ನೂ ಆತುರಾತುರವಾಗಿ ಹಿಡಿದುಕೊಳ್ಳುವಂತೆ ತೋರುತ್ತಿತ್ತು.

*

ಮುಂದು ಸಾಹುಕಾರ ಇದನ್ನೆಲ್ಲವನ್ನೂ

ಜ್ಞಾಪಿಸಿಕೊಂಡ; ಯೋಚಿಸಿದ: 'ನಾಳೆ ಹನ್ನೆರಡು ಗಂಟೆಗೆ ಆತ ತನ್ನ ಸ್ವಾತಂತ್ರ್ಯವನ್ನು ಮರಳಿ ಪಡೆಯುತ್ತಾನೆ. ನಮ್ಮ ಒಪ್ಪಂದದಂತೆ ನಾನು ಆತನಿಗೆ ಇಪ್ಪತ್ತು ಲಕ್ಷಗಳನ್ನು ಕೊಡಬೇಕು. ಅಷ್ಟನ್ನು ಕೊಟ್ಟದ್ದೇ ಆದರೆ ನಂದೆಲ್ಲಾ ಮುಗಿದ ಹಾಗೇನೇ, ನಾನು ಸಂಪೂರ್ಣ ಪಾಳಾಗಿ ಹೋಗ್ತೀನಿ.'

ಹದಿನೈದು ವರ್ಷಗಳ ಮುಂಚೆ ಲಕ್ಷಗಳು ಅವನ ಕಣ್ಣಿಗೇ ಕಾಣುತ್ತಿರಲಿಲ್ಲ; ಈಗ ಆತ ತನ್ನ ಆಸ್ತಿ ಹೆಚ್ಚೋ ಸಾಲ ಹೆಚ್ಚೋ ಎಂದು ಲೆಕ್ಕ ಹಾಕಿದಾಗಲೆಲ್ಲ ಅವನಿ ಭೀತಿಯುಂಟಾಗುತ್ತಿತ್ತು. ನಿರಾಶಾಮಯವಾದ ದಳ್ಳಾಳಿ ವ್ಯವಹಾರ, ದುಡುಕು, ಸಟ್ಟಾ-ವ್ಯಾಪಾರ, ಇತ್ತೀಚಿನ ವರ್ಷಗಳಲ್ಲೂ ಅನಿಯಂತ್ರಿತವಾಗಿ ಬೆಳೆದ ಭಾವೋದ್ರೇಕ, ಇವೆಲ್ಲ ಅಷ್ಟಷ್ಟಾಗಿ ಅವನ ಶ್ರೀಮಂತಿಕೆಯನ್ನು ಕಡಿಮೆ ಮಾಡಿದ್ದುವು; ಅಂದಿನ ನಿರ್ಭೀತ, ಆತ್ಮವಿಶ್ವಾಸಿ, ಗರ್ವಿಷ್ಠ ಲಕ್ಷಾಧಿಪತಿ ಈಗ ಒಬ್ಬ ಸಾಮಾನ್ಯ ದರ್ಜೆಯ, ತಾನು ತೊಡಗಿಸಿದ ಬಂಡವಾಳದಲ್ಲಿನ ಲಾಭ ನಷ್ಟಕ್ಕಾಗಿ ಸದಾ ಭೀತಿಯಿಂದ ನಡುಗುವ ಲೇವಾದೇವಿಗಾರನಾಗಿದ್ದ.

"ನನ್ ಹಣೆಬರಹ"–ನಿರಾಶೆಯಿಂದ ವಟಗುಟ್ಟುತ್ತ ಮುದುಕ ತಲೆಯ ಮೇಲೆ ಕೈ ಹೊತ್ತ. 'ಯಾಕೆ ಆ ಮನುಷ್ಯ ಇನ್ನೂ ಸತ್ತಿಲ್ಲ? ಅವನಿಗಿನ್ನೂ ನಾಲ್ವತ್ ವರ್ಷ. ಆತ ನನ್ನ ಚಿಕ್ಕಾಸನ್ನೂ ನನ್ನಿಂದ ತೊರೆದೋತಾನೆ, ಮದ್ವೆಯಾಗ್ತಾನೆ. ಮಜಾ ಮಾಡ್ತಾ ಜೀವನ ಕಳೀತಾನೆ, ದಳ್ಳಾಳಿ ವ್ಯಾಪಾರ ಮಾಡ್ತಾನೆ. ನಾನು ಮಾತ್ರ ಆಗ ಅವನನ್ನು ಭಿಕ್ಷದೋನ್ ಹಾಗೆ ಈರ್ಷೆ ತುಂಬಿದ ಕಣ್ಣಿಂದ ನೋಡ್ತಕೂಡ್ಬೇಕು. ದಿನಾನೂ ಆತ "ನಾನು ಸುಖವಾಗಿ ಬದ್ಕೋಹಾಗೆ ಮಾಡ್ಕೊಟ್ಟದ್ದಕ್ಕಾಗಿ ನಿಮಗೆ ಕೃತಜ್ಞನಾಗಿದೀನಿ, ದಯವಿಟ್ಟು ನಿಮಗೇನಾದೂ ಸಹಾಯ ಮಾಡೋ ಅವಕಾಶ ಕೊಡಿ," ಅನ್ನೋದನ್ನ ಕೇಳಸ್ಕೋಬೇಕು! ಛೇ, ಛೇ ಇದು ತೀರ ಅತಿಯಾಯ್ತು! ನಾ ದಿವಾಳಿ ತೆಗೆಯೋದನ್ನ ಅವಮಾನಾನ ತಪ್ಪಿಸ್ಕೊಳ್ಳೋಕೆ ಒಂದೇ ಒಂದು ಮಾರ್ಗ ಅಂದ್ರೆ ಆ ಮನುಷ್ಯನ ಸಾವು!'

ಮೂರು ಗಂಟೆ ಹೊಡೆಯಿತು. ಸಾಹುಕಾರ ಆಲಿಸಿದ. ಮನೆಯಲ್ಲಿ ಎಲ್ಲರೂ ನಿದ್ರಿಸುತ್ತಿದ್ದರು. ಹೊರಗೆ ಮರಗಳು ಒಂದಕ್ಕೊಂದು ತಿಕ್ಕುವುದರ ಶಬ್ದದ ಹೊರತಾಗಿ ಏನೊಂದು ಶಬ್ದವೂ ಕೇಳುತ್ತಿರಲಿಲ್ಲ. ಶಬ್ದವಾಗದಂತೆ ಸಾಹುಕಾರ 'ಫೈರ್ ಪ್ರೂಫ್' ತಿಜೋರಿಯಿಂದ ಹದಿನೈದು ವರ್ಷಕಾಲ ತೆರೆಯದ ಬಂದಿಯ ನಿವಾಸದ ಬಾಗಿಲಿನ ಬೀಗದ ಕೈಯನ್ನು ತೆಗೆದುಕೊಂಡು ಓವರ್ ಕೋಟನ್ನು ಧರಿಸಿ ಮನೆಯ ಹೊರಹೊರಟ. ತೋಟದಲ್ಲಿ ಕಗ್ಗತ್ತಲೆ ಹಾಗೂ ಶೀತ ಮುಸುಕಿತ್ತು. ಮಳೆ ಬೀಳುತ್ತಿತ್ತು. ಒದ್ದೆ ಗಾಳಿ ಕೊರೆಯುತ್ತ, ಮೊರೆಯುತ್ತ ಬೀಸುತ್ತಿತ್ತು. ಹುಚ್ಚು ವೇಗದಲ್ಲಿ ಬೀಸುತ್ತಿದ್ದ ಅದು ಮರಗಳನ್ನು ಅಲ್ಲೋಲಕಲ್ಲೋಲಗೊಳಿಸುತ್ತಿತ್ತು. ಸಾಹುಕಾರ ಕಣ್ಣಗಲಿಸಿ ನೋಡಿದರೂ ಭೂಮಿಯಾಗಲಿ ಬಿಳಿಯ ಪ್ರತಿಮೆಗಳಾಗಲಿ ವಸತಿಗೃಹವಾಗಲಿ ಮರಗಳಾಗಲಿ ಗೋಚರಿಸಲಿಲ್ಲ; ವಸತಿಗೃಹವಿದ್ದ ಸ್ಥಳಕ್ಕೆ ಹೋಗಿ ಎರಡು ಬಾರಿ ಆತ ಕಾವಲುಗಾರನನ್ನು ಕರೆದ. ಯಾವ ಉತ್ತರವೂ ಬರಲಿಲ್ಲ. ಕಾವಲುಗಾರ ಆ ಶೀತ ವಾತಾವರಣದಿಂದ ರಕ್ಷಿಸಿಕೊಳ್ಳಲು ಯಾವದೋ ಅಡಿಗೆಯ ಮನೆಯಲ್ಲೋ ತೋಟದ ಮನೆಯಲ್ಲೋ ನಿದ್ರಿಸುತ್ತಿದ್ದುದು ಸ್ಪಷ್ಟವಿತ್ತು. 'ನನ್ನ ಇಚ್ಛಾಪ್ರಕಾರ ಮಾಡುವ ತಾಕತ್ತು ನನಗಿದ್ದುದೇ ಆದರೆ ಅನುಮಾನ ಮೊದಲು ಕಾವಲುಗಾರನ ಮೇಲೆ ಬರುತ್ತದೆ' ಮುದುಕ ಯೋಚಿಸಿದ. ಆತ ಕತ್ತಲಿನಲ್ಲಿ ಮೆಟ್ಟಿಲುಗಳಿಗಾಗಿ, ಬಾಗಿಲಿಗಾಗಿ ತಡಕುತ್ತ ವಸತಿಗೃಹದ ಪ್ರವೇಶದ್ವಾರದೊಳಕ್ಕೆ ಹೋದ. ಅನಂತರ ಒಂದು ಕಡ್ಡಿ ಗೀರಿ ಕಿರು ಮಾರ್ಗದಲ್ಲಿ ತಡವುತ್ತ ಸಾಗಿದ. ಅಲ್ಲಿ ಒಂದು ನರಪಿಳ್ಳೆಯೂ ಇರಲಿಲ್ಲ! ಬಾಗಿಲಿಗೊಂದು ದೀಡು ಕಬ್ಬಿಣದ ಸಲಾಕೆ ಅಡ್ಡವಿತ್ತು. ಕೊಠಡಿಗೆ ಹೋಗುವ ಬಾಗಿಲಿಗೆ ಹಾಕಿದ ಮುದ್ರೆ ಇನ್ನೂ

ಹಾಳಾಗಿರಲಿಲ್ಲ. ಕಿಡ್ಕಿ ಎರಡುತ್ತಲೂ ಮೋದುಕ ಛಾಯೋಪಸ್ಥೆಯಿಂದ ನಡುಗುತ್ತ ಚಿಕ್ಕ ಕಿಟಕಿಯ ಮೂಲಕ ಕೋಣೆಯಲ್ಲಿ ಇಣುಕಿದ. ಒಂದು ಮೋಂಬತ್ತಿ ಬಂದಿಯ ಕೋಣೆಯಲ್ಲಿ ಮಂದವಾಗಿ ಉರಿಯುತ್ತಿತ್ತು. ಮೇಜಿನೆದುರು ಆತ ಕುಳಿತಿದ್ದ. ಆತನ ಹಿಂಭಾಗ, ತಲೆಗೂದಲು ಹಾಗೂ ಆತನ ಕೈಗೂದಲು ಇವುಗಳ ಹೊರತಾಗಿ ಮತ್ತೇನೂ ಕಾಣುತ್ತಿರಲಿಲ್ಲ. ತೆರೆದ ಪುಸ್ತಕಗಳು ಮೇಜಿನ ಮೇಲೆ, ಎರಡು ಆರಾಮ ಖುರ್ಚಿಗಳ ಮೇಲೆ, ಮೇಜಿನ ಹತ್ತಿರದ ಚಾಪೆಯ ಮೇಲೆ ಬಿದ್ದಿದ್ದುವು.

ಐದು ನಿಮಿಷಗಳು ಕಳೆದರೂ ಬಂದಿ ಒಮ್ಮೆಯೂ ಅಲುಗಾಡಲಿಲ್ಲ. ಹದಿನೈದು ವರ್ಷಗಳ ಸೆರೆವಾಸ ಆತನಿಗೆ ಅಚಲನಾಗಿ ಕುಳಿತುಕೊಳ್ಳುವುದನ್ನು ಕಲಿಸಿತ್ತು. ಸಾಹುಕಾರ ಕಿಟಕಿಯ ಮೇಲೆ, ಬೆರಳಿನಿಂದ ತಟ್ಟಿದ; ಅದಕ್ಕೆ ಪ್ರತಿಯಾಗಿ ಬಂದಿ ಯಾವ ರೀತಿಯಲ್ಲೂ ಸ್ಪಂದಿಸಲಿಲ್ಲ. ಅನಂತರ ಸಾಹುಕಾರ ಎಚ್ಚರಿಕೆಯಿಂದ ಬಾಗಿಲ ಮುದ್ರೆಯನ್ನು ಮುರಿದು, ಬೀಗದ ಕೈಯನ್ನು ಬೀಗದ ರಂಧ್ರದಲ್ಲಿಟ್ಟ. ತುಕ್ಕು ಹಿಡಿದ ಬೀಗ ಚರ ಚರ ಶಬ್ದ ಮಾಡಿತು, ಬಾಗಿಲು ಕಿರುಗುಟ್ಟಿತು. ಸಾಹುಕಾರ ತಕ್ಷಣವೇ ಬಂದಿಯ ಶಬ್ದವನ್ನು ಆಶ್ಚರ್ಯದ ಕೂಗನ್ನು ಕೇಳುತ್ತೇನೆಂದು ನಿರೀಕ್ಷಿಸಿದ್ದ. ಆದರೆ ಮೂರು ನಿಮಿಷಗಳು ಕಳೆದರೂ ಕೋಣೆ ಯಥಾ ರೀತಿ ಶಾಂತವಾಗಿತ್ತು. ಆತ ಒಳಕ್ಕೆ ಹೋಗಲು ನಿರ್ಧರಿಸಿದ.

ಮೇಜಿನೆದುರು ಆ ವ್ಯಕ್ತಿ ನಿಶ್ಚಲವಾಗಿ ಕುಳಿತಿದ್ದ. ಆತ ಆಳಿದ ಜನರಂತಿರಲಿಲ್ಲ. ಆತನ ಎಲುಬಿನ ಮೇಲೆ ಚರ್ಮ ಎಳೆದಂತಿತ್ತು. ಕೂದಲು ಹೆಂಗಸರ ಕೂದಲಂತೆ ಉದ್ದವಾಗಿ ಗುಂಗುರಾಗಿತ್ತು. ಹೊಲಸು ಗಡ್ಡವುಳ್ಳ ಆತ ಒಂದು ಅಸ್ಥಿಪಂಜರದಂತೆ ಗೋಚರಿಸಿದ. ಮುಖದಲ್ಲಿ ಮಣ್ಣಿನ ಬಣ್ಣದ ಹಳದಿ ಛಾಯೆಯಿತ್ತು. ಅವನ ಕೆನ್ನೆಗಳು ಗುಳಿ ಬಿದ್ದಿದ್ದುವು. ಆತನ ಹಿಂಭಾಗ ಬಡವಾಗಿ ನೀಳವಾಗಿತ್ತು. ತಲೆಬಾದ ಅವನ ತಲೆಗೆ ಆಧಾರ ಕೊಟ್ಟ ಕೈ- ಅದರತ್ತ ನೋಡಿದರೆ ಭೀತಿ ಬರುವಷ್ಟು ಬಡಕಲಾಗಿ ಕೋಮಲವಾಗಿತ್ತು. ಅವನ ತಲೆಯಲ್ಲಿ ಆಗಲೇ ಬೆಳ್ಳಿಗೂದಲು ಮೂಡಿತ್ತು. ಆತನ ಬಳಲಿದ, ವಯಸ್ಸಾದಂತೆ ಕಾಣುವ ಮುಖವನ್ನು ನೋಡಿದ ಯಾರೊಬ್ಬರೂ ಆತ ಕೇವಲ ನಾಲ್ವತ್ತು ವರ್ಷದವನೆಂದರೆ ನಂಬುತ್ತಿರಲಿಲ್ಲ. ಆತ ನಿದ್ರಿಸುತ್ತಿದ್ದ. ಮೇಜಿನ ಮೇಲೆ ಅವನ ಬಾಗಿದ ತಲೆಯೆದುರು ಸುಂದರ ಕೈಬರಹವಿರುವ ಒಂದು ಹಾಳೆಯಲ್ಲಿ ಏನೇನೋ ಬರೆದಿತ್ತು.


'ಬಡಪ್ರಾಣಿ! ಆತ ನಿದ್ರಿಸುತ್ತಿದ್ದಾನೆ. ಬಹುಶಃ ಲಕ್ಷಗಳ ಕನಸು ಕಾಣುತ್ತಿರಬೇಕು. ನಾನು ಕೇವಲ ಈ ಅರ್ಧ ಸತ್ತ ಪ್ರಾಣಿಯ ಎತ್ತಿ ಹಾಗೆ ಮಲಗಿಸಿದು ಒಂದು ದಿಂಬಿನಿಂದ ಸ್ವಲ್ಪ ಉಸಿರುಕಟ್ಟಿಸಿದ್ರಾಯ್ತು. ಎಷ್ಟೇ ಎಚ್ಚರದಿಂದ ಪರೀಕ್ಷಿಸಿದರೂ ಬಲಾತ್ಕಾರವಾಗಿ ಕೊಂದದ್ದರ ಯಾವುದೇ ಕುರುಹನ್ನು ಕಾಣಲು ಸಾಧ್ಯವಿಲ್ಲ. ಆದ್ರೆ ಮೊದಲು ಇವ್ನು ಇಲ್ಲಿ ಏನ್ ಬರ್ದಿದಾನೆ ಅನ್ನೋದನ್ನ ಓದೋಣ'—ಸಾಹುಕಾರ ಯೋಚಿಸಿದ.

ಸಾಹುಕಾರ ಮೇಜಿನ ಮೇಲಿಂದ ಹಾಳೆಯನ್ನು ತೆಗೆದುಕೊಂಡು ಓದಿದ: 'ನಾಳೆ ಬೆಳಗ್ಗೆ ಹನ್ನೆರಡು ಗಂಟೆಗೆ ನಾನು ನನ್ನ ಸ್ವಾತಂತ್ರ್ಯವನ್ನು ಪಡೆದು ಮನುಷ್ಯರ ಜೊತೆ ಬೆರೆಯುವ ಹಕ್ಕನ್ನು ಮರಳಿ ಪಡೆಯುತ್ತೇನೆ. ಆದರೆ ಈ ಕೋಣೆಯನ್ನು ಬಿಡುವ ಮುಂಚೆ, ಸೂರ್ಯಪ್ರಕಾಶವನ್ನು ನೋಡುವುದರೊಳಗೆ, ಕೆಲವು ಮಾತುಗಳನ್ನು ನಿಮಗೆ ಹೇಳುವುದು ಅವಶ್ಯಕ ಎಂದು ನಾನು ಯೋಚಿಸಿದೇನೆ.

'ನನ್ನ ಕೃಪಾಕಟಾಕ್ಷವನ್ನು ಸದಾ ನನ್ನ ಮೇಲಿಟ್ಟ ದೇವರೆದುರು ತಪ್ಪೊಪ್ಪಿಕೊಳ್ಳುವಂತೆ ನನ್ನ ಮನಸ್ಸಾಕ್ಷಿಯಾಗಿ ನಿಮಗೆ ಹೇಳುತ್ತೇನೆ. ನಾನು ನಿಮ್ಮ ದೃಷ್ಟಿಯಲ್ಲಿ ಪ್ರಪಂಚದ ಶ್ರೇಷ್ಠ ವಸ್ತುಗಳೆಂದು ಪರಿಗಣಿಸಲ್ಪಟ್ಟ ಸ್ವಾತಂತ್ರ್ಯ, ಆರೋಗ್ಯ, ಜೀವನ, ಇವನ್ನು ಕ್ಷುಲ್ಲಕವೆಂದು ಪರಿಗಣಿಸುತ್ತೇನೆ. ಹದಿನೈದು ವರ್ಷಗಳ ಕಾಲ

ನಾನು ಲೌಕಿಕ ಜೀವನವನ್ನು ಆಸಕ್ತಿಯಿಂದ ಅಭ್ಯಾಸಮಾಡಿದೆ. ನಾನು ದೇಶಗಳನ್ನಾಗಲಿ ನಗರಗಳನ್ನಾಗಲಿ ನೋಡಿಲ್ಲ ನಿಜ; ಆದರೆ ನಿಮ್ಮ ಪುಸ್ತಕಗಳಲ್ಲಿ ಸುವಾಸನಾಪೂರಿತ ಮದ್ಯವನ್ನು ಕುಡಿದಿದ್ದೇನೆ, ಹಾಡನ್ನು ಹಾಡಿದ್ದೇವೆ, ಕಾಡಿನಲ್ಲಿ ಕಾಡುಹಂದಿಗಳನ್ನೂ ಸಾರಂಗಗಳನ್ನೂ ಬೇಟೆಯಾಡಿದ್ದೇವೆ, ಹೆಣ್ಣನ್ನು ಪ್ರೀತಿಸಿದ್ದೇವೆ.... ನಿಮ್ಮ ಕವಿಗಳ ಹಾಗೂ ಪ್ರತಿಭಾ-ಶಾಲಿಗಳ ಚಮತ್ಕಾರದಿಂದ ಸೃಷ್ಟಿಯಾದ, ಮೋಡದಂತೆ ತೇಲುವ ಸೌಂದರ್ಯದೇವತೆಗಳು ರಾತ್ರಿ ನನ್ನನ್ನು ಭೇಟಿಯಾಗಿದ್ದಾರೆ, ನನ್ನ ತಲೆಯಲ್ಲಿ ಅದ್ಭುತವಾದ ಕತೆಗಳನ್ನು ಪಿಸುಗುಟ್ಟಿದ್ದಾರೆ. ಅವು ನನ್ನ ತಲೆ ದಿಮ್ಮೆನ್ನುವಂತೆ ಮಾಡಿವೆ. ನಿಮ್ಮ ಪುಸ್ತಕಗಳಲ್ಲಿ ನಾನು ಎಲ್‌ಬುರ್ಝ್. ಮೌಂಟ್ ಬ್ಲಾನ್ ಶಿಖರಗಳ ತುದಿಗೆ ಹತ್ತಿದ್ದೇನೆ; ಅಲ್ಲಿಂದ ಉದಯರವಿಯ ಕೆಂ-ಬೆಳಕನ್ನು, ಸಂಜೆ ಅದೇ ಬೆಳಕು ಆಕಾಶ ಸಮುದ್ರಗಳಲ್ಲಿ ಹೊನಲಾಗಿ ಹರಿದುದನ್ನು, ಪರ್ವತಗಳ ತುದಿಯನ್ನು ಬಂಗಾರ ಬಣ್ಣದಿಂದ ರಕ್ತವರ್ಣದಿಂದ ಆಚ್ಛಾದಿಸಿದುದನ್ನು ನೋಡಿದ್ದೇವೆ. ಬಿರುಗಾಳಿಯನ್ನು ಮುತ್ತಿ ಬರುತ್ತಿದ್ದ ಮೋಡಗಳನ್ನು ಸೀಳಿ ಬರುವ ಮಿಂಚುಗಳು ನನ್ನ ತಲೆಯ ಮೇಲೆಯೇ ಮಿಂಚುವುದನ್ನು ಅಲ್ಲಿಂದಲೇ ವೀಕ್ಷಿಸಿದ್ದೇನೆ. ಹಸಿರು ಕಾಡುಗಳನ್ನು, ಹೊಲಗಳನ್ನು, ನದಿಗಳನ್ನು, ಸರೋವರಗಳನ್ನು, ನಗರಗಳನ್ನು, ನಾನು ನೋಡಿದ್ದೇನೆ. ಜಲದೇವತೆಗಳು ಹಾಡು-ವುದನ್ನು, ಗೋಪಾಲಕರ ಮುರಲಿಯ ನಿನಾ-ದವನ್ನು ಕೇಳಿದ್ದೇನೆ. ಹಕ್ಕಿಗಳಂತೆ ಆಕಾಶದಲ್ಲಿ ತೇಲುತ್ತ, ನನ್ನ ಜೊತೆ ಮಾತಾಡಲು ಬರುವ ದೇವದೂತರ ಸುಂದರ ರೆಕ್ಕೆಗಳನ್ನು ಸ್ಪರ್ಶಿಸಿದ್ದೇನೆ. ನಿಮ್ಮ ಪುಸ್ತಕಗಳಲ್ಲಿ ತಳವೇ ಸಿಕ್ಕದಷ್ಟು ಆಳವಾದ ಕಂದರಗಳಲ್ಲಿ ಜಿಗಿದಿದ್ದೇನೆ; ಜಾದೂ ಮಾಡಿದ್ದೇನೆ, ಕೊಂದಿದ್ದೇನೆ, ನಗರಗಳನ್ನು ಸುಟ್ಟಿದ್ದೇವೆ. ಹೊಸ ಹೊಸ ಧರ್ಮಗಳನ್ನು ಬೋಧಿಸಿದ್ದೇವೆ, ಸಮಗ್ರ ಸಾಮ್ರಾಜ್ಯಗಳನ್ನೇ ಜಯಿಸಿದ್ದೇವೆ.

'ನಿಮ್ಮ ಪುಸ್ತಕಗಳು ನನಗೆ ಜ್ಞಾನವೆರೆದಿವೆ, ಯುಗಯುಗಗಳಲ್ಲಿ ಮಾನವನ ಅಶಾಂತ ಮನಸ್ಸಿನಲ್ಲಿ ಮೂಡಿದ ಯೋಚನೆಗಳು ನನ್ನ ಈ ಇಕ್ಕಟ್ಟಾದ ತಲೆಯಲ್ಲಿ ಇರುತಿವೆ. ನಾನು ನಿಮ್ಮೆಲ್ಲರಿಗಿಂತ ಪ್ರಾಜ್ಞನೆಂದೂ ನನಗೆ ಗೊತ್ತು. ಆದರೆ ಈಗ ನಾನು ನಿಮ್ಮ ಪುಸ್ತಕ-ಗಳನ್ನು ಕಡೆಗಣಿಸುತ್ತೇನೆ. ಜ್ಞಾನವನ್ನು, ಈ ಜಗತ್ತಿನ ಕೊಡುಗೆಗಳನ್ನು ಹೀನೈಸುತ್ತೇನೆ, ಇವು ಮರೀಚಿಕೆಯಂತೆ ಚಂಚಲ, ಭ್ರಾಮಕ, ವಂಚಕ, ನಿಷ್ಪ್ರಯೋಜಕವಾದುವುಗಳು. ನೀವು ಕಟ್ಟಾ ಸ್ವಾಭಿಮಾನಿಯಾಗಿರಬಹುದು, ಪ್ರಾಜ್ಞರಿರಬಹುದು, ಶ್ರೇಷ್ಠರಿರಬಹುದು, ಆದರೆ ಬಿಲದಲ್ಲಿ ವಾಸಿಸುವ ಒಂದು ಇಲಿ-ಯನ್ನು ಕೊಂದಷ್ಟೇ ಕನಿಷ್ಠವಾಗಿ ಸಾವು ನಿಮ್ಮನ್ನೂ ಈ ಪೃಥ್ವಿಯಿಂದ ಅಳಿಸಿಹಾಕಿ ಬಿಡುತ್ತದೆ. ನಿಮ್ಮ ವಂಶ, ಪರಂಪರೆ, ನಿಮ್ಮ ಚರಿತ್ರೆ, ನಿಮ್ಮ ಅಜರಾಮರ ಪ್ರತಿಭಾಶಾಲಿ-



ನಾನು ದಕ್ಷಿಣೆ ತೆಗೆದುಕೊಳ್ಳುವುದಿಲ್ಲ ಅಂತ ಪ್ರತಿಜ್ಞೆ ಮಾಡಿರುವುದನ್ನು ನನ್ನ ಭಾವೀ ಮಾವನಿಗೆ ಹೇಳಬೇಡ.

ದಳು, ಎಲ್ಲವೂ, ಎಲ್ಲರೂ ಭಸ್ಮವಾಗಿ ಹೋಗುದು ಇಲ್ಲವೇ ಈ ನೆಲದ ಮಣ್ಣಿನ ಜೊತೆಗೇ ಹೆಪ್ಪುಗಟ್ಟಿ ಹೋಗುವುದು ಖಂಡಿತ. ನೀವು ನಿಮ್ಮ ಯೋಚನಾಶಕ್ತಿಯನ್ನೇ ಕಳೆದುಕೊಂಡಿದ್ದೀರಿ, ತಪ್ಪು ಹಾದಿ ಹಿಡಿದಿದ್ದೀರಿ, ಅಸತ್ಯವನ್ನು ಸತ್ಯವೆಂದು ತಿಳಿದಿದ್ದೀರಿ. ಅಸಹ್ಯ ರೂಪವನ್ನು ಸೌಂದರ್ಯವೆಂದು ಭಾವಿಸಿದ್ದೀರಿ.

'ಏನೋ ಒಂದು ವಿಲಕ್ಷಣ ಘಟನೆ ನಡೆದು ಕಿತ್ತಳೆಯ, ಸೇಬಿನ ಗಿಡಗಳಲ್ಲಿ ಹಣ್ಣಿನ ಬದಲು ಕಪ್ಪೆಗಳು, ಹಲ್ಲಿಗಳು ಬೆಳೆದರೆ, ಗುಲಾಬಿಯ ಹೂಗಳಿಗೆ ಕುದುರೆಯ ಬೆವರಿನ ವಾಸನೆ ಬರಲಾರಂಭಿಸಿದರೆ ನೀವು ಚಕಿತರಾಗುತ್ತೀರಿ. ಅದೇ ರೀತಿ ಪ್ರಾಪಂಚಿಕ ಸುಖಕ್ಕಾಗಿ ಸ್ವರ್ಗೀಯ ಆನಂದವನ್ನು ತಳ್ಳಿ ಸರಿಸುತ್ತಿರುವ ನಿಮ್ಮನ್ನು ನೋಡಿ ನಾನು ವಿಸ್ಮಿತನಾಗುತ್ತೇನೆ. ನೀವು ಯಾವುದರಿಂದ, ಯಾವುದರ ಆಧಾರದ ಮೇಲೆ ಬದುಕುತ್ತೀರೋ ಅದನ್ನು ನಾನೆಷ್ಟು ಕೀಳಾಗಿ ಕಾಣುತ್ತೇನೆಂದು ಕ್ರಿಯೆಯ ಮೂಲಕ ಸಿದ್ಧಮಾಡಿ ತೋರಿಸಲು, ನಾನು ಒಂದು ಕಾಲದಲ್ಲಿ ಸ್ವರ್ಗವೆಂದೇ ಸ್ವಪ್ನ ಕಂಡ ಇಪ್ಪತ್ತು ಲಕ್ಷಗಳನ್ನು ತ್ಯಜಿಸುತ್ತಿದ್ದೇನೆ. ಅದರ ವ್ಯಾಮೋಹ ನನಗಿಲ್ಲ. ಆ ಹಣದ ಮೇಲಿನ ನನ್ನ ಹಕ್ಕನ್ನು ತಪ್ಪಿಸಿಕೊಳ್ಳಲು ನಿಗದಿಪಡಿಸಿದ ವೇಳೆಗಿಂತ ಐದು ಗಂಟೆ ಮುಂಚೆಯೇ ಇಲ್ಲಿಂದ ಹೊರಗೆ ಹೋಗುತ್ತೇನೆ; ತನ್ಮೂಲಕ ನನ್ನ–ನಿಮ್ಮ ಒಪ್ಪಂದವನ್ನು ಮುರಿಯುತ್ತೇನೆ.'

ಸಾಹುಕಾರ ಇದನ್ನು ಓದಿದವನು ಹಾಳೆಯನ್ನು ಮತ್ತೆ ಮೇಜಿನ ಮೇಲಿಟ್ಟು; ಆ ವಿಚಿತ್ರ ವ್ಯಕ್ತಿಯ ತಲೆಯನ್ನು ಚುಂಬಿಸಿದ. ಅಲ್ಲಿಂದ ಆ ನಿವಾಸದಿಂದ ಹೊರ ಹೊರಟ; ಆದರೆ ಅವನೀಗ ಮಗುವಿನಂತೆ ಅಳುತ್ತಿದ್ದ. ಇನ್ನಾವುದೇ ಸಂದರ್ಭದಲ್ಲೂ – ಹುಂಡಿ ವ್ಯವಹಾರದಲ್ಲಿ ತುಂಬ ನಷ್ಟ ಅನುಭವಿಸಿದಾಗ ಕೂಡ – ಆತನಿಗೆ ತನ್ನ ಮೇಲೆ ಅಂತಹ ಅಸಮಾಧಾನ, ಅತೃಪ್ತಿ ಉಂಟಾಗಿರಲಿಲ್ಲ. ಆತ ಮನೆ ತಲುಪಿ ತನ್ನ ಹಾಸಿಗೆಯ ಮೇಲೆ ಬಿದ್ದುಕೊಂಡ. ಆದರೆ ಅವನ ಕಣ್ಣೀರು, ಅವನ ಭಾವೋದ್ರೇಕ ಅವನನ್ನು ಬಹಳ ಕಾಲ ನಿದ್ರಿಸಗೊಡಲಿಲ್ಲ.

ಮರುದಿನ ಕಾವಲುಗಾರ ಬಿಳಿಚಿಕೊಂಡ ಮುಖದಿಂದ ಒಳಕ್ಕೋಡಿ ಬಂದು, ವಸತಿಗೃಹದಲ್ಲಿದ್ದ ವ್ಯಕ್ತಿ ಕಿಟಕಿಯನ್ನು ಹತ್ತಿ, ತೋಟದ ಹೊರಬಾಗಿಲತ್ತ ನಡೆದು ಕಣ್ಮರೆಯಾದುದನ್ನು ತಾನು ಕಂಡುದುದಾಗಿ ಹೇಳಿದ. ಕೂಡಲೇ ಸಾಹುಕಾರ ಸೇವಕರ ಸಂಗಡ ವಸತಿಗೃಹಕ್ಕೆ ಹೋಗಿ ಬಂದಿ ಓಡಿಹೋದುದನ್ನು ಖಚಿತಪಡಿಸಿಕೊಂಡ. ಅನವಶ್ಯಕ ಮಾತುಗಳನ್ನು ತಪ್ಪಿಸಲು, ಬಂದಿ ಇಪ್ಪತ್ತು ಲಕ್ಷಗಳನ್ನು ತ್ಯಜಿಸಿರುವುದಾಗಿ ಬರೆದಿಟ್ಟ ಕಾಗದವನ್ನು ಕೈಗೆತ್ತಿಕೊಂಡ. ಮನೆ ಸೇರಿದ ಮೇಲೆ ಅದನ್ನು ಫೈರ್ ಪ್ರೂಫ್ ತಿಜೋರಿಯಲ್ಲಿಟ್ಟು ಬೀಗ ಹಾಕಿದ. ✡



ಸ್ಪರ್ಧಾತ್ಮಕವಾದ ಈ ದಿನಗಳಲ್ಲಿ ಇದ್ದಲ್ಲೆ ಇರಲು ಚೆನ್ನಾಗಿ ಓಡುವುದೊಂದೆ ದಾರಿ.

–ಜೋ ಪಾಮರ್

ಯಶಸ್ಸೆಂದೂ ಅತ್ಯಂತಿಕವಲ್ಲ; ಹಾಗೆಯೆ ಅಪಯಶಸ್ಸು ಎಂದಿಗೂ ಮರಣಾಂತಿಕವಲ್ಲ. ಎಲ್ಲಕ್ಕೂ ಮುಖ್ಯವಾದದ್ದು ಬಂದದ್ದನ್ನು ಸಹಿಸೇವೆಂಬ ಧೈರ್ಯ.

–ಕಲ್ಟನ್

ಪೇಪರು ಮಾರುವ ಹುಡುಗ ಮಹಾ ವಿಜ್ಞಾನಿಯಾದ

ಡಾ. ಕೆ. ಸುಂದರರಾಜನ್

'ನಾಗ' ಶಿರಾಲಿ

ಮದರಾಸಿನಿಂದ ಪ್ರಕಟವಾಗುವ 'ಆನಂದ ವಿಕಟ'ನ್ ವಾರಪತ್ರಿಕೆಯು ೧೯೬೮ರ ಒಂದು ಸಂಚಿಕೆಯಲ್ಲಿ 'ಮರೆಯಲಾಗದ ಘಟನೆ' ಎಂಬ ತಲೆಬರಹದಡಿಯಲ್ಲಿ ನರಸಿಂಹನ್ ಎಂಬುವವರು ಒಂದು ಸ್ವಾರಸ್ಯಕರವಾದ ಘಟನೆಯನ್ನು ಬರೆದಿದ್ದರು:

ಹದಿನೈದು ವರ್ಷಗಳಿಗೂ ಹಿಂದೆ ಮಧುರೆಯಲ್ಲಿ ನಾನೊಬ್ಬ ದೊಡ್ಡ ರೆವಿನ್ಯೂ ಅಧಿಕಾರಿಯಾಗಿದ್ದೆ. ಹೀಗಾಗಿ ಕೈಕೆಳಗಿನವರನ್ನು ಸಮಾನಭಾವದಿಂದ ಕಾಣುವುದೇ ತಪ್ಪು ಎಂದು ನನ್ನ ಅಭಿಪ್ರಾಯವಾಗಿತ್ತು.

ಆಗ ನಾನು ಒಂದು ದಿನಪತ್ರಿಕೆಗೆ ಚಂದಾದಾರನಾಗಿದ್ದೆ. ಆ ಪತ್ರಿಕೆಯನ್ನು ದಿನವೂ ನಮ್ಮ ಮನೆಗೆ ಒಬ್ಬ ಸಣ್ಣ ಹುಡುಗ ತಂದು ಕೊಡುತ್ತಿದ್ದ. ಪ್ರತಿ ತಿಂಗಳ ಮೊದಲ ವಾರ ಚಂದಾ ವಸೂಲಿಗಾಗಿ ಅವನು ಬಂದಾಗ ಕೆಲವು ಸಾರೆ ನಮ್ಮ ಮನೆಯ ಒಳಗೇ ಬಂದು ಬಿಡುತ್ತಿದ್ದ. ಇದನ್ನು ನೋಡಿ ಕೋಪಗೊಂಡ ನಾನು, "ಏ, ನೀನು ಯಾವಾಗಲೂ ನಮ್ಮ ಮನೆಯೊಳಗೆ ಬರಕೂಡದು. ಬೀದಿಬಾಗಿಲಲ್ಲೇ ನಿಂತು ಯಾರಾದರೂ ಹೊರಗೆ ಬಂದಾಗ ಚಂದಾ ಕೇಳಬೇಕು," ಎಂದು ಕಟ್ಟಪ್ಪಣೆ ಮಾಡಿದೆ.

ಒಂದು ದಿನ ಬೆಳಗ್ಗೆ ನಾವು ಹೊರಗೆ ವಾಕಿಂಗ್‌ಗೆ ಹೋಗಿ ಸುಮಾರು ಎಂಟು ಗಂಟೆಯ ಸುಮಾರಿಗೆ ಮನೆಗೆ ಹಿಂತಿರುಗಿದಾಗ, ಆ ಪೇಪರ್ ಹುಡುಗ ನಮ್ಮ ಮನೆಯ ಸೋಫಾದ ಮೇಲೆ ಕುಳಿತಿದ್ದನ್ನು ನೋಡಿದೆ. ಕೋಪದಿಂದ ಕೆಂಡವಾದ ನಾನು "ಏನೋ...! ನಾನು ನಿನಗೆ ಕೂಡಲು ಹೇಳಿದ್ದೆ?" ಎಂದು ಜೋರು ಮಾಡಿ ಘರ್ಜಿಸುತ್ತ ಅವನ ಕೆನ್ನೆಗೆರಡು ಬಿಗಿದು ಕಿವಿ ಹಿಡಿದು ಹೊರ ಬಾಗಿಲಿಗೆ ಎಳೆದು ತಂದೆ. ಆಗ ಒಂದು ಅನಿರೀಕ್ಷಿತ ಘಟನೆ ನಡೆಯಿತು. ಎಸ್. ಎಸ್. ಎಲ್. ಸಿ. ಓದುತ್ತಿದ್ದ ನನ್ನ ಮಗ ಓಡೋಡುತ್ತಾ ಬಂದು, "ಏನಪ್ಪಾ, ಇವನಿಗೆ ಹೊಡೆದುಬಿಟ್ಯಾ? ಲೆಕ್ಕ ಹೇಳ್ಸಿಕೊಳ್ಳೋದಕ್ಕೋಸ್ಕರ ನಾನೇ ಅವನನ್ನು ಒಳಕ್ಕೆ ಕರಕ್ಕೊಂಡು ಬಂದಿದ್ದೆ!" ಎಂದು ದುಃಖಿಸಿದ.

ನನಗೆ ಏನೂ ಅರ್ಥವಾಗಲಿಲ್ಲ. ಪತ್ರಿಕೆ ಮಾರುವ ಒಬ್ಬ ಯಃಕಃಶ್ಚಿತ್ ಹುಡುಗ ಎಸ್. ಎಸ್. ಎಲ್. ಸಿ. ಕಲಿಯುತ್ತಿರುವ ನನ್ನ ಮಗನಿಗೆ ಲೆಕ್ಕ ಹೇಳಿಕೊಡುವುದೇ? ನನಗೇ ದಿಗ್ಭ್ರಮೆಯಾಗಿತ್ತು. ನನ್ನ ಮಗ ಎಲ್ಲ ವಿಷಯ ತಿಳಿಸಿ, "ಅಪ್ಪಾ, ಆ ಹುಡುಗ ಸುಂದರರಾಜನ್. ನನ್ನ ಜೊತೆ ಎಸ್. ಎಸ್. ಎಲ್. ಸಿ. ಓದುತ್ತಿರುವ ಬಡ ಹುಡುಗ, ಪತ್ರಿಕೆ ಹಂಚಿ ಬರುವ ಹಣದಿಂದ ಓದುತ್ತಿ-

ರುವ ಆತ ನಮ್ಮ ತರಗತಿಯಲ್ಲೇ ಬುದ್ಧಿವಂತ," ಎಂದ.

ನನ್ನ ಕಣ್ಣುಗಳು ತೇವವಾದವು. ಆ ಹುಡುಗನನ್ನು ವಾತ್ಸಲ್ಯದಿಂದ ಅಪ್ಪಿಕೊಂಡು ಮೈದಡವಿದೆ. ನನ್ನ ಗರ್ವ ಆ ಕ್ಷಣದಿಂದ ಅಡಗಿತು. ಎಲ್ಲರೂ ಸರಿಸಮ ಎಂಬುದನ್ನು ಅರಿತುಕೊಂಡೆ.

*

ಇದನ್ನು ಓದಿದವರಲ್ಲಿ ಆ ಹುಡುಗ ಈಗೇನಾಗಿರಬಹುದು ? ಎಂದು ಕುತೂಹಲವಾಗುವುದು ಸಹಜವೆ. ಹೀಗೆ ಕುತೂಹಲಿಗಳಾದವರಲ್ಲಿ 'ಆನಂದ ವಿಕಟನ್' ಪತ್ರಿಕೆಯ ಸಂಪಾದಕರೂ ಒಬ್ಬರು. ಅವರು ಈ ಬಗ್ಗೆ ತನಿಖೆ ನಡೆಸಿದಾಗ ಇದ್ದಕ್ಕಿದ್ದ ಹಾಗೇ ಒಂದು ದಿವಸ ಮಧುರೆಯ ತ್ಯಾಗರಾಜ ಕಾಲೇಜಿನ 'ಪ್ರಾಣಿಶಾಸ್ತ್ರ' ಅಧ್ಯಾಪಕಿ ಶ್ರೀಮತಿ ಗೌರಿ ಎಂಬುವರಿಂದ ಅವರಿಗೆ ಬಂದ ಪತ್ರ ಆಶ್ಚರ್ಯಕರವಾಗಿತ್ತು.

ಅದು ಹೀಗಿತ್ತು: ಆ 'ಪತ್ರಿಕೆಯ ಹುಡುಗ'ನೇ ಇಂದು ಭಾರತದ ಆರು ಶ್ರೇಷ್ಠ ವಿಜ್ಞಾನಿಗಳಲ್ಲಿ ಒಬ್ಬರೂ ನನ್ನ ಪತಿಯೂ ಆದ ಡಾ. ಕೆ. ಸುಂದರರಾಜನ್, ಎಂ. ಎಸ್‌ಸಿ., ಎಫ್. ಎನ್. ಎ., ಎಫ್. ಜಡ್. ಎಸ್., ಎಫ್. ಆರ್. ಇ. ಎಸ್. (ಲಂಡನ್). ಅವರು."

ಡಾ. ಸುಂದರರಾಜನ್



ಪತ್ರಿಕೆ ಮಾರುವ ಹುಡುಗನೊಬ್ಬ ಪ್ರಪಂಚದ ಪ್ರಖ್ಯಾತ ವಿಜ್ಞಾನಿ ಎನಿಸಿದ ವೃತ್ತಾಂತ ನಿಜಕ್ಕೂ ಅತ್ಯದ್ಭುತ.

ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಮಧುರೆಯಲ್ಲಿ ಬೆಳಗಾಗುವುದಕ್ಕಿಂತ ಮೊದಲೆ ಚಿಕ್ಕ ಗುಡಿಸಲೊಂದರಿಂದ ಹೊರಬಿದ್ದು ಕತ್ತಲೆಯಲ್ಲಿಯೇ ಬರಿಗಾಲಿನಿಂದ ನಡೆದು ಎಂಟೂವರೆ ಗಂಟೆಯ ವರೆಗೆ ಪೇಪರು ಮಾರಿ ತಿಂಗಳಿಗೆ ಇಪ್ಪತ್ತೈದು ರೂಪಾಯಿ ವರಮಾನ ತರುತ್ತಿದ್ದ ಹುಡುಗ ಸುಂದರರಾಜನ್. ಹೀಗೆ ಕಷ್ಟಪಟ್ಟು ದುಡಿದಾಗ ಸಿಕ್ಕಿದ ಹಣವನ್ನು ಶಾಲೆಯ ಫೀಸು ಕಟ್ಟಲು ಆ ಹುಡುಗ ಉಪಯೋಗಿಸುತ್ತಿದ್ದ.

ಈಗ ಇಪ್ಪತ್ತೈದು ವರ್ಷಗಳ ನಂತರ, ಕೊಯಮುತ್ತೂರಿನಲ್ಲಿ ಅದೇ ಹುಡಗ ಪ್ರಬುದ್ಧನಾಗಿ ಮದರಾಸು ವಿಶ್ವವಿದ್ಯಾಲಯದ ಕಟ್ಟಡದಲ್ಲಿ ಪ್ರೊಫೆಸರ್‌ನಾಗಿ ಪ್ರಾಣಿಶಾಸ್ತ್ರದಲ್ಲಿ ಸಂಶೋಧನೆಯಲ್ಲಿ ತೊಡಗಿದ್ದಾರೆ. ಅಲ್ಲಿಯೇ ಮೇಜಿನ ಮೇಲಿದ್ದ ಫೈಲಿನಲ್ಲಿ ಇರುವುದು ಭಾರತದ ಆರು ಅತ್ಯುತ್ತಮ ವಿಜ್ಞಾನಿಗಳಲ್ಲಿ ಒಬ್ಬರೆಂದು ಪರಿಗಣಿಸಿ ಅವರನ್ನು ಗೌರವಿಸಿದ ಮಾನಪತ್ರಗಳು, ದೇಶವಿದೇಶಗಳ ಬೇರೆ ಬೇರೆ ಪತ್ರಿಕೆಗಳಲ್ಲಿ ಅವರು ಬರೆದು ಪ್ರಕಟಿಸಿರುವ ಸುಮಾರು ಐವತ್ತಕ್ಕೂ ಮಿಕ್ಕಿದ ಸಂಶೋಧನಾ ಲೇಖನಗಳು, ವಿವಿಧ ದೇಶಗಳ ವಿಜ್ಞಾನಿಗಳು ಪ್ರಶಂಸಿಸಿ ಬರೆದಿರುವ ಅಸಂಖ್ಯಾತ ಪತ್ರಗಳು, ಪ್ರಪಂಚದ ವಿಜ್ಞಾನ ಮಹಾಸಭೆಗೆ ಆಹ್ವಾನಿಸಿ ಬಂದ ಪತ್ರಗಳು ಇತ್ಯಾದಿ.

ಸುಂದರರಾಜನ್ ಹುಟ್ಟಿನಿಂದಲೇ ಬಡವರು. ಅವರ ತಂದೆ ಕೆ. ಗೋವಿಂದ ರಾಜುಲು ಅವರು ಬಟ್ಟೆ ಗಿರಣಿಯೊಂದರ ನಿವೃತ್ತ ನೌಕರರು. ತಾಯಿ ಶ್ರೀಮತಿ ಕೆ. ವೆಂಕಟಮ್ಮಾಳ್. ಬಟ್ಟೆ ಗಿರಣಿಯ ಸಾಮಾನ್ಯ ಕೂಲಿಯಾಗಿದ್ದ ಸುಂದರರಾಜನ್ ಅವರ ತಂದೆಯನ್ನು ಯಾರೂ ಮಾನವೀಯತೆಯ ದೃಷ್ಟಿಯಿಂದ ಕಾಣುತ್ತಿರಲಿಲ್ಲ, ಕಷ್ಟದಲ್ಲಿದ್ದಾಗ ಒಂದು ಕಾಸನ್ನೂ ನೀಡುತ್ತಿರಲಿಲ್ಲ.

ಈ ವಿಷಯ ಸೂಕ್ಷ್ಮಸಂವೇದಿಯಾಗಿದ್ದ ಸುಂದರರಾಜನ್‌ನ ಎಳೆಯ ಹೃದಯವನ್ನು ಚುಚ್ಚಿತ್ತು. ಪರಿಣಾಮವಾಗಿ 'ಹೇಗಾದರೂ ಓದಿ ದೊಡ್ಡ ಉದ್ಯೋಗಸ್ಥನಾಗಬೇಕು' ಎಂಬ ಮಹತ್ವಾಕಾಂಕ್ಷೆ ಬೆಳೆಯಿತು. ಆದರೆ ಆ ಕಾಲದಲ್ಲಿ ಶಿಕ್ಷಣ ಉಚಿತವಾಗಿರಲಿಲ್ಲ. ಹಣವಂತರು ಮಾತ್ರ ಒಳ್ಳೆ ಶಿಕ್ಷಣ ಪಡೆಯುವುದು ಸಾಧ್ಯವಿತ್ತು. ಹೇಗಾದರೂ ಮಾಡಿ ಓದಿ ಮುಂದೆ ಬರಲೇದೇಕು ಎಂದು ಸುಂದರರಾಜ್ ನಿರ್ಧರಿಸಿದ.

ಮನಸ್ಸಿದ್ದಲ್ಲಿ ಮಾರ್ಗವಿದ್ದೇಯಿದೆ. ಬೀದಿ ಬೀದಿ ತಿರುಗಾಡಿ ಬಲೂನುಗಳನ್ನು ಮಾರಿ ಹಣ ಗಳಿಸಲಾರಂಭಿಸಿದ. ಬೆಳಿಗ್ಗೆ-ಸಂಜೆ ಅದೇ ಕೆಲಸ ಮಾಡಿದರೆ ದಿನಕ್ಕೆ ಎಂಟು ಆಣೆ, ಅಂದರೆ ತಿಂಗಳಿಗೆ ಹದಿನೈದು ರೂಪಾಯಿ ಸಿಗುತ್ತಿತ್ತು. ಇದು ಶಾಲೆಯ ಫೀಸು ಕಟ್ಟಲು ಸಾಕಾಗುತ್ತಿತ್ತು. ಆದರೆ ಈ ವೃತ್ತಿ ಕೈಗೊಂಡ ಕೆಲವೇ ಸಮಯದಲ್ಲಿ ಈ ವೃತ್ತಿಯನ್ನು ಮುಂದುವರಿಸಿದರೆ ಬಾಲಕನ ಎದೆಗೆ ತುಂಬಾ ಅಪಾಯ ಎಂದು ವೈದ್ಯರಿಂದ ಎಚ್ಚರಿಕೆ ಬಂದಿದ್ದರಿಂದ ಈ ವೃತ್ತಿಗೆ ಸುಂದರರಾಜನ್ ಕೂಡಲೇ 'ಮಂಗಳ' ಹಾಡಬೇಕಾಯಿತು. ಬಲೂನ್ ಮಾರಾಟದ ಹುಡುಗ ನಂತರ ಪೇಪರ್ ಮಾರುವ ಹುಡುಗನಾದ. ಬೆಳಿಗ್ಗೆ ಎರಡರಿಂದ ಎಂಟೂವರೆಯ ವರೆಗೆ 'ತಮಿಳುನಾಡು' ಮಾರಾಟಮಾಡುವ ಹುಡುಗ ಎಂಟೂವರೆಯ ನಂತರ ಮಮತೆಯ ತಾಯಿಯ ಮುಂದೆ ತಪ್ಪದೆ ಹಾಜರ್ ಆಗುತ್ತಿದ್ದ. ಮುದ್ದು ಮಗನ ತಲೆಯ ಮೇಲೆ ಕೈಯಾಡಿಸಿ, ತಾಯಿ ಮಗನಿಗೆ ನಾಲ್ಕು ಒಳ್ಳೆಯ ಮಾತುಗಳನ್ನಾಡಿದಾಗ ಸುಂದರರಾಜನ್‌ನಿದೆ ನಡೆದ ನೋವೆಲ್ಲ ಮಾಯ. ಬಳಿಕ ಒಂಬತ್ತೂವರೆ ಗಂಟೆಗೆ ಪ್ರಾರಂಭವಾಗುವ ಹೈಸ್ಕೂಲಿನತ್ತ ಓಟ. ಎಸ್. ಎಸ್. ಎಲ್. ಸಿ. ಪರೀಕ್ಷೆ ಹತ್ತಿರ ಬಂದಾಗ ಈ 'ಪೇಪರ್ ಹುಡುಗ'ನಿಗೆ ಮತ್ತೊಂದು ಪರೀಕ್ಷೆ ಕಾದಿತ್ತು. ಪರೀಕ್ಷೆಯ ಫೀ ಕಟ್ಟಲು ಹದಿನೈದು ರೂಪಾಯಿ ಎಲ್ಲೂ ಸಿಗಲಿಲ್ಲ.

ಎಷ್ಟು ಕಷ್ಟಪಟ್ಟರೂ ಹಣ ದೊರಕದಾಗ ಪೇಪರು ಮಾಡುವ ಕೆಲಸ ಕೊಡಿಸಿದ ಪ್ರೊಫೆಸರ್ ರತ್ನಸ್ವಾಮಿ ಎನ್ನುವವರನ್ನು ನೋಡಿ ಅವರ ಕಾಲಿಗೆ ಬಿದ್ದುದಾಯಿತು. ಅವರು ಈ 'ಹುಡುಗ' ಹಂಚುತ್ತಿದ್ದ 'ತಮಿಳುನಾಡು' ಪತ್ರಿಕೆಯ ಮುಖ್ಯಸ್ಥರಾದ ಶ್ರೀ ಮಾಣಿಕ್ಯವಾಸಗಂ ಚೆಟ್ಟಿಯಾರ್ ಅವರ ಬಳಿ ಕೊಂಡೊಯ್ದು ವಿಷಯ ತಿಳಿಸಿದಾಗ ಅವರು, "ನನ್ನ ಪತ್ರಿಕೆಯಲ್ಲಿ 'ಪೇಪರ್‌ಬಾಯ್' ಆಗಿ ಕೆಲಸ ಮಾಡುತ್ತಿರುವ ಹುಡುಗ ಎಸ್. ಎಸ್. ಎಲ್. ಸಿ. ಓದುತ್ತಿರುವುದು ಹೆಮ್ಮೆಯ ವಿಷಯ. ನಿನಗೆ ಈಗ ಮಾತ್ರವಲ್ಲ, ಕಾಲೇಜು ಓದುವುದಕ್ಕೂ ವ್ಯವಸ್ಥೆ ಮಾಡುತ್ತೇನೆ," ಎಂದು ಅಭಯವಿತ್ತರು. ಅವರು ಆಗ ತ್ಯಾಗರಾಜ ಕಾಲೇಜಿನ ಕರೆಸ್ಪಾಂಡೆಂಟ್ ಆಗಿದ್ದರು. ತ್ಯಾಗರಾಜ ಕಾಲೇಜಿನಲ್ಲಿ ಸುಂದರರಾಜನ್ ಪ್ರಾಣಿಶಾಸ್ತ್ರವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡಿದ್ದನು. ಆದರೆ ಆ ಕಾಲೇಜಿನಲ್ಲಿ ಪದವಿ ತರಗತಿಗಳಲ್ಲಿ ಈ ವಿಷಯ ಕಲಿಸುತ್ತಿರಲಿಲ್ಲವಾದ್ದರಿಂದ, ವಿದ್ಯಾಭ್ಯಾಸ ಅಲ್ಲಿಗೇ ನಿಂತು ಹೋಗುವ ಪ್ರಸಂಗ ಬಂತು. ಆದರೆ ತ್ಯಾಗರಾಜ ಕಾಲೇಜಿನಲ್ಲಿ ನಡೆದ ಒಂದು ಪ್ರಬಂಧ ಸ್ಪರ್ಧೆಗೆ



ಆಸೆಯೇ ದುಃಖಕ್ಕೆ ಮೂಲ ಕಾರಣ

ತೀರ್ಪುಗಾರರಾಗಿ ಬಂದ ಅಮೇರಿಕನ್ ಪ್ರೊಫೆಸರ್ ಅಬ್ರಹಾಂ ಎನ್ನುವವರು ಇವರ ಪ್ರಬಂಧವನ್ನೂ, ಬುದ್ಧಿವಂತಿಕೆಯನ್ನೂ ಮೆಚ್ಚಿಕೊಂಡು ಬಹುಮಾನ ನೀಡಿದ್ದಲ್ಲದೇ ಅಮೇರಿಕದ ಕಾಲೇಜೊಂದರಲ್ಲಿ ಪ್ರಾಣಿಶಾಸ್ತ್ರ ಓದಲು ವಿದ್ಯಾರ್ಥಿವೇತನವನ್ನೂ ದೊರಕಿಸಿಕೊಟ್ಟರು.

೧೯೫೭ರಲ್ಲಿ ಸುಂದರರಾಜನ್ ಪದವೀಧರರಾದರು. ೧೯೫೮ರ ವರೆಗೆ ಅಮೇರಿಕದಲ್ಲಿಯೇ ಡೆಮಾನ್‌ಸ್ಟ್ರೇಟರ್ ಆಗಿ ಹಣ ಸಂಪಾದಿಸತೊಡಗಿದರು.

ಈ ಪದವೀಧರನಿಗೆ ಮುಂದೆ ಎಂ.ಎಸ್ ಸಿ. ಓದುವ ಆಸೆ. ಅಷ್ಟರಲ್ಲಿ ತ್ಯಾಗರಾಜಾ ಕಾಲೇಜಿನಲ್ಲಿ ಪ್ರಾಣಿಶಾಸ್ತ್ರದಲ್ಲಿ ಎಂ. ಎಸ್ ಸಿ. ಯೂ ಪ್ರಾರಂಭವಾಗಿತ್ತು. ಎಂ. ಎಸ್ ಸಿ. ತ್ಯಾಗರಾಜ ಕಾಲೇಜಿನಲ್ಲಿಯೇ ಓದಿದ ಇವರು ಆಗ ಬಿಡುವಿನ ವೇಳೆಯಲ್ಲಿ ಟ್ಯುಟೋರಿಯಲ್ ಕಾಲೇಜೊಂದರ ಇನ್ಸ್‌ಟ್ರಕ್ಟರ್ ಆಗಿ ಕೆಲಸ ಮಾಡಿದರು. ಎಂ. ಎಸ್ ಸಿ.ಯಲ್ಲಿ ಪ್ರಥಮ ಶ್ರೇಣಿ ಇವರಿಗೆ ಬಂತು.

ಎಂ. ಎಸ್ ಸಿ. ಮುಗಿಸಿದ ನಂತರ ಒಂದು ದಿನ ಸಂಶೋಧನೆಗಾಗಿ ಪ್ರಯೋಗಮಾಡುತ್ತಿದ್ದಾಗ ಸುಂದರರಾಜನ್ ಅವರ ಜೀವನದಲ್ಲಿ ಒಂದು ಮಹತ್ವದ ಘಟನೆ ನಡೆಯಿತು. ಈ ಘಟನೆಯನ್ನು ವಿವರಿಸುತ್ತಾ ಇವರು ಹೀಗೆ ಬರೆಯುತ್ತಾರೆ: "ದ್ರಾವಕದ ಸೀಸೆಯೊಂದು ಒಡೆದು ನನ್ನ ಕಣ್ಣುಗಳಿಗೆ ಆ ದ್ರಾವಕದ ಕೆಲ ಹನಿಗಳು ಸಿಡಿದದ್ದರಿಂದ ಕಣ್ಣುಗಳಿಗೆ ಅಪಾಯ ತಟ್ಟಿತು. ಪ್ರಪಂಚವೆಲ್ಲ ಕತ್ತಲೆ, ಬರೀ ಕತ್ತಲೆ. ಕಣ್ಣು ಇಲ್ಲದ ಕಷ್ಟವನ್ನು ಇದ್ದ ಕಣ್ಣನ್ನು ಕಳೆದುಕೊಂಡವರೇ ಅರಿಯಲು ಸಾಧ್ಯ.

"ಹಾಸಿಗೆಯಲ್ಲಿ ನಾನು ಮಲಗಿದಾಗ ನನ್ನನ್ನು ಪರೀಕ್ಷಿಸಿದ ಡಾಕ್ಟರುಗಳೆಲ್ಲ, 'ಪ್ರಾಣಕ್ಕೇನೂ ಅಪಾಯವಿಲ್ಲ. ಆದರೆ ಕಣ್ಣುಗಳು ಮಾತ್ರಾ...ಎಂದು ಸಂದೇಹದಿಂದ ಮಾತನಾಡುತ್ತಿದ್ದರು. ನಾನು ತುಂಬಾ ನಂಬಿದ್ದ ವೈದ್ಯರ ಕೈ ಹಿಡಿದು ತುಂಬ ಅತ್ತೆ. ಕೊನೆಯ ಪ್ರಯತ್ನವಾಗಿ ಪರಮಾತ್ಮನಲ್ಲಿ ಮೊರೆಯಿಟ್ಟೆ. ನನ್ನ ಕಣ್ಣುಗಳು ಬಂದರೆ ನನ್ನ ಕಣ್ಣುಗಳಿಂದ ಲೋಕೋಪಕಾರಕ್ಕಾಗಿ ಏನೇನು ಮಾಡಲು ಸಾಧ್ಯವೋ ಅವೆಲ್ಲವನ್ನೂ ಮಾಡುವುದಾಗಿ ಪಣ ತೊಟ್ಟೆ. ದೇವರು ನನ್ನನ್ನು ಕಾಪಾಡಿದ. ನಾನು ಪುನಃ ಕಣ್ಣು ಪಡೆದುಕೊಂಡೆ.

"ನಾನು ಬೆಳೆಯಬೇಕು ಎಂಬುದನ್ನು ಧ್ಯೇಯವಾಗಿಟ್ಟುಕೊಂಡಿದ್ದ ನಾನು ಈ ಘಟನೆಯ ನಂತರ 'ನಾನು ಜಗತ್ತಿಗೆ ಏನಾದರೂ ಒಳ್ಳೆಯದನ್ನು ಮಾಡಬೇಕು' ಎಂದು ಸಂಕಲ್ಪ ಮಾಡಿಕೊಂಡೆ. ಅಂದು ನನ್ನ ಒಳಗಣ್ಣುಗಳು ಬೆಳಕು ಕಂಡದ್ದರ ಫಲವೇ ಇಂದು ನಾನೊಬ್ಬ ವಿಜ್ಞಾನಿ."

ಈ ವರೆಗೆ ನಲ್ವತ್ತೊಂದು ವಸಂತಗಳನ್ನು ಕಂಡ ಡಾ। ಸುಂದರರಾಜನ್‌ರ ಜನ್ಮ ತಾರೀಖು ೧೫-೨-೧೯೩೬ ಈ ಅವಧಿಯಲ್ಲಿ ಅವರು ಸಾಧಿಸಿದ್ದು ಎತ್ತರವನ್ನೂ ದಂಗು ಬಡಿಸುವಂತಹದು.

ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಮೇಂಡನ್ ಎಂಬಾಕೆ ಒಮ್ಮೆ ಕೆಲವು ಕ್ರಿಮಿಗಳ ಬಗ್ಗೆ ಸಂಶೋಧನೆ ನಡೆಸಿ ಆ ಜಾತಿಯ ಕ್ರಿಮಿ ನಾಲ್ಕು ಲಕ್ಷ ವರ್ಷಗಳಿಂತ ಮೊದಲು ಪ್ರಪಂಚದಲ್ಲಿದ್ದು ಜನಿಸಿದ ಪ್ರಥಮ ಕ್ರಿಮಿಯಾಗಿರಬೇಕು ಎಂಬ ವಾದವನ್ನು ಮುಂದಿರಿಸಿದ್ದಳು. ಆದರೆ ಇದನ್ನು ಆ ವರೆಗೆ ಯಾರೂ ಸಪ್ರಮಾಣವಾಗಿ ಸಿದ್ಧಪಡಿಸಲಿಲ್ಲವಾದ್ದರಿಂದ ವಿದ್ವತ್ಪ್ರಲಯಗಳಲ್ಲಿ ಇದು ಬರೀ ಊಹಾತ್ಮಕವಾದದ್ದು ಎಂಬ ಆಕ್ಷೇಪಣೆ ಕೇಳಿ ಬಂತು.

ಆದರೆ, ಈ ಆಕ್ಷೇಪಣೆಗಳನ್ನು ನಿರಾಕರಿಸಿ ಆ ಕ್ರಿಮಿಗಳನ್ನು ಕಂಡುಹಿಡಿದು ಆಕೆಯ ವಾದ ಸರಿ ಎಂಬುದನ್ನು ತೋರಿಸಿಕೊಟ್ಟವರು ಡಾ. ಸುಂದರರಾಜನ್. ತಾವು ಕಂಡು ಹಿಡಿದ ಕ್ರಿಮಿಯ ಸಂಶೋಧನೆಗೆ ನೆರವಾದ ತಮ್ಮ ಗುರು ಡಾ. ಕೃಷ್ಣನ್ ಅವರ ಹೆಸರನ್ನೇ ಅಂಟಿಸಿ, "ಪೊಲಿಕಸ್ನೆಲ್ಲ ಕೃಷ್ಣಾನಿ"

ಮೊದಲು ನಾಮಕರಣ ಮಾಡಿದರು. ೧೯೬೩ ರಲ್ಲಿ ಇವರು ಸಂಶೋಧಿಸಿದ್ದು ಈ ಕ್ರಿಮಿಯ ಜೀವ-ರಾಸಾಯನಿಕ ವಿಶ್ಲೇಷಣೆಯ ಪ್ರಕಾರ ಕ್ರಿಮಿವರ್ಗ ಲಕ್ಷಾಂತರ ವರ್ಷಗಳ ಅವಧಿಯಲ್ಲಿ ಈ ಜಾತಿಯ ಕ್ರಿಮಿಗಳಿಂದ ವಿಕಾಸಗೊಂಡವೆಂದು ಸಾಧಿಸುವ ಸುಮಾರು ಐವತ್ತಕ್ಕಿಂತಲೂ ಹೆಚ್ಚಿನ ಸಂಶೋಧನಾ ಲೇಖನಗಳು ಇವರಿಗೆ ಒಬ್ಬ ವಿಜ್ಞಾನಿಗೆ ಸಿಗಬಹುದಾದ ಅತ್ಯುನ್ನತ ಗೌರವವಾದ ಡಾಕ್ಟರ್ ಆಫ್ ಸೈನ್ಸನ್ನು ತಂದು ಕೊಟ್ಟವು. ಇವರ ಇಂಥಹ ಎಷ್ಟೋ ಸಂಶೋಧನಾತ್ಮಕ ಲೇಖನಗಳು ದೇಶ ವಿದೇಶಗಳ ವಿವಿಧ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ.

ತಾವು ಬರೆದ ಒಂದು ವೈಜ್ಞಾನಿಕ ಪುಸ್ತಕ ಸಂಗ್ರಹಕ್ಕೆ ವಿದೇಶೀ ಪ್ರಕಾಶನ ಸಂಸ್ಥೆಯೊಂದು ಪ್ರಕಟಣಾಪೂರ್ವದಲ್ಲಿಯೇ ಹದಿನೈದು ಸಾವಿರ ರೂಪಾಯಿಗಳನ್ನು ಮುಂಗಡವಾಗಿ ಕೊಟ್ಟಿದ್ದನ್ನು ಉಲ್ಲೇಖಿಸುತ್ತಾ ಇವರು, "ಒಂದು ಕಾಲದಲ್ಲಿ ನಾನು ಹದಿನೈದು ರೂಪಾಯಿಗಳಿಗಾಗಿ ಬೀದಿ ಬೀದಿ ಅಲೆದಾಡಬೇಕಿತ್ತು. ಅದೇ ಇಂದು, ಹದಿನೈದು ಸಾವಿರ ರೂಪಾಯಿ ನನ್ನನ್ನು ಹುಡುಕಿಕೊಂಡು ಬಂದಿದೆ," ಎಂದು ಅಭಿಮಾನದಿಂದ ಹೇಳುತ್ತಾರೆ.

ಪ್ರೀತಿಸಿ ಮದುವೆಯಾದ ಹೆಂಡತಿ ಗೌರಿ ಕೊಯಮುತ್ತೂರಿನ ಮೆಡಿಕಲ್ ಕಾಲೇಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದಾರೆ. ಒಬ್ಬಳು ಮಗಳು (ಶಿವಕುಮಾರಿ-೮ ವರ್ಷ) ಮತ್ತು ಒಬ್ಬ ಮಗ (ಶಂಕರ-೬ ವರ್ಷ) ಇರುವ ಇವರ ಕುಟುಂಬ ಚಿಕ್ಕದೂ ಹೌದು, ಚೊಕ್ಕವೂ ಹೌದು.

ದೇವರ ಹೆಸರನ್ನು ಆಗಾಗ ಜಪಿಸುತ್ತಿರುವ ಈ ಮಹಾವಿಜ್ಞಾನಿಗೆ ತನಗೆ ದೇವರು ಕೊಟ್ಟ "ವರಪ್ರಸಾದ"ವೊಂದನ್ನು ಸಂದರ್ಶಕರಿಗೆ ತೋರಿಸಲು ತುಂಬ ಖುಷಿ. ಅದೇನು ಗೊತ್ತೇ? ೧೯೫೧ ರಲ್ಲಿ 'ತಮಿಳ್ನಾಡು' ಪತ್ರಿಕೆ ಇವರನ್ನು 'ಪೇಪರ್ ಬಾಯ್' ಆಗಿ ನೇಮಿಸಿ ಕೊಟ್ಟ ಅಪಾಯಿಂಟ್‌ಮೆಂಟ್ ಆರ್ಡರ್! ★



ಯಾವುದೂ ಅಸಾಧ್ಯವಲ್ಲ

ಆಧುನಿಕ ಪ್ರಪಂಚದಲ್ಲಿ ದೃಢ ನಿರ್ಧಾರವೊಂದಿದ್ದರೆ ಸಾಕು, ಯಾವುದೂ ಅಸಾಧ್ಯವಲ್ಲ. ಆದರೆ ಹೆಂಡ, ಹೆಣ್ಣು, ಸಿಗರೇಟುಗಳಿಂದ ದೂರವಿರಲು ಆತ್ಮಬಲವೂ ಬೇಕು; ಇಲ್ಲದಿದ್ದರೆ ಜೀವನ ಜಟಿಲವಾಗಿ ದುಃಖಪೂರಿತವಾಗುತ್ತದೆ ಎನ್ನುತ್ತಾನೆ ೨೭ ವರ್ಷದ ವಿಶ್ವಪರ್ಯಟಕ ಸೈಕಲ್ ಸವಾರ ಬ್ರಜಪಾಲಸಿಂಗ. ಭಾರತದ ಮುಜಫ್ಫರ ನಗರದ ಈತ ಪ್ರಪಂಚದ ಮೂರು ಖಂಡಗಳನ್ನು ಸುತ್ತಿದ್ದು ಇನ್ನೂ ಎರಡು ಖಂಡಗಳಿಗೆ ಪ್ರದಕ್ಷಿಣೆ ಹಾಕಿ ಭಾರತಕ್ಕೆ ಹಿಂದಿರುಗಿ ಖಂಡಕ್ಕೊಂದೊಂದರಂತೆ ಐದು ಗ್ರಂಥಗಳನ್ನು ರಚಿಸಲಿದ್ದಾನೆ. ಏಶಿಯಾ, ಯುರೋಪ್ ಆಫ್ರಿಕಾ ಖಂಡಗಳನ್ನು ಸಂಚರಿಸಿದ ನಂತರ ಸದ್ಯ ಈತ ಕೊರಿಯಾದಲ್ಲಿದ್ದಾನೆ.

ಮ್ಯಾಜಿಸ್ಟ್ರೇಟರು ಕಣ್ಣೀರಿಟ್ಟರು

ಕೇಶವಚಂದ್ರ ಗುಪ್ತ

ಸ್ವದೇಶೀ ಆಂದೋಲನದ ಆ ದಿನಗಳನ್ನು ನೆನೆಸಿದರೆ. ಇನ್ನೂ ಮೈನವಿರೇಳುತ್ತದೆ. ಭಾರತೀಯರೇ ಆಗಿದ್ದ ಪೋಲೀಸರು ಒಬ್ಬರ ಹಿಂದೊಬ್ಬರಂತೆ ನೂರಾರು ದೇಶ-ಸೇವಕರನ್ನು ನಿತ್ಯವೂ ಬಂಧಿಸುತ್ತಿದ್ದರು. ಬಂಧಿತರನ್ನೆಲ್ಲ ಸ್ವಾಭಾವಿಕವಾಗಿಯೆ ವಿಚಾರಣೆಗಾಗಿ ಮ್ಯಾಜಿಸ್ಟ್ರೇಟರೆದುರು ನಿಲ್ಲಿಸಲಾಗುತ್ತಿತ್ತು. ಮ್ಯಾಜಿಸ್ಟ್ರೇಟರಲ್ಲಿ ಅನೇಕರು ಸುಸಂಸ್ಕೃತ ಭಾರತೀಯರೇ ಆಗಿರುತ್ತಿದ್ದರು. ಕಾಯುದೇಭಂಗ ಮಾಡಿದವರನ್ನು ಶಿಕ್ಷಿಸುವದು ಅವರ ಧರ್ಮವೇ ಆಗಿತ್ತು. ಆದರೆ ಅದರಿಂದ ಅವರಿಗೆ ತೃಪ್ತಿ ಸಿಗುತ್ತಿತ್ತೆಂದು ಮಾತ್ರ ಹೇಳಲಿಕ್ಕಾರದು. ಮನಸ್ಸಿಲ್ಲದ ಮನಸ್ಸಿನಿಂದ ಅವರು ತಮ್ಮ ಕರ್ತವ್ಯವನ್ನು ನೆರವೇರಿಸಬೇಕಾಗುತ್ತಿತ್ತು. ಆ ಕಾಲದಲ್ಲಿ ಅವರ ಬಡತಿಗಳು ಸಹ ಅವರು ಎಷ್ಟು ಹೆಚ್ಚು ಜನ ದೇಶಸೇವಕರಿಗೆ ಶಿಕ್ಷೆವಿಧಿಸಿದರೆನ್ನುವುದನ್ನು ಅವಲಂಬಿಸಿ ದೊರೆಯುತ್ತಿದ್ದುವು.

ನ್ಯಾಯಾಧೀಶರು ತಮ್ಮ ನಿರ್ಣಯ ಹೇಳುವಾಗ ತಮ್ಮೆದುರು ವಾದಿಸಿದ ಪಕ್ಷ ಪ್ರತಿಪಕ್ಷಗಳೆರಡರ ವಾದಗಳನ್ನು ಪರಿಶೀಲಿಸಿ ನಿರ್ಣಯಕ್ಕೆ ಬರುವರೆಂಬುದು ನಿಜವಾದರೂ ಅನೇಕ ಸಲ ವಕೀಲರು ಅವರ ಮುಖಚರ್ಯೆಯನ್ನು ನೋಡಿಯೇ ಅವರ ಮನಸ್ಸನ್ನು ಅರಿಯಬಲ್ಲರು.

ಒಮ್ಮೆ ಒಬ್ಬ ಮ್ಯಾಜಿಸ್ಟ್ರೇಟರು ಕಾಯುದೇಭಂಗದ ಆರೋಪಕ್ಕಾಗಿ ಕೆಲವು ಮಹಿಳೆಯರ ಒಂದು ಗುಂಪಿಗೆ ಶಿಕ್ಷೆ ವಿಧಿಸಿದ ನಂತರ ಹೊರಗೆ ಬಂದ ವಕೀಲರೊಬ್ಬರು, "ಹೆಣ್ಣು ಯಾರೆಂಬುದು ನನಗಂತೂ ತಿಳಿಯಲಿಲ್ಲ. ನಿಜವಾಗಿ ಶಿಕ್ಷಿಸಿದ ಮ್ಯಾಜಿಸ್ಟ್ರೇಟರು ಹೆಣ್ಣೋ, ಶಿಕ್ಷೆಗೊಳಗಾದ ಮಹಿಳೆಯರು ಹೆಣ್ಣೋ!" ಎಂದು ಉದ್ಗರಿಸಿದರು.

ಅವರು ಈ ರೀತಿ ಆಡುವದಕ್ಕೆ ಕಾರಣವಿಲ್ಲ-ದಿರಲಿಲ್ಲ. ಆ ದಿನ ಈ ಮಹಿಳೆಯರ ಗುಂಪಿನ ವಿಚಾರಣೆ ಆ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿದ್ದಾಗ ನಾನೂ ಅಲ್ಲಿದ್ದೆ. "ಅಪರಾಧಿ ಮಹಿಳೆಯರ ತಂಡವನ್ನು ಕೋರ್ಟಿನಲ್ಲಿ ತಂದಾಗ ಮ್ಯಾಜಿಸ್ಟ್ರೇಟರು ಪದ್ಧತಿಯಂತೆ, "ಆರೋಪವನ್ನೊಪ್ಪಿಕೊಳ್ಳುತ್ತೀರಾ?" ಎಂದು ಕೇಳಿದರು. ಆಗ ಆ ತಂಡದಲ್ಲಿಯ ಕೆಲವರು ಹಾಗೆ ಮಾಡಲು ನಿರಾಕರಿಸಿದರೆ, ಇನ್ನು ಹಲವರು ಸುಮ್ಮನೆ ಮುಗುಳ್ನಗೆ ನಕ್ಕುಬಿಟ್ಟರು. ನಂತರ ಎಲ್ಲರೂ ಎದೆ ಸೆಟೆಸಿ ನಿಂತು "ವಂದೇ ಮಾತರಂ" ಎಂದು ಒಕ್ಕೊರಲಿನಿಂದ ಕೂಗಿದರು. ಆ ಸ್ಫೂರ್ತಿದಾಯಕ ಶಬ್ದಗಳಿಂದ ನ್ಯಾಯಸ್ಥಾನವೊಮ್ಮೆ ಪ್ರತಿಧ್ವನಿಸಿತು. ಮ್ಯಾಜಿಸ್ಟ್ರೇಟರು ಕೂಡಲೇ ತಲೆ ತಗ್ಗಿಸಿದರು. ಅವರ ಎರಡೂ ಕಣ್ಣುಗಳಿಂದ ಅಶ್ರುಧಾರೆಯುಟ್ಟಿತು.

ಆ ವಕೀಲರ ಉದ್ಗಾರಕ್ಕೆ ಈ ಘಟನೆಯೇ ಕಾರಣವಾಗಿತ್ತು. ಆದರೆ ನಮ್ಮಲ್ಲಿ ಬಹು ಜನರಿಗೆ ಮ್ಯಾಜಿಸ್ಟ್ರೇಟರ ವರ್ತನೆಯಲ್ಲಿ ಕೃತ್ರಿಮವಾದದ್ದೇನೂ ಕಾಣಲಿಲ್ಲ. ಅವರು ಅಸಹಾಯ

ರಾಗಿದ್ದರಷ್ಟೇ.

ತುಸು ಸಮಯದ ನಂತರ ಆ ಮ್ಯಾಜಿಸ್ಟ್ರೇಟರು ನಮ್ಮಲ್ಲಿ ಕೆಲವರನ್ನು ತಮ್ಮ ಚೇಂಬರಿಗೆ ಕರೆಸಿ ಈ ಪ್ರಕರಣದ ಬಗ್ಗೆ ಮಾತನಾಡಿದರು. ನಮ್ಮ ಸೋದರಿಯರೂ ಈ ಕ್ಷೇತ್ರದಲ್ಲಿ ಇಳಿದಿರುವುದಕ್ಕಾಗಿ ವಿಷಾದ ವ್ಯಕ್ತಪಡಿಸಿದರು. ಆಗ ನಾವು ಕಾರ್ಯಾಂಗದ ಹಾಗೂ ಪೋಲೀಸರ ಮೇಲೆಯೇ ದೋಷವನ್ನು ಹೊರಿಸಿ ಅವರು ದೇಶಪ್ರೇಮಿಗಳನ್ನು ಬಂಧಿಸುವುದಕ್ಕಿಂತ ನಗರದಲ್ಲಿಯ ಕಳ್ಳಕಾಕರು, ಮೋಸಗಾರರು ಮುಂತಾದವರನ್ನು ಶೋಧಿಸಿ ಬಂಧಿಸುವತ್ತ ಹೆಚ್ಚು ಲಕ್ಷ್ಯ ಹಾಕುವದೊಳಿತೆಂದು ಸೂಚಿಸಿದೆವು.

ಕೊನೆಗೆ ನಮ್ಮಲ್ಲಿಯೇ ಒಬ್ಬರು ಮ್ಯಾಜಿಸ್ಟ್ರೇಟರು ಆಂದೋಲನಕಾರರಿಗೆ ಸಹಾನುಭೂತಿ ಪರರಾಗಿದ್ದುದು ಗೊತ್ತಾದರೆ ಸರಕಾರ ತೊಂದರೆ ಕೊಡಬಹುದೆಂದೂ ಪೋಲೀಸ್ ಗುಪ್ತಚಾರರು ಸದಾಕಾಲ ಎಲ್ಲರ ಮೇಲೆ -ಮ್ಯಾಜಿಸ್ಟ್ರೇಟರ ಮೇಲೆ ಕೂಡ-ಕಣ್ಣಿಟ್ಟಿರುತ್ತಾರೆಂದು ನುಡಿದರು.

"ದೇವರು ಈ ಗುಪ್ತಚಾರರಿಗೆ ಅಂಥ ಬುದ್ಧಿ ಕೊಡಲೆಂದು ನಾನು ಪ್ರಾರ್ಥಿಸುತ್ತೇನೆ. ಅದರಿಂದಾಗಿಯಾದರೂ ದೇಶಭಕ್ತ ಮಹಿಳೆಯರನ್ನು ಸೆರೆಮನೆಗೆ ಕಳಿಸಬೇಕಾದ ಪ್ರಸಂಗ ಬರದಂತಹ ಊರಿಗೆ ನನ್ನನ್ನು ವರ್ಗ ಮಾಡಿದರೆ ಸಾಕು," ಎಂಬ ಮ್ಯಾಜಿಸ್ಟ್ರೇಟರ



ಉದ್ಗಾರ ಕೇಳಿ ನಾವೆಲ್ಲ ಮೂಕ ಸಹಾನುಭೂತಿ ವ್ಯಕ್ತಪಡಿಸಿದೆವು.

ಇಲ್ಲಿದೆ ಪುಕ್ಕಟೆ ಸಲಹೆ!

ವಕೀಲನೊಬ್ಬ ಪುಕ್ಕಟೆ ಸಲಹೆ ನೀಡುವನೆಂದು ನಂಬುವುದು ಸ್ವತಃ ವಕೀಲನಾದ ನಾನಂತೂ ನಂಬುವುದು ಕಷ್ಟ. ಆದರೆ ತನ್ನ ಪಕ್ಷಕಾರನೊಂದಿಗೆ ಚೇಷ್ಟೆ ಮಾಡುವ ಹಕ್ಕು ಆವನಿಗಿದೆಯೆಂದು ಮಾತ್ರ ನಾನು ನಂಬುತ್ತೇನೆ.

ಗಂಡ ಹೆಂಡರ ಜಗಳದ ಪ್ರಕರಣವೊಂದರಲ್ಲಿ ನಾನು ಗಂಡನ ಪರ ವಕೀಲನಾಗಿದ್ದೆ. ಶ್ರೀಮತಿ ದತ್ತ ತನ್ನ ಗಂಡನಿಂದ ತಾನು ತನ್ನ ಮೂರು ವರ್ಷದ ಮಗನೊಂದಿಗೆ ಬೇರೆಯಾಗುವದಾಗಿಯೂ ಅದಕ್ಕಾಗಿ ಅವನಿಂದ ಉಪಜೀವನಾರ್ಥ ಪೋಟಗಿ ಕೊಡಿಸಬೇಕಾಗಿಯೂ ಪ್ರಾರ್ಥಿಸಿದ್ದಳು. ಈ ಪ್ರಕರಣವನ್ನು ಹಾಗೆಯೇ ಮುಂದುವರಿಸುವದಕ್ಕಿಂತ ಗಂಡ-ಹೆಂಡರಿಬ್ಬರಿಗೂ ಬುದ್ಧಿವಾದ ಹೇಳಿ ಒಂದುಗೂಡಿಸಬೇಕೆಂಬ ನ್ಯಾಯಾಧೀಶರ ಸಲಹೆಯನ್ನು ನಾನು ಹಾಗೂ ಅವಳ ವಕೀಲ ಇಬ್ಬರೂ ಒಪ್ಪಿದ್ದೆವಲ್ಲದೆ ಆ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ನಂತರ ಇಬ್ಬರನ್ನೂ ಒಂದುಗೂಡಿಸಲು ವಿಶೇಷ ಕಷ್ಟವೇನೂ ಆಗಲಿಕ್ಕಿಲ್ಲವೆಂಬ ನಿರ್ಧಾರಕ್ಕೆ ಬಂದೆವು.

ಈ ಪ್ರಕರಣಕ್ಕೆ ಕಾರಣವೆಂದರೆ, ಗಂಡನ ಶೀಲದ ಬಗ್ಗೆ ಹೆಂಡತಿಯ ಸಂಶಯ. ಒಂದು ವರುಷ ಹಿಂದೆ ಶ್ರೀಮತಿ ದತ್ತಳು ತನ್ನ ಕಕ್ಕನ ಮಗಳೊಬ್ಬಳಿಗೆ ಮನೆಯಲ್ಲಿ ಆಶ್ರಯವಿತ್ತಿದ್ದಳು. ಆಕೆ ವಿಧವೆ. ಆಗ ತನ್ನ ಗಂಡ ಎಷ್ಟು ವಿರೋಧಿಸಿದರೂ ಅವಳು ತನ್ನ ಹಟವನ್ನೇ ಸಾಧಿಸಿದಳು. ಈಗ ಆ ವಿಧವೆ ಮನೆಯಲ್ಲಿರುವದು ಬೇಡವೆಂದು ಹೆಂಡತಿ ಹೇಳಿದರೆ ಗಂಡ ವಿರೋಧಿಸುತ್ತಿದ್ದಾನೆ!

ನಾನು ಹಾಗೂ ಈ ಪ್ರಕರಣದಲ್ಲಿ ನನ್ನ ವಿರೋಧಿ ವಕೀಲರಾಗಿದ್ದ ಶ್ರೀ ಬ್ಯಾನರ್ಜಿ ಇಬ್ಬರೂ ಬಾರ್ ಲೈಬ್ರರಿಗೆ ತೆರಳಿದೆವು. ನನ್ನ ಪಕ್ಷಕಾರ ನನ್ನ ಹಿಂದಿನಿಂದಲೇ ಬಂದು

ತಾನೇನು ಮಾಡಬೇಕೆಂದು ಕೇಳಿದನು. ಚೇಷ್ಟೆಯಿಂದ ನಾನು, "ಮನೆಗೆ ಹೋಗಿ ನಿನ್ನ ಪೇಟೆಯಲ್ಲಿಯು ಆ ವಿಧವೆಯನ್ನು ಮದುವೆಯಾಗಿಬಿಡು. ಅಂದರೆ ಅನೀತಿಯ ಪ್ರಶ್ನೆಯೇ ಏಳುವದಿಲ್ಲ. ನಿನ್ನ ಸಮಸ್ಯೆ ತಾನಾಗಿಯೇ ಬಗೆ ಹರಿಯುತ್ತದೆ," ಎಂದು ನಗುತ್ತ ಹೇಳಿದೆ.

ಮರುಮಾತಾಡದೆ ಅವನು ಅಲ್ಲಿಂದ ಹೋಗಿ ಬಿಟ್ಟ ನಂತರ, "ಆ ಮನುಷ್ಯ ನಿಮ್ಮ



ಈ ಧರ್ಮಾರ್ಥ ಸಲಹೆಯನ್ನು ಗಂಭೀರವಾಗಿ ಬಗೆದರೆ?" ಎಂದು ಶ್ರೀ ಬ್ಯಾನರ್ಜಿ ನನ್ನನ್ನು ಕೇಳಿದರು. ನಾನು ಇಂತು ಚೇಷ್ಟೆ ಮಾಡಿದ್ದು ಅವರಿಗೆ ಹಿಡಿಸಿರಲಿಲ್ಲ.

"ಶಕ್ಯವಿಲ್ಲ. ಅವನು ಸಂಭಾವಿತನಾದರೂ ಚೇಷ್ಟೆಯನ್ನು ತಿಳಿಯದಂತಹ ಮೂರ್ಖನಲ್ಲ," ಎಂದು ನನ್ನನ್ನು ನಾವೇ ಸಮರ್ಥಿಸಿಕೊಂಡೆ.

ಎರಡು ದಿನಗಳ ನಂತರ ನನ್ನ ಪಕ್ಷಕಾರ ದತ್ತ ಒಂದು ಮುಂಜಾವೆ ನನ್ನ ಮನೆಗೆ ಬಂದ. ಹೊಸ ಬಟ್ಟೆಗಳನ್ನು ಧರಿಸಿದ್ದ. ಅವನ ಮುಖ ಹರುಷವನ್ನು ಹೊರಸೂಸುತ್ತಿತ್ತು. ಅವನ ಕೈಯಲ್ಲಿ ಸಿಹಿ ತಿಂಡಿಗಳಿಂದ ತುಂಬಿದ ಬುಟ್ಟಿಯೊಂದಿತ್ತು.

"ಇದೆಲ್ಲ ಯಾಕೆ ಬಾಬು?" ನಾನು ಕೇಳಿದೆ.

"ವಕೀಲಸಾಹೇಬ, ನೀವು ಮೊನ್ನೆ ಹೇಳಿದ್ದೇ ಸರಿ. ಒಣ ನಿಂದೆಗೆ ಅವಕಾಶವೇ ಬೇಡವೆಂದು ನಾನು ಅವಳನ್ನು ಮದುವೆಯಾಗಿಬಿಟ್ಟೆ."

ನನಗೆ ಸಿಡಿಲೆರಗಿದಂತಾಯಿತು. ಬ್ಯಾನರ್ಜಿಗೆ ಈ ವಾರ್ತೆ ಗೊತ್ತಾದಾಗ ಅವರು ನನ್ನನ್ನೇ ಹಳಿದರು. ಆದರೆ ಚೇಷ್ಟೆಯನ್ನು ಇಷ್ಟೊಂದು ಗಂಭೀರವಾಗಿ ಯಾರಾದರೂ ತಿಳಿಯುತ್ತಾರೆಂದು ನಂಬುವದಾದರೂ ಹೇಗೆ?

ಆಗ ಗಂಡ ಹೆಂಡಿರಲ್ಲಿ ಒಪ್ಪಂದ ಸಾಧಿಸುವ ನಮ್ಮ ಮೊದಲಿನ ಯೋಜನೆ ನಿರುಪಾಯವಾಗಿ ನ್ಯಾಯಾಧೀಶರು ಆಕೆಗೆ ಪೋಟಗಿ ಕೊಡಿಸಿದರು.

ಒಂದು ವರುಷದ ನಂತರ ಆ ಗೃಹಸ್ಥ ನ್ಯಾಯಾಲಯದಲ್ಲಿಯೇ ಮತ್ತೆ ಭೆಟ್ಟಿಯಾಗಿದ್ದ. ಅವನ ಮೊದಲ ಹೆಂಡತಿ ಪೋಟಗಿ ಹೆಚ್ಚಳಕ್ಕಾಗಿ ಖಟ್ಲೆ ಹೂಡಿದ್ದಳು. ಆ ವೇಳೆಗಾಗಲೇ ಅವನಿಗೆ ಎರಡನೆಯ ಹೆಂಡತಿಯಿಂದಲೂ ಒಂದು ಮಗುವಾಗಿತ್ತು. ಅವನ ವ್ಯಾಪಾರವೂ ಅಷ್ಟಕ್ಕಷ್ಟೇ ಇತ್ತು. ಎರಡನೆಯ ಲಗ್ನವಾದ ಬಗ್ಗೆ ಅವನಿಗೆ ಪಶ್ಚಾತ್ತಾಪವಾಗಿತ್ತು. ಅವಕ್ಕೆಲ್ಲ ನಾನೇ ಕಾರಣ ಎಂದು ಅವನ ಮಾತಿನ ಇಂಗಿತ ನನಗರ್ಥವಾಯಿತು.

ತಾವು ಮಾಡಿದ ದುಷ್ಕೃತ್ಯದ ಹೊಣೆಯನ್ನು ಬೇರೆಯವರ ತಲೆಗೆ ಕಟ್ಟಲು ಜನ ಯಾವಾಗಲೂ ಆತುರರಾಗಿರುತ್ತಾರೆಂಬುದು ನಿಜ. ಆದರೆ ಈ ಪ್ರಕರಣದಲ್ಲಿ ಮಾತ್ರ ಈ ಗೃಹಸ್ಥನ ಮನಸ್ಸಿನಲ್ಲಿ ಮೊದಲೇ ಬೇರೂರಿದ ಯೋಚನೆಗೆ ನಾನು ಚೇಷ್ಟೆಯಿಂದ ಆಡಿದ ಮಾತಿನಿಂದ ಪುಷ್ಟಿ ದೊರೆತು ಅನೈತಿಕ ವಿಚಾರವನ್ನು ತನ್ನ ಸಮಾಧಾನಕ್ಕಾಗಿಯೇ ಸಮರ್ಥಿಸಿಕೊಳ್ಳಲು ಸಾಧ್ಯವಾಯಿತಷ್ಟೆ!

(ಕೃಪೆ: ಕರ್ಮವೀರ)

ಮನಸ್ಸಾಮರ್ಥ್ಯದಿಂದಲೇ ರೋಗಸಾಗರ ಮೀರಿನಿಂತ ಸಾಹಿತಿ ಕಲಾವಿದ

ಎಂ. ವಿ. ಸೀತಾರಾಮಯ್ಯ

ವಿ. ವೆಂಕಟರಾವ್

ಹೊಸಗನ್ನಡಸಾಹಿತ್ಯದಲ್ಲಿ ಅಪಾರ ಪ್ರಭುತ್ವ ಸಂಪಾದಿಸಿರುವ ಮತ್ತು ಹೊಸಗನ್ನಡ ಸಾಹಿತ್ಯದ ಬಗ್ಗೆ ಅಧಿಕಾರಯುತವಾಗಿ ಬರೆಯಬಲ್ಲ ಹಿರಿಯ ಲೇಖಕರಲ್ಲಿ ಶ್ರೀ ಎಂ. ವಿ. ಸೀತಾರಾಮಯ್ಯನವರೂ ಒಬ್ಬರು. 'ಮ. ವೆಂ. ಸೀ ರಾಘವ' ಕಾವ್ಯನಾಮದಿಂದ ಸಾಹಿತ್ಯದ ಬಹು ಪ್ರಕಾರಗಳಲ್ಲಿ ಕೃಷಿ ನಡೆಸಿರುವ ಸೀತಾರಾಮಯ್ಯನವರದು ತೆಳುದೇಹ, ಚಿಕ್ಕ ನಿಲುವು ಸದಾ ಒಂದಿಲ್ಲೊಂದು ಕಾಯಿಲೆಗೆ ಪಕ್ಕಾಗಿ ಎಲುಬಿನ ಹಂದರವಾಗಿದ್ದರೂ ಹಾಸಿಗೆ ಹಿಡಿಯದೆ ಲೇಖನ ಅಥವ ಅಧ್ಯಯನದಲ್ಲಿ ನಿರತರಾಗುವ ಎಂ. ವಿ. ಸೀ. ಪಾದರಸದ ಪ್ರವೃತ್ತಿಯವರು; ಕೈಗೊಂಡ ಕೆಲಸವನ್ನು ಸುಸಮರ್ಥವಾಗಿ, ಗೌರವಾಸ್ಪದವಾಗಿ ಮಾಡಬಲ್ಲ ಶಕ್ತಿವಂತರು. ಕೀರ್ತಿಶೇಷ ತೀ. ನಂ. ಶ್ರೀ ಇವರ ಬಗ್ಗೆ ಹೇಳುತ್ತಿದ್ದರು– ಆರೋಗ್ಯ ಏನೇನೂ ಸರಿಯಿರದಿದ್ದರೂ ಈ ಮನುಷ್ಯ ಮಾಡುವ ಕೆಲಸ ನೋಡಿದರೆ ಆಶ್ಚರ್ಯವಾಗುತ್ತಿದೆ— ಎಂದು. ಡಿ. ಎಲ್. ನರಸಿಂಹಾಚಾರ್ಯರು, ಎಂ. ವಿ. ಸೀಯವರನ್ನು ಇರುವೆಗೆ ಹೋಲಿಸುತ್ತಿದ್ದರುತೆ.

ಮಂಚದ ಒಂದು ಭಾಗದಲ್ಲಿ ಒರಗು ದಿಂಬಿಗೆ ಆತುಕೊಂಡು, ಸುತ್ತಲೂ ಇಂಗ್ಲಿಷ್ ಸಂಸ್ಕೃತ, ಕನ್ನಡ ಇತ್ಯಾದಿ ಭಾಷೆಗಳ ಗ್ರಂಥಗಳನ್ನು ಹರಡಿಕೊಂಡು, ಆಗಾಗ್ಗೆ ಮರುಕಳಿಸುವ ರೋಗಕ್ಕೆ ಹತ್ತಿರದಲ್ಲೆ ಮದ್ದಿಟ್ಟುಕೊಂಡು, ತಾಸು ಅಥವಾ ಎರಡು ತಾಸಿಗೊಮ್ಮೆ ಬಿಸಿ ನೀರು ಅಥವಾ ಕಾಫಿಯನ್ನು ಗುಟುಕರಿಸುತ್ತ, ಅಧ್ಯಯನ ಅಥವಾ ಲೇಖನ ವ್ಯವಸಾಯದಲ್ಲಿ ತೊಡಗುವ ಎಂ. ವಿ. ಸೀ. ಹುಟ್ಟುರೋಗಿ. ಅವರೇ ಒಂದು ಕಡೆ ಹೀಗೆ ಹೇಳಿದ್ದಾರೆ— "ನಾನು ಹುಟ್ಟುರೋಗಿ. ಹಾಗೆಂದು ನನ್ನ ತಾಯಿ ತಂದೆ ಹೇಳುತ್ತಿದ್ದರು. ನನಗೆ ಐದು ವರ್ಷ ತುಂಬುವವರೆಗೂ ಯಾವ ಯಾವ ಕಾಯಿಲೆಗಳನ್ನು ಅನುಭವಿಸಿದನೋ, ತಾಯ ಹಾಲಿನೊಂದಿಗೆ ಯಾವ ಯಾವ ಔಷಧಗಳನ್ನು ಸೇವಿಸಿದೆನೋ ತಿಳಿಯದು. ತೊಟ್ಟಿಲಿನಿಂದ ಬೀದಿಗೆ ಕಾಲಿಡುವವರೆಗಿನ ನನ್ನ ರೋಗಾನುಭವಕ್ಕೆ ಸಾಕ್ಷಿಯಾಗಿ ಉಳಿದಿರುವುದೆಂದರೆ ನನ್ನ ಕುಬ್ಜವಾದ ಕೃಶ

ಶ್ರೀ ಎಂ.ವಿ. ಸೀತಾರಾಮಯ್ಯ



ದೇಹ, ಅನೇಕ ರೋಗಗಳ ಧಾಳಿಯನ್ನು ತಡೆದುಕೊಂಡು ನನ್ನಾಗಿ ಉಳಿದುಕೊಂಡಿರುವ ನನ್ನ ಈ ದೇಹ ಇನ್ನೂ ಕೆಲವು ಕಾಲ ಉಳಿಯಬಲ್ಲದೆಂಬ ಭರವಸೆ ನನ್ನಲ್ಲಿದೆ— ಕನ್ನಡದ ಹೆಮ್ಮೆಯ ಸಾಹಿತಿಗಳಾಗಿರುವ ಸೀತಾರಾಮಯ್ಯನವರ ಇಂದಿನ ೬೬ ವರ್ಷಗಳ ತುಂಬು ಬದುಕಿಗೆ ಈ ಭರವಸೆ, ಆತ್ಮವಿಶ್ವಾಸಗಳೇ ಕಾರಣವಾಗಿವೆ. ಎಂ. ವಿ ಸೀಯ ದೇಹ ಕೃಶವಾಗಿದ್ದರೂ ಕಂಠ ಕ್ಷೀಣಿಸಿಲ್ಲ. ಬೆರಳುಗಳು ಬೆಂಡಾಗಿದ್ದರೂ ಬರವಣಿಗೆ ನಿಂತಿಲ್ಲ. ಭರವಸೆ, ಛಲ, ನಂಬಿಕೆಗಳು ಸೀತಾರಾಮಯ್ಯನವರ ಏಳ್ಗೆಗೆ, ಸಾಧನೆಗೆ ಮತ್ತು ಕೀರ್ತಿಗೆ ಕಾರಣವಾಗಿವೆ.

ಮೈಸೂರಿನ ಪ್ರಖ್ಯಾತ ವಿದ್ಯಾಸಂಸ್ಥೆಗಳಾದ ಬನುಮಯ್ಯ ಪ್ರೌಢಶಾಲೆ, ಮಹಾರಾಜಾ ಕಾಲೇಜುಗಳಲ್ಲಿ ಶ್ರೀಯುತರ ವ್ಯಾಸಂಗ. ವೆಂಕಣ್ಣಯ್ಯ, ಬಿ. ಎಂ. ಶ್ರೀ, ತೀ. ನಂ. ಶ್ರೀ ಮತ್ತು ಡಿ. ಎಲ್. ಎನ್. ರಂಥ ಸರಸ್ವತೀಸಂತರ ಸಾನಿಧ್ಯದಲ್ಲಿ ಇಂಗ್ಲಿಷ್, ಸಂಸ್ಕೃತ, ಕನ್ನಡ ಭಾಷೆಗಳ ಆಳವಾದ ಅಧ್ಯಯನ. ಇದರ ಜೊತೆಗೆ ಕರ್ನಾಟಕದ ಪ್ರಖ್ಯಾತ ಚಿತ್ರಕಲಾವಿದರಾಗಿದ್ದ ದಿವಗಂತ ವೆಂಕಟಪ್ಪನವರ ಮಾರ್ಗದರ್ಶನದಲ್ಲಿ ಚಿತ್ರಕಲೆಯ ಅಭ್ಯಾಸ; ಅದರಲ್ಲಿ ಪರಿಣತಿ; ೧೯೩೩ರಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದ ನಂತರ ೧೯೩೪ರಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ, ೧೯೩೯ ರಿಂದ ೧೯೪೭ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್, ಕನ್ನಡ ನಿಘಂಟಿನಲ್ಲಿ ಸಂಪಾದಕೀಯ ಸಹಾಯಕರಾಗಿ ದುಡಿಮೆ. ೧೯೪೭ರಿಂದ ಬೆಂಗಳೂರಿನ ಇಂಟರ್ ಮೀಡಿಯೇಟ್ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ನೇಮಕ; ಅಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ; ಜೊತೆಗೆ ಕಾಲೇಜಿನಲ್ಲಿ ಪ್ರಾರಂಭವಾಗಿ ಬೆಳೆಯಲೊ ಬೇಡವೊ ಎಂಬ ಸ್ಥಿತಿಯಲ್ಲಿದ್ದ ಕರ್ನಾಟಕ ಸಂಘಕ್ಕೆ ಎಂ. ವಿ. ಸೀಯಿಂದ ಕಾಯಕಲ್ಪ. ತತ್ಫಲವಾಗಿ ಕರ್ನಾಟಕ ಸಂಘದಿಂದ ಪುಸ್ತಕಗಳ ಪ್ರಕಟಣೆ, ಸಾಂಸ್ಕೃತಿಕ ಕಾರ್ಯಕ್ರಮಗಳ ಆಚರಣೆ. ಇಂದಿಗೂ ಆ ಕರ್ನಾಟಕ ಸಂಘ ಎಂ. ವಿ. ಸೀ ಹಾಕಿದ ಮೇಲ್ಪಂಕ್ತಿಯಲ್ಲೇ ಕೆಲಸ ಮಾಡುತ್ತಿದೆ. ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಬೆಳವಣಿಗೆಗೆ ಮತ್ತು ಕೀರ್ತಿಗೆ ರಾಜರತ್ನಂ ಹೇಗೆ ಕಾರಣರೊ ಹಾಗೆ ಸರ್ಕಾರಿ ಕಲಾ ಕಾಲೇಜಿನ ಕರ್ನಾಟಕ ಸಂಘಕ್ಕೆ ಸೀತಾರಾಮಯ್ಯನವರು ಕಾರಣರು. ಎಂ. ವಿ. ಸೀಯಿಂದ ಸಂಪಾದಿಸಲ್ಪಟ್ಟಿರುವ ಕನ್ನಡದ ಪ್ರಥಮ ಲಕ್ಷಣ ಗ್ರಂಥ 'ಕವಿರಾಜಮಾರ್ಗ'ದ ಮಾರಾಟದಿಂದ ಬರುವ ಲಾಭವು ಈ ಕರ್ನಾಟಕ ಸಂಘಕ್ಕೆ ಮೀಸಲಾಗಿದೆ. ೧೯೪೭ರಲ್ಲಿ ನೇಮಕಗೊಂಡ ಕಾಲೇಜಿನಲ್ಲಿ ಅವಿರತವಾಗಿ ದುಡಿದು ೧೯೬೭ರಲ್ಲಿ ಎಂ. ವಿ. ಸೀ. ನಿವೃತ್ತರಾದರು. ಹೀಗೆ ನೇಮಕಗೊಂಡ ಕಾಲೇಜಿನಲ್ಲೇ ನಿವೃತ್ತರಾಗುವವರೆಗೆ ಸೇವೆ ಸಲ್ಲಿಸಿದ್ದು ಎಂ. ವಿ. ಸೀ ವೈಶಿಷ್ಟ್ಯ.

ಎಲ್ಲಾ ಸರ್ಕಾರಿ ನೌಕರರಿಗೂ 'ವರ್ಗ' ಮಾಡುವಂತೆ ಸೀತಾರಾಮಯ್ಯನವರಿಗೂ ಆಗಿತ್ತು. ಆದರೆ ಅವರ ಅನಾರೋಗ್ಯ ಪ್ರಯಾಣಕ್ಕೆ ಪ್ರಯಾಸಕರವಾಗಿತ್ತು. ಅಲ್ಲದೆ ಬೆಂಗಳೂರಿನ ವಾತಾವರಣ ಎಂ. ವಿ. ಸೀಯ ದೇಹಸ್ಥಿತಿಗೆ ಹೊಂದಿತ್ತು. ವರ್ಗ ಮಾಡುವ ಅಧಿಕಾರಿಗಳಿಗೆ ಸೀತಾರಾಮಯ್ಯನವರ ವ್ಯಕ್ತಿತ್ವ, ಆರೋಗ್ಯಗಳ ಬಗ್ಗೆ ತಿಳಿಯದು. ಮೊದಲ ಸಲ ಇವರನ್ನು ಕೋಲಾರದ ಕಾಲೇಜಿಗೆ ವರ್ಗಾಯಿಸಿದರು. ಈ ಸ್ಥಿತಿಯಲ್ಲಿ ಹೇಗಪ್ಪಾ ಹೋಗುವುದು ಎಂದು ಹಲುಬುತ್ತಿದ್ದಾಗ ಎಂ. ವಿ. ಸೀಯ ಹಿರಿಯ ಶಿಷ್ಯರೂ ಇಂದು ಬನಾರಸ ವಿಶ್ವವಿದ್ಯಾನಿಲಯದ ಕನ್ನಡ ಪೀಠದ ಮುಖ್ಯಸ್ಥರಾಗಿರುವ ಡಾ. ಪ್ರಭುಶಂಕರರು ಗುರುಗಳ ಪರವಾಗಿ ತಾವೇ ಆ ಸ್ಥಳಕ್ಕೆ ಹೊರಟರು. ಎರಡನೆಯ ಸಲ ತುಮಕೂರಿಗೆ ವರ್ಗವಾಯಿತು. ತಮ್ಮ ಕಷ್ಟವನ್ನು ಮೇಲಧಿಕಾರಿಗಳಿಗೆ ತೋಡಿಕೊಂಡರೂ ಪ್ರಯೋಜನವಾಗಲಿಲ್ಲ. ಆಗ ಎಂ. ವಿ. ಸೀಯ ಸಹೋದ್ಯೋಗಿಗಳೂ ಅವರ ವಿದ್ವತ್ತು ಮತ್ತು ಸೌಜನ್ಯಗಳಿಗೆ

ಪಾಠಮಾಡುತ್ತಿದ್ದ. ಆಗ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಉಪ ಪ್ರಾಧ್ಯಾಪಕರಾಗಿದ್ದ ಡಾ. ಚಿದಾನಂದ ಮೂರ್ತಿಯವರು ಸಹಾಯಕರಾದರು. ಮೂರನೆಯ ಬಾರಿ ಮಂಡ್ಯಕ್ಕೆ ವರ್ಗವಾದಾಗ ಕೆ. ವಿ. ಪುಟ್ಟಪ್ಪನವರು ಉಪಕುಲಪತಿಗಳಾಗಿದ್ದರು. ಎಂ. ವಿ. ಸೀಯವರ ಆರೋಗ್ಯವನ್ನು ಚೆನ್ನಾಗಿ ಬಲ್ಲ ಕುವೆಂಪು. I know his body condition than him, Mr. Seetharamaiah should be retired in the same college ಎಂದು ಸಂಬಂಧಪಟ್ಟವರಿಗೆ ತಿಳಿಸಿ ಆಗಿದ್ದ ವರ್ಗವನ್ನು ರದ್ದುಗೊಳಿಸಿದರಂತೆ. ಹೀಗೆ ಸ್ಥಳಋಣವೊ ಅಥವಾ ಅದೃಷ್ಟವೊ ಎಂ. ವಿ. ಸೀ ಒಂದೇ ಸ್ಥಳದಲ್ಲಿ ನಿಂತರು. ಈ ಪ್ರಕರಣವನ್ನು ಇವರು ಎಲ್ಲರಿಗೂ ಬಿಚ್ಚುಮನಸ್ಸಿನಿಂದ ತಿಳಿಸಿದ್ದಾರೆ. ಈ ಮೂವರ ಉಪಕಾರವನ್ನು ಈಗಲೂ ನೆನೆಯುತ್ತಾರೆ, ಆಗ ಅವರ ಕಣ್ಣುಗಳು ಕೃತಜ್ಞತೆಯಿಂದ ತೇವವಾಗುತ್ತವೆ.

ಸೀತಾರಾಮಯ್ಯನವರು ಸರ್ಕಾರಿ ಕಾಲೇಜಿನಿಂದ ನಿವೃತ್ತರಾದಾಗ ಅವರಿಗೆ ಶಿಷ್ಯ—ಮಿತ್ರರೂ ಸೇರಿ ಒಂದು ಸನ್ಮಾನ ಸಮಾರಂಭ ಏರ್ಪಡಿಸಿದ್ದರು. ಆ ಬೀಳ್ಕೊಡುಗೆಯ ಸಭೆಯ ಅಧ್ಯಕ್ಷತೆಯನ್ನು ಆಗ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಆರ್. ಆರ್. ಉಮರ್ಜಿಯವರು ವಹಿಸಿದ್ದರು. ಅಂದು ಅವರು ಅಧ್ಯಕ್ಷ ಭಾಷಣದಲ್ಲಿ ಆಡಿದ ಮಾತುಗಳು ಮನನೀಯವಾಗಿವೆ. ಅದನ್ನು ತಿಳಿಸುವ ಮುನ್ನ ಒಂದು ವಿಷಯವನ್ನು ಅನಿವಾರ್ಯವಾಗಿ ಹೇಳಬೇಕಾಗಿದೆ. ಪ್ರಿನ್ಸಿಪಾಲರಾಗಿದ್ದ ಉಮರ್ಜಿಯವರು ವಿಜ್ಞಾನದ ಪ್ರಾಧ್ಯಾಪಕರಾಗಿದ್ದರು. ಡಾಕ್ಟರೇಟ್ ಪದವೀಧರರು, ದೇಶ ವಿದೇಶಗಳನ್ನು ನಾಲ್ಕಾರು ಬಾರಿ ಸುತ್ತಿ ಬಂದಿದ್ದವರು. ಬಿಜಾಪುರ ಜಿಲ್ಲೆಯ ಬಾಗಲಕೋಟೆಯವರಾದರೂ ಕನ್ನಡವೆಂದರೆ ಅಷ್ಟಕ್ಕಷ್ಟೆ. ಆ ಭಾಷೆಯಲ್ಲಿ ಮಾತಾಡಿದರೆ ತಮ್ಮ ಪ್ರತಿಷ್ಠೆಗೆ ಎಲ್ಲಿ ಕುಂದು ಬರುವುದೋ ಎಂಬ ಅಳುಕಿನಿಂದಲೋ ಏನೋ ಕರ್ನಾಟಕ ಸಂಘದ ಸಮಾರಂಭಗಳಲ್ಲೂ ಇಂಗ್ಲಿಷ್ ಭಾಷೆಯನ್ನೇ ಬಳಸುತ್ತಿದ್ದರು. ಈ 'ವಿಪರೀತ' ನೋಡಿ ನೋಡಿ ಬೇಸರಗೊಂಡಿದ್ದ ವಿದ್ಯಾರ್ಥಿಗಳು ಒಂದು ಸಮಾರಂಭದಲ್ಲಿ ಪ್ರಿನ್ಸಿಪಾಲರ ವಿರುದ್ಧ ಪ್ರತಿಭಟನೆ ಸೂಚಿಸಿ ಗಲಾಟೆ ಮಾಡಬೇಕೆಂದು ಸಂಕಲ್ಪಿಸಿದ್ದರು. 'ಕರ್ನಾಟಕ ಸಂಘ'ದ ಅಧ್ಯಕ್ಷರಾಗಿದ್ದ ಸೀತಾರಾಮಯ್ಯನವರ ಗಮನಕ್ಕೆ ಇದು ಬಂದಿತು. ಎಂ. ವಿ. ಸೀ ಅದೇನು 'ಪವಾಡ' ನಡೆಸಿದರೋ ಏನೋ ಅಂದಿನ ಸಭೆಯಲ್ಲಿ ಉಮರ್ಜಿಯವರು ಅಚ್ಚಕನ್ನಡದಲ್ಲಿ ಸ್ವಚ್ಛವಾಗಿ ಮಾತಾಡಿ ಎಲ್ಲರನ್ನೂ ದಂಗುಬಡಿಸಿದರು. ಪ್ರಿನ್ಸಿಪಾಲರು ಕನ್ನಡದಲ್ಲಿ ಮಾತನಾಡುವಂತೆ ಮಾಡಲು ಎಂ. ವಿ. ಸೀ ಅದೇನು ಮಾಡಿದರೋ ತಿಳಿಯದು. ಅದೇನೆ ಇರಲಿ. ಜರುಗುತ್ತಿದ್ದ ಕಹಿ ವಾತಾವರಣವನ್ನೂ ಅದರಿಂದ ಕರ್ನಾಟಕ ಸಂಘಕ್ಕೆ ಬರಬಹುದಾಗಿದ್ದ ಕಳಂಕವನ್ನೂ ತಪ್ಪಿಸಿದರು. ಸೀತಾರಾಮಯ್ಯನವರ ಕನ್ನಡ ಸೇವೆ ಈ ತೆರನಾದುದು; ಸದ್ದುಗದ್ದಲವಿಲ್ಲದ್ದು.

"ನನ್ನ ಇಪ್ಪತ್ತೈದು ವರ್ಷಗಳ ಕಾಲೇಜು ಅನುಭವದಲ್ಲಿ ನಾನು ಸೀತಾರಾಮಯ್ಯನವರಂಥ ಅಧ್ಯಾಪಕರನ್ನು ಕಂಡಿಲ್ಲ. ಈ ಕಾಲೇಜಿಗೆ ಹೊಸದಾಗಿ ಬಂದಾಗ ಪ್ರಥಮತಃ ಎಂ. ವಿ. ಸೀಯವರನ್ನು ನೋಡಿದಾಗ ಮೂರುವರೆ ಅಡಿಯ ಈ ಮನುಷ್ಯ ಕಾಲೇಜಿನಲ್ಲಿ ಹೇಗೆ ನಿಭಾಯಿಸಿದ ಎಂದು ಅಚ್ಚರಿಯಾಯಿತು. ಶ್ರೀಯುತರ ಪ್ರಾಮಾಣಿಕತೆ, ಕರ್ತವ್ಯಪ್ರಜ್ಞೆ ಮೆಚ್ಚುವಂಥವು...ನಮ್ಮ ತರುಣ ಅಧ್ಯಾಪಕರೆಷ್ಟೋ ಮಂದಿ ಸಕಾರಣವೊ ಅಕಾರಣವೊ ತರಗತಿಗಳನ್ನು ಕೆಲವು ಸಲ ತೆಗೆದುಕೊಳ್ಳುವುದೇ ಇಲ್ಲ. ಕೆಲವರು ನಿರ್ದಿಷ್ಟ ಗಂಟೆ ಬಾರಿಸಿ ೩೦ ನಿಮಿಷ ಕಳೆದರೂ ತರಗತಿಯ ಕೋಣೆಗೆ ಕಾಲಿಡುವುದಿಲ್ಲ; ಮತ್ತೆ ಹಲವರು ಬಿಡಬೇಕಾದ ಸಮಯಕ್ಕಿಂತ ಎಷ್ಟೋ ಮೊದಲು ರೂಮಿನಿಂದ ಹೊರಬರುತ್ತಾರೆ. ಎಂ. ವಿ. ಸೀ ಈ ಜಾತಿಯವರಲ್ಲ. ಮೂರು ಅಡಿ ಓಡಾಡಿದರೆ ಮುಗ್ಗರಿಸಿ ಬೀಳಬಹುದಾದ, ಮೂರು ಮೆಟ್ಟಿಲುಗಳನ್ನು

ಹತ್ತಿದರೆ ಉಬ್ಬಸ ಬಂದು ಕೆಳಕ್ಕೆ ಕೂರಬೇಕೆನ್ನುವ ದೇಹಸ್ಥಿತಿಯಲ್ಲೂ ಎಂದೂ ಅವರು ಅನಧಿಕೃತವಾಗಿ ತರಗತಿಗಳನ್ನು ಬಿಟ್ಟವರಲ್ಲ. ನಿರ್ದಿಷ್ಟ ಸಮಯಕ್ಕೆ ಸರಿಯಾಗಿ ತರಗತಿಯ ಕೋಣೆಗೆ ಹೋಗಿ ಗಂಟೆ ಪೂರ್ತಿ ಪಾಠ ಹೇಳುತ್ತಿದ್ದರು. ಸೀತಾರಾಮಯ್ಯನವರ ಈ ನಡತೆ ಆದರ್ಶವೂ, ಅನುಕರಣೀಯವೂ ಆದುದು. ಶ್ರೀಯುತರು ಪುಸ್ತಕಗಳನ್ನು ಬರೆದಿರುವರೆಂದು ಕೇಳಿದ್ದೇನೆ. ಅದರಲ್ಲಿ ಅವರು ಎಷ್ಟು ಹೆಸರು ಗಳಿಸಿದ್ದಾರೋ ತಿಳಿಯದು. ಆದರೆ ಬೋಧನಾ ಕ್ಷೇತ್ರದಲ್ಲಿನ ಇವರ ಯಶಸ್ಸನ್ನು ನಾನು ಗುರುತಿಸಿದ್ದೇವೆ. ಅದು ಅದ್ಭುತವಾದುದು." ಪ್ರಿನ್ಸಿಪಾಲ್ ಉಮರ್ಜಿಯವರ ಈ ಮಾತುಗಳು ಬೋಧಕರಾಗಿ ಸೀತಾರಾಮಯ್ಯನವರು ಗಳಿಸಿದ ಕೀರ್ತಿಗೆ ಕನ್ನಡಿ ಹಿಡಿಯುತ್ತವೆ. ಅಂದು ಕೇವಲ ಇಂಟರ್‌ಮೀಡಿಯಟ್ ಕಾಲೇಜಾಗಿದ್ದ ಆ ವಿದ್ಯಾಸಂಸ್ಥೆ ಇಂದು ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜುಗಳಾಗಿ ಕವಲೊಡೆದು ಬೃಹದಾಕಾರವಾಗಿ ಬೆಳೆದಿರುವುದು ಎಂ. ವಿ. ಸೀ., ಉಮರ್ಜಿ ಮೊದಲಾದ ಪ್ರಾಧ್ಯಾಪಕರ ಸೂಚನೆ, ಶ್ರಮಗಳ ಫಲವಾಗಿ.

ಸರ್ಕಾರಿ ಕಾಲೇಜಿನಿಂದ ನಿವೃತ್ತರಾದ ನಂತರ ಎಂ. ವಿ. ಸೀ ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡವಿಭಾಗದಲ್ಲಿ ಆರು ವರ್ಷಗಳ ಕಾಲ ಯು. ಜಿ. ಸಿ ಪ್ರಾಧ್ಯಾಪಕರಾಗಿದ್ದರು. ಆಗ ಅವರು ವಿದ್ಯಾರ್ಥಿಗಳಿಗೆ ಗ್ರಂಥಸಂಪಾದನೆ, ಛಂದಸ್ಸು ಮತ್ತು ಕಾವ್ಯಮೀಮಾಂಸೆಗಳನ್ನು ಬೋಧಿಸುತ್ತಿದ್ದರು. ಸಾಮಾನ್ಯವಾಗಿ ವಿದ್ಯಾರ್ಥಿಗಳಿಗೆ ಮೊದಲ ಎರಡು ವಿಷಯಗಳ ಬಗ್ಗೆ ಕುತೂಹಲ ಅಷ್ಟಾಗಿ ಇರದು. ಆದರೆ ಎಂ. ವಿ. ಸೀ ಬೋಧನೆ ಕಸದಲ್ಲಿ ರಸ ತೆಗೆಯುವಂಥದ್ದು. ಇವರು ತೆಗೆದುಕೊಳ್ಳುತ್ತಿದ್ದ ಆನರ್ಸ್, ಎಂ. ಎ ತರಗತಿಗಳು ಸದಾ ತುಂಬಿರುತ್ತಿದ್ದವು. ಶಾಸ್ತ್ರೀಯ ವಿಷಯಗಳನ್ನು ವಿವರಿಸುತ್ತಿದ್ದ ರೀತಿಯಲ್ಲಿ, ಕೊಡುತ್ತಿದ್ದ ಉದಾಹರಣೆಗಳಲ್ಲಿ ಎಂ. ವಿ. ಸೀಯ ಸೂಕ್ಷ್ಮಜ್ಞತೆ ಎದ್ದು ಕಾಣುತ್ತಿತ್ತು. ವಿಶ್ವವಿದ್ಯಾನಿಲಯಕ್ಕೆ ಬಂದಮೇಲಂತೂ ಶ್ರೀಯುತರ ಆರೋಗ್ಯ ಮತ್ತಷ್ಟು ಹದಗೆಟ್ಟಿತ್ತು. ದೇಹವೂ ಕುಗ್ಗಿತ್ತು. ಆದರೆ ಅನಾರೋಗ್ಯವು ಹೆಚ್ಚಿದಷ್ಟೂ ಅವರಲ್ಲಿ ಉತ್ಸಾಹ ಇಮ್ಮಡಿಸುತ್ತಿತ್ತು. ಎರಡು ಗಂಟೆಗಳ ಕಾಲ ಬಿಡದೇ ಸಮನೆ ಪಾಠ ಮಾಡುತ್ತಿದ್ದರು. ಅವರು ಹಾಕಿಕೊಂಡು ಬರುತ್ತಿದ್ದ ಕೋಟಿನ ಜೇಬುಗಳಲ್ಲಿ ಒಂದು ಪುಟ್ಟ ಔಷಧದ ಅಂಗಡಿ ಕಾಣಬರುತ್ತಿತ್ತು! ಸಂಗಾತಿಯಾಗಿ ಎರಡು ಫ್ಲಾಸ್ಕುಗಳು ಬಳಿಯಲ್ಲೇ ಇರುತ್ತಿದ್ದವು. ಒಂದರಲ್ಲಿ ಬಿಸಿನೀರು, ಮತ್ತೊಂದರಲ್ಲಿ ಕಾಫಿ. ಪಾಠದ ಮಧ್ಯದಲ್ಲಿ ಉಲ್ಬಣಿಸುತ್ತಿದ್ದ ಉಬ್ಬಸಕ್ಕೆ ಮದ್ದು ಸೇವನೆ; ಆರಿದ ಗಂಟಲಿಗೆ ಬಿಸಿನೀರು, ಕಾಫಿಯ ಸಮಾರಾಧನೆ; ನಿರ್ದಿಷ್ಟ ಅವಧಿಗಿಂತ ಮಿಗಿಲಾಗಿ ಉತ್ತಮ ಮಟ್ಟದ ಬೋಧನೆ. ಸೀತಾರಾಮಯ್ಯನವರ ಕರ್ತವ್ಯಪ್ರಜ್ಞೆ, ಪ್ರಾಮಾಣಿಕತೆ, ದುಡಿಮೆಗಳು ವಿದ್ಯಾರ್ಥಿಗಳನ್ನು ಮುಗ್ಧಗೊಳಿಸಿದ್ದವು; ಸಹೋದ್ಯೋಗಿಗಳಿಗೆ ಮಾರ್ಗದರ್ಶಕವಾಗಿದ್ದವು. ಸಂತೋಷ ಕೂಟಗಳಲ್ಲಿ ತಮ್ಮ ವಿದ್ವತ್ತು, ಹಿರಿತನಗಳನ್ನು ಮರೆತು ಹುಡುಗರೊಂದಿಗೆ ಹುಡುಗರಾಗಿ ವಿನೋದ ಮಾತುಗಳಲ್ಲಿ, ಹಾಡು ಹೇಳುವಿಕೆಯಲ್ಲಿ ಭಾಗವಹಿಸಿ ತಮ್ಮ ರಸಿಕತೆಯನ್ನು ಮೆರೆಯುತ್ತಿದ್ದರು. ಕನ್ನಡ ವಿಭಾಗದ ಎಲ್ಲರ ಗೌರವಕ್ಕೂ ಪಾತ್ರರಾಗಿದ್ದರು.

"ನನ್ನ ಲೇಖನ ಕಾರ್ಯವೆಲ್ಲ ರುಗ್ಣಶಯ್ಯೆಯಲ್ಲೇ ನಡೆದಿದೆ," ಎನ್ನುವ ಎಂ. ವಿ. ಸೀ. ಅರವತ್ತಕ್ಕೂ ಹೆಚ್ಚಿನ ಕೃತಿಗಳನ್ನು ನಮಗೆ ಕೊಟ್ಟಿದ್ದಾರೆ. ಕತೆ, ಕಾದಂಬರಿ, ನಾಟಕ, ಕಾವ್ಯಗಳನ್ನು ಬರೆದಿದ್ದಾರೆ. ಉದಯಾದಿತ್ಯಾಲಂಕಾರ, ಕವಿರಾಜ ಮಾರ್ಗ, ಅರ್ಚನ ಇತ್ಯಾದಿ ಗ್ರಂಥಗಳನ್ನು ಸಂಪಾದಿಸಿದ್ದಾರೆ. ಕನ್ನಡದಲ್ಲಿ ಬೆಳೆದು ಬಂದಿರುವ 'ಶಾಸ್ತ್ರ ಸಾಹಿತ್ಯ'ದ ಮೇಲೆ ಒಂದು ಪುಸ್ತಕ ಬರೆದಿದ್ದಾರೆ. ಇಂಗ್ಲಿಷ್, ತೆಲುಗು ಭಾಷೆಗಳಿಂದ ನಾಲ್ಕಾರು ಕೃತಿಗಳನ್ನು ಕನ್ನಡಿಸಿದ್ದಾರೆ. ಛಂದಸ್ಸು, ಗ್ರಂಥ ಸಂಪಾದನೆಗಳ ಬಗ್ಗೆ

'ವಿಶ್ವಕೋಶ'ದಲ್ಲಿ ಇವರ ಪ್ರಬುದ್ಧವಾದ ಲೇಖನಗಳು ಪ್ರಕಟಗೊಂಡಿವೆ. ವಿಶ್ವವಿದ್ಯಾನಿಲಯದ ವತಿಯಿಂದ ಸಾಹಿತ್ಯ ಚರಿತ್ರೆ, ವಿಮರ್ಶೆಯ ಮೂಲ ತತ್ತ್ವಗಳನ್ನು ಕುರಿತು ವಿಶೇಷೋಪನ್ಯಾಸವನ್ನು ಕೊಟ್ಟಿದ್ದಾರೆ. ಪ್ರಸ್ತುತ ಕನ್ನಡ ಸಾಹಿತ್ಯ ಪರಿಷತ್ತು ತನ್ನ ವಜ್ರಮಹೋತ್ಸವದ ಸವಿನೆನಪಿಗೆ ಪ್ರಕಟಿಸುತ್ತಿರುವ 'ಕವಿಸ್ತಂಭ' ಸಂಚಿಕೆಗೆ ಸಂಪಾದಕರಾಗಿ ದುಡಿಯುತ್ತಿದ್ದಾರೆ. ನಾಗವರ್ಮನ 'ಛಂದೋಂಬುಧಿ' ಗ್ರಂಥವನ್ನು ನಿಷ್ಕೃಷ್ಟವಾಗಿ ಸಂಪಾದಿಸಬೇಕೆಂಬ ಹವಣಿಕೆಯಲ್ಲಿದ್ದಾರೆ. ಒಂದೆರಡು ಬೃಹತ್ ಕಾದಂಬರಿಗಳನ್ನು ಬರೆಯಬೇಕೆಂಬ ಯೋಚನೆ ಅವರಲ್ಲಿದೆ. ಹೀಗೆ ಮೇಲ್ನೋಟಕ್ಕೆ ಸೀತಾರಾಮಯ್ಯನವರು ವಾಮನನಂತೆ ಕಂಡರೂ ಸಾಹಿತ್ಯಸೇವೆಯಲ್ಲಿ ತ್ರಿವಿಕ್ರಮರಾಗಿದ್ದಾರೆ. ನವ್ಯ ಸಾಹಿತ್ಯಕ್ಕೆ ಕೆಲವು ಹಳೆಯ ತಲೆಗಳ ವಿರೋಧವಿದೆ ಎಂಬ ಕೂಗಿಗೆ ಇವರು ಅಪವಾದವಾಗಿದ್ದಾರೆ. ಗೋಪಾಲಕೃಷ್ಣ ಅಡಿಗರ ಕಾವ್ಯವನ್ನು ಓದುತ್ತಾರೆ. ನಿಸಾರ್ ಅಹಮದ್, ಲಕ್ಷ್ಮೀನಾರಾಯಣ ಭಟ್ಟರ ಕವನಗಳ ಬಗೆಗೆ ಒಲವಿದೆ. ಲಂಕೇಶ್, ಪಾಟೀಲರ ವಿಮರ್ಶಾಲೇಖನಗಳನ್ನು ಮೆಚ್ಚುತ್ತಾರೆ. ಆದರೆ ಹಳೆಯದೆಲ್ಲ ತ್ಯಾಜ್ಯವೆಂದು ಹೇಳುತ್ತಾ, 'ನವ್ಯ'ವೆಂಬ ಹಣೆ ಚೀಟಿ ಅಂಟಿಸಿಕೊಂಡು ಅರ್ಥವಾಗದ, ಅಪಕ್ವ ಭಾವನೆಗಳನ್ನು ತುರುಕಿ ಅದನ್ನೇ ಸಾಹಿತ್ಯವೆಂದು ಕರೆಯುವವರನ್ನು ಕಂಡರೆ ಇವರಿಗೆ ಆಗದು.

ಎಂ. ವಿ. ಸೀ ಪ್ರಚಾರಪ್ರಿಯರಲ್ಲ. ಸದ್ದುಗದ್ದಲವಿಲ್ಲದ ಸಾರ್ಥಕ ಸಾಹಿತ್ಯ ಸೇವೆ ಅವರದು. "ನಿಮ್ಮ ಬರಹಕ್ಕೆ ಸಲ್ಲಬೇಕಾದ್ದು ಸಂದಿಲ್ಲ, ಅಲ್ಲವೆ?" ಎಂಬ ಪ್ರಶ್ನೆಗೆ ಅವರು ಉತ್ತರಿಸುತ್ತಾರೆ "ಲೇಖಕನಾಗಲಿ ಅಥವಾ ಯಾರಾದರಾಗಲಿ ಪ್ರತಿಫಲ ದೊರೆಯುತ್ತದೆಂದು ನಿರೀಕ್ಷಿಸಿ ಕೆಲಸ ಮಾಡುವುದು ದಡ್ಡತನ... ನಾವು ಯಾವ ಪರಿಸ್ಥಿತಿಯಲ್ಲೇ ಇರಲಿ, ಆ ಪರಿಸ್ಥಿತಿಯ ದುಃಖ ಭಾಗವನ್ನು ಬಿಟ್ಟು ಸುಖ ಭಾಗವನ್ನು, ನಷ್ಟ ಭಾಗವನ್ನು ಬಿಟ್ಟು ಲಾಭ ಭಾಗವನ್ನು ಸ್ವೀಕರಿಸುವುದು ಜಾಣತನ – ಒಂದು ಒಳ್ಳೆಯ ಕೆಲಸಕ್ಕೆ ಎಂದಾದರೊಂದು ದಿನ ಮಾನ್ಯತೆ ದೊರತೇ ದೊರೆಯುವುದು.

"ಲೇಖಕನಾಗಬಯಸುವವನು ಆಳವಾದ ಅಧ್ಯಯನದಿಂದ ಅನುಭವ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕು, ಅಪಕ್ವ, ಅಪ್ರಬುದ್ಧ ಕೃತಿಗಳನ್ನು ರಚಿಸಬಾರದು. ಒಂದು ಉತ್ತಮ ಕೃತಿಯನ್ನು ಪ್ರಕಟಿಸಿದಾಗ ಅದು ಹೇಗೆ ಸಾಹಿತ್ಯ ಸೇವೆ ಎನಿಸುವುದೊ ಹಾಗೆ ಒಳ್ಳೆಯದಲ್ಲದ ಕೃತಿಗಳನ್ನು ಹೊರತರದೆ ಇದ್ದರೆ ಅದೂ ಒಂದು ರೀತಿಯಲ್ಲಿ ಸಾಹಿತ್ಯ ಸೇವೆಯೇ ಆಗುತ್ತದೆ. ಒಬ್ಬ ವ್ಯಕ್ತಿ ಯಾವ ವಯಸ್ಸಿನಲ್ಲಿ ಬರೆಯುತ್ತಿದ್ದಾನೆ ಎಂಬುದು ಮುಖ್ಯವಲ್ಲ. ಯಾವ ಮಟ್ಟದಲ್ಲಿ ಬರೆಯುತ್ತಾನೆ ಎಂಬುದು ಅತಿ ಮುಖ್ಯ." ಇದು ತರುಣ ಬರಹಗಾರರಿಗೆ ಸೀತಾರಾಮಯ್ಯನವರ ಸಂದೇಶ. ✡

ಎಷ್ಟು ದೂರ?

ಆಕೆ- ಇಲ್ಲಿಂದ ಬೆಂಗಳೂರು ಎಷ್ಟು ದೂರ ಸ್ವಾಮಿ?

ಈತ- ಈಗ ನೀವು ಹೊರಟಿರುವ ದಾರಿಯಲ್ಲಿಯೇ ಮುಂದೆ ಸಾಗಿದರೆ ಬೆಂಗಳೂರು ಸಾವಿರಾರು ಮೈಲುಗಳಷ್ಟು ದೂರ. ಆದರೆ ಹೀಗೆ ಮುಖ ತಿರುಗಿಸಿ ಹಿಂದುಗಡೆ ಸಾಗಿದರೆ ಕೇವಲ ಐದು ಮೈಲು ದೂರದಲ್ಲಿದೆ ಬೆಂಗಳೂರು.

ನಮ್ಮ ಮನೆ ವಿದ್ಯುಲ್ಲತೆ ಮತ್ತು ವೆಂಕಣ್ಣ

ಮೈ. ಪಾ. ವಾ. ಶೆಣೈ

ನಮ್ಮ ಪ್ರಥಮ ಪುತ್ರ ಅಮೇರಿಕದಲ್ಲಿ ಉಚ್ಚ ಶಿಕ್ಷಣ ಪಡೆದು ಹಿಂದಿರುಗುವಾಗ ಪೇರಳವಾಗಿ ತಂದ ವಿದ್ಯುದುಪಕರಣಗಳು ನನ್ನ ಹೆಂಡತಿಯ 'ಆಲ್ ಎಲೆಕ್ಟ್ರಿಕ್' ಅಡುಗೆ ಮನೆಯ ಬೇಡಿಕೆಗೆ ಬೆಂಬಲ ಕೊಟ್ಟು ನನ್ನ ವೀಟೋ (Veto) ಧೋರಣೆಯನ್ನು ಕರಗಿಸಿದವು. ಕ್ರಮೇಣ ನಾವು ವಿದ್ಯುಚ್ಛಕ್ತಿಯ ಗುಲಾಮರಾದೆವು ಮಹಡಿಗೆ, ಮುನಿಸಿಪಲ್ ನೀರು ಹತ್ತದಾದಾಗ, ನೀರು ಹೊರಲು ಮಾದನ ಬದಲು ಮೋಟಾರು ಪಂಪು, ಇಡ್ಲಿ ಹಿಟ್ಟು ರುಬ್ಬಲು ಇಲೆಕ್ಟ್ರಿಕ್ ರುಬ್ಬುಯಂತ್ರ, ದೋಸೆಗೆ ಹಾಟ್ ಪ್ಲೇಟ್, ಮೋಸಂಬಿ ರಸಕ್ಕೆ ಜ್ಯೂಸ್ ಎಕ್ಸ್‌ಟ್ರಾಕ್ಟರ್, ಮೊಟ್ಟೆ ತಿನ್ನದ ಬ್ರಾಹ್ಮರ ಮನೆಯಲ್ಲಿ ಕೇಕ್‌ಗೆ ಬೇಕಾಗುವ ಒವನ್. ಈ ರೀತಿ ಹಲವಾರು ಉಪಕರಣಗಳು ನಮ್ಮ ನಿತ್ಯಜೀವನದ ಊರುಗೋಲುಗಳಾದುವು. ಮಾದ ಜುಗುಪ್ಸೆಯಿಂದ ಕೆಲಸಕ್ಕೆ ರಾಜೀನಾಮೆ ಹಾಕಿ ತನ್ನ ಹಳ್ಳಿಗೆ ಹೊರಟುಹೋದ. ಆತನ ಸ್ಥಾನದಲ್ಲಿ ಮಾಡರ್ನ್ ಎಲೆಕ್ಟ್ರಿಕ್ ಎಂಟರ್‌ಪ್ರೈಸಸ್‌ನ ಎಲೆಕ್ಟ್ರಿಷಿಯನ್ ಮಮ್ಮದ್‌ಸಾಹೇಬನೇ ನಮ್ಮ ಸಹಾಯಕನಾದನು. ನನ್ನ ಮಗ ತೋರಿದ ಒಂದೇ ರಿಯಾಯತಿ ಎಂದರೆ ಅವನು ತಂದ ಇಲೆಕ್ಟ್ರಿಕ್ ಹಲ್ಲುಜ್ಜುವ ಬ್ರಷ್‌ನ್ನು ಉಪಯೋಗಕ್ಕೆ ತರದಿರುವುದು. ಇದಕ್ಕೆ ಕಾರಣವೇನೆಂದು ನನಗಿನ್ನೂ ಗೊತ್ತಾಗಿಲ್ಲ.

ಈ ರೀತಿ ಮಮ್ಮದನ ಅನುಗ್ರಹದಿಂದ ಸರಾಗವಾಗಿ ಸಾಗುತ್ತಿದ್ದ ನಮ್ಮ ಸಂಸಾರ ನೌಕೆ ಏಕಾಏಕಿ ಸರಕಾರ ಹೇರಿದ ವಿದ್ಯುಚ್ಛಕ್ತಿಯ ಕಡಿತಕ್ಕೆ ಸಿಕ್ಕಿ ಬುಡಮೇಲಾಗುವ ಪರಿಸ್ಥಿತಿ ಬಂದಿತು.

ಈ ತುರ್ತು ಪರಿಸ್ಥಿತಿಯನ್ನು ಎದುರಿಸಲು ಅವಶ್ಯವಾದ ಮಾರ್ಗಗಳನ್ನು ಯೋಚಿಸಿ ಯೋಜಿಸಲೆಂದು ನನ್ನ ಸೌಭಾಗ್ಯವತಿ ಶನಿವಾರ ರಾತ್ರಿ ನಮ್ಮ ಮೀಟಿಂಗ್ ಕರೆದಳು. ಅವಳು ಚಾಣಾಕ್ಷೆ. ಶನಿವಾರ ಸಂಜೆ ನಾನು ಸ್ವಲ್ಪ ಸಮಾಧಾನಚಿತ್ತದಿಂದಿರುತ್ತೇನೆಂದು ಅವಳಿಗೆ ಗೊತ್ತು. ಸಭೆಯ ಕಾರ್ಯಸೂಚಿ– ಈ ಕಷ್ಟದ ಪರಿಸ್ಥಿತಿಯನ್ನು ಹೇಗೆ ಎದುರಿಸುವುದು–ಎಂದು.

“ಬೇಡಾ, ಬೇಡಾ, ವಿದ್ಯುಚ್ಛಕ್ತಿಯ ಗುಲಾಮರಾಗುವುದು ಬೇಡ ಅಂತ ಬಡಕೊಂಡೆ. ಎಲ್ಲಾದರೂ ಷಾಕುಗೀಕು ಆಗಿ...” ನಾನೇ ಪ್ರಾರಂಭಿಸಿದೆ


“Oh! Daddy! ಶುರು ಮಾಡಿದಿರಲ್ಲ ನಿಮ್ಮ ಹಳೆಯ ಗಾಯನ!” ಎಂದಳು ನನ್ನ ಕೊನೆಯ ಮುದ್ದಿನ ಮಗಳು.

ಉಳಿದೆಲ್ಲವರ ತಿರಸ್ಕಾರಪೂರ್ಣ ದುರದುರು ನೋಟಕ್ಕೆ ಹೆದರಿ ಬಾಯಿಗೆ ಬೀಗ

ಹಾಕಿದೆ.

"ಈಗ ನಮ್ಮ ಮುಂದೆ ಇರುವ ಸಮಸ್ಯೆ-ಯೇನೆಂದರೆ ನಮ್ಮ ಮನೆಯಲ್ಲಿನ ಎಲ್ಲ ವಿದ್ಯುಚ್ಛಕ್ತಿಯ ಬಳಕೆಯನ್ನು ಪರಿಶೀಲಿಸಿ ಅವುಗಳಲ್ಲಿ ಅನಾವಶ್ಯಕವಾದ ಉಪಯೋಗ-ಗಳನ್ನು ತೆಗೆದುಹಾಕಿ ಬಳಕೆ ಕಡಿಮೆ ಮಾಡು-ವುದು," ಎಂದ ನನ್ನ ದ್ವಿತೀಯ ಪುತ್ರ, ಕಾಲೇಜು ಡಿಬೇಟುಗಳಲ್ಲಿ ಪಳಗಿದವ.

"ಮೊದಲನೆಯದಾಗಿ ನಾವು ಹೊರ ಬಾಗಿ-ಲಿನ ಕಾಲಿಂಗ್ ಬೆಲ್ಲನ್ನು ತೆಗೆದುಬಿಡೋಣ," ಎಂದಳು ಸೊಸೆ. ಅವಳು ಯಾವಾಗಲೂ ಹಾಗೆಯೇ. ಸಣ್ಣ ಸಣ್ಣ ವಿಷಯಗಳಲ್ಲಿ ಹೆಚ್ಚು ಆಸಕ್ತಿ. ವಿಶೇಷ ಕ್ಲಿಷ್ಟ ವಿಷಯಗಳಲ್ಲಿ ಆಕೆ ತಲೆ ಹಾಕುವುದು ವಿರಳ.



"ಹೌದು, ಹೌದು, ಬಂದವರು ಬಾಗಿಲು ಬಡಿದರೂ ಸಾಕು. ನಾವು ಉತ್ತರಿಸಬಹುದು," ಎಂದು ಅನುಮೋದಿಸಿದ ಅಮೇರಿಕದಿಂದ ಹಿಂತಿರುಗಿದ ಅವಳ ಗಂಡ.

"ಅಣ್ಣಯ್ಯಾ, ನೀನ್ಯಾಕೆ ನಮ್ಮಂತೆ ಕೈ ರೇಜರ್‌ನಿಂದ ಗಡ್ಡ ತೆಗೆಯಬಾರದು?" ಎಂದ ನನ್ನ ಕಿರಿ ಮಗ ತನ್ನ ಅಣ್ಣನಿಗೆ.

"ಏನಂದೆ! ಹಾಳು ಹಿಂದುಸ್ತಾನಿ ಬ್ಲೇಡು-ಗಳಿಂದ ಕತ್ತು ಕುಯ್ದುಕೊಳ್ಳಬೇಕೆ?" ಎಂದು ಬಂತು ಉತ್ತರ.

"ಹೌದು, ಪಾಪ ಅವರ ಗಲ್ಲಕ್ಕೆ ಇಲ್ಲಿಯ ಮೊಂಡು ಬ್ಲೇಡುಗಳು ಒಗ್ಗಿಸಲ್ಲ," ಎಂದಳು ಅವನ ಪತ್ನಿ.

ಮನೆಯಲ್ಲಿ 'ಅಮೇರಿಕಕ್ಕೆ ಹೋಗಿ ಬಂದ' ಉನ್ನತ ಸ್ಥಾನ ಪಡೆದ ಅಣ್ಣನ ಮುಂದೆ ತಮ್ಮ ಹಿಮ್ಮೆಟ್ಟಲೇಬೇಕಾಯಿತು.

"ಬಚ್ಚಲು ಮನೆಯ ಬಾಯಿಲರ್ ಉಪ-ಯೋಗ ನಿಲ್ಲಿಸೋಣವೇ?" ಅಂದೆ. ನನಗೆ ತಣ್ಣೀರು ಸ್ನಾನವೇ ಅಭ್ಯಾಸ.

"ಏನಂತೀರಿ, ಆ ಹಾಳು ಹಸಿ ಸೌದೆಯ ಒಲೆ ಮುಂದೆ ಕುಳಿತು ನನ್ನ ಜೀವ ಸವೆಸ-ಬೇಕನ್ನುತ್ತೀರೋ? ಈಗ ಮಾದನೂ ಇಲ್ಲ," ಗುಡುಗಿದಳು ನನ್ನ ಧರ್ಮಪತ್ನಿ.

"ಸ್ವಲ್ಪ ದಿನ ತಣ್ಣೀರಲ್ಲೇ..." ಆ ವಾಕ್ಯ ಪ್ರತಿಭಟನೆಯ ಕೋರಸ್ಸಿನಲ್ಲಿ ಮುಳುಗಿ ಹೋಯಿತು. ನನ್ನನ್ನು ಬಿಟ್ಟು ಉಳಿದವರಿ-ಗೆಲ್ಲ ಈ ಸಲಹೆ ಮಾಘಸ್ನಾನ.

ಟೋಸ್ಟರಿನ ಉಪಯೋಗ ಕಮ್ಮಿ ಮಾಡ-ಬೇಕೆಂಬ ಠರಾವು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು. ನಮ್ಮ ಅಮೇರಿಕದ ಪುತ್ರನನ್ನು ಬಿಟ್ಟರೆ ಉಳಿದವರಿಗೆಲ್ಲಾ ಬ್ರೆಡ್ ಅಂದರೆ ಅಷ್ಟಕ್ಕಷ್ಟೆ.

ಕೈ ರುಬ್ಬು ಗುಂಡನ್ನು ವಾಪಸ್ಸು ಬಳಕೆಗೆ ತರಲು ಮಹಿಳೆಯರಾರೂ ತಯಾರಿರಲಿಲ್ಲ.

ಬಟ್ಟೆ ಒಗೆಯುವ ಮಶೀನನ್ನು ಕಡಿಮೆ ಬಳಸಬೇಕೆಂಬ ನಿಲುವಿಗೆ ಬಹುಮತ ದೊರೆ-ಯಿತು. ಇದರ ಅರ್ಥ ನಾನು ಮತ್ತು ನನ್ನ ದ್ವಿತೀಯ ಪುತ್ರ ನಮ್ಮ ಬಟ್ಟೆ ನಾವೇ

ಒಗೆದುಕೊಳ್ಳಬೇಕು ಎಂದು.

ಈ ರೀತಿ ಬಹಳ ಹೊತ್ತು ಚರ್ಚೆ ನಡೆಸಿದ ನಂತರ ಕೆಲವು ಚಿಲ್ಲರೆ ಉಪಯೋಗಗಳನ್ನು ಸ್ಥಗಿತಗೊಳಿಸುವ ನಿರ್ಧಾರ ಮಾಡಿ ಅಂದಿನ ಸಭೆಯನ್ನು ಬರಖಾಸ್ತು ಮಾಡಿದೆವು.

ಆ ರಾತ್ರಿ ನನಗೆ ನಿದ್ರೆ ಹತ್ತಲಿಲ್ಲ. ನಮ್ಮ ಮೇಲೆ ಹೇರಿದ ಬಳಕೆಯ ಮಿತಿಯನ್ನು ಮುಟ್ಟಲು ಇನ್ನೂ ಬಹಳ ಸುಯಮದ ಅಗತ್ಯವಿತ್ತು. ಬಹಳ ಹೊತ್ತಿನ ಆಲೋಚನೆಯ ನಂತರ ಮಂಪರು ಹತ್ತಿತು.

ಮರುದಿನ ಭಾನುವಾರ ಸಾವಕಾಶವಾಗಿ ಎದ್ದು ಪ್ರಾತರ್ವಿಧಿ ಮುಗಿಸಿ, ವಾಕಿಂಗ್ ಹೋಗಿ ಬಂದು ಪಡಸಾಲೆಯ ಈಸಿ ಚೆಯರ್‌ನಲ್ಲಿ ಕುಳಿತೆ. ಮತ್ತೆ ಈ ತೊಡಕು ತಲೆ ತುರಿಸಿತು. ಆಗ ಘಂಟೆ ಸುಮಾರು ಹತ್ತೂವರೆ. ಮಕ್ಕಳು ಕೆಲವರು ಹೊರಗೆ ಹೋಗಿದ್ದರು. ನನ್ನಾಕೆ ಪಕ್ಕದ ಬಂಗಲೆಯಲ್ಲಿ ನಡೆಯುತ್ತಿದ್ದ ಭಗಿನೀ ಸಮಾಜದ ಮೀಟಿಂಗಿಗೆ ತೆರಳಿದ್ದಳು. ಕೊನೆಯ ಪುತ್ರಿ ಕಾಂಪೌಂಡಿನಲ್ಲಿ ಹೂವು ಕುಯ್ಯುತ್ತಿದ್ದಳು.

ಮೆಲ್ಲನೆ ಎದ್ದು ಮೀಟರಿದ್ದ ಗ್ಯಾರೇಜಿನತ್ತ ತೆರಳಿದೆ. ಎಲೆಕ್ಟ್ರಿಸಿಟಿ ಬೋರ್ಡಿನ ಆಜ್ಞೆಯಂತೆ ನಾವು ಕನಿಷ್ಠ ಪಕ್ಷ ಮೂವತ್ತು ಯೂನಿಟ್‌ಗಳನ್ನಾದರೂ ಕಮ್ಮಿ ಮಾಡಬೇಕಿತ್ತು. ಇದ್ದ ಎರಡು ಮೀಟರುಗಳಲ್ಲಿ ಒಂದರ ಗಾಲಿ ಸ್ಥಗಿತ. ಮತ್ತೊಂದು ನಿಧಾನವಾಗಿ ತಿರುಗುತ್ತಿತ್ತು. ಎಲಾ ಉಪಕರಣಗಳನ್ನೂ ಹೊತ್ತಿಸಿ ಒಂದು ಯೂನಿಟ್ ಖರ್ಚಾಗಲು ಎಷ್ಟು ವೇಳೆಯೆಂದು ನೋಡಿ, ಮತ್ತೆ ಒಂದೊಂದೇ ಉಪಕರಣವನ್ನು ಆರಿಸಿ ನೋಡಿದರೆ ಹೆಚ್ಚು ಖರ್ಚಿನ ಉಪಕರಣಗಳ ಅಂದಾಜು ಹತ್ತಬಹುದು ಎಂದುಕೊಂಡೆ. ಒಳಗೆ ಹೋಗಿ ಎಲ್ಲಾ ಉಪಕರಣಗಳನ್ನೂ ಹೊತ್ತಿಸಿ ಬಂದೆ. ಈಗ ನೋಡಿದರೆ ಎರಡೂ ಮೀಟರುಗಳ ಗಾಲಿಗಳು ಗರಗರನೇ ದೆವ್ವ ಬಡಿದಂತೆ ತಿರುಗುತ್ತಿದ್ದುವು. ಎಷ್ಟು ಹೊತ್ತು ಹಾಗೆಯೇ ಅದರಲ್ಲೇ ಆಸಕ್ತನಾಗಿ ನಿಂತಿದ್ದೆನೊ ನನಗೇ ತಿಳಿಯದು. ಎಲ್ಲೋ ಹತ್ತಿರದಲ್ಲೇ ಕೋಲಾಹಲವಾದಂತಾಯಿತು. ಒಳಗೆ ಓಡಿದೆ. ಅಡಿಗೆ ಮನೆಯಿಂದ ಕೆಟ್ಟ ವಾಸನೆ ಬರುತ್ತಿತ್ತು.

"ಹಯ್ಯೊ, ನಾನು ಸ್ವಲ್ಪ ಸಮಯಕ್ಕೆ ಪಕ್ಕದ ಮನೆಗೆ ಹೋದರೆ ಯಾರೋ ಹಾಟ್-ಪ್ಲೇಟ್ ಹೊತ್ತಿಸಿಬಿಟ್ಟಿದ್ದಾರೆ. ಹಾಲೆಲ್ಲಾ ಉಕ್ಕಿ ಚೆಲ್ಲಿ ನೆಲದ ಮೇಲೆ ಹರಿದುಬಿಟ್ಟಿದೆ. ಪಾತ್ರೆಯ ತಳ ಒಡೆದಿದೆ," ಎಂದು ಅಬ್ಬರಿಸಿದಳು ಅರ್ಧಾಂಗಿ.

ಪಕ್ಕದ ಓವನ್ನಿನಿಂದ ಹೊಗೆ ಬರುತ್ತಿತ್ತು.

"ನನ್ನ ಕೇಕ್, ನನ್ನ ಕೇಕ್, ಸಂಜೆ ಗೆಳತಿಯರು ಪಾರ್ಟಿಗೆ ಬರುತ್ತಾರೆಂದು ನಾನೇ ಮಾಡಿದ್ದ ಕೇಕ್, ಎಲ್ಲಾ ಸುಟ್ಟು ಹೋಯಿತೆ!" ಎಂದು ಗೋಳಾಡಿದಳು ನನ್ನ ಕೊನೆಯ ಮಗಳು.

ಅಕಸ್ಮಾತ್ತಾಗಿ ಬಚ್ಚಲು ಮನೆಯಿಂದ ರಪ್ ಎಂಬ ಸದ್ದು ಬಂತು.

ಒಂದೇ ವೇಗಕ್ಕೆ ಗ್ಯಾರೇಜಿಗೆ ಹಾರಿ ಮೇನ್ ಸ್ವಿಚ್‌ಗಳನ್ನು ಆರಿಸಿದೆ.

ಸದ್ಯಕ್ಕೆ ನಮ್ಮ ಮೀಟರ್ ರೀಡರ್ ವೆಂಕಣ್ಣನಿಗೆ ಶರಣು ಹೋಗಿದ್ದೇನೆ. ಅವನಿಗೆ ಅರ್ಪಿಸುತ್ತಿರುವ ಅಲ್ಪ ಶುಖಾಯ ಲವಣಾಯುದಿಂದ ನನ್ನ ಸಂಸಾರರಥ ಸದ್ಯಕ್ಕಂತೂ ಕಡಿಬಿಡಿಯಿಲ್ಲದೆ ನಡೆದಿದೆ. ✡

ಮನುಷ್ಯನು ಸದ್ಗುಣವನ್ನಂಗೀಕರಿಸಿದರೆ ಅತನು ಸ್ವತಃ ಶೀಲಸಂಪನ್ನನಾಗುವನು. ಅದರೆ ಸದ್ಗುಣದ ಅಂಗೀಕಾರವನ್ನು ಇಡೀ ಕುಟುಂಬವೇ ಮಾಡಿದರೆ ಅದು ಎಷ್ಟೋ ಪಟ್ಟು ಹೆಚ್ಚಾಗುವುದು! ಒಂದು ಗ್ರಾಮವೇ ಸದ್ಗುಣದ ಅಂಗೀಕಾರ ಮಾಡಿದರೆ ಅದು ಮತ್ತೆ ಎಷ್ಟೋ ಪಟ್ಟು ಹಬ್ಬಬಹುದು; ರಾಜ್ಯವೇ ಅಂಗೀಕರಿಸಿದರೆ ಇನ್ನೂ ಹೆಚ್ಚಿನ ಉತ್ಕರ್ಷವಾಗುವುದು; ಜಗತ್ತೇ ಅಂಗೀಕರಿಸಿದರೆ ಸದ್ಗುಣದ ಪ್ರಸಾರವು ವಿಶ್ವವ್ಯಾಪಿಯಾಗುವುದು."– ಲಾವೊತ್ಸೆ

ಸಂಗ್ರಹ: ಮಂಗೇಶ ಸಾವಂತ

ಹೊಸಗನ್ನಡ ಸಾಹಿತ್ಯದ ಆದ್ಯರು

ಡಾ. ವರದರಾಜ ಹುಯಿಲಗೋಳ

ಹೊಸಗನ್ನಡ ಸಾಹಿತ್ಯ ಎಂಬುದನ್ನು ಪ್ರಾರಂಭಿಕವಾಗಿ ಇಪ್ಪತ್ತನೆಯ ಶತಮಾನದ ಪೂರ್ವಾರ್ಧದ ಸಾಹಿತ್ಯವನ್ನು ಕುರಿತು ಉಪಯೋಗಿಸಿದೆ. ಸಾವಿರಾರು ವರುಷ ವಿಶೇಷ ವಿವಿಧತೆಯಿಂದ ಬೆಳೆದುಬಂದ ಕನ್ನಡ ಸಾಹಿತ್ಯವು ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಹೊಮ್ಮಿದ ನೂರೆಂಟು ರೂಪಗಳನ್ನು ತಾಳಿ, ತನ್ನ ಬಣ್ಣ ಬಣ್ಣದ ಗರಿಗಳನ್ನು ಹರಹಿ, 'ಹೊಸ ಕಾಲದ ನವಿಲಿ'ನಂತೆ ನರ್ತಿಸಿದೆ.

ಕನ್ನಡದಲ್ಲಿ ಹೀಗೆ ಹೊಸ ಸಾಹಿತ್ಯ ರೂಪಗಳ ನಿರ್ಮಾಣವಾಗಲು ಅನೇಕ ಕಾರಣಗಳುಂಟು. ಮೊದಲನೆದಾಗಿ ಇಂಗ್ಲೀಷ್ ಸಾಹಿತ್ಯದ ಅಭ್ಯಾಸ ಹೊಸ ವಿಚಾರಗಳನ್ನು ಪರಿಚಯಿಸಿತು. ಸಾಹಿತ್ಯದ ಹೊಸ ರೂಪಗಳು ಕನ್ನಡಿಗರಿಗೆ ಕಂಡವು. ಎರಡನೆಯದಾಗಿ ೧೯ನೆಯ ಶತಮಾನದಲ್ಲಿ ರೆವರೆಂಡ್ ಕಿಟೆಲ್ ರಂಥ ಮಿಶನರಿಗಳು ಕನ್ನಡ ಸಾಹಿತ್ಯದ ಸಮಗ್ರ ದೃಷ್ಟಿಯನ್ನು, ಕನ್ನಡ ಭಾಷೆಯ ಚಿತ್ರವನ್ನು ಕನ್ನಡಿಗರಿಗೆ ತೋರಿಸಿಕೊಟ್ಟರು. ೧೯ನೆಯ ಶತಮಾನದಲ್ಲಿ ಪ್ರಕಟವಾಗಿರುವ ಶಬ್ದಕೋಶಗಳು, ವ್ಯಾಕರಣಗಳು, ಭಾಷಾಶಾಸ್ತ್ರದ ಗ್ರಂಥಗಳು, ಹಳಗನ್ನಡ ಗ್ರಂಥಗಳ ಸಂಪಾದನೆ ಇವೆಲ್ಲವೂ ಮಿಶನರಿಯರಿಂದ ಶಾಸ್ತ್ರೀಯವಾಗಿ ಅಭ್ಯಸಿಸಲ್ಪಟ್ಟು ಒಂದು ಹೊಸ ಅಭ್ಯಾಸಕ್ರಮದ ರೀತಿಯಲ್ಲಿ ನೆಲಗಟ್ಟು ಹಾಕಲ್ಪಟ್ಟಿದೆ. ಇದರಿಂದ ಹೊಸ ಸಾಹಿತ್ಯಕ್ಕೆ ಒಂದು ದಾರಿಯನ್ನು ಮಾಡಿಕೊಟ್ಟಂತಾಗಿದೆ. ಕನ್ನಡದ ಅಚ್ಚುಖಾನೆಗಳೂ ಒಂದು ದೃಷ್ಟಿಯಿಂದ ಹೊಸ ಗ್ರಂಥಗಳು ಹೊರಬೀಳಲು ಅವಕಾಶ ಮಾಡಿಕೊಟ್ಟವೆ. ಬರೆದ ಗ್ರಂಥಗಳು ಬೇಗ ಪ್ರಕಟವಾಗುವುದನ್ನು ಅರಿತ ಲೇಖಕ ಹೊಸ ಸಾಹಿತ್ಯ ನಿರ್ಮಾಣಕ್ಕೆ ಸ್ಫೂರ್ತಿಯನ್ನು ಪಡೆದಿದ್ದಾನೆ. ಕೊನೆಯದಾಗಿ ಬಂಗಾಲಿ, ಮರಾಠಿ ಇಂಗ್ಲೀಷ್ ಮುಂತಾದ ಭಾಷೆಗಳಿಂದ ೧೯ನೆಯ ಶತಮಾನದಲ್ಲಿ ಪ್ರಕಟವಾದ ಗ್ರಂಥಗಳೂ ಹೊಸ ಸಾಹಿತ್ಯಕ್ಕೆ ಸಾಕಷ್ಟು ಅನುವು ಮಾಡಿಕೊಟ್ಟವೆ.

ಸ್ವತಂತ್ರವಾದ ಹೊಸ ಸಾಹಿತ್ಯ ೨೦ನೆಯ ಶತಮಾನದ ಪೂರ್ವಾರ್ಧದಲ್ಲಿ ಸಾಕಷ್ಟು ಪುಷ್ಟಿಗೊಂಡಿದೆ. ಕಾದಂಬರಿ, ಸಣ್ಣ ಕಥೆ, ಪ್ರಬಂಧ, ಭಾವಗೀತ, ನಾಟಕ ಈ ಮುಂತಾದವುಗಳು ಹೊಸ ಸಾಹಿತ್ಯದ ವಿವಿಧ ರೂಪಗಳು. ಸಾಹಿತ್ಯದ ಈ ಬೇರೆ ಬೇರೆ ರೂಪಗಳನ್ನು ಕನ್ನಡದಲ್ಲಿ ಮೊದಲು ಯಾರು ಯಾರು ಬಳಕೆಗೆ ತಂದರು ಎಂಬುದರ ಬಗ್ಗೆ ಬೇರೆ ಬೇರೆ ಲೇಖನಗಳಲ್ಲಿ ಬಂದ ವಿಚಾರ ಜೋಡಿಸುವುದು ಈ ಲೇಖನದ ಉದ್ದೇಶವಾಗಿದೆ.

ಹೊಸ ಸಾಹಿತ್ಯದ ವಿವಿಧ ರೂಪಗಳ ಮೊದಲ ಹರಿಕಾರರಿಗೆ ಯಾವಾಗಲೂ ಅಮೂಲ್ಯವಾದ ಸ್ಥಾನವಿದ್ದೇ ಇರುತ್ತದೆ. ಕೆಲವೊಂದು ಸಲ ಅಂಥ ಕೃತಿಗಳಲ್ಲಿ ವಿಶೇಷ ಸಾಹಿತ್ಯಸತ್ವ ಇರದೇ ಇರಬಹುದು. ಆದರೂ

ಕೃಪೆ: 'ಕರ್ನಾಟಕ ಭಾರತಿ'

ಸಾಹಿತ್ಯಕ್ಕೆ ಮೊಟ್ಟ ಮೊದಲು ಹೊಸ ರೂಪ ಕೊಟ್ಟ ಶ್ರೇಯಸ್ಸು, ಸಾಹಸ ಅವರದಾಗಿರುರುತ್ತದೆ. ಇಂಥದೇನಾದರೂ ಹೊಸದು ಕಂಡಾಗ ಸಂಪ್ರದಾಯವಂತರು ಮೂಗು ಮುರಿಯುವುದೂ ಉಂಟು. ಆ ಲೇಖಕನ ವಿರುದ್ಧ ಟೀಕೆ– ಉಗ್ರ ಟೀಕೆ– ಆಗುವುದೂ ಸಂಭವನೀಯ. ಇಂಥವುಗಳನ್ನೆಲ್ಲ ಎದುರಿಸಿದ ಶ್ರೇಯಸ್ಸು ಈ ಮೊದಲ ಹರಿಕಾರರಿಗೆ ಇರುತ್ತದೆ.

ಕಾದಂಬರಿ :

ಆಧುನಿಕ ಸಾಹಿತ್ಯದಲ್ಲಿ ಕಾದಂಬರಿ ಅತ್ಯಂತ ಜನಪ್ರಿಯವಾದ ಸಾಹಿತ್ಯದ ರೂಪವಾಗಿದೆ. ೧೯ನೆಯ ಶತಮಾನದಲ್ಲಿ ಈ ಕಾದಂಬರಿ ರೂಪದ ಸುಳುಹು ಹೊಳೆದಿದೆ. ಹಳೆಯ ರೀತಿಯನ್ನೇ ತೀಡಿದರೂ, ಅನುವಾದ ರೂಪದಲ್ಲಿ ಕಾದಂಬರಿ ಹೊಸತನಕ್ಕೆ ಪೀಠಿಕೆಯನ್ನು ಅಣಿಗೊಳಿಸಿದೆ.

ಕನ್ನಡದಲ್ಲಿ ಮೊದಲ ಕಾದಂಬರಿ ಯಾವುದು ? ಯಾರು ಮೊಟ್ಟ ಮೊದಲು ಕಾದಂಬರಿಗಳನ್ನು ಬರೆದವರು ? ಇದರ ಬಗ್ಗೆ ಕೆಲವು ವಾದ ವಿವಾದಗಳಿವೆ. ಬೋಳಾರ ಬಾಬೂರಾಯರ 'ವಾಗ್ದೇವಿ' ಮೊದಲ ಕಾದಂಬರಿಯೆಂದು ಮಂಗಳೂರಿನ ಮಿತ್ರರು ನುಡಿದರೆ, ಅ. ನ. ಕೃ. ಅವರು ಎಂ. ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ' ಎಂಬ ಸ್ವತಂತ್ರ ಕಾದಂಬರಿಯೆಂದು ಹೇಳಿರುವರು. ಆದರೆ ಇದಕ್ಕೂ ಮೊದಲಿನ ಕೃತಿಗಳೂ ಈಗ ಹೊರಬಿದ್ದಿವೆ.

ಡಾ. ರಂ. ಶ್ರೀ ಮುಗಳಿಯವರು ಕನ್ನಡ ಸಾಹಿತ್ಯದ ಇತಿಹಾಸವನ್ನು ಬರೆಯುತ್ತ "ರೆ. ವೀಗಲ್ ಅವರು ಮಾಡಿದ Pilgrim's Progress (John Bunyan) ಇದರ 'ಯಾತ್ರಿಕನ ಸಂಚಾರ' ಎಂಬ ಭಾಷಾಂತರವು ೧೮೪೭ರಲ್ಲಿ ಪ್ರಥಮ ಮುದ್ರಣವಾಗಿ ಹೊರಬಿದ್ದಿತು. ಸುದೀರ್ಘಕಥೆ ಅಥವಾ ಕಾದಂಬರಿಯಾಗಿ ಕನ್ನಡದಲ್ಲಿ ಇದೇ ಮೊದಲನೆಯದಾಗಿ ಪರಿಣಮಿಸಿತು"[೧] ಎಂದು ನುಡಿದಿರುವರು.

ಬಿ. ಶಂಕರಭಟ್ಟ ಮತ್ತು ಬಿ. ಎಚ್. ಶರ್ಮ ಅವರು ಈ ಗ್ರಂಥದ ಬಗ್ಗೆ ಹೇಳುತ್ತ, "'ಯಾತ್ರಿಕನ ಸಂಚಾರ'ವೆಂಬ ಹೆಸರಿನಿಂದ ಕನ್ನಡ ಗದ್ಯರೂಪಕ್ಕಿಳಿದ ಈ ಕೃತಿಗೆ ಹೊಸಗನ್ನಡ ಗದ್ಯ ಸಾಹಿತ್ಯದಲ್ಲಿ ಅದೊಂದು ವಿಶಿಷ್ಟ ಸ್ಥಾನವಿದೆ" ಎಂದು ಅಭಿಪ್ರಾಯಪಟ್ಟಿರುವರು.[೨]

ಗೋವಿಂದ ಪೈ ಅವರು ೧೮೪೭ಕ್ಕಿಂತಲೂ ಹಿಂದಕ್ಕೆ ಹೋಗಿ ೧೮೦೦ರಲ್ಲಿ ಯಾದವನೆಂಬ ಕವಿ 'ಕಲಾವತಿಪರಿಣಯ' ಎಂಬ ಕಾದಂಬರಿಯನ್ನು ಹಳಗನ್ನಡ ಶೈಲಿಯಲ್ಲಿ ಬರೆದಿರುವನೆಂದೂ ತಿಳಿಸಿರುವರು.[೩] ಗೋವಿಂದ ಪೈ ಅವರು ಇದೇ ವಿಚಾರವನ್ನು ಬರೆಯುತ್ತ ೧೮೨೩ರಲ್ಲಿ ಕೆಂಪು ನಾರಾಯಣ ಬರೆದ 'ಮುದ್ರಾ ಮಂಜೂಷ' ಎಂಬ ಗ್ರಂಥವು ಕನ್ನಡದ ಸ್ವತಂತ್ರ ಕಾದಂಬರಿಯೆಂದು ಒಪ್ಪಿಕೊಳ್ಳಬಹುದಾಗಿದೆಯೆಂದೂ ಅಭಿಪ್ರಾಯಪಟ್ಟಿರುವರು.[೪] ಮುಮ್ಮಡಿ ಕೃಷ್ಣರಾಜರ ಆಸ್ಥಾನದಲ್ಲಿದ್ದ ಕೆಂಪು ನಾರಾಯಣ 'ಮುದ್ರಾರಾಕ್ಷಸ' ಎಂಬ ಸಂಸ್ಕೃತ ನಾಟಕದ ಕಥೆಯನ್ನು ಆಧರಿಸಿ ಈ ಗ್ರಂಥವನ್ನು ಬರೆದಿರುವನು. ಮೂಲಕಥೆ ಸಂಸ್ಕೃತ ನಾಟಕದ್ದಾದರೂ ಸ್ವತಂತ್ರವಾಗಿ ಬರೆಯಲ್ಪಟ್ಟಿದೆ ಎನ್ನುವಷ್ಟು ಅದು ಸುಂದರವಾಗಿದೆಯೆಂಬ ಅಭಿಮತ ಗೋವಿಂದ ಪೈ ಅವರದಾಗಿದೆ.

ಆರ್. ಎನ್ ಎಮ್. ಅವರು 'ಕನ್ನಡ ಕಾದಂಬರಿಗಳ ಕಥೆ' ಎಂಬ ಲೇಖನವನ್ನು ಬರೆಯುತ್ತ, "ಕನ್ನಡ ಸಾಹಿತ್ಯದಲ್ಲಿ ಕಾದಂಬರಿಗಳ ಬಗ್ಗೆ ೧೮೮೫ನೆಯ ಇಸವಿಗೆ ಮೊದಲು ಏನನ್ನೂ ಹೇಳುವುದು ಬಲು ಕಷ್ಟ. ೧೮೯೫ನೆಯ ಮಾರ್ಚ್ ೩೧ ರಂದು ಮೈಸೂರು

---

೧. ಕನ್ನಡ ಸಾಹಿತ್ಯದ ಇತಿಹಾಸ (ಸಾಹಿತ್ಯ ಅಕಾದಮಿ ಪ್ರಕಟಣೆ). ಪುಟ ೧೯೩.

೨ ನಮ್ಮ ಸಾಹಿತ್ಯ ಪುಟ.- ೧೯

೩ ಕನ್ನಡ ನುಡಿ. ಸಂಪುಟ ೧೯, ಸಂಚಿಕೆ ೧೧, ಪುಟ ೨೯೦.

೪. ಕನ್ನಡ ನುಡಿ ಸಂಪುಟ ೧೯ ಸಂಚಿಕೆ ೧೧, ಪುಟ ೨೯೦

ನ್ಯಾಯಖಾತೆಯಲ್ಲಿ ಅಧಿಕಾರಿಗಳಾಗಿದ್ದ ಬಿ. ಬಿ. ವೆಂಕಟಾಚಾರ್ಯರು 'ದುರ್ಗೇಶನಂದಿನಿ' ಎಂಬ ಕಾದಂಬರಿಯನ್ನು ಪ್ರಕಟಿಸಿದರು... ಬಂಗಾಳಿ ಸಾಹಿತ್ಯದಲ್ಲಿ ತಮ್ಮ 'ಆನಂದಮಠ' ಕೃತಿಯಿಂದ ಕ್ರಾಂತಿಗೆ ಕಾರಣರಾದ ಬಂಕಿಮ ಚಂದ್ರರವರ ಮೂಲಕೃತಿಯಿಂದ ವೆಂಕಟಾಚಾರ್ಯರು ಅನುವಾದಿಸಿದ ಈ 'ದುರ್ಗೇಶನಂದಿನಿ'ಯನ್ನೇ ಕನ್ನಡದಲ್ಲಿ ಪ್ರಪ್ರಥಮ ಕಾದಂಬರಿಯೆಂದು ಹೇಳಬಹುದು.'[೫] ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಬಿ. ವೆಂಕಟಾಚಾರ್ಯರು ಬಂಕಿಮರ ಅನೇಕ ಕೃತಿಗಳನ್ನು ಕನ್ನಡಕ್ಕೆ ರೂಪಾಂತರಿಸಿ ಕಾದಂಬರಿ ಓದುವ ಅಭಿರುಚಿಯನ್ನು ಕನ್ನಡ ಜನತೆಗೆ ಒದಗಿಸಿರುವರು.

೧೮೦೦ ರಿಂದ ೧೮೫೫ ರ ವರೆಗೆ ಈ ವಿವಿಧ ಕೃತಿಗಳು ಪ್ರಪ್ರಥಮ ಕಾದಂಬರಿಗಳೇ? ಎಂಬ ಸ್ವಾರಸ್ಯಕರ ವಾದವಿದೆಯೆಂಬುದು ತಿಳಿದು ಬರುವುದು. ಈ ಕೃತಿಗಳು ಭಾಷಾಂತರವಾಗಿದ್ದರೂ ಸ್ವತಂತ್ರ ಕಾದಂಬರಿಗಳ ಸತ್ವ ಇವುಗಳಲ್ಲಿದೆ. ಏನೇ ಆದರೂ ಇವು ಸಂಪೂರ್ಣ ಸ್ವತಂತ್ರ ಕಾದಂಬರಿ ಎಂದು ನಾವು ಗಮನಿಸಲು ಬರುವಂತಿಲ್ಲ.

೧೮೯೫ ರಲ್ಲಿ ಗುಂಡ್ಲು ವೆಂಕಟಸುಬ್ಬರಾಯರು ಬರೆದ 'ಕೇಸರಿವಿಲಾಸ' ಎಂಬುದು ಸ್ವತಂತ್ರ ಕಾದಂಬರಿ. ಈ ಕಾದಂಬರಿಕಾರರು ಮದ್ರಾಸಿನ ಮೈಲಾಪುರದಲ್ಲಿ ಅಡ್ವೋಕೇಟರಾಗಿ ಇದ್ದರಂತೆ.

ಗುಲವಾಡಿ ವೆಂಕಟರಾಯರು 'ಇಂದಿರಾಬಾಯಿ' ಎಂಬ ಕಾದಂಬರಿಯನ್ನು ೧೮೯೯ರಲ್ಲಿ ಬರೆದು ಪ್ರಕಟಿಸಿದ್ದಾರೆ. ಆಗಿನ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಲೆಕ್ಟರರಾಗಿದ್ದ ಕ್ಲೀಪನ್' ಎಂಬವರು ಈ ಕಾದಂಬರಿಯನ್ನು ಇಂಗ್ಲೀಷಿನಲ್ಲಿ ಭಾಷಾಂತರ ಮಾಡಿ ಪ್ರಕಟಿಸಿರುವರು, ಸ್ವತಂತ್ರ ಕಾದಂಬರಿ ಹೀಗೆ ಇಂಗ್ಲೀಷಿನಲ್ಲಿಯೂ ಭಾಷಾಂತರವಾದುದು ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ. ಗುಲವಾಡಿ ವೆಂಕಟರಾಯರು 'ಸೀಮಂತಿನಿ' ಮತ್ತು 'ಭಾಗೀರಥಿ' ಎಂಬ ಇನ್ನೆರಡು ಕಾದಂಬರಿಗಳನ್ನು ಬರೆದಿರುವರು. ಇವರು ೧೮೭೭ ರಿಂದ ೧೯೧೩ ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬದುಕಿದ್ದು, ಸ್ವತಂತ್ರ ಸಾಮಾಜಿಕ ಕಾದಂಬರಿಗಳನ್ನು ಪ್ರಕಟಿಸಿರುವರು.

ಇದೇ ಕಾಲದಲ್ಲಿದ್ದ ಬೋಳಾರ ಬಾಬೂರಾಯರು 'ವಾಗ್ದೇವಿ' ಕಾದಂಬರಿಯನ್ನು ೧೯೦೫ರಲ್ಲಿ ಪ್ರಕಟಿಸಿರುವರು. ಗುಲ್ವಾಡಿ ಅಣ್ಣಾಜಿಯವರು 'ರೋಹಿಣಿ' ಎಂಬ ಕಾದಂಬರಿಯನ್ನು ೧೯೦೭ರಲ್ಲಿ ಪ್ರಕಟಿಸಿರುವರು. ಈ ಕಾದಂಬರಿಕಾರರೆಲ್ಲರೂ ದಕ್ಷಿಣ ಕನ್ನಡ ಜಿಲ್ಲೆಯವರೇ! ಸ್ವತಂತ್ರ ಸಾಮಾಜಿಕ ಕಾದಂಬರಿಗಳ ಜನ್ಮಸ್ಥಳ ದಕ್ಷಿಣ ಕನ್ನಡ ಜಿಲ್ಲೆಯೆಂದು ಹೇಳಬೇಕು.

"ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯನ್ನು ಹೇಳುವವರು ಗುಲವಾಡಿ ವೆಂಕಟರಾವ ಮತ್ತು ಅಣ್ಣಾಜಿರಾಯರಂಥವರ ಹೆಸರನ್ನು ಮರೆತೇ ಬಿಡುತ್ತಾರೆ. ಏತಕ್ಕೆ–ಎಂದು ನಮಗೆ ತಿಳಿಯದ ಸಂಗತಿಯಾಗಿದೆ,"[೬] ಎಂದು ಶ್ರೀ ಶಿವರಾಮ ಕಾರಂತರು ತಮ್ಮ ವಿಷಾದವನ್ನು ವ್ಯಕ್ತ ಮಾಡಿದ್ದಾರೆ. ಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿಗಳನ್ನು ಬರೆದ ಗುಲವಾಡಿ ವೆಂಕಟರಾಯರ ಬಗ್ಗೆ, ಅವರ ಕೃತಿಗಳ ವಿಚಾರವಿಮರ್ಶೆ ನಡೆಯುವುದು ಅತ್ಯಗತ್ಯವಾಗಿದೆ. ಚರಿತ್ರೆಯ ದೃಷ್ಟಿಯಿಂದ ಪ್ರಥಮ ಸಾಮಾಜಿಕ ಕಾದಂಬರಿಗೆ ವಿಶೇಷ ಸ್ಥಾನವಿದೆ. 'ಇಂದಿರಾಬಾಯಿ' ಕಾದಂಬರಿ ಭಾರತದ ವಿವಿಧ ಭಾಷೆಗಳಿಗೂ ಭಾಷಾಂತರವಾಗಬೇಕು.

ಎಂ. ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ' ಮತ್ತು 'ಮುಸುಕು ತೆರೆಯೋ ಮಾಯಾಂಗನೆ' ಈ ಕಾದಂಬರಿಗಳು ಸುಮಾರು ೧೯೧೫ ರಲ್ಲಿ ಪ್ರಕಟವಾಗಿವೆ. ಆದ್ದರಿಂದ ಎಂ. ಎಸ್. ಪುಟ್ಟಣ್ಣನವರೇ ಪ್ರಥಮ ಸಾಮಾಜಿಕ ಕಾದಂಬರಿ ಬರೆದವರು ದು

---

೫. ಕನ್ನಡ ನುಡಿ, ಸಂಪುಟ ೧೯, ಸಂಚಿಕೆ ೧೦ ಪುಟ ೨೯೦

೬. 'ಇಂದಿರಾಬಾಯಿ' ಕಾದಂಬರಿಯ ಮುನ್ನುಡಿಯಲ್ಲಿ ಪುಟ vi.

ಹೇಳಲು ಬರುವಂತಿಲ್ಲ. ಆರಂಭದ ಸ್ವತಂತ್ರ ಸಾಮಾಜಿಕ ಕಾದಂಬರಿಕಾರರಲ್ಲಿ ಇವರ ಹೆಸರನ್ನು ಸ್ಮರಿಸಬೇಕು.

೧೮೯೫ ರಲ್ಲಿ ಪ್ರಕಟವಾದ ಕೇಸರಿವಿಲಾಸ ಕಾದಂಬರಿಯ ಹೆಸರು ವಿಶೇಷ ಕೇಳಿಬಂದಿಲ್ಲ. ಆದರೆ 'ಇಂದಿರಾಬಾಯಿ' ಇದೇ ಪ್ರಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿ ಎಂದು ಶಿವರಾಮ ಕಾರಂತ, ಗೋವಿಂದ ಪೈ ಮುಂತಾದವರು ಒಪ್ಪಿಕೊಂಡು ಲೇಖನ ಬರೆದಿರುವರು.

ಸಣ್ಣ ಕಥೆ:

ಸ್ವತಂತ್ರವಾದ ಸಣ್ಣ ಕಥೆಗಳು ೨೦ನೆಯ ಶತಮಾನದ ಆದಿಭಾಗದಲ್ಲಿ ಆರಂಭವಾಗಿವೆ. ಪಂಜೆ ಮಂಗೇಶರಾಯರು, ಕೆರೂರ ವಾಸುದೇವಾಚಾರ್ಯರು, ಎಂ. ಎನ್. ಕಾಮತರು ಸ್ವತಂತ್ರ ಸಣ್ಣ ಕಥೆ ಬರೆಯುವಲ್ಲಿ ಆದ್ಯರು.

ನಿಜವಾಗಿಯೂ ಪ್ರಥಮರಾದ ನಮ್ಮ ಲೇಖಕರನ್ನು ಸಾಹಿತ್ಯ ಚರಿತ್ರಕಾರರು ಮರೆಯುತ್ತಾರೆಂಬ ವಿಷಾದವನ್ನು ಸಣ್ಣ ಕಥೆಗಳ ಬಗ್ಗೆಯೂ ಕಾರಂತರು ವ್ಯಕ್ತಮಾಡಿದ್ದಾರೆ. "ಕನ್ನಡ ಕಿರುಗತೆಗಳ ಚರಿತ್ರೆಯನ್ನು ಹೇಳುವಾಗ, ಅಂಥವರಲ್ಲಿ ಪ್ರಥಮರಾದ ಪಂಜೆ ಮಂಗೇಶರಾಯರನ್ನು ಮರೆತು ಬಿಡುತ್ತಾರೆ."[೭] ಎಂದು ಅವರು ನುಡಿದಿರುವರು. ಪಂಜೆ ಮಂಗೇಶರಾಯರು ೧೯೦೦ ಜುಲೈ ೧ ರಂದು 'ಸುವಾಸಿನಿ' ಎಂಬ ಪತ್ರಿಕೆಯಲ್ಲಿ ತಮ್ಮ ಪ್ರಥಮ ಸಣ್ಣ ಕಥೆಯನ್ನು ಪ್ರಕಟಿಸಿರುವರು. 'ನನ್ನ ಚಿಕ್ಕಪ್ಪ' (೧೯೦೨) 'ನನ್ನ ಚಿಕ್ಕ ತಾಯಿ' (೧೯೦೦) ಇಂಥ ಕಥೆಗಳನ್ನು ಬರೆದು ಪ್ರಕಟಿಸಿರುವರು. ಇವರು ಬರೆದ 'ಭಾರತಶ್ರವಣ' (೧೯೦೨) ಒಂದು ಒಳ್ಳೇ ವಿನೋದಚಿತ್ರವಾಗಿದೆ ಎಂದು ಕೆ. ನರಸಿಂಹ ಮೂರ್ತಿಯವರು ಹೇಳಿರುವರು.[೮] ತ. ಸು. ಶಾಮರಾಯರು 'ದಿವಂಗತ ಪಂಜೆ ಮಂಗೇಶರಾಯರಿಗೆ ಆ ಕೀರ್ತಿ (ಮೊದಲ ಸಣ್ಣ ಕಥೆಗಾರರು) ಸಲ್ಲಬೇಕಾದ್ದು ನಿರ್ವಿವಾದವೆಂದು ತೋರುತ್ತದೆ."[೯] ಎಂದು ನುಡಿದಿರುವರು. ಗೋವಿಂದ ಪೈ, ಶಿವರಾಮ ಕಾರಂತ ಎಲ್ಲರೂ ಇಂಥದೇ ಅಭಿಪ್ರಾಯವನ್ನು ವ್ಯಕ್ತ ಮಾಡಿರುವರು.

ಮಂಗಳೂರಿನ ಎಂ. ಎನ್. ಕಾಮತರ 'ಅಂದಿನ ಆ ಊರು' ಎಂಬ ಕಥಾ ಸಂಗ್ರಹವೊಂದಿದೆ. ಇದರಲ್ಲಿ ಐದು ಕಥೆಗಳಿವೆ. ಈ ಗ್ರಂಥಕ್ಕೆ ಮುನ್ನುಡಿಯನ್ನು ಬರೆಯುತ್ತ ಗೋವಿಂದ ಪೈಗಳು ೧೯೧೨ರಲ್ಲಿಯೇ ಎಂ. ಎನ್. ಕಾಮತರು ಸಣ್ಣ ಕಥೆ ಬರೆದಿರುವುದಾಗಿ ತಿಳಿಸಿದ್ದಾರೆ. ಇವರ ಕಥೆಗಳಲ್ಲಿ ಸುಖದ ಸಿಹಿ, ದುಃಖದ ಕಹಿ ಇವು ಕೂಡಿಬಂದಿವೆಯೆಂದೂ ಅವರು ನುಡಿದಿರುವರು. ಪಂಜೆ ಮಂಗೇಶರಾಯರ ಕಥೆಗಳು ವ್ಯಕ್ತಿಚಿತ್ರಗಳಂತಿದ್ದರೆ, ಎಂ. ಎನ್. ಕಾಮತರ ಕಥೆಗಳಲ್ಲಿ ಕಥೆಯ ಅಂಶವು ಹೆಚ್ಚಾಗಿದೆ.

ಕೆರೂರು ವಾಸುದೇವಾಚಾರ್ಯರು ಇದೇ ಕಾಲದಲ್ಲಿ ಸಣ್ಣ ಕಥೆಗಳನ್ನು ಬರೆದಿರುವರು. 'ತೊಳೆದ ಮುತ್ತು,' 'ಮಲ್ಲೇಶಿಯ ನಲ್ಲನಲ್ಲೆಯರು' ಇವು ಅವರು ಬರೆದ ಕಥೆಗಳಲ್ಲಿ ಪ್ರಸಿದ್ಧಿಯನ್ನು ಪಡೆದಿವೆ. ಪಂಜೆ ಮಂಗೇಶರಾಯರಿಗಿಂತಲೂ ಕೆರೂರು ವಾಸುದೇವಾಚಾರ್ಯರು ಹೆಚ್ಚು ಕತೆಗಳನ್ನು ಬರೆದಿರುವರು. ಮರಾಠಿಯ 'ಸಂಪೂರ್ಣ ಕತೆ' ಎಂಬ ಸಾಹಿತ್ಯ ಪ್ರಕಾರದ ತಂತ್ರದ ಅನುಕರಣವನ್ನು ಇವರು ಮಾಡಿರುವಂತಿದೆ. ಆದ್ದರಿಂದ ಇವರ ಕತೆಗಳು ನೀಳ್ಗತೆಗಳೇ ಆಗಿವೆ. ಆದರೆ ಅವು ಯಶಸ್ವಿಯಾದ ಸಾಮಾಜಿಕ ಕತೆಗಳಾಗಿವೆ. ಕೀರ್ತಿನಾಥ ಕುರ್ತಕೋಟಿಯವರು ಕೆರೂರು ವಾಸುದೇವಾಚಾರ್ಯರನ್ನು ಸಣ್ಣ ಕತೆಗಾರರಲ್ಲಿ ಮೊದಲಿಗರೆಂದು ಒಪ್ಪಿಕೊಂಡು, ಏನೇ ದೋಷಗಳಿದ್ದರೂ "ಕೆರೂರರ ಕತೆಗಳಲ್ಲಿ ಕಥನಗುಣ ಎದ್ದು ಕಾಣುತ್ತದೆ." ಎಂದಿರುವರು.[೧೦]

---

೭ 'ಇಂದಿರಾಬಾಯಿ', ಮುನ್ನುಡಿ. ಪುಟ vi.

೮. ಪ್ರಬುದ್ಧ ಕರ್ನಾಟಕ, ಸಂಪುಟ ೨೦ ಸಂಚಿಕೆ ೨.

೯. ಬೇವು-ಬೆಲ್ಲ, ಮುನ್ನುಡಿ, ಪುಟ ೨೦.

೧೦. ನಡೆದುಬಂದ ದಾರಿ, ಸಂಪುಟ ೨೨, ಪುಟ ೬೬೬.

೧೯೨೦ ರಲ್ಲಿ ಶ್ರೀನಿವಾಸರು (ಮಾಸ್ತಿ ವೆಂಕಟೇಶ ಅಯ್ಯಂಗಾರ) 'ಮಧುರವಾಣಿ' ಪತ್ರಿಕೆಯಲ್ಲಿ ಆಗಾಗ ಪ್ರಕಟವಾಗಿದ್ದ ತಮ್ಮ ಕಥೆಗಳನ್ನು ಸಂಗ್ರಹಿಸಿ 'ಕೆಲವು ಸಣ್ಣ ಕಥೆಗಳು' ಎಂಬ ಹೆಸರಿನಲ್ಲಿ ಪ್ರಕಟಿಸಿದರು. "ಶ್ರೀನಿವಾಸರ ಕೃತಿ ಹೆಚ್ಚು ಜನಗಳ ಮೇಲೆ ಪರಿಣಾಮವನ್ನುಂಟುಮಾಡಿ ಅನೇಕ ಸಾಹಿತಿಗಳನ್ನು ಕಥಾಸಾಹಿತ್ಯದ ಕಡೆಗೆ ತಿರುಗಿಸಿದುದರಿಂದ ಅವರನ್ನು ಈ ಸಾಹಿತ್ಯ ಪ್ರಕಾರದ ಆದ್ಯ ಪ್ರವರ್ತಕರೆಂದು ಕರೆಯುವ ರೂಢಿ ಬಂತು." ಎಂದು ಅ. ನ. ಕೃ. ಅವರು ನುಡಿದಿರುವರು.[೧೧] ಸಣ್ಣ ಕಥೆಗೆ ಸಾಹಿತ್ಯದಲ್ಲಿ ವಿಶೇಷ ಸ್ಥಾನ ಬರುವಂತೆ ಮಾಡಿದವರು ಪ್ರತಿಭಾಸಂಪನ್ನ ಶ್ರೀನಿವಾಸರೇ ಎಂದು ಅನೇಕರು ಒಪ್ಪಿಕೊಂಡಿರುವರು. ೧೯೦೦ ರಿಂದ ೧೯೨೦ರ ವರೆಗೆ ಸಾವಕಾಶವಾಗಿ ಬೆಳೆಯುತ್ತಿದ್ದ ಸಣ್ಣ ಕಥೆ ಶ್ರೀನಿವಾಸರಿಂದ ಸಂಪನ್ನತೆಯನ್ನು ಪಡೆಯಿತು. "ಸಣ್ಣ ಕತೆ ಪಂಜೆ, ಕಾವಂತ, ಕೆರೂರು ಇವರ ಬರವಣಿಗೆಯಲ್ಲಿ ಉಗಮ ಹೊಂದಿ ಮಾಸ್ತಿಯವರಲ್ಲಿ ವಿಸ್ತಾರವಾದ ಪ್ರವಾಹವಾಯಿತು...ಆಧುನಿಕ ಅರ್ಥದಲ್ಲಿ ಮಾಸ್ತಿಯವರೇ ಮೊದಲನೆಯ ಸಣ್ಣ ಕತೆಗಾರರು ಎಂದು ಹೇಳಬಹುದು,"[೧೨] ಎಂದು ರಂ. ಶ್ರೀ. ಮುಗಳಿಯವರು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿರುವರು.

ಕೆಲವೊಂದು ಭಿನ್ನಾಭಿಪ್ರಾಯಗಳಿದ್ದರೂ ಪಂಜೆ ಮಂಗೇಶರಾಯರನ್ನು ಮೊದಲ ಕಥೆಗಾರರೆಂದು ಮನ್ನಿಸಬೇಕು. 'ಕನ್ನಡ ಕಥೆಗಳ ವಿಧಾತೃ' ಎಂಬುದರ ಬಗ್ಗೆ ಬರೆಯುತ್ತ ಗೋವಿಂದ ಪೈ ಹೀಗೆ ಹೇಳಿರುವರು— "೧೯೦೦ರ ವರೆಗೆ ಕನ್ನಡ ಸಾಹಿತ್ಯದ ಅಂಗವೆನಿಸತಕ್ಕ ಚಿಕ್ಕ ಕಥೆ ಇಲ್ಲದುದರಿಂದ, ಅದೊಂದು ನೂತನತೆಯನ್ನು ಸೃಜಿಸಿ ಅದನ್ನು ನಮ್ಮ ಸಾಹಿತ್ಯಕ್ಕೆ ಮೊತ್ತಮೊದಲು ದೊರಕಿಸಿಕೊಟ್ಟ ಪಂಜೆಯವರೇ ಕನ್ನಡ ಕಥೆಗಳ ವಿಧಾತೃರೆಂಬ ಸ್ವಯಂ ವ್ಯಕ್ತವಾದ ಸತ್ಯಕ್ಕೆ ಬೇರೊಂದು ಸಾಕ್ಷ್ಯವನ್ನು ಬೇಕಿಲ್ಲ."[೧೩] ಆರ್. ಎಸ್. ಎಸ್. ಅವರು ಕನ್ನಡ ಸಣ್ಣ ಕತೆಗಳ "ಕಥೆ"ಯನ್ನು ಬರೆಯುತ್ತ ಅತ್ಯಂತ ಉತ್ಸಾಹದಿಂದ "೧೯೦೦ ಜುಲೈ ೧ನ್ನು ಕನ್ನಡ ಸಣ್ಣ ಕತೆಗಳ ಜನ್ಮದಿನವನ್ನಾಗಿ ಸುಲಭವಾಗಿ ಖಾತ್ರೀಕರಿಸಬಹುದು,"[೧೪] ಎಂದಿರುವರು.

ಭಾವಗೀತೆ :

ಹೊಸ ಕಾವ್ಯದ ವಿಶೇಷ ರೂಪವೆಂದರೆ ಭಾವಗೀತೆ. ಹೊಸ ಕಾವ್ಯದ ಇನ್ನೂ ವಿವಿಧ ಪ್ರಕಾರಗಳೂ ಉಂಟು. ಆದರೆ ಭಾವಗೀತೆ ಮೊದಲು ಆರಂಭವಾದ್ದರಿಂದ ಸಾಹಿತ್ಯದ ಈ ರೂಪವನ್ನು ಇಲ್ಲಿ ಎತ್ತಿಕೊಳ್ಳಲಾಗಿದೆ. ಆರಂಭ ಕಾಲದಲ್ಲಿ ಅನುವಾದವೋ ಸ್ವತಂತ್ರವೋ ಎಂಬುದನ್ನು ಹೇಳಲುಬಾರದಂತೆ ಈ ಭಾವಗೀತೆಗಳು ಕಂಡುಬರುತ್ತವೆ. ಹೊಸ ಭಾವ, ಹೊಸ ಛಂದಸ್ಸು, ನವೀನ ಶಬ್ದಸೃಷ್ಟಿ, ಕಿರಿದರಲ್ಲಿ ಹಿರಿದರ್ಥವನ್ನು ಹೇಳುವ ಶಕ್ತಿ ಇವೆಲ್ಲವೂ ಭಾವಗೀತೆಗಳಿಗೆ ರೂಪಕೊಟ್ಟಿವೆ.

ಸುಮಾರು ೧೮೫೭ರಲ್ಲಿ ಪ್ರಕಟವಾದ 'ಗೀತಪುಷ್ಪಗಳು' ಎಂಬ ಮಿಶನರಿಗಳ ಕೃತಿಯಲ್ಲಿ ಇಂಗ್ಲೀಷ್, ಜರ್ಮನ್ ಗೀತೆಗಳ ಅನುವಾದವಿದೆ. ಬಾಯಬಲ್ಲಿನ ಸಂಗತಿಗಳನ್ನು ಅನುವಾದಿಸುವಾಗ ಅವರು ಪಾಶ್ಚಾತ್ಯ ಸಂಗೀತಕ್ಕೆ ಪ್ರಾಧಾನ್ಯ ಕೊಟ್ಟಿರುವರು. ಅಂತೆಯೇ ಕನ್ನಡದಲ್ಲಿದ್ದ ಸಾಂಪ್ರದಾಯಿಕ ರೀತಿಯನ್ನು ತೊರೆದು ಹೊಸ ಛಂದಸ್ಸಿನಲ್ಲಿ ಅವರು ಬರೆಯುವ ಸಾಹಸ ಮಾಡಿದರು. ಉದಾಹರಣೆಗೆ ಕೆಳಗಿನ ಸಾಲುಗಳನ್ನು ನಿರೀಕ್ಷಿಸಬಹುದು.

ಇಲ್ಲಿ ನಮ್ಮ ಸುಖ ಕಷ್ಟ!
ಇಲ್ಲಿ ನಮ್ಮ ಲಾಭ ನಷ್ಟ!

---

೧೧. ಸಾಹಿತ್ಯ ಮತ್ತು ಜೀವನ, ಪುಟ ೮೩.
೧೨. ಕನ್ನಡ ಸಾಹಿತ್ಯದ ಇತಿಹಾಸ, ಪುಟ ೧೯೯.
೧೩. ಪಂಜೆಯವರ ನೆನಪಿಗಾಗಿ, ಪುಟ ೬.
೧೪. ಕನ್ನಡ ನುಡಿ, ಸಂಪುಟ ೨೦, ಸಂಚಿಕೆ ೫.

ನಮ್ಮ ಕ್ಷೇಮ ಶಾಪವು !
ನಮ್ಮ ಕೀರ್ತಿ ಶಾಪವು !

ಇಂಥ ಅನುವಾದಗಳು ಭಾವಗೀತೆಯ ಲಕ್ಷಣವನ್ನು ಆದಷ್ಟು ಮಟ್ಟಿಗೆ ಪ್ರಕಟಿಸುತ್ತವೆ.

ಇಂಗ್ಲೀಷ್ ಕಾವ್ಯದ ಅನುವಾದ ೧೯ ನೆಯ ಶತಮಾನದ ಕೊನೆ ಮತ್ತು ೨೦ ನೆಯ ಶತಮಾನದ ಆದಿಯಲ್ಲಿ ನಡೆದಿದೆ. ಹ. ನಾರಾಯಣರಾಯರು, ಪಂಜೆ ಮಂಗೇಶರಾಯರು, ಗೋವಿಂದ ಪೈ, ಎಸ್. ಜಿ. ನರಸಿಂಹಾಚಾರ್ಯ, ಬಿ. ಎಂ. ಶ್ರೀಕಂಠಯ್ಯ ಎಲ್ಲರೂ ಈ ಕಾಲದಲ್ಲಿ ಇಂಗ್ಲೀಷ್ ಗೀತಗಳ ಅನುವಾದಗಳನ್ನು ಮಾಡಿರುವರು. ಸಾಮಾನ್ಯವಾಗಿ ಬಿ. ಎಂ. ಶ್ರೀ. ಅವರೇ ಕನ್ನಡ ಭಾವಗೀತೆಗಳಿಗೆ ಶ್ರೀಕಾರವನ್ನು ಹಾಕಿದವರೆಂದು ವಿಮರ್ಶಕರು ಒಪ್ಪಿಕೊಂಡಿರುವರು. ಶ್ರೀ ಅವರ 'ಇಂಗ್ಲೀಷ್ ಗೀತ'ಗಳು ಅನುವಾದಗಳಾದರೂ ಕನ್ನಡದ ಕವನಗಳೇ ಎನ್ನುವಷ್ಟು ಪ್ರಭಾವಶಾಲಿಯಾಗಿವೆ. ೧೯೨೧ರಲ್ಲಿ ಪ್ರಕಟವಾದ ಈ ಗ್ರಂಥದಲ್ಲಿ ೬೦ ಅನುವಾದ ಕವನಗಳು, ಮೂರು ಸ್ವತಂತ್ರ ಕವನಗಳು ಒಳಗೊಂಡಿವೆ. "ಶ್ರೀ"ಯವರ 'ಇಂಗ್ಲೀಷ ಗೀತ'ಗಳಲ್ಲಿ ಎಲ್ಲ ಅಂಗಗಳಿಂದಲೂ ಪರಿಪೂರ್ಣವಾದ ಹೊಸಗನ್ನಡ ಕಾವ್ಯ ಸುಭದ್ರವಾಗಿ ಪ್ರತಿಷ್ಠಿತವಾಯಿತು."[೧೫] ಎಂದು ಕೀರ್ತಿನಾಥ ಕುರ್ತಕೋಟಿಯವರು ಈ ಗ್ರಂಥದ ಬಗ್ಗೆ ಹೇಳಿರುವರು.

ಪಂಜೆ ಮಂಗೇಶರಾಯರು ಸ್ವತಂತ್ರವಾದ ಕಾವ್ಯಗುಣವುಳ್ಳ ಭಾವಗೀತಗಳನ್ನು ಬರೆದಿರುವರು. 'ನಾಗರಹಾವು' 'ತೆಂಕಣ ಗಾಳಿಯಾಟ' ಇಂಥ ಪದ್ಯಗಳು ಹೃದ್ಯವಾಗಿದ್ದು ನವೋದಯ ಸ್ಫೂರ್ತಿಯಿಂದ ಕೂಡಿಕೊಂಡಿವೆ. ಶ್ರೀಯವರ ಭಾವಗೀತೆಗಳು ಪ್ರಕಟವಾಗುವುದಕ್ಕಿಂತ ಮೊದಲೇ ಪಂಜೆ ಮಂಗೇಶರಾಯರು ತಮ್ಮ ಕವನಗಳನ್ನು ಬರೆದಿರುವರು. 'ಪರೀಕ್ಷೆಯಲ್ಲಿ ಪರಾಜಿತನಾದ ವಿದ್ಯಾರ್ಥಿಯ ಪ್ರಲಾಪ' (೧೯೦೧), 'ಕಬ್ಬಿಗನ ಬುದ್ಧಿವಾದ' (೧೯೦೨) ಇಂಥ ಕವನಗಳು ಹೊಸ ವಿಚಾರಗಳಿಂದ ಕೂಡಿಕೊಂಡಿವೆ. ೨೦ ನೆಯ ಶತಮಾನದ ಮೊದಲಿನಲ್ಲಿಯೇ ಇವರ ಕವನಗಳು ಹುಟ್ಟಿವೆ. ಈ ಕಾರಣದಿಂದಲೇ ಪಂಜೆಯವರು ಸ್ವತಂತ್ರ ಭಾವಗೀತೆ ಬರೆಯುವುದರಲ್ಲಿ ಮೊದಲಿಗರಾಗಿರುವರು. "ಬಹುಶಃ ಸ್ವತಂತ್ರ ಕವಿತೆಗಳನ್ನು ರಚಿಸಿದವರಲ್ಲಿ ಪಂಜೆಯವರೇ ಮೊದಲಿಗರೆಂದು ತೋರುತ್ತದೆ.' ಎಂದು ರಂ. ಶ್ರೀ. ಮುಗಳಿ ಅಭಿಪ್ರಾಯವನ್ನು ವ್ಯಕ್ತಮಾಡಿರುವರು. ಗೋವಿಂದ ಪೈ ಮತ್ತು ಶಾಂತಕವಿಗಳು ಹೊಸ ಗೀತಗಳನ್ನು ಬರೆದು ಭಾವಗೀತೆಗೆ ಉತ್ತಮ ತಳಹದಿ ಹಾಕಿರುವರು. ಹೀಗೇ ಆದರೂ ಸ್ವತಂತ್ರ ಭಾವಗೀತೆಗಳ ಬಗ್ಗೆ ವಿಚಾರಿಸುವಾಗ ಪಂಜೆ ಮಂಗೇಶರಾಯರನ್ನು ಮೊದಲ ಕವಿಗಳೆಂದು ಗಣಿಸಬಹುದಾಗಿ ತೋರುತ್ತದೆ.

ನಾಟಕ

೧೯ ನೆಯ ಶತಮಾನದ ಕೊನೆಯ ಭಾಗದಿಂದ ನಾಟಕ ರೂಪವು ಜನಪ್ರಿಯವಾಗತೊಡಗಿದೆ. ಇಂಗ್ಲೀಷ್ ಸಾಹಿತ್ಯದಿಂದ ಅನೇಕ ನಾಟಕಗಳು ಕನ್ನಡದಲ್ಲಿ ಭಾಷಾಂತರಗೊಂಡಿವೆ. ೧೮೮೫ರಲ್ಲಿ ಗುಂಡೋ ಕೃಷ್ಣ ಚುರಮುರಿಯವರು 'ಒಥೆಲೋ' ನಾಟಕವನ್ನು 'ರಾಘವೇಂದ್ರರಾವ್' ಎಂಬ ಹೆಸರಿನಲ್ಲಿ ಬರೆದು ಪ್ರಕಟಿಸಿರುವರು. ಕೆರೂರ ವಾಸುದೇವಾಚಾರ್ಯರ 'ಸುರತ ನಗರದ ಶ್ರೇಷ್ಠಿ' (Merchant of Venice), 'ವಸಂತಯಾಮಿನಿ ಸ್ವಪ್ನಚಮತ್ಕಾರಗಳು' (Midsummer Night's Dream) ಇವು ಶೇಕ್ಸಪಿಯರನ ನಾಟಕಗಳ ಅನುವಾದಗಳಾಗಿವೆ. ಧೋಂಡೋ ನರಸಿಂಹ ಮುಳಬಾಗಲ ಅವರು 'ವೇಣೀಸಂಹಾರ,' 'ಮೃಚ್ಛಕಟಿಕ' ಮುಂತಾದ ಸಂಸ್ಕೃತ ನಾಟಕಗಳನ್ನು ಭಾಷಾಂತರಿಸಿರುವರು. ಚುರಮುರಿ ಶೇಷಗಿರಿಯವರ 'ಕನ್ನಡ ಶಾಕುಂತಲ' ಕನ್ನಡ ನಾಟಕವೇ ಆಗಿದೆ. ಇವೆಲ್ಲ

---

೧೫. ನಡೆದು ಬಂದ ದಾರಿ, ಸಂಪುಟ ೧ ಪುಟ ೪೦.

ನಾಟಕಗಳು ಭಾಷಾಂತರಗಳಾದರೂ ಅವುಗಳಲ್ಲಿ ನಾಟಕಕಾರರ ಅದ್ಭುತ ಪ್ರತಿಭೆ ಪ್ರಕಟವಾಗಿದೆ. ಸ್ವತಂತ್ರ ಸಾಮಾಜಿಕ ನಾಟಕಗಳಿಗೆ ಪ್ರಚೋದಿಸುವ ಶಕ್ತಿ ಅವುಗಳಲ್ಲಿದೆ.

ಆರಂಭದ ನಾಟಕಗಳು ಮಹಾರಾಷ್ಟ್ರಕ್ಕೆ ಹೊಸ ನಾಟಕ ಬರೆಯಲು ಪ್ರಚೋದನೆ ಕೊಟ್ಟುದು ಕನ್ನಡಿಗರಿಗೆ ಅಭಿಮಾನದ ಸಂಗತಿಯಾಗಿದೆ. ಚುರಮುರಿ ಅವರ 'ಕನ್ನಡ ಶಾಕುಂತಲ'ದ ಪ್ರಭಾವದಿಂದ ಮಹಾರಾಷ್ಟ್ರದಲ್ಲಿ ಹೊಸ ನಾಟಕ ಪರಿಪಾಠವೇ ಆರಂಭವಾಗಿದೆ. ದಕ್ಷಿಣ ಕನ್ನಡದವರು ಸಾಂಗಲಿಯಲ್ಲಿ ಯಕ್ಷಗಾನ ಪ್ರಸಂಗ ತೋರಿಸಿದ್ದರ ಪರಿಣಾಮವಾಗಿ, ಅದರಲ್ಲಿಯ ಹಾಡುಗಳನ್ನೇ ಅನುಸರಿಸಿ ಸಾಂಗಲಿಯ ಶ್ರೀ ಭಾವೆಯವರು ಮಹಾರಾಷ್ಟ್ರ ನಾಟಕದ ಆರಂಭ ಮಾಡಿದರು. "ಹೀಗೆ ಅನುಕರಣಪ್ರಧಾನವಾದ ಕಾಲದಲ್ಲಿ ಕನ್ನಡಿಗರು ನೆರೆಯ ಭಾಷಾಬಂಧುಗಳಿಗೆ ಅನುಕರಣಯೋಗ್ಯವಾದ ಕಾರ್ಯವನ್ನು ಮಾಡಿದುದು ತುಂಬ ಸ್ತುತ್ಯವಾಗಿದೆ." ಎಂದು ರಂ. ಶ್ರೀ. ಮುಗಳಿ ಕನ್ನಡಿಗರ ಈ ನಾಟಕಗಳನ್ನು ಹೊಗಳಿರುವರು.[೧೬]

ನಾಟಕಗಳಲ್ಲಿ ಸ್ವತಂತ್ರ ನಿರ್ಮಿತಿ ೧೮೮೭ರಲ್ಲಿಯೇ ಆದುದು ಅಭಿಮಾನದ ಸಂಗತಿಯೇ. ಕೆರೆಯ ಸೂರಿ ವೆಂಕಟರಮಣಶಾಸ್ತ್ರಿಗಳು 'ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ' ಎಂಬ ಸ್ವತಂತ್ರ ನಾಟಕವನ್ನು ಹವ್ಯಕ ದೇಸಿ ಭಾಷೆಯಲ್ಲಿ ಬರೆದು ೧೮೮೭ರಲ್ಲಿ ಮುಂಬೈಯಲ್ಲಿ ಪ್ರಕಟಿಸಿರುವರು. ಇದು ಹವ್ಯಕ ದೇಸಿ ಭಾಷೆಯಲ್ಲಿ ಇದ್ದುದರಿಂದ ವಿಶೇಷ ಪ್ರಚಾರವನ್ನು ಪಡೆಯಲಿಲ್ಲ. ಆದರೆ ಉಳಿದೆಲ್ಲ ಸಾಹಿತ್ಯದ ಪ್ರಕಾರಗಳಿಗಿಂತ ನಾಟಕವೇ ಈ ದೃಷ್ಟಿಯಿಂದ ಮೊದಲಾದದ್ದು ಅತ್ಯಂತ ಆಶ್ಚರ್ಯದ ಸಂಗತಿಯೇ!

ಹುಯಿಲಗೋಳ ನಾರಾಯಣರಾಯರು ೧೯೧೯ಕ್ಕಿಂತ ಮೊದಲು ೬-೭ ಐತಿಹಾಸಿಕ ನಾಟಕಗಳನ್ನು ಬರೆದಿರುವರು. ಆದರೆ ಸ್ವತಂತ್ರ ಸಾಮಾಜಿಕ ನಾಟಕಗಳನ್ನು ಅವರು ಬರೆದದ್ದು ೧೯೧೯ ರಿಂದ. ಅವರ 'ಶ್ರೀಧರ್ಮ ರಹಸ್ಯ'ವು ೧೯೧೯ ರಲ್ಲಿ ಪ್ರಕಟವಾಗಿದೆ. ಕನ್ನಡದಲ್ಲಿ ಇವೇ ಪ್ರಪ್ರಥಮ ಸ್ವತಂತ್ರ ಸಾಮಾಜಿಕ ನಾಟಕಗಳು ಎಂದು ಹೇಳಬಹುದು. ಈ ನಾಟಕಗಳು ರಂಗಭೂಮಿಯ ಮೇಲೆ ಬರುತ್ತಿದ್ದುದರಿಂದ ಬಹು ಬೇಗ ಪ್ರಚಾರಗೊಂಡು ಜನತೆಯ ಮೇಲೆ ಪರಿಣಾಮವನ್ನುಂಟುಮಾಡಿವೆ. ಇದೇ ಸಮಯಕ್ಕೆ ಟಿ. ಪಿ. ಕೈಲಾಸಂ ಅವರು 'ಟೊಳ್ಳು ಗಟ್ಟಿ' ಎಂಬ ನಾಟಕವನ್ನು ಬರೆದಿರುವರು. ೧೯೨೦ ರಿಂದ ಮುಂದೆ ಕೈಲಾಸಂ ಮತ್ತು ಶ್ರೀರಂಗ ಅವರು ಕನ್ನಡ ನಾಟ್ಯರಂಗದಲ್ಲಿ ಅದ್ಭುತ ಕ್ರಾಂತಿಯನ್ನು ಮಾಡಿರುವರು.

ಮೇಲಿನ ವಿವೇಚನೆಯಿಂದ ಸೂರಿ ವೆಂಕಟರಮಣಶಾಸ್ತ್ರಿಗಳಿಗಿಂತ ಹುಯಿಲಗೋಳ ನಾರಾಯಣರಾವ್ ಮತ್ತು ಕೈಲಾಸಂ ಅವರನ್ನು ಸ್ವತಂತ್ರ ನಾಟಕಕಾರರಲ್ಲಿ ಆದ್ಯರೆಂದು ಹೇಳುವುದು ಉಚಿತವೆಂದು ತೋರುತ್ತದೆ.

ಲಲಿತ ಪ್ರಬಂಧ:

ಹೊಸ ರೀತಿಯ ಲಲಿತ ಪ್ರಬಂಧವು ಮೊದಲು ಹೆಚ್ಚಾಗಿ ಪತ್ರಿಕೆಗಳಲ್ಲಿ ಕಂಡಿವೆ. ೨೦ನೆಯ ಶತಮಾನದ ಆದಿಯಲ್ಲಿ 'ಶುಭೋದಯ,' 'ಸಚಿತ್ರ ಭಾರತ,' 'ಕೀರವ,' 'ಸುವಾಸಿನಿ' ಮುಂತಾದ ಪತ್ರಿಕೆಗಳಲ್ಲಿ ಲಲಿತ ಪ್ರಬಂಧಗಳ ಲಕ್ಷಣಗಳಿಂದ ಕೂಡಿದ ಲೇಖನಗಳು ಪ್ರಕಟವಾಗಿವೆ. ಈ ದೃಷ್ಟಿಯಿಂದ ಈ ಸಾಹಿತ್ಯ ರೂಪವನ್ನು ವಿವೇಚಿಸಿದರೆ, ಇದು ೨೦ನೆಯ ಶತಮಾನದ ಆದಿಯಲ್ಲೇ ಆರಂಭವಾಯಿತೆಂದು ಹೇಳಬಹುದು. ಕೆರೂರು ವಾಸುದೇವಾಚಾರ್ಯ, ಕಾವ್ಯಾನಂದ ಪುಣೇಕರ ಮುಂತಾದವರು ಪತ್ರಿಕೆಯಲ್ಲಿಯ ಲೇಖನಗಳಿಗಾಗಿಯೇ ಬಹಳ ಪ್ರಸಿದ್ಧಿಯನ್ನು ಪಡೆದುದು ಕಂಡುಬಂದಿದೆ.

'ಕನ್ನಡದಲ್ಲಿ ಪ್ರಬಂಧಗಳ ಅವತಾರ' ಎಂಬ ಲೇಖನವನ್ನು ಗೋವಿಂದ ಪೈ ಅವರು

---
೧೬. ಸಾಹಿತ್ಯೋಪಾಸನೆ ಪುಟ ೬೩

ಬರೆಯುತ್ತ ಕೆಲವು ಮಹತ್ವದ ಮಾತುಗಳನ್ನು ಹೇಳಿಸಿರುವರು. "ಕನ್ನಡದಲ್ಲಿ ಪ್ರಬಂಧವು ಯಾವುದು ಮೊದಲಾಯಿತೆಂದು ವಿಚಾರಿಸಿದರೆ, ನನಗಾದರೋ ಮಂಗಳೂರಿನ 'ಸುವಾಸಿನಿ' ಎಂಬ ಮಾಸಪತ್ರಿಕೆಯ ೧೯೦೦ ನೆಯ ಇಸವಿಯ ಪ್ರಥಮ ಸಂಪುಟದ ಯಾವುದೋ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ ನಂದಳಿಕೆ ಲಕ್ಷ್ಮೀನಾರಣಪ್ಪನವರ 'ಜೋಗುಳ' ಎಂಬ ಚಲೋ ಲೇಖನದ ನೆನಪಾಗುತ್ತದೆ."[೧೭] ಗೋವಿಂದ ಪೈ ಅವರು ನಂತರ ಕೆಲವು ಲೇಖನಗಳನ್ನು ಪ್ರಕಟಿಸಿರುವರು. ೧೯೦೨ ರಲ್ಲಿ ಅದೇ ಪತ್ರಿಕೆಯಲ್ಲಿ ಎಂ. ಎನ್. ಶ್ರೀನಿವಾಸರಾಯರ 'ಭ್ರಮರ' ಮತ್ತು 'ಮೋಡ' ಎಂಬ ಲಲಿತಪ್ರಬಂಧ ಪ್ರಕಟವಾಗಿವೆ. ಮುಂದೆ ಸಂ. ೧೯೦೪ ರ 'ಸತ್ಯದೀಪಿಕೆ' ಎಂಬ ಪತ್ರಿಕೆಯಲ್ಲಿ ಪಂಜೆ ಮಂಗೇಶರಾಯರ 'ಹಲ್ಲಿ' ಮತ್ತು 'ಬಂಡಣಿಗೆ' ಎಂಬ ಮನೋಜ್ಞವಾದ ಲಲಿತಪ್ರಬಂಧ ಪ್ರಕಟವಾಗಿವೆ. ೧೯೧೬ ರಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರು 'ಶಾಂತಿ' ಎಂಬ ಉತ್ತಮ ಲಲಿತಪ್ರಬಂಧವನ್ನೇ ಬರೆದಿರುವರು.

೧೯೨೭ ರಲ್ಲಿ ಎ. ಸೀತಾರಾಮಯ್ಯನವರ 'ಪಂಪಾಯಾತ್ರೆ' ಪುಸ್ತಕವು ಪ್ರಕಟವಾಗಿದೆ. ಇದು ಪ್ರವಾಸಕಥನದ ಸುದೀರ್ಘವಾದ ಪ್ರಬಂಧವಾದರೂ ಇದರಲ್ಲಿ ಲಲಿತಪ್ರಬಂಧದ ಲಕ್ಷಣಗಳಿವೆ; ಇದು ಶ್ರೇಷ್ಠ ಸತ್ವವುಳ್ಳ ಲಲಿತಪ್ರಬಂಧವಾಗಿದೆ. 'ಪಂಪಾಯಾತ್ರೆ'ಯು ಲಲಿತ ಪ್ರಬಂಧದ ಮೊದಲನೆಯ ಗ್ರಂಥವೆಂದು ಹೇಳಬಹುದು.

೧೯೩೧ ರಲ್ಲಿ ಲಲಿತಪ್ರಬಂಧಗಳಿಗೆ ನಿಶ್ಚಿತ ಸ್ವರೂಪವು ದೊರೆತಿದೆ. ಪುಸ್ತಕ ರೂಪದಲ್ಲಿ ೧೯೩೧ ರಲ್ಲಿ ಧಾರವಾಡ ಗೆಳೆಯರ ಗುಂಪಿನ 'ಹರಟೆಗಳು', ಎಂ. ಜಿ. ವೆಂಕಟೇಶಯ್ಯನವರ 'ಪುಲ್ಲಯ್ಯನ ಪ್ರಬಂಧಗಳು', ಪು. ತಿ. ನರಸಿಂಹಾಚಾರ್ಯ ಅವರ 'ರಾಮಾಚಾರಿಯ ನೆನಪು' ಹೀಗೆ ಮೂರು ಗ್ರಂಥಗಳು ಪ್ರಕಟವಾಗಿವೆ.

೧೯೦೦ರಲ್ಲಿ ಆರಂಭವಾದ ಲಲಿತಪ್ರಬಂಧ ೧೯೩೧ ರಲ್ಲಿ ಸಂಪೂರ್ಣ ಬೆಳವಣಿಗೆಯನ್ನು ಪಡೆದಿದೆ, ೧೯೨೭ ಮತ್ತು ೧೯೩೧ ರಲ್ಲಿ ಪ್ರಕಟವಾದ ಗ್ರಂಥಗಳು ಲಲಿತ ಪ್ರಬಂಧದ ಮೊದಲಿನ ಗ್ರಂಥಗಳೆಂದು ನಾವು ಹೆಸರಿಸಬಹುದು. ಉಳಿದೆಲ್ಲ ಸಾಹಿತ್ಯ ಪ್ರಕಾರಗಳು ಭಾಷಾಂತರಗಳಿಂದಲೇ ಆರಂಭವಾಗಿವೆ; ಆದರೆ ಲಲಿತಪ್ರಬಂಧ ಮಾತ್ರ ಮೊದಲಿನಿಂದಲೂ ಸ್ವತಂತ್ರವಾಗಿಯೇ ಉಗಮವಾಗಿದೆ ಎಂಬುದು ವಿಶೇಷವಾಗಿದೆ.

*

ವಿವಿಧ ಸಾಹಿತ್ಯ ಪ್ರಕಾರಗಳ ಆರಂಭದ ವಿವರಗಳನ್ನು ವಿವೇಚಿಸಿದಾಗ, ಒಂದೆರಡು ಮಾತುಗಳು ಸ್ಪಷ್ಟವಾಗಿ ತಲೆದೋರುವವು. ೧೮೮೦ ರಿಂದ ೧೯೨೦ ರ ವರೆಗೆ ಹೊಸ ಸಾಹಿತ್ಯದ ಉಗಮವು ವಿವಿಧ ರೀತಿಗಳಲ್ಲಿ ಕಂಡು ಬಂದಿದೆ. ಸುಮಾರು ಈ ನಾಲ್ವತ್ತು ವರುಷಗಳನ್ನು ಹೊಸ ಸಾಹಿತ್ಯದ ಆರಂಭದ ಕಾಲವೆಂದು ನಾವು ಗ್ರಹಿಸಬಹುದು. ೧೯೨೦ ರಿಂದ ಮುಂದೆ ಹೊಸ ಸಾಹಿತ್ಯವು ತನ್ನ ನಿಶ್ಚಿತ ಮಾರ್ಗವನ್ನು ಕಂಡುಕೊಂಡು ಸತ್ವಯುತವಾಗಿ ಬೆಳೆಯುತ್ತ ನಡೆದಿದೆ. ಹೊಸ ಸಾಹಿತ್ಯ ರೂಪಗಳಿಗೆ ದಾರಿ ಮಾಡಿಕೊಟ್ಟವರಲ್ಲಿ ದಕ್ಷಿಣ ಕನ್ನಡದ ಬರಹಗಾರರು ಅಗ್ರಗಣ್ಯರಾಗಿದ್ದರೆಂಬುದೂ ಈ ವಿವೇಚನೆಯಿಂದ ತಿಳಿದು ಬರುತ್ತದೆ. ಕೊನೆಯದಾಗಿ ನಮ್ಮ ನಾಟಕಗಳು ನೆರೆಹೊರೆಯವರಿಗೆ ಸ್ಫೂರ್ತಿಯನ್ನು ಕೊಟ್ಟಿವೆ ಮತ್ತು ಲಲಿತಪ್ರಬಂಧಗಳು ಸ್ವತಂತ್ರವಾಗಿ ಅವತರಿಸಿವೆ ಎಂಬ ಹೆಮ್ಮೆಯ ಮಾತು ಮನನೀಯವಾಗಿದೆ.

---

೧೭ ಕನ್ನಡ ನುಡಿ ಸಂಪುಟ ೧೪ ಸಂಚಿಕೆ ೩ ಪುಟ ೭೦

ಚಹಾ ಕಪ್ಪಿನಲ್ಲಿ ಬಿರುಗಾಳಿ

ಕೆ. ಶ್ರೀಪತಿ ಶಾಸ್ತ್ರಿ

ಕ್ಷುಲ್ಲಕ ಕಾರಣಕ್ಕಾಗಿ ದೊಡ್ಡದೊಂದು ವಿವಾದ ಹುಟ್ಟಿಕೊಂಡರೆ ಇಂಗ್ಲೀಷಿನಲ್ಲಿ 'ಸ್ಟಾರ್ಮ್ ಇನ್ ಎ ಟೀ ಕಪ್' ಅರ್ಥಾತ್ 'ಚಹದ ಬಟ್ಟಲಿನಲ್ಲಿ ಬಿರುಗಾಳಿ' ಎಂದು ಹೇಳುವುದುಂಟು. ಈ ಗಾದೆ ಅನ್ವರ್ಥವಾಗುವ ಪ್ರಸಂಗ ೮೬ ವರ್ಷಗಳ ಹಿಂದೆ ಪುಣೆ ನಗರದಲ್ಲಿ ಬಂದು ಆ ಬಗ್ಗೆ ರಾಷ್ಟ್ರದಾದ್ಯಂತ ವರ್ಷಗಟ್ಟಲೆ ಚರ್ಚೆ ನಡೆಯಿತು. ಪಂಡಿತರ, ಸಮಾಜ ಸುಧಾರಕರ, ಸನಾತನಿಗಳ, ಹಾಗೆಯೆ ಜನಸಾಮಾನ್ಯರ ಅನೇಕ ಗೋಷ್ಠಿಗಳು ಏರ್ಪಟ್ಟು ಪುಣೆಯ ಕೆಲ ಪ್ರತಿಷ್ಠಿತರು ಕ್ರಿಶ್ಚನ್ ಮಿಶನರಿಗಳ ಕೈಲಿ ಒಂದು ಕಪ್ಪು ಚಹಾ ಕುಡಿದುದರ ಯುಕ್ತಾಯುಕ್ತತೆಯನ್ನು ಸುದೀರ್ಘವಾಗಿ ಚರ್ಚಿಸಲಾಯಿತು. ಈ ಬಗೆಗೆ ಆಗಿನ ಕಾಲದ ಸುಪ್ರಸಿದ್ಧ ವೃತ್ತಪತ್ರಿಕೆಗಳಲ್ಲಿ ಸನಾತನಿಗಳ ಹಾಗೂ ಸಮಾಜಸುಧಾರಕರಲ್ಲಿ ಒಂದು ಬಗೆಯ ಸಂಗ್ರಾಮವೇ ಏರ್ಪಟ್ಟಿತು. ಅವರೆಲ್ಲರನ್ನೂ ಸಾಮಾಜಿಕವಾಗಿ ಬಹಿಷ್ಕರಿಸಲಾಯಿತು. ಕೊನೆಗೆ ಸಮಾಜದ ಅತಿರಥ ಮಹಾರಥಿಗಳು ಸಮಾಜದ ಒತ್ತಡಕ್ಕೆ ಮಣಿದು ಶರಣಾದರು. ಹಳೆಯ ಸಾಮಾಜಿಕ ಕಂದಾಚಾರಗಳಿಂದ ಹೆಚ್ಚು ಪಟ್ಟಿಗೆ ಮುಕ್ತರಾದ ನಮಗೆ ಇಂದು ಆ ಪ್ರಸಂಗ ಹಾಸ್ಯಾಸ್ಪದವಾಗಿ ತೋರಬಹುದಾದರೂ ಈ ಘಟನೆಯಿಂದ ತ್ರಸ್ತರಾದವರ ಬವಣೆಯನ್ನು ನೆನೆಸಿಕೊಂಡಾಗ ಮೈ ಜುಮ್ಮೆನ್ನುತ್ತದೆ.

ಆಗಿನ ಕಾಲದಲ್ಲಿ ಪುಣೆಯು ಪ್ರಖರ ಪಂಡಿತರ ಮತ್ತು ನಾಡನಾಯಕರ ಕೇಂದ್ರವಾಗಿತ್ತು. ರಾನಡೆ, ಟಿಳಕ, ಆಗರಕರ್, ಗೋಖಲೆಯವರಂತಹ ಘಟಾನುಘಟಿಗಳು ಆಗ ಅಲ್ಲಿ ವಾಸಿಸುತ್ತಿದ್ದರು. ಸಮಾಜಸುಧಾರಕರ ಮತ್ತು ಸನಾತನಿಗಳ, ವಿದ್ವಾಂಸರ, ವಿಕ್ಷಿಪ್ತರ ತವರುಮನೆಯಾಗಿತ್ತು ಆ ಊರು. ಅಲ್ಲಿ ಕೆಲವು ಪ್ರತಿಷ್ಠಿತರು ಒಂದು ಬಟ್ಟಲು ಚಹಾ ಕುಡಿಯುವಂತೆ ಮಾಡಿ ಅವರನ್ನು ಬೇಕೆಂತಲೆ ಪೇಚಿಗೆ ಸಿಲುಕಿಸಿದ ವ್ಯಕ್ತಿ ಗೋಪಾಲ ಜೋಶಿ ಎನ್ನುವ ಕುಚೋದ್ಯ ಶಿಖಾಮಣಿ.


ಅವನೊಬ್ಬ ವಿಚಿತ್ರ ವ್ಯಕ್ತಿ. ಮಹಾಪ್ರಚಂಡ. ಆದರೆ ತಲೆಯಲ್ಲಿ ಯಾವಾಗಲೂ ವಿಕ್ಷಿಪ್ತ ಕಲ್ಪನೆಗಳು. ಆತ ಯಾವಾಗ ಏನು ಮಾಡಬಹುದು ಏನು ಮಾಡಲಿಕ್ಕಿಲ್ಲ ಎನ್ನುವ ನಿಯಮವಿದ್ದಿಲ್ಲ. ಸಮಾಜಸುಧಾರಕರ ಮತ್ತು ಸನಾತನಿಗಳ ವಾದವಿವಾದಗಳನ್ನೂ ಟೀಕೆಟಿಪ್ಪಣಿಗಳನ್ನೂ ಕೇಳಿ ಕೇಳಿ ಬೇಸತ್ತಿದ್ದ. ಅವನು ಎರಡೂ ಪಂಗಡದವರನ್ನು ರೊಚ್ಚಿಗೇಳುಮಾಡಿ ಚೆನ್ನಾಗಿ ಬುದ್ಧಿ ಕಲಿಸಬೇಕೆಂದು ಉಪಾಯ ಹೂಡಿದ. ಅದೇ ಒಂದು ಬಟ್ಟಲು ಚಹದ ಕಥೆ.

ಒಂದು ದಿನ ಆತ ಸ್ಥಳೀಯ ಕ್ರಿಶ್ಚಿಯನ್ ಮಿಶನರಿಗಳ ಪ್ರಮುಖರಾಗಿದ್ದ ರೆವರೆಂಡ್ ರಿವಿಂಗಟನ್ ಎನ್ನುವರೊಡನೆ ಮಾತನಾಡಿ ಮಿಶನ್ನಿನ ಆವರಣದಲ್ಲಿ ಭಾಷಣವನ್ನೇರ್ಪಡಿಸುವಂತೆ ಅವರ ಮನವೊಲಿಸಿದ. ಅನಂತರ ಸ್ನೇಹಿತರೊಡಗೂಡಿ ನಗರದ ಅನೇಕ ಪ್ರತಿಷ್ಠಿತರನ್ನು ಭೇಟಿಯಾಗಿ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಆಹ್ವಾನಿಸಿದ. ಮಿಶನ್ನಿನ ಆಮಂತ್ರಣ ಎಂದರೆ ದೊಡ್ಡ ಸನ್ಮಾನ ಎಂದೇ ಭಾವಿಸುತ್ತಿದ್ದ ಕಾಲ ಅದು. ಅಂತಹುದರಲ್ಲಿ ಕರೆ ಬಂದರೆ ಯಾರಾದರೂ ಬಿಟ್ಟಾರೆಯೇ? ನಗರದ ಎಲ್ಲ ಪ್ರತಿಷ್ಠಿತರೂ ಬಹು ಉತ್ಸಾಹದಿಂದ ಕಾರ್ಯಕ್ರಮಕ್ಕೆ ಬಂದರು. ೧೮೯೦ ರ ಅಕ್ಟೋಬರ್ ೪ ರಂದು ಆ ಐತಿಹಾಸಿಕ ಸಮಾರಂಭ ಜರುಗಿತು.

ಭಾಷಣ ಮುಗಿಯಿತು. ಅನಂತರ ಅತಿಥಿಗಳೆಲ್ಲರಿಗೆ ಚಹಾಪಾನದ ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದಿತು. ಇದು ಗೋಪಾಲ ಜೋಶಿಯ ಚೋದ್ಯವೆಂದು ಹೇಳಬೇಕಾದ್ದೇ ಇಲ್ಲ. ಓರಣವಾಗಿ ಇಟ್ಟಿದ್ದ ಟೇಬಲ್ಲುಗಳ ಮೇಲೆ ಸಭಿಕರಿಗಾಗಿ ಬಿಸ್ಕತ್ತು ಮತ್ತು ಚಹಾ ತಂದಿಡಲಾಯಿತು. ಅದನ್ನು ತಂದಿಟ್ಟವರು ಆ ಕ್ರಿಶ್ಚನ್ ಮಿಶನ್ನಿನ ಮತಾಂತರಿತ ಕ್ರಿಶ್ಚನ್ನರೆ. ಈ ಅನಿರೀಕ್ಷಿತ ಆತಿಥ್ಯದಿಂದ ಆ ಸ್ನೇಹಿತರಿಗೆ ದಿಗಿಲೋ ದಿಗಿಲು.

ಬಂದಿದ್ದ ಮುಖಂಡರಿಗೆ ಉಭಯಸಂಕಟ. ಕುಡಿದರೆ ಜಾತಿಗೆಟ್ಟೇವು ಎಂಬ ಭೀತಿ; ಕುಡಿಯದಿದ್ದರೆ ಶಿಷ್ಟಾಚಾರವನ್ನು ಭಂಗಗೊಳಿಸೇವೆಂಬ ಸಂಕೋಚ. ಕುಡಿದರೆ ಧರ್ಮಭ್ರಷ್ಟರಾದೇವೆಂದು ಊರಿನವರು ಆಪಾದಿಸುವ ದಿಗಿಲು; ಕುಡಿಯದಿದ್ದರೆ ವಿದ್ಯಾವಂತರಾಗಿಯೂ ಕಂದಾಚಾರವನ್ನು ಬಿಡದ ಗೊಡ್ಡುಗಳೆನ್ನುವ ಆಪಾದನೆ. ಕುಡಿಯಲಾರೆ ಎಂದು ಹೇಳಲಾರರು; ಕಣ್ಣು ಮುಚ್ಚಿಕೊಂಡು ಕುಡಿಯಲಾರರು. ಒಂದು ಬಟ್ಟಲು ಚಹಾ ಎಲ್ಲರನ್ನೂ ಹೌಹಾರಿಸಿತ್ತು. ಯಾರಾದರೂ ಆಗ ಅವರೆಲ್ಲರ ಫೋಟೋ ತೆಗೆದಿದ್ದರೆ ಅದೆಷ್ಟು ವಿವಿಧ ಭಾವನೆಗಳು ಮೂಡಿಬರುತ್ತಿದ್ದವೋ!

ಲೋಕಮಾನ್ಯ ಟಿಳಕ, ಪಾಟಣಕರ ಮತ್ತು ಕೇಳಕರ ಎನ್ನುವವರು ತಾವು ಬ್ರಾಹ್ಮಣರು ತಂದಿಟ್ಟರೆ ಮಾತ್ರ ಚಹಾ ಕುಡಿದೇವು ಎಂದರು. ಹಾಗೇ ಆಗಲೆಂದು ಅಲ್ಲಿಯೇ ಹಾಜರಿದ್ದ ಗೋಪಾಲ ಜೋಶಿಯ ಸೋದರ ಬೇರೆಯ ಬಟ್ಟಲಲ್ಲಿ ಚಹಾ ತಂದಿಟ್ಟ. ಆದರೆ ಅವನೇನೂ ಹೊಸದಾಗಿ ಚಹಾ ಮಾಡಿರಲಿಲ್ಲ. ಚಹಾ ತಯಾರುಮಾಡಿದ್ದವರು ಕಿರಿಸ್ತಾನರೇ. ಬ್ರಾಹ್ಮಣನು ತಂದಿಟ್ಟ ಮಾತ್ರಕ್ಕೆ ಮೈಲಿಗೆ ತಪ್ಪುವಂತಿರಲಿಲ್ಲ–ಏನೋ ಒಂದು ಸುಳ್ಳು



ಸಮಾಧಾನ ಬೇಕಷ್ಟೆ? ರಾನಡೆಯವರು ತಾವು ಜವಾಬಾರಿಂದ ಚಹಾ ಕುಡಿಯುವುದಾಗಿ ಹೇಳಿದರು. ಚವಟೆ ಬಂದಿತು. ಕಹಿ ಔಷಧಿಯನ್ನು ಕುಡಿಯುವಹಾಗೆ ಅಂತೂ ಇಂತೂ ಹೆದರುತ್ತಾ ಹೆದರುತ್ತಾ ಕುಡಿದೇಬಿಟ್ಟರು. ಮೇಲು ಜಾತಿಯ ಹಿಂದೂಗಳು, ಮಡಿವಂತರೆನಿಸಿಕೊಂಡ ಬ್ರಾಹ್ಮಣರು ಕ್ರಿಶ್ಚನ್ನರ ಕೈಲಿ ಚಹಾ ಕುಡಿಯುವುದೆ? ಸಂಸ್ಕೃತಿಸಂರಕ್ಷಕರೇ ಧರ್ಮಘಾತ ಮಾಡುವುದೆ? ಶಾಂತಂ ಪಾಪಂ!

ನಡೆದ ಘಟನೆಯನ್ನು ಯಾರೂ ಹೊರಗೆಡವಬಾರದೆಂದು ಆ ಪ್ರತಿಷ್ಠಿತರು ತಮ್ಮ ತಮ್ಮಲ್ಲಿ ಮಾತಾಡಿಕೊಂಡು ನಿರ್ಧರಿಸಿದರು. ಆದರೆ ಗೋಪಾಲ ಜೋಶಿ ಸುಮ್ಮನೆ ಕೂಡಬೇಕಲ್ಲ? ಅವನು ಆಗ ಬಹು ಜನಪ್ರಿಯವಾಗಿದ್ದ 'ಪುಣೆ ವೈಭವ' ಎನ್ನುವ ಪತ್ರಿಕೆಯಲ್ಲಿ ಸುದೀರ್ಘ ಹೇಳಿಕೆಯೊಂದನ್ನು ಕೊಟ್ಟು, ಚಹಾ ಪ್ರಕರಣವನ್ನು ರಸಭರಿತವಾಗಿ ವರ್ಣಿಸಿದ್ದಲ್ಲದೇ ಅಂದು ಅಲ್ಲಿ ಹಾಜರಿದ್ದ ೪೬ ಜನರ ಹೆಸರನ್ನೂ ಬಹಿರಂಗಪಡಿಸಿದ.

ಇದರಿಂದಾಗಿ ನಗರದಲ್ಲೆಲ್ಲಾ ಕೋಲಾಹಲವೆದ್ದಿತು. ಮಡಿವಂತ ಮಹಾ ಬ್ರಾಹ್ಮಣರೇ ಕ್ರಿಶ್ಚನ್ನರ ಕೈಲಿ ಚಹಾ ಕುಡಿಯುವುದೇ? ಟಿಳಕರಂತಹ ಮಹಾ ಮುಖಂಡರುಗಳೇ ಪವಿತ್ರ ಹಿಂದೂ ಧರ್ಮಕ್ಕೆ ಅಪಚಾರವೆಸಗುವುದೇ? ಸನಾತನಿಗಳ ಸಂತಾಪ ಹೇಳತೀರದು. ಧರ್ಮ ಮುಳುಗಿತೆಂದು ಗೋಳಾಡಿದರು. ಈ ಸುದ್ದಿ ಕ್ಷಿಪ್ರವಾಗಿ ಕಾಳ್ಗಿಚ್ಚಿನಂತೆ ನಾಡಿನಲ್ಲೆಲ್ಲಾ ಹರಡಿತು.

ಸರದಾರ ನಾತೂ ಎಂಬ ಶ್ರೀಮಂತ ಜಮೀನ್ದಾರ ಮಡಿವಂತರ ಮುಖಂಡನಾಗಿದ್ದ. ತಿಲಕರನ್ನು ಸಹ ಜಾತಿಯ ಹೊರಗೆ ಹಾಕಬೇಕೆಂದು ಆತ ಬಹಿರಂಗ ಸಭೆಯಲ್ಲಿ ಘೋಷಿಸಿದ. ನಗರಗಳಲ್ಲಿಯೂ ಈ ಪ್ರತಿಷ್ಠಿತರನ್ನು ಖಂಡಿಸುವ ಸಭೆಗಳಾದವು. ಅವರ ಈ 'ಧರ್ಮಭಂಡತನ'ವನ್ನು ಖಂಡಿಸುವ ಭಿತ್ತಿಪತ್ರಗಳು, ಹ್ಯಾಂಡ್‌ಬಿಲ್ಲುಗಳು ಎಲ್ಲೆಡೆಗೂ ಕಾಣಿಸಿಕೊಂಡವು. ಅಲ್ಲಿ ಚಹ ಕುಡಿ-

ಅಲರ್ಜಿ

ಈ ಅಲರ್ಜಿ
ಯಾವ ಮರ್ಜಿ
ಕಾಯುವದು ಎಷ್ಟು
ಅಯ್ಯೋ ಎಷ್ಟು ಕಷ್ಟವಯ್ಯಾ,
ಪುಷ್ಪ, ಪರಾಗ, ಸೋಪು, ಹೊರೆ,
ಕೆಂಪು ಬಣ್ಣ, ಉಪ್ಪಿಟ್ಟು ಹೀಗೆ
ಬಿಸಿಲು ಹಾಗೆ ಚಳಿ
ಮಳೆ ಅಂತ
ದೋಸ್ತ ದೋಸ್ತಿಯರ ಮಧ್ಯೆ
ನುಗ್ಗಿ ಕೊಚ್ಚುವ ದಿಕ್ಕು
ತಪ್ಪಿದ ಅಲರ್ಜಿಗೆ

ಅರ್ಜಿ ಬೇಡ
ದುಃಖ ಸಹಿಸಲಾರೆ ಅಂದೆ ಅಂತ
ಸುಖ ಜಾಸ್ತಿ ಕೊಟ್ಟೆಯೋ
ನನ್ನ ಸೂಕ್ಷ್ಮಗಳು ಜಡ್ಡು ಹಿಡಿದು
ಜ್ವರ ಬರುತ್ತದೆ ಕನಸಿಗೆ
ಅಶೋಕಾಯಾ ತನ್ನ ನೆರಳಿಗೆ ಕ್ಷಯ

ಬದುಕು ಹೀಗೆ
ಬಾ ಹೀಗೆ ಬಾ ಮೆಲ್ಲಗೆ
ಅನ್ಯತ್ರ ಹಗೂರ ಕರೆದೊಯ್ಯು
ಗಡಿಯಾರದ ಮುಳ್ಳಿನ ತುದಿಗೆ
ಬಿಲ್ಲಿಸುತ್ತದೆ

ಅಲ್ಲ,
ಅಲರ್ಜಿ
ನನಗೆ ಬದುಕಿನದೋ
ಬದುಕಿಗೆ ನನ್ನದೋ?

—ಜಯಂತ ಕಾಯ್ಕಿಣಿ

ದವರಿಗಂತೂ ನಾಲ್ಕು ಜನರ ಮಧ್ಯೆ ತಲೆ ಎತ್ತಿಕೊಂಡು ತಿರುಗುವುದೇ ಕಷ್ಟವಾಯಿತು.

ಅಷ್ಟೇ ಅಲ್ಲ, ಚಹಾ ಸಮಾರಂಭದಲ್ಲಿ ಭಾಗವಹಿಸಿದವರ ಮನೆಮಂದಿಯ ಮೇಲೆಲ್ಲ ಸಾಮೂಹಿಕವಾ ಬಹಿಷ್ಕಾರ ಹಾಕಲಾಯಿತು. ವಧೂವರರ ಸಂಬಂಧಗಳು ಮುರಿದವು, ಮದುವೆಯ ವಯಸ್ಸಿಗೆ ಬಂದು [illegible] ಹೆಣ್ಣಿಗೆ ಗಂ[illegible] ದೊರಕುವುದೇ ಕಠಿಣವಾಯಿತು. ಶ್ರಾದ್ಧಾದಿ ಕರ್ಮಗಳಿಗೆ ಬ್ರಾಹ್ಮಣ ಮುತ್ತೈದೆಯರು ಸಿಗದಾದರು. ಮದುವೆ-ಮುಂಜಿ ಪ್ರಸಂಗದಲ್ಲಿ ಅಡಿಗೆ ಭಟ್ಟರು ಸಹ ದೊರೆಯದಂತಾದ. ಹೀಗೆ ಹೆಜ್ಜೆ ಹೆಜ್ಜೆಗೆ ಬಹಿಷ್ಕಾರದ ಈ ಬೇಗೆ ತಟ್ಟುತ್ತಿತ್ತು. ಕುಡಿದ ಚಹಾ ನೆನಪಿಗೆ ಬರುತ್ತಿತ್ತು.

ಆ ಚಹಾವೀರರ ಪೈಕಿ ನಾಲ್ಕು ಜನ ತಮ್ಮ ಹೆಸರನ್ನು ಪ್ರಕಟಿಸಿ ಮಾನಹಾನಿ ಮಾಡಲಾಗಿದೆಯೆಂದು 'ಪುಣೆ ವೈಭವ'ದ ಮೇಲೆ ಮೊಕದ್ದಮೆ ಹೂಡಿದರು. ಕೋರ್ಟಿನಲ್ಲಿ ಜೋರಾಗಿ ವ್ಯಾಜ್ಯ ನಡೆದು ಕೊನೆಗೆ ಆ ಪತ್ರಿಕೆಯ ಮೇಲೆ ಇನ್ನೂರು ರೂಪಾಯಿ ಜುಲ್ಮಾನೆ ವಿಧಿಸಲಾಯಿತು.

ಈ 'ಧರ್ಮಲಂಡರು' ಬ್ರಿಟಿಷ್ ಕೋರ್ಟಿಗೆ ಮೊರೆ ಹೋಗುತ್ತಿರುವುದನ್ನು ಕಂಡು ಮಡಿವಂತರ ಮುಂದಾಳಾದ ಸರದಾರ ನಾತು ಉಳಿದೆಲ್ಲ 'ಪಾತಕಿ'ಗಳ ವಿರುದ್ಧ ಧರ್ಮಗುರು ಶಂಕರಾಚಾರ್ಯರ ಬಳಿ ಫಿರ್ಯಾದಿ ಮಾಡಿದ. ಶಂಕರಾಚಾರ್ಯರು ಒಂದು ವಿಚಾರಣಾ ಸಮಿತಿಯನ್ನು ನೇಮಿಸಿದರು.

ಸಭೆಗೆ ಹೋಗಿದ್ದರೂ ಕೂಡ ಚಹಾ ಕುಡಿಯದ ಹಲವರು ನಿರ್ದೋಷಿಗಳೆಂದು ವಿಚಾರಣಾ ಸಭೆ ನಿರ್ಧರಿಸಿತು. ಮತ್ತೆ ಕೆಲವರು ಚಿಕ್ಕ ಪುಟ್ಟ ಶಿಕ್ಷೆಗಳನ್ನು ಸ್ವೀಕರಿಸಿ ಬಡ ಜೀವವನ್ನು ಬದುಕಿಸಿಕೊಂಡರು. ಗೋಪಾಲ ಕೃಷ್ಣ ಗೋಖಲೆ ಮತ್ತು ಅವರ ೧೬ ಜನ ಸಂಗಾತಿಗಳು ಈ ಧರ್ಮ ನ್ಯಾಯಾಲಯವನ್ನು ಒಪ್ಪಲಿಲ್ಲ. ಉಳಿದವರೆಲ್ಲರಿಗೆ ಪ್ರಾಯಶ್ಚಿತ್ತದ ಶಿಕ್ಷೆ ವಿಧಿಸಲಾಯಿತು. ಬಾಳ ಗಂಗಾಧರ ಟಿಳಕರು ತಾವು ಕಾಶಿಗೆ ಹೋಗಿದ್ದಾಗ ಪ್ರಾಯಶ್ಚಿತ್ತ ಮಾಡಿಕೊಂಡು ಬಂದಿರುವೆನೆಂದು ಹೇಳಿದರು. ಮಹಾದೇವ ರಾನಡೆಯವರು ಪ್ರಾಯಶ್ಚಿತ್ತವನ್ನು ಒಪ್ಪಿಕೊಂಡು ಧರ್ಮವನ್ನು ಉಳಿಸಿಕೊಂಡರು. ಹೀಗೆ ಎರಡು ಮೂರು ವರುಷ ಒಂದೇ ಸಮನೆ ನಡೆದಿದ್ದ ಆರೋಪ ಪ್ರತ್ಯಾರೋಪಗಳು ಕೊನೆಗೊಂಡವು. ಈ ಜಗಳದಲ್ಲಿ ಮಿತ್ರರು ಶತ್ರುಗಳಾಗಿದ್ದರು. ಹಳೆಯ ಶತ್ರುಗಳ ಮಧ್ಯೆ ಸ್ನೇಹ ಹುಟ್ಟಿತ್ತು. ಜನತೆಯ ದೃಷ್ಟಿಯಲ್ಲಿ ಕೆಲಸವಿಲ್ಲದ ಈ ಪುಡಪೋಕರಿಗಳು ಧರ್ಮ ರಕ್ಷಕರಾಗಿದ್ದರು, ನಾಡಿನ ಮುಂದಾಳುಗಳು ಅಪರಾಧಿಗಳಾಗಿದ್ದರು. ಒಂದು ಬಟ್ಟಲು ಚಹದೊಳಗೆ ಅವರೆಲ್ಲರ ನೇತೃತ್ವ, ಪಾಂಡಿತ್ಯಗಳು ಮುಳುಗಿ ಹೋಗಿದ್ದವು.

ಟಿಳಕ, ರಾನಡೆಯಂತಹವರು ಧರ್ಮಶಾಸ್ತ್ರಗಳಲ್ಲಿ ಪಾರಂಗತರಾಗಿದ್ದರು, ತಮ್ಮ ಕೃತಿಯನ್ನು ಶಾಸ್ತ್ರದ ಆಧಾರದ ಮೇಲೆ ಸಮರ್ಥಿಸಿಕೊಳ್ಳಬಲ್ಲ ಪಾಂಡಿತ್ಯವನ್ನು ಹೊಂದಿದ್ದರು. ಬಾವಿಯಲ್ಲಿ ಬ್ರೆಡ್ಡಿನ ತುಣುಕನ್ನು ಹಾಕಿ ಆ ನೀರು ಕುಡಿದವರೆಲ್ಲ ಜಾತಿಗೆಟ್ಟರೆಂದು ಹೇಳುತ್ತಿದ್ದ ಕಾಲ ಅದಾಗಿತ್ತು. ಧರ್ಮಾಂತರ ಮಾಡುವುದು ಹಲವೆಡೆ ಹುಡುಗಾಟವಾಗಿ ಹೋಗಿತ್ತು. ನೀರಿನಷ್ಟೆ ಅಲ್ಲ, ಕ್ರಿಶ್ಚನ್ನರ ಕೈಲಿ ಚಹಾ ಕುಡಿದರೂ ಧರ್ಮನಿಷ್ಠೆಗೆ ಎಳ್ಳಷ್ಟು ಚ್ಯುತಿ ಬರಲಾರದೆಂಬುದನ್ನು ಜನಮನದಲ್ಲಿ ಬಿಂಬಿಸಬೇಕಾದ ಅಗತ್ಯವಿತ್ತು. ಇದರಿಂದಾಗಿ ಮೊದಮೊದಲು ತೊಂದರೆಯಾದರೂ ಅನುಕರ ಅದೊಂದು ಸಮಾಜ ಸೇವೆಯಾಗುತ್ತಿತ್ತು. ಆದರೆ ತಮ್ಮ ನಿಷ್ಠಾವಂತ ಅನುಯಾಯಿಗಳ ಮನಸ್ಸು ನೋಯಿಸಬಾರದೆಂದು ಪ್ರಾಯಶ್ಚಿತ್ತ ಮಾಡಿಕೊಳ್ಳಲು ಅವರೆಲ್ಲ ತಯಾರಾದರು.

ಹೀಗಾಗಿ ಚಹದ ಬಟ್ಟಲಿನಿಂದ ಎದ್ದ ಬಿರುಗಾಳಿ ಕೊನೆಗೆ ತಣ್ಣಗಾಯಿತು. ☆

ಅವಳಿನ್ನು ವಯಸ್ಸು ಕದಿಯುವಂತಿಲ್ಲ

ರಾಧಾಕೃಷ್ಣ ರಾವ್

ಪ್ರಾಚೀನ ಕಾಲದ ಮಹಿಳೆಯರಿಗೂ ಆಧುನಿಕ ಕಾಲದವರಿಗೂ ಒಂದು ಮುಖ್ಯ ಭೇದವಿದೆ. ಹಿಂದಿನವರಿಗೆ ವಯಸ್ಸು ಭಯವನ್ನು ತರುತ್ತಿರಲಿಲ್ಲ. ಮುತ್ತೈದೆಯರಿಗೆ ಸಮಾಜದಲ್ಲಿ ಗೌರವವಿತ್ತು. ಮುತ್ತೈದೆ ಎಂದರೆ ಹರೆಯ ಮೀರಿದ ಗಂಡ ಸಾಯದ ಹೆಂಗಸು ಅಂತ. ಇಂದಿನ ಹೆಂಗಸರಿಗೆ, ಅದೂ ನಗರಗಳಲ್ಲಿ, ವಿದ್ಯಾವಂತರಲ್ಲಿ, ವಯಸ್ಸು ಒಂದು ಅನಿಷ್ಟವೆನಿಸುತ್ತದೆ. ತಮ್ಮ ವಯಸ್ಸನ್ನು ಕಡಿಮೆ ಮಾಡಿ ಹೇಳುವುದೂ ಮತ್ತು ಅದನ್ನು ಮರೆಮಾಚಲು ಪ್ರಸಾಧನ, ಅಲಂಕಾರಗಳನ್ನು ಬಳಸುವುದು ಆಧುನಿಕ ನಾರಿಯರಿಗೆ ಅಂಟಿದ ಚಟ. ತಡವಾದ ಮದುವೆ, ಪುರುಷನನ್ನು ವಶದಲ್ಲಿಟ್ಟುಕೊಳ್ಳಲು ಸೌಂದರ್ಯ ಮತ್ತು ಯೌವನವೇ ಆಯುಧವೆಂದು ಬಗೆಯುವುದು ಈ "ಕಾಲ ಮಹಿಮೆ"ಗೆ ಕಾರಣವಾಗಿರಬಹುದು. ಸ್ತ್ರೀ ಯಾವಾಗಲೂ ಸ್ಪೃಹಣೀಯಳಾಗಿರಲು ಬಯಸುತ್ತಾಳೆ.

ಆದರೆ ಅವಳ ಸ್ನೋ, ಪೌಡರ್, ಕ್ರೀಮ್ ಮೊದಲಾದ ಎಲ್ಲ ಭ್ರಾಂತಿಜನಕ ಉಪಾಯಗಳ ನಡುವೆಯೂ ಅವಳ ವಯಸ್ಸು ಅವಳ ಮೈ ಮೂಳೆಗಳಲ್ಲಿ ತನ್ನ ನಿಜವನ್ನು ಉಸುರುತ್ತಿರುತ್ತದೆಂದು ಜರಾವಿಜ್ಞಾನಿಗಳು ಹೇಳುತ್ತಾರೆ. ನೀವು ಮದುವೆಯಾಗಬಯಸುವವರಾಗಿದ್ದು ನಿಮ್ಮ ವಧೂ-

ಪರೀಕ್ಷೆಯಲ್ಲಿ ತಗಲುಂಟೆಂಬ ಸಂಶಯವಿದ್ದರೆ, ಅಥವಾ ಪಾರ್ಟಿಗಳಲ್ಲೋ ಮತ್ತೆಲ್ಲಿಯೋ ಯಾರ ಸತ್ಯ ವಯಸ್ಸು ಎಷ್ಟಿರಬಹುದೆಂಬ ಬಗ್ಗೆ ನಿಮಗೆ ಅಧಿಕ ಪ್ರಸಂಗಿ ಕುತೂಹಲವಿದ್ದರೆ ಕೆಲವೊಂದು ಲಕ್ಷಣಗಳಿಂದ ನೀವು ಸತ್ಯವನ್ನು ಕಂಡುಕೊಳ್ಳಬಲ್ಲಿರಿ ಎಂದು ಸಾವಿರಾರು ಪ್ರಕರಣಗಳನ್ನು ಪರೀಕ್ಷಿಸಿದ ಮೇಲೆ ಜರಾತಜ್ಞರು ತೀರ್ಮಾನಿಸಿದ್ದಾರೆ.

ಅವರ ಮತದಂತೆ, ಸ್ತ್ರೀಯರ ಆಯುಷ್ಯದಲ್ಲಿ ನಾಲ್ಕು ಅವಸ್ಥೆಗಳಿವೆ-೨೦ ರೊಳಗೆ, ೩೦ ರೊಳಗೆ, ೪೦ ರೊಳಗೆ ಮತ್ತು ನಲುವತ್ತರಾಚೆ. ಪ್ರತಿಯೊಂದು ಅವಸ್ಥೆಯನ್ನೂ ಗುರುತಿಸುವ ಲಕ್ಷಣಗಳಿವೆ.

ಹುಡುಗಿ

೨೦ ಮೀರಿದ ಮೇಲೆ ಕಮ್ಮಿ ವಯಸ್ಸಿನವರಂತೆ ಕಾಣಿಸಲು ಹೆಂಗಸರು ಹಂಬಲಿಸಬಹುದಾದರೂ ೧೫-೧೬ ರಲ್ಲಿ ತಾವು ೨೦ ರವರಂತೆ ತೋರಿಸಿಕೊಳ್ಳಬೇಕೆಂಬ ಚಪಲ ಕೆಲ ಹುಡುಗಿಯರಿಗಿರುತ್ತದೆ. ಎತ್ತರ ನಿಲುವು ತುಂಬು ಮೈಕಟ್ಟು ಇದ್ದರಂತೂ ಇದು ಸುಲಭವೂ ಹೌದು.




ಆದರೆ ಅವಳ ಕಣ್ಣುಗಳ ಸುತ್ತ ನೋಡಿರಿ. ನಿಮಗೆ ಸತ್ಯ ತಿಳಿಯುವ ಸಂಭವ ಇದೆ. ಪ್ರಾಯ ಬರುತ್ತಿರುವಾಗ ಗಂಡಸರಿಗೇ ಇರಲಿ ಹೆಂಗಸರಿಗೇ ಇರಲಿ ಕಣ್ಣುಗಳ ಕೊನೆಗಳಿಂದ ಕಿರಣಗಳಂತೆ ಗೆರೆಗಳು ಮೂಡುತ್ತವೆ. ಇದನ್ನು ಗಂಡಸರಲ್ಲಾದರೆ ಕಾಕಪಾದ ಅನ್ನುವುದು ವಾಡಿಕೆ! ಆದರೆ ಹುಡುಗಿಯರ ವಿಷಯದಲ್ಲಿ ಇದನ್ನು ಮುದ್ದುಳ್ಳ ನಗುವಿನ ಗೆರೆಗಳು ಅನ್ನೋಣವಂತೆ. ಸುಮಾರು ಇಪ್ಪತ್ತು ಆಗುವಾಗ ಈ ಗೆರೆಗಳು ಹುಡುಗಿಯಲ್ಲಿ ಹೌದೋ ಅಲ್ಲವೋ ಎನ್ನುವಂತೆ ಕಾಣಿಸಿಕೊಳ್ಳುತ್ತವೆ. ಈ ಗೆರೆಗಳು ಇಲ್ಲವೇ ಇಲ್ಲವೆಂದಾದರೆ ಅವಳು ಷೋಡಶಿ ಎಂದು ನೀವು ತಿಳಿದುಕೊಳ್ಳಬಹುದು.

ಅವಳು ಇಪ್ಪತ್ತು ಮುಟ್ಟಿ ಹದಿನಾರರವಳಂತೆ ನಟಿಸುತ್ತಿದ್ದಾಳೋ ತದ್ವಿಪರೀತವಾಗಿಯೋ ಎಂಬ ಬಗ್ಗೆ ಅವಳ ಮೈ ಚರ್ಮವೂ ಚಾಡಿ ಹೇಳುತ್ತದೆ. ಮೈಚರ್ಮ ಅತ್ಯಂತ ನಯವಾಗಿದ್ದು, ಅದರ ಮೇಲೆ ರೋಮರಂಧ್ರಗಳು ಏನೇನೂ ಕಾಣಿಸದಿದ್ದರೆ ಅವಳು ೧೭ ರೊಳಗಿನವಳು ಎಂದು ತೀರ್ಮಾನಿಸಿರಿ. ಆ ವಯಸ್ಸಿನ ನಂತರ ಈ ರಂಧ್ರಗಳು ಸಾವಕಾಶವಾಗಿ ಗೋಚರಕ್ಕೆ ಬರುತ್ತವೆ. ೨೦ ಕ್ಕೆ ಅವು ಸ್ಪಷ್ಟವೇ ಆಗಿ ಕಾಣುವವು.

ಮುಂದಿನ ಹಲ್ಲುಗಳೂ ಅವಳ ವಯಸ್ಸನ್ನು ಹೇಳಬಲ್ಲವು. ಮುಂದಿನ ನಾಲ್ಕು ನಾಲ್ಕು ಹಲ್ಲುಗಳನ್ನು ನೋಡಿರಿ. ಹಾಲು ಹಲ್ಲುಗಳು ಬಿದ್ದು ಏಳನೇ ವಯಸ್ಸಿಗೆ ನಿಜ ಹಲ್ಲುಗಳು ಮೂಡಿದಾಗ 'ಹಲ್ಲುಗಳ ಬಾಯಿ ಗರಗಸದ ಬಾಯಿಯಂತಿರುತ್ತದೆ. ಬರಬರುತ್ತ ಜಗಿದು ಜಗಿದು ಈ ಅರಗಳು ಸವೆದು ಹೋಗಿ ೧೬-೧೭ ಕ್ಕೆ ಮುಂಬಲ್ಲುಗಳ ಬಾಯಿ ಉಳಿಯ ಬಾಯಿಯಂತಾಗುತ್ತವೆ.

ತರುಣಿ

ಸಂದರ್ಭ ಸಾಧಿಸಿ ಅವಳ ಮೊಣಕೈಗಳನ್ನು ಅವಲೋಕಿಸಿ, ಅವು ನಯವಾಗಿದ್ದರೆ ವಯಸ್ಸು ಇನ್ನೂ ೨೦-ಕ್ಕಿಂತ ಬಹಳ ಹೆಚ್ಚು



ಗಿಲ್ಲ ಎಂದುಕೊಳ್ಳಿ; ಮೊಣಕೈಗಳು ಒಣಕಲು ಛಾಯೆಯನ್ನಾಗಲಿ ನೆರಿಗೆಗಳನ್ನಾಗಲಿ ತೋರಿಸಿದರೆ ಅವಳು ೨೦ಕ್ಕೆ ಹತ್ತಿರವಾಗಿದ್ದಾಳೆ, ಅಥವಾ ಅದನ್ನು ದಾಟಿದ್ದಾಳೆ.

ರೆಪ್ಪೆಗಳನ್ನು ಗಮನಿಸಿರಿ. ೨೦ ರ ತರುಣಿಯ ರೆಪ್ಪೆಗಳು ನಯವಾಗಿ ಬಿಗಿಯಾಗಿರುತ್ತವೆ. ೩೦ನ್ನು ಸಮೀಪಿಸಿದಂತೆಲ್ಲಾ ಮೇಲು ಕೆಳಗಿನ ಎರಡೂ ರೆಪ್ಪೆಗಳು ಜೋಲತೊಡಗಿ ಅವುಗಳ ಮೇಲೆ ಅಡ್ಡ ನೆರಿಗೆಗಳು ಮೂಡಿರುತ್ತವೆ. ೨೦ ರಲ್ಲಿ ನಯವೂ ಕಡುಗಪ್ಪೂ ಆಗಿರುವ ರೆಪ್ಪೆಯ ಕೂದಲುಗಳು ೩೦ ರಷ್ಟೊತ್ತಿಗೆ ಒರಟಾಗಿ ಅವುಗಳ ತುದಿಗಳು ಕಳೆದುಂಡಿರುತ್ತವೆ.

ಮೂವತ್ತು ಮುಟ್ಟುವ ಮೊದಲೇ ಅವಳ ಹಣೆಯಲ್ಲಿ ಅಡ್ಡ ನೆರಿಗೆಗಳೂ ಮೂಗಿನ ಮೇಲ್ಭಾಗದಲ್ಲಿ ಉದ್ದ ಗೆರೆಗಳೂ ಮೂಡಿರುತ್ತವೆಂದೂ ನೆನಪಿಡಿ.

ಪ್ರೌಢೆ

ಮೇಲೆ ಹೇಳಿದ್ದನ್ನೆಲ್ಲ ಸರಿಯಾಗಿ ಪಾಠ ಮಾಡಿಕೊಂಡಿದ್ದರೆ ೩೦ ದಾಟಿದ ಪ್ರೌಢತನವನ್ನು ಕಂಡುಹಿಡಿಯಲು ನಿಮಗೆ ಅಷ್ಟು ಕಷ್ಟವಾಗಬಾರದು. ಇವಲ್ಲದೆ ಅವಳ ಕಟವಾಯಿಗಳು ಕೂಡ ತಮ್ಮ ಕಥೆ ಹೇಳಬಲ್ಲವು. ಮೂಗಿನ ಬುಡದಿಂದ ಕಟವಾಯಿಗಳ ಕಡೆ ಸಾಗಿದ ಎರಡು ನೆರಿಗೆಗಳು ನಾಲ್ಕನೇ ದಶಕದ ಲಕ್ಷಣಗಳು. ೪೦ ರಷ್ಟು ಹೊತ್ತಿಗೆ ಅವು ಆಳವಾಗುತ್ತವೆ.

ಸೀರೆಯುಡುವ ದೇಶಗಳಲ್ಲಿ ತುಸು ದುಷ್ಕರವಾದ ಇನ್ನೊಂದು ಪರೀಕ್ಷೆ ಇದೆ. ಅದೆಂದರೆ ಅವಳ ಕಾಲುಗಳ ಮೀನಖಂಡಗಳು. ೩೦ ರಲ್ಲಿ ಇನ್ನೂ ನಯವೂ ದೃಢವೂ ಆಗಿರುವ ಈ ಭಾಗ ೬೦ ರೊಳಗೆ ಸೂಕ್ಷ್ಮ ನೆರಿಗೆಗಳನ್ನು ಪಡೆದಿರುತ್ತವೆ. ಸರಿಯಾಗಿ ವ್ಯಾಯಾಮ ಮಾಡುವ ಹೆಂಗಸರು ಮಾತ್ರ ಈ ಲಕ್ಷಣದಿಂದ ತಪ್ಪಿಸಿಕೊಳ್ಳಬಲ್ಲರು. ಆದರೆ ಯಾವ ಉಪಾಯದಿಂದಲೂ ಮೀನಖಂಡಗಳಲ್ಲಿ ಸೂಕ್ಷ್ಮವಾಗಿ ಎದ್ದು ಕಾಣುವ ನೀಲಿಗಳನ್ನೂ ಹಿಂಗೈಯಲ್ಲಿ ಉಬ್ಬಿನಿಲ್ಲುವ ನೀಲಿಗಳನ್ನೂ ಅವಳು ತಪ್ಪಿಸಲಾರಳು.

ಮುತ್ತೈದೆ

ಒಬ್ಬಳಿಗೆ ನಲವತ್ತು ಮೀರುವಷ್ಟು ವರ್ಷವಾಗಿರಬಹುದು ಎಂದು ಊಹಿಸುವುದು



ಮಾತ್ರ ಬಲು ಕಷ್ಟವೆಂದು ತಜ್ಞರ ಮತ. (ಊಹಿಸುವ ಅಗತ್ಯವಾದರೂ ಏನು?) ಆದರೂ ಡಾ. ಮಾರ್ಟಿನ್ ಗುಪರ್ಟರೆಂಬ ಜರಾತಜ್ಞರು ಒಂದು ಸ್ಪಷ್ಟ ಲಕ್ಷಣವನ್ನು ಕಂಡುಹಿಡಿದರು. ಅದು ಉಗುರಿನಲ್ಲಿ ಗೋಚರಕ್ಕೆ ಬರುತ್ತದೆ.

೪೦ ದಾಟುವುದರೊಳಗೆ ಕೈಯುಗುರುಗಳಲ್ಲಿ ಉದ್ದಕ್ಕೆ (ಅಡ್ಡಕ್ಕಲ್ಲ) ಹತ್ತಿರ ಹತ್ತಿರವಾಗಿ ಗೆರೆಗಳು ಅಸ್ಪಷ್ಟವಾಗಿ ತಲೆದೋರುತ್ತವೆ. ೫೦ ಹತ್ತಿರವಾದಂತೆಲ್ಲ ಗೆರೆಗಳು ಆಳವಾಗುತ್ತಾ ಸ್ಪಷ್ಟವಾಗಿ ರೂಪುಗೊಳ್ಳುತ್ತವೆ. ಕೆಲವೊಂದು ಮಾನಸಿಕ ಅಥವಾ ದೈಹಿಕ ವಿಕಾರಗಳಲ್ಲಿ ಉಗುರುಗಳು ಅಡ್ಡಲಾಗಿ ಗೆರೆಗಳನ್ನು ರೂಪಿಸಿಕೊಳ್ಳಬಹುದಾದರೂ ವಯಸ್ಸು ಮಾತ್ರವೇ ಉದ್ದ ಗೆರೆಗಳನ್ನುಂಟು ಮಾಡಬಲ್ಲವೆಂದು ಗುಪರ್ಟರ ಅಭಿಪ್ರಾಯ.

೫೦ ರೊಳಗೆ ಹಸ್ತದ ಹಿಂಭಾಗದ ಚರ್ಮ ಸಡಿಲು ಬಿದ್ದುಬಿಡುತ್ತದೆ. ಅದನ್ನು ಬೆರಳುಗಳ ನಡುವೆ ಚಿವುಟಿ ಮೇಲೆಳೆದು ಬಿಟ್ಟರೆ ತತ್‌ಕ್ಷಣ ಚರ್ಮ ಮೂಲಸ್ಥಿತಿಗೆ ಮರಳುವುದಿಲ್ಲ. ಸ್ವಲ್ಪ ಹೊತ್ತು ನೆರಿಗೆ ಬಿದ್ದಿದ್ದು ಮೆಲ್ಲಗೆ ಸಮತಟ್ಟಾಗುತ್ತದೆ. ತರುಣಿಯರಲ್ಲಾದರೆ ಚಿವುಟಿ ಎಳೆದ ಹಿಂಗೈ ಚರ್ಮ ಬಿಟ್ಟೊಡನೆ ರಬ್ಬರಿನಂತೆ ಸ್ಥಿತಿಸ್ಥಾಪಕತ್ವವನ್ನು ತೋರಿಸುತ್ತದೆ.

ಎಷ್ಟೇ ತಿಂದುಂಡು ಪುಷ್ಟಿಯಾಗಿದ್ದರೂ ೪೦ ರ ನಂತರ ಕೊರಳ ಚರ್ಮ ಗಮನಾರ್ಹವಾಗಿ ಸಡಿಲು ಬೀಳುತ್ತದೆ. ವಿಶೇಷವಾಗಿ ಗಲ್ಲದಿಂದ ಕೊರಳ ಎಲುಬಿನ ವರೆಗಿನ ಮತ್ತು ಕಿವಿಗಳಿಂದ ಕೊರಳ ಎಲುಬಿನ ವರೆಗಿನ ಪ್ರದೇಶದಲ್ಲಿ ಈ ಲಕ್ಷಣ ತಪ್ಪದೆ ವ್ಯಕ್ತವಾಗುತ್ತದೆ.

ಮೇಲಿನ ಲಕ್ಷಣಗಳನ್ನು ಪರೀಕ್ಷಿಸುವಾಗ ಓದುಗರು ತುಂಬಾ ಬುದ್ಧಿವಂತಿಕೆಯನ್ನೂ ಎಚ್ಚರಿಕೆಯನ್ನು ವಹಿಸಬೇಕೆಂದು ಮುಂಜಾಗ್ರತೆ ಹೇಳಬೇಕಾಗಿದೆ. ಅಜಾಗ್ರತೆ ಮಾಡಿ ಪೇಚಾಟಕ್ಕೆ ಸಿಲುಕಿದರೆ ನಾವು ಜವಾಬ್ದಾರರಲ್ಲ ಎಂದು ಹೇಳಿ ಕೈ ತೊಳೆದುಕೊಳ್ಳುತ್ತೇವೆ.

ಹೌದಯ್ಯಾ, ಆದರೆ ಹೆಂಗಸರಿಗೆ ವಯಸ್ಸಾದದ್ದನ್ನು ತೋರಿಸಲು ದೇವರು ಇಷ್ಟೆಲ್ಲ ಕುರುಹುಗಳನ್ನು ಯಾಕೆ ಇಟ್ಟಿದ್ದಾನೆ? ಹೆಂಗಸರು ತಮ್ಮ ವಯಸ್ಸನ್ನು ಮರೆಮಾಚುತ್ತಾರೆಂದು ದೇವರು ಮೊದಲೇ ಊಹಿಸಿದ್ದನೇ? ಎಂದು ಕೇಳುವಿರಲ್ಲವೇ?

ಹಾಗೇನೂ ಇಲ್ಲ. ಅವಳಿಗೆ ಅನ್ವಯಿಸಿದ್ದೆಲ್ಲ ಅವನಿಗೂ ಅನ್ವಯಿಸುತ್ತದೆ. ✪



ನ್ಯಾಯಾಲಯದಲ್ಲಿ ಮಾತಿನ ಚಕಮಕಿ ಹೆಚ್ಚು. ನ್ಯಾಯಾಧೀಶನು ಸ್ವಪ್ರತಿಷ್ಠೆಯಿಂದ ವಕೀಲರೊಬ್ಬರನ್ನು ಕುರಿತು ಹೀಗೆ ಗರ್ಜಿಸಿದ: "ಅಯ್ಯಾ, ನೀವು ಹೇಳುವದೇ ಸರಿಯಾದರೆ ನನ್ನ ನ್ಯಾಯಶಾಸ್ತ್ರದ ಪುಸ್ತಕಗಳನ್ನೆಲ್ಲ ಸುಟ್ಟುಹಾಕಲೇಬೇಕು."

"ಬೇಡ ಮಹಾಸ್ವಾಮಿ, ಅವುಗಳನ್ನು ಪಠಿಸುವದು ಹೆಚ್ಚು ಪ್ರಯೋಜನಕರ," ವಕೀಲ ಶಾಂತಚಿತ್ತದಿಂದ ಉತ್ತರಿಸಿದ.

ಸಂಗ್ರಹ: ಎಂ. ಕೆ. ದೀಕ್ಷಿತ



ನಾಟಕ

ಪಾಲ್ ಸುದರ್ಶನ ಜ. ಸ.

ಮುಂಜಾವಿನ ಹೊಂಬಿಸಿಲು ಕಿಟಕಿಯ ಮೂಲಕ ಹಾಯ್ದು ನನ್ನ ಮುಖದ ಮೇಲೆಲ್ಲಾ ಪಸರಿಸಿದಾಗ ಎಚ್ಚರವಾಗುತ್ತದೆ. ಸಡಿಲವಾಗಿದ್ದ ಲುಂಗಿಯನ್ನು ಬಿಗಿಯಾಗಿ ಕಟ್ಟಿ, ಒಮ್ಮೆ ಜೋರಾಗಿ ಆಕಳಿಸಿ ಕೋಣೆಯಿಂದ ಹೊರಬರುತ್ತೇನೆ. ಹೊರಗೆ ವರಾಂಡದಲ್ಲಿ ನನ್ನವಳು ಕಸ ಗುಡಿಸುತ್ತಿರುವ ಸದ್ದು ಕೇಳಿಸುತ್ತದೆ. ತಲೆ ಬಾಚಲೆಂದು ಕನ್ನಡಿಯ ಮುಂದೆ ನಿಂತಾಗ ಷೇವ್ ಮಾಡಿ ಮೂರು ದಿನಗಳಾಗಿವೆ ಎಂಬ ನೆನಪಾಗುತ್ತದೆ.

“ಷೇವ ಮಾಡಲು ಸ್ವಲ್ಪ ಬಿಸಿನೀರಿಡುತ್ತೀಯಾ,” ಎಂದು ನಿಂತ ಜಾಗ-ದಿಂದಲೇ ಸ್ವರವೇರಿಸುತ್ತೇನೆ. ವರಾಂಡದಿಂದ ಯಾವ ಪ್ರತ್ಯುತ್ತರವೂ ಬರುವುದಿಲ್ಲ. ಜೊತೆಗೆ ಅವಳು ಕಸ ಗುಡಿಸುತ್ತಿರುವ ಚಿಪ್ಪೆಯಾದ ಕಸಪೊರಕೆ ನೆಲದ ಮೇಲೆ ತರಾಡುತ್ತಿರುವ ಸದ್ದು ಸಹ ಕೇಳಿಬರುತ್ತಿರುವುದಿಲ್ಲ. ಎಲ್ಲಿ ಹೋದಳು ? ಎಂದು ಪ್ರಶ್ನಿಸಿಕೊಳ್ಳುತ್ತಲೇ ವರಾಂಡಕ್ಕೆ ಬರುತ್ತೇನೆ. ನನ್ನವಳು ಒಂದು ಕೈಯಲ್ಲಿ ಕಸಪೊರಕೆಯನ್ನಿಡಿದು, ಮತ್ತೊಂದು ಕೈಯಿಂದ ವರಾಂಡದ ಕಿಟಕಿಯ ಸರಳುಗಳನ್ನಿಡಿದು, ಎತ್ತಲೋ ತದೇಕಚಿತ್ತದಿಂದ ನೋಡುತ್ತಿರುತ್ತಾಳೆ. ‘ಇವಳು ನೋಡುತ್ತಿರುವುದಾದರೂ ಏನು ?’ ಎಂಬ ಕುತೂಹಲದಿಂದ ಮೆಲ್ಲಗೆ ಅವಳ ಹಿಂಬದಿಗೆ ಸರಿದು ನಿಂತು ದೃಷ್ಟಿಯನ್ನು ಹೊರಚೆಲ್ಲುತ್ತೇನೆ.

ಹೊರಗೆ ನಾನು ಕಂಡ ದೃಶ್ಯದಿಂದ ಒಂದು ಕ್ಷಣ ನನ್ನವಳ ಮೇಲೇ ಗುಮಾನಿ ಬರುತ್ತದೆ. ನಮ್ಮ ಮನೆಯ ಎಡಗಡೆಯ ಕೊಠಡಿಯಲ್ಲಿ ವಾಸಿಸುತ್ತಿರುವ ಆ ಮೂವರು ಬ್ರಹ್ಮಚಾರಿಗಳು ಹಾಲಿವುಡ್ ಸ್ಟಾರುಗಳಂತೆ ಅರೆನಗ್ನರಾಗಿ, ಕಾಂಪೌಂಡಿನ ಗೋಡೆಗೆ ಒರಗಿ ನಿಂತು, ಏನನ್ನೋ ಚರ್ಚಿಸುತ್ತಾ ನಗೆಯ ಅಲೆಯೆಬ್ಬಿ-ಸುತ್ತಿರುತ್ತಾರೆ. ಇದ್ದಕ್ಕಿದ್ದಂತೆ, ಮದುವೆಯಾಗಿ ಇಷ್ಟು ವರ್ಷಗಳ ನಂತರ ನನ್ನ

ಮುಡದಿಯು ತ್ರ ಅನುಮಾನಾಸ್ಪದವಾಗಿ ನೋಡುತ್ತೇನೆ. ಛೇ: ನನ್ನವಳು ಅಂಥವಳಲ್ಲ ಎಂದುಕೊಳ್ಳುತ್ತಲೆ, "ಏನ್ ನೋಡ ತ್ತಿದ್ದೀಯಾ?..." ಎನ್ನುತ್ತೇನೆ. ಅನಿರೀಕ್ಷಿತವಾಗಿ ತನ್ನ ಬೆನ್ನ ಹಿಂದೆ ಬಂದ ಧ್ವನಿಯಿಂದಾಗಿ ಬೆಚ್ಚಿಬಿದ್ದ ಅವಳು, ಹಿಂತಿರುಗಿ ನನ್ನನ್ನು ನೋಡಿ, ಮತ್ತೆ ಸಾವರಿಸಿಕೊಂಡು ಮೂಕಳಂತೆ ರಸ್ತೆಯತ್ತ ಬೊಟ್ಟು ಮಾಡಿ ತೋರಿಸುತ್ತಾಳೆ. ನಾನು ಮತ್ತೆ ಆಚೆ ನೋಡಿದಾಗ ನನ್ನ ಕಣ್ಣಿಗೆ ಆ ಮೂವರು ಯುವಕರ ವಿನಾ ಬೇರೇನೂ ಕಾಣುವುದಿಲ್ಲ.

"ಅಲ್ಲಿ, ಜಾನಕಮ್ಮನವರ ಗೇಟಿನ ಬಳಿ ನೋಡಿದ್ರೆ..." ಎತ್ತಲೋ ನೋಡುತ್ತಿರುವ ನನ್ನನ್ನು ತಿವಿದು ಅವಳು ನುಡಿಯುತ್ತಾಳೆ. "ಯಾರೋ ಬೆಳಿಗ್ಗೆನೇ, ಈ ಅನಿಷ್ಟವನ್ನು ತಂದು ಚೆಲ್ಲಿದ್ದಾರೆ. ಇತ್ತೀಚೆಗಂತೂ ಈ ಮಾಟ—ಮಂತ್ರಗಳು ನಮ್ಮ ಬೀದಿಯಲ್ಲಿ ಜಾಸ್ತಿಯಾಗಿ ಹೋಗಿವೆ!" ಅವರು ಹೇಳುತ್ತಿದ್ದಂತೆ ನಾನು ಜಾನಕಮ್ಮನವರ ಗೇಟಿನತ್ತ ನೋಡುತ್ತೇನೆ. ಅಲ್ಲಿ, ರಸ್ತೆಯ ಆ ತುದಿಯಿಂದ ಈ ತುದಿಯವರೆಗೂ ಎಲೆಯಡಿಕೆ ಜಗಿದು ಉಗಿದಂತೆ ಕೆಂಪು ನೀರನ್ನು ವಕ್ರ ರೇಖೆಯೋಪಾದಿಯಲ್ಲಿ ಚೆಲ್ಲಲಾಗಿರುತ್ತೆ. ಮಧ್ಯೆ ಮಧ್ಯೆ ಇದ್ದಿಲ ತುಂಡುಗಳು, ಕೆಂಪು ಮೆಣಸಿನ ಕಾಯಿಗಳು, ಅರ್ಧಕ್ಕೆ ಕತ್ತರಿಸಿದ ನಿಂಬೆ, ಕೊಳೆತ ಬಾಳೆಹಣ್ಣು, ವೀಳ್ಯದೆಲೆ ಅಲ್ಲಲ್ಲಿ ಬಿದ್ದಿರುತ್ತದೆ. ನಾನು ಮೂಢ ನಂಬಿಕೆಗಳಿಗೆ ಬೆಂಬಲ ನೀಡುವವನಲ್ಲದಿದ್ದರೂ ಏಕೋ ಆ ದೃಶ್ಯವನ್ನು ನೋಡಲು ಯಾವುದೋ ಅವ್ಯಕ್ತವಾದ ಭಯ ನನ್ನ ಮನದಲ್ಲಿ ಮೂಡಿ, ದೃಷ್ಟಿಯನ್ನು ಅಲ್ಲಿಂದ ವರ್ಗಾಯಿಸುತ್ತೇನೆ.

"ಜಾನಕಮ್ಮನ ಮಗ ಅದನ್ನು ದಾಟಿಕೊಂಡೇ ಹೋದ. ಪಾಪ ಅವನಿಗೆ ಏನು ಅನಿಷ್ಟ ಕಾದಿದೆಯೋ..." ಕುರ್ಚಿಯ ಮೇಲೆ ಹೋಗಿ ಕುಳಿತುಕೊಳ್ಳುತ್ತಾ ನನ್ನವಳು ನುಡಿದಾಗ ಥಟ್ಟನೆ ನನ್ನ ಮಗ ರಾಜುವಿನ ನೆನ-



ಜಾಗುತ್ತದೆ.

"ರಾಜು ಎಲ್ಲೀ ಕಾಣ್ತಿಲ್ಲ?" ಎಂದು ಪ್ರಶ್ನಿಸಿ ಮತ್ತೆ ನನ್ನ ದೃಷ್ಟಿಯನ್ನು ಆ ಮಾಟದ ನೀರಿನತ್ತ ಹರಿಸುತ್ತೇನೆ. "ಪಕ್ಕದ ಮನೆ ರವಿ ಜತೆ ಇದ್ದಾನೆ." ಎಂದು ನುಡಿದು ಅಪೂರ್ಣವಾಗಿದ್ದ ತನ್ನ ಕೆಲಸವನ್ನು ಪೂರೈಸಲು ನನ್ನವಳು ಕಸಪೊರಕೆ ತೆಗೆದುಕೊಳ್ಳುತ್ತಾಳೆ.

ಬೃಂದಾವನ ಎಕ್ಸ್‌ಪ್ರೆಸ್‌ನಂತೆ ಓಡುವ ನಡಿಗೆಯಲ್ಲಿ ಬರುತ್ತಿದ್ದ ಪಕ್ಕದ ಮನೆ ಕೃಷ್ಣರಾಯರು, ಆ ಮಾಟದ ನೀರನ್ನು ಕಂಡು ಒಮ್ಮೆಲೇ ತಟಸ್ಥರಾಗಿಬಿಡುತ್ತಾರೆ. ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತೆ ಮುಖ ಮಾಡಿ, ಎಡಗೈಯಲ್ಲಿ ತಮ್ಮ ಪಂಚೆಯನ್ನು ಮೇಲಕ್ಕಿಡಿದೆತ್ತಿ ರಸ್ತೆಯ ಒಂದು ಬದಿಗೆ ಸರಿದು ಆ 'ಅನಿಷ್ಟ'ವನ್ನು ದಾಟುವಂತೆ ಎಚ್ಚರವಹಿಸಿ, ಆ ಕಡೆಯಿಂದ ಈ ಕಡೆಗೆ ಹಾಯ್ದು ಬರುತ್ತಾರೆ. ಮತ್ತೆ ಒಂದು ಕ್ಷಣ ನಿಂತು, ಆ ಕೆಂಪು ನೀರಿನ ಮೇಲೆ ಎಣಿಸಿದಂತೆ ಮೂರು ಸಲ ಉಗಿದು, ಮತ್ತೆ ಸರಸರನೆ ನಡೆಯುತ್ತಾರೆ. ನನಗೆ ಏನೋ ಮೋಜೆನ್ನಿಸಿ, ಹಾಗೆಯೇ ನೋಡುತ್ತಾ ನಿಲ್ಲುತ್ತೇನೆ. ಹೀಗೆಯೇ ಆ ರಸ್ತೆಯಲ್ಲಿ ಓಡಾಡುವ ಸಕಲರಿಗೂ ಆ ಕೆಂಪು ನೀರು ಕಬ್ಬನ್ ಪಾರ್ಕಿನೊಳಗಿನ ರಸ್ತೆಯ 'ರೋಡ್ ಹಂಪ್'ನಂತಾಗಿರುತ್ತದೆ. ಒಬ್ಬರಿಗಾದರೂ ಅದನ್ನು ದಾಟಿ ಹೋಗುವ ಎದೆಗಾರಿಕೆ ಇರುವುದಿಲ್ಲ. ಇದೆಲ್ಲಾ ನೋಡುತ್ತಾ ನಿಂತಂತೆ ನಿಜವಾಗಿಯೂ ಇದರಲ್ಲಿ ಏನಾದರೂ ಸತ್ಯವಿದೆಯೇ, ಶಕ್ತಿ ಇದೆಯೇ ಎಂಬ ಪ್ರಶ್ನೆ ಮನದಲ್ಲಿ ಉದ್ಭವಿಸುತ್ತದೆ. ಯೋಚಿಸುತ್ತಿದ್ದಂತೆ ಮನದಲ್ಲಿ ದ್ವಂದ್ವಗಳು ಮೂಡುತ್ತವೆ.

"ತಕೊಳ್ಳಿ, ಶೇವ್‌ಗೆ ಬಿಸಿ ನೀರು." ಎಂಬ ನನ್ನವಳ ಧ್ವನಿಯಿಂದ ಎಚ್ಚೆತ್ತುಕೊಳ್ಳುತ್ತೇನೆ. ಗೋಡೆಯ ಮೇಲಿನ ಗಡಿಯಾರ ಎಂಟೂವರೆ ತೋರಿಸಿದಾಗ ತಡವಾಯಿತು ಎಂದು, ಶೇವ್ ಮಾಡದೆಯೇ ಸ್ನಾನಕ್ಕಿಳಿಯುತ್ತೇನೆ.

ಕ್ರೀಕ್...ಕ್ರೀಕ್...ಎನ್ನುತ್ತಲೇ ಆತುರ-ಆತುರವಾಗಿ ಓಡಾಡಿ, ಅರ್ಧಂಬರ್ಧ ತಿಂಡಿ ತಿಂದು ನನ್ನವಳು ಕೊಟ್ಟ ತಿಂಡಿ ಡಬ್ಬಿ ಹಿಡಿದು ಚಪ್ಪಲಿಯನ್ನು ಮೆಟ್ಟುವಷ್ಟರಲ್ಲಿ ಗಂಟೆ ಹತ್ತಾಗಿರುತ್ತದೆ. ದಪ್ಪ ಕನ್ನಡಕದ ಹುಬ್ಬುಗಂಟಿನ ಹೆಡ್‌ಕ್ಲಾರ್ಕನ ಮುಖ ವಿಚಿತ್ರ ಕಣ್ಮುಂದೆ ತೇಲಿಬಂದಾಗ ಥತ್! ಎಂದು ತಲೆ ಕೊಡವಿ, ಹೊರಬಾಗಿಲಿನಿಂದ ಹೊರಬರುತ್ತೇನೆ. ಥಟ್ಟನೆ ಎದುರುಗಡೆಯ ಹಾಲಿವುಡ್ ಸ್ಟಾರುಗಳು ದೃಷ್ಟಿಗೆ ಗೋಚರಿಸಿ ಹೆದರಿಸುವ ವೇಳೆಯಲ್ಲಿ ಅಪಶಕುನವೆಂಬಂತೆ ಮನಸ್ಸಿನಲ್ಲಿ ಮುಜುಗರವಾಗುತ್ತದೆ. 'ಹಲ್ಕಾಗಳು' ಎಂದು ಮನದಲ್ಲಿಯೇ ಅವರನ್ನು ಶಪಿಸುತ್ತೇನೆ. ಅಲ್ಲಾ, ಬೆಳಗ್ಗಿನಿಂದಲೂ ತಾವು ನಿಂತಿರುವ ಭಂಗಿಯನ್ನು ಸಹ ಬದಲಾಯಿಸದೇ ನಿಂತಿರುವ ಇವರಿಗೆ ಬೇರೆ ಯಾವ ಕೆಲಸವೂ ಇಲ್ಲವೇ? ಎಂದು ಪ್ರಶ್ನಿಸಿಕೊಳ್ಳುತ್ತೇನೆ. ಹಿಂದೆಯೇ ಆ ಮೂವರು ನಮ್ಮ ಮನೆಯತ್ತಲೇ ನೋಡುತ್ತಿರುವ ಅರಿವಾಗಿ ಏನೋ ನೆನಪಾಗಿ ಹಿಂತಿರುಗಿ ನೋಡುತ್ತೇನೆ. ನನ್ನವಳು ಬಾಗಿಲಿಗೆ ಒರಗಿ ನಿಂತಿರುತ್ತಾಳೆ. ಅದು ನನ್ನನ್ನು ಆಫೀಸಿಗೆ ಅವಳು ಬೀಳ್ಕೊಡುವ ಪದ್ಧತಿ. ಆದರೆ, ಇಂದೇಕೋ ಇದರ ಬಗ್ಗೆ ನನಗೆ ಕಸಿವಿಸಿ ಎನ್ನಿಸಿ "ನಾ ಬರಲೇ..." ಎಂದು ನುಡಿದು ಒಳಗೆ ಹೋಗಲು ಅವಳಿಗೆ ಸಂಜ್ಞೆ ಮಾಡುತ್ತೇನೆ. ಒಂದು ಕ್ಷಣ ನನ್ನನ್ನೇ ವಿಚಿತ್ರವಾಗಿ ನೋಡಿದ ಅವಳು ಮರುಗಳಿಗೆಯಲ್ಲಿಯೇ ರಪ್ ಎಂದು ಬಾಗಿಲು ಮುಚ್ಚಿದಾಗ ನೆಮ್ಮದಿಯ ಉಸಿರೆಳೆದು ರಸ್ತೆಗಿಳಿಯುತ್ತೇನೆ.

ಒಂದೆರಡು ಹೆಜ್ಜೆ ಇಡುವಷ್ಟರಲ್ಲಿ ನನ್ನ ಕಾಲುಗಳು ನಿಷ್ಕ್ರಿಯವಾಗುತ್ತವೆ. ನಾನೀಗ ಆ ಕೆಂಪಾದ ಮಾಟದ ನೀರನ್ನು ದಾಟಿ ಹೋಗಬೇಕಾಗಿರುತ್ತದೆ. ನನ್ನಲ್ಲಿ ಹುದುಗಿದ್ದ ವಿಜ್ಞಾನದ ತಿಳುವಳಿಕೆ ಪುಟಿದೇಳುವ ಮುನ್ನ ಪಕ್ಕದ ಮನೆಯ ಕೃಷ್ಣರಾಯರಂತೆ ರಸ್ತೆಯ ಬದಿಗೆ ಸರಿದು, ಹೆಚ್ಚು ಕಮ್ಮಿ ನೀರಿಲ್ಲದ ಆ ಮೋರಿಯಲ್ಲಿ ಇಳಿದು ಅದನ್ನು ದಾಟದೆ ಅತ್ತ

ಕಡೆಗೆ ಸಾರುತ್ತೇನೆ.

ಇದ್ದಕ್ಕಿದ್ದಂತೆ ನಗೆಯ ಅಲೆಗಳು ನನ್ನ ಕಿವಿಗೆ ಅಪ್ಪಳಿಸಿದಾಗ ಹಿಂತಿರುಗಿ ನೋಡುತ್ತೇನೆ ಅದೇ ಯುವಕರು ನನ್ನತ್ತ ನೋಡಿ ಏನೋ ಮಾತನಾಡುತ್ತಾ ನಗುತ್ತಿದ್ದವರು ನಾನು ತಿರುಗಿ ನೋಡಿದ್ದನ್ನು ಕಂಡು ಒಮ್ಮೆಲೇ ಸುಮ್ಮನಾಗುತ್ತಾರೆ. ಏನಗೋ ಕೋಪದಿಂದ ಮುಖ ಕೆಂಪಗಾಗುತ್ತದೆ. ನನ್ನನ್ನು ನೋಡಿ ಅವರು ನಕ್ಕದ್ದಾದರೂ ಯಾತಕ್ಕೆ? ಎಂದು ಯೋಚಿಸುತ್ತೇನೆ. ಮನೆಯಿಂದ ಹೊರಟಾಗ ನನ್ನವಳನ್ನು ಸಂಜ್ಞೆ ಮಾಡಿ ಒಳಗೆ ಕಳುಹಿಸಿದ್ದು, ಅವಳು ರಪ್ ಎಂದು ಬಾಗಿಲು ಹಾಕಿದ್ದೂ ನೆನಪಿಗೆ ಬರುತ್ತದೆ. "ರ್‍ಯಾಸ್ಕಲ್ಸ್" ಎಂದು ಕಾಲನ್ನು ಬಲವಾಗಿ ನೆಲಕ್ಕೆ ಅಪ್ಪಳಿಸಿ ಮುನ್ನಡೆಯುತ್ತೇನೆ. ರಸ್ತೆಯ ತಿರುವಿನಲ್ಲಿ ತನ್ನ ಸಮವಯಸ್ಕನೊಡನೆ ಆಡುತ್ತಿರುವ ರಾಜುವನ್ನು ಕಂಡು ನನ್ನ ಕೋಪ ಇಮ್ಮಡಿಯಾಗುತ್ತದೆ.

"ನಡಿಯೋ ಮನೆಗೆ ಪೋಲಿ," ಎಂದು ಅವನ ಬೆನ್ನ ಮೇಲೆ ಎರಡು ಬಾರಿಸುತ್ತೇನೆ. ನನ್ನ ಅನಿರೀಕ್ಷಿತ ದಾಳಿಯಿಂದ ಗಾಬರಿಗೊಂಡ ರಾಜು, ಮನೆಯತ್ತ ಓಡುತ್ತಾನೆ.

■

"ಸಾರ್, ನಿಮಗೆ ಫೋನ್ ಇದೆ," ಪ್ಯೂನ್ ತಿಮ್ಮಯ್ಯನ ಧ್ವನಿಯಿಂದಾಗಿ ಕಡತಗಳಿಂದ ತಲೆಯೆತ್ತುತ್ತೇನೆ. ತನ್ನ ಕರ್ತವ್ಯ ತೀರಿದ ಭಾವದಲ್ಲಿ ಅವನಾಗಲೇ ತನ್ನ ಸ್ಥಾನವನ್ನು ಅಲಂಕರಿಸಿರುತ್ತಾನೆ. ಫೋನ್ ಯಾರದಿರಬಹುದು ಎಂದು ಯೋಚಿಸುತ್ತಲೇ ನಡೆದು, ರಿಸೀವರ್ ಎತ್ತಿ, "ಹಲೋ..." ಎನ್ನುತ್ತೇನೆ.

"ರ್ರೀ ನಾನ್ರೀ..." ನನ್ನವಳ ಗಾಬರಿಗೊಂಡಿದ್ದ ಧ್ವನಿ ಅತ್ತಲಿಂದ ಕೇಳಿಬರುತ್ತದೆ. "ರಾಜೂಗೆ ಇದ್ದಕ್ಕಿದ್ದಂತೆ ವಿಪರೀತ ಜ್ವರ ಬಂದ್ಬಿಟ್ಟಿದೆ. ಬೇಗ ಬನ್ನೀಂದ್ರು." ಮೋಡ ಕವಿದು ತಂಪಾಗಿದ್ದ ಹವೆಯಲ್ಲೂ ಆ ನನ್ನ ಮುಖದಲ್ಲಿ ಬೆವರೊಡೆಯುತ್ತದೆ. ರಾಜುಗೆ ಏನಾಯ್ತು ಎಂದುಕೊಳ್ಳುತ್ತಿರುವಲ್ಲಿಯೇ ನನ್ನವಳು ಬಡಬಡಿಸುತ್ತಾಳೆ- "ನೀವು ಆಫೀಸಿಗೆ ಹೋಗುವಾಗ ಅವನ್ನ ಹೊಡೆದಿರಂತಲ್ಲಾ, ಗಾಬರಿಯಲ್ಲಿ ಓಡಿಬಂದ ಅವನು ಕಾಲು ಜಾರಿ, ದರಿದ್ರ ಆ ಮಾಟದ ಮೇಲೆ ಬಿದ್ಬಿಟ್ಟಿದ್ದಾನೆ. ಅದಾಗಿ ಅರ್ಧ ಗಂಟೆಯಲ್ಲಿ ಸಣ್ಣಗೆ ಜ್ವರ ಕಾಣಿಸಿತ್ತು...ಆದರೆ...ಆದರೆ... ಈಗ ಬಹಳವಾಗಿದೇರಿ..."

"ಇಗೋ ಈಗ ಬಂದಿಟ್ಟೆ." ಎಂದವನೇ ರಿಸೀವರ್ ಕುಕ್ಕಿ, ಸಾಹೇಬರ ಅನುಮತಿ ಪಡೆದು ಬಿರುಗಾಳಿಯಂತೆ ಆಫೀಸಿನಿಂದ ಹೊರ ಓಡುತ್ತೇನೆ. ಕಣೆ ಮೆಯ ಮೇಲೆ ಕೆಂಪು ನೀರು, ನಿಂಬೆ ಹೋಳು, ಇದ್ದಿಲ ತುಂಡುಗಳ ಚಿತ್ರ ಕೊಂಡಿಗಳಂತೆ ಒಂದರ ಹಿಂದೆ ಒಂದು ತೇಲಿ ಹೋಗುತ್ತದೆ. ಬೆಳಿಗ್ಗೆ ಹಾಸ್ಯಾಸ್ಪದವಾಗಿ ಕಂಡ ಸಂಗತಿ, ಮಧ್ಯಾಹ್ನಕ್ಕಾಗಲೇ ಆತಂಕವನ್ನು ತಂದಿದೆ. ರಾಜು ಆ ಕೆಂಪು ನೀರನ್ನು ದಾಟುವುದಿರಲಿ ಅದರ ಮೇಲೆ ಬಿದ್ದನಂತೆ! ಅದಾದ ಕೆಲವು ತಾಸುಗಳೊಳಗಾಗಿ ಅವನಲ್ಲಿ ಜ್ವರ ಕಾಣಿಸಿಕೊಂಡಿದೆಯೆಂದ ಮೇಲೆ ಇದನ್ನೆಲ್ಲಾ ನಂಬಲೇಬೇಕು ಎಂದೆಲ್ಲಾ ಯೋಚನೆಗಳು ಮನದಲ್ಲಿ ಮೂಡುತ್ತವೆ.

ರಾಜುವಿನಲ್ಲಿ ಜ್ವರ ಉಲ್ಬಣವಾಗಿ ವೈದ್ಯರು ನೀಡಿದ ಔಷಧದಿಂದ ಅವನನ್ನು ವಶಪಡಿಸಿಕೊಂಡಿರುವ ದುರಾತ್ಮಗಳು ಉಗ್ರವಾಗಿ, ರಾಜು ಬಾಯಲ್ಲಿ ರಕ್ತ ಕಾರುತ್ತಾ ಏಲಿ ಏಲಿ ಒದ್ದಾಡುತ್ತಿರುವ ದೃಶ್ಯವೊಂದು ಮನದಲ್ಲಿ ನುಸುಳಿ ಬೆಚ್ಚಿಬೀಳುತ್ತೇನೆ. "ದೇವರೆ, ಹೇಗಾದ್ರು ಮಾಡಿ ನನ್ನ ರಾಜುನ ಕಾಪಾಡಪ್ಪ." ಎಂದು ಮನದಲ್ಲಿಯೇ ದೇವರನ್ನು ಬೇಡಿ, ಏನೇ ಆಗಲಿ ಮೊದಲು ಡಾಕ್ಟರನ್ನು ಕಂಡುಬಿಡುವ ಎಂದುಕೊಂಡು ಖಾಲಿ ಆಟೋವೊಂದನ್ನು ಕೈ ಬೀಸಿ ನಿಲ್ಲಿಸುತ್ತೇನೆ.

■

ಗಾಳಿಯಲ್ಲಿ ಹಾರಿ ಬರುವ ಕಾಗದದ ತುಣುಕಿನಂತೆ ಆ ಆಟೋ ರಿಕ್ಷಾ ನನ್ನ ಮನೆಯ ಮುಂದೆ ನಿಂತಾಗ, ಆತುರ ಆತುರವಾಗಿ ರಿಕ್ಷಾದಿಂದ ಇಳಿದು ಐದು ರೂಪಾಯಿಯ ನೋಟೊಂದನ್ನು ಡ್ರೈವರ ಕೈಗಿತ್ತು ಚಿಲ್ಲರೆಗೂ ಕಾಯದೆ ಮನೆಯ ಒಳ ಹೋಗುತ್ತೇನೆ.

ಮಂಚದ ಮೇಲೆ ನರಳುತ್ತಾ ಮಲಗಿದ್ದ ರಾಜುವಿನ ದೇಹವನ್ನು ತಡವಿದಾಗ ಕೆಂಡ ಮುಟ್ಟಿದ ಅನುಭವವಾಗುತ್ತದೆ. ಪಕ್ಕದಲ್ಲಿಯೇ ಕುಳಿತಿದ್ದ ನನ್ನ ಮಡದಿಗೆ ನೀರು ತರಲು ಹೇಳಿ ಡಾಕ್ಟರು ನೀಡಿದ್ದ ಗುಳಿಗೆಯನ್ನು ರಾಜುವಿನ ಬಾಯಿಗೆ ಹಾಕುತ್ತೇನೆ. ನಿದ್ರಾವಸ್ಥೆಯಲ್ಲಿಯೇ ಆ ಗುಳಿಗೆ ಅವನ ದೇಹದೊಳಗೆ ಇಳಿಯಲು ಅನುಕೂಲವಾಗಲೆಂದು ಅವನ ಎದೆಯನ್ನು ಸವರುತ್ತೇನೆ. ಅಕಸ್ಮಾತ್ತಾಗಿ ಅವನ ಬಲಗೈಯ ಸ್ಪರ್ಶವಾದಾಗ, ಅಲ್ಲಿ ಯಾವುದೋ ವಸ್ತುವನ್ನು ಕಟ್ಟಿರುವ ಅನುಭವವಾಗಿ, ಕೈ ತೋಳನ್ನು ಮೇಲಕ್ಕೆ ಸರಿಸಿ ನೋಡುತ್ತೇನೆ. ಅವನ ಕೈಗೆ ಹಿತ್ತಾಳೆಯಲ್ಲಿ ಮಾಡಿದ್ದ ತಾಯಿತವೊಂದನ್ನು ಕರಿ ದಾರದಲ್ಲಿ ಕಟ್ಟಿರುವುದು ಗೋಚರಿಸುತ್ತದೆ. ಪ್ರಶ್ನಾರ್ಥಕವಾಗಿ ಅವಳತ್ತ ನೋಡುತ್ತೇನೆ.

"ಜ್ವರ ಜಾಸ್ತಿಯಾದಾಗ ಹಿಂದಿನ ಮನೆಯವರು ಬಂದು ಈ ತಾಯಿತ ಕಟ್ಟಿದ್ದಾರೆ. ಅದೇನೋ ಮಾಟ-ಮಂತ್ರ ರಾಜುವಿನ ಮೇಲೆ ಫಲಿಸದಂತೆ ಮಂತ್ರ ಹಾಕಿದ್ದಾರಂತೆ," ಎಂದು ನುಡಿಯುತ್ತಾಳೆ. ಮತ್ತೆ ನಾವೇನೂ ನುಡಿಯದೆ ಯೋಚನಾಮಗ್ನನಾಗಿರುವುದು ಕಂಡು ಆಕೆಯೇ ಮುಂದುವರಿಸುತ್ತಾಳೆ. "ಒಂದೊಂದು ಸಲ ಅನಿವಾರ್ಯವಾಗಿ ಕೆಲವನ್ನು ನಾವು ನಂಬಲೇಬೇಕಾಗುತ್ತೆ. ಇದೂ ಒಂದು ನೋಡಿಬಿಡೋಣ. ಇನ್ನರ್ಧ ಗಂಟೆ ಜ್ವರ ಹಾಗೇ ಇದ್ರೆ ಹೋಗಿ ಡಾಕ್ಟರನ್ನ ಕರ್ಕೊಂಡೆ ಬನ್ನಿ. ಇಲ್ಲವಾದ್ರೆ ಯಾವುದಾದ್ರೂ ಆಸ್ಪತ್ರೆಗೆ ಅಡ್ಮಿಟ್ ಮಾಡೋಣ."

ನನ್ನವಳ ಮಾತು ನನ್ನ ಮುಖದಲ್ಲಿ ನಗೆ ತರಿಸುತ್ತದೆ.

"ಈಗ ಮನೆಗೆ ಬರುವಾಗಲೇ ಡಾಕ್ಟರತ್ತ ಹೋಗಿದ್ದೆ. ಜ್ವರದ ಲಕ್ಷಣವನ್ನು ಕೇಳಿ ಈ ಗುಳಿಗೆ ಕೊಟ್ಟಿದ್ದಾರೆ. ಇನ್ನೇನು ಒಂದು ಹತ್ತು ನಿಮಿಷದಲ್ಲಿ ಅವರು ಬರ್ತಾರೆ," ಎಂದು ನುಡಿದು ರಾಜುವಿನತ್ತ ನೋಡುತ್ತೇನೆ, ಡಾಕ್ಟರ್ ಕೊಟ್ಟ ಗುಳಿಗೆಯಿಂದಲೋ, ಅಥವಾ ಅವನಿಗೆ ಕಟ್ಟಿರುವ ತಾಯಿತದಿಂದಲೋ, ಅಂತೂ ಒಟ್ಟಾರೆ ಅವನು ಬೆವರತೊಡಗುತ್ತಾನೆ. ದೊಡ್ಡ ಹೊರೆಯೊಂದು ಇಳಿದವನಂತೆ ವರಾಂಡಕ್ಕೆ ಬರುತ್ತೇನೆ. ತಲೆ ಸಣ್ಣದಾಗಿ ನೋಯುತ್ತಿರುವಂತೆ ಭಾಸವಾಗಿ ಸಿಗರೇಟೊಂದನ್ನು ಅಂಟಿಸಿ ಕಿಟಕಿಯ ಬಳಿ ಬಂದು ನಿಲ್ಲುತ್ತೇನೆ.

ಥಟ್ಟನೆ ಎದುರುಗಡೆಯ ಕೊಠಡಿಯತ್ತ ನನ್ನ ಗಮನ ಹರಿಯುತ್ತದೆ. ಆ ಮೂವರು ಯುವಕರು ತಮ್ಮ ಕೊಠಡಿಯಲ್ಲಿ ಬಾಗಿಲ ಬಳಿ ನಿಂತು, ಏನೋ ಬಹಳ ಗಹನವಾಗಿ ಚರ್ಚಿಸುತ್ತಾ ಆಗಾಗ ನಮ್ಮ ಮನೆಯ ಕಡೆ ನೋಡುತ್ತಿರುತ್ತಾರೆ. ನಾನು ಹಾಗೆಯೇ ಅವರನ್ನು ಅವಲೋಕಿಸುತ್ತಾ ನಿಲ್ಲುತ್ತೇನೆ. ಆ ಮೂವರಲ್ಲಿ ಒಬ್ಬ ಏನೋ ನಿರ್ಧಾರ ಮಾಡಿದವನಂತೆ ನಮ್ಮ ಮನೆಯತ್ತ ಹೆಜ್ಜೆ ಹಾಕತೊಡಗಿದಾಗ ನನಗೇನೋ ಕುತೂಹಲವೆನಿಸುತ್ತದೆ. ಆದರೆ ಮತ್ತೇನನ್ನೋ ಜ್ಞಾಪಿಸಿಕೊಂಡವನಂತೆ ಅವನು ಪುನಃ ಹಿಂದಕ್ಕೆ



‘ಏನೂ ಜಗಳ ಆಗ್ತಿಲ್ಲ, ಕಾಮೆಂಟರಿ ಕೇಳ್ತಿದ್ದಾರೆ ಅಷ್ಟೆ!’

ಹೋಗಿ, ಮತ್ತೆ ಆ ಮೂವರೂ ಚರ್ಚೆಗೆ ತೊಡಗುತ್ತಾರೆ.

ನೀಲಿ ಬಣ್ಣದ ಫಿಯೆಟ್ ಕಾರು ನಮ್ಮ ಮನೆಯ ಮುಂದೆ ಬಂದು ನಿಲ್ಲುತ್ತದೆ. ಕಾರಿನ ಸಪ್ಪಳ ಕೇಳಿದೊಡನೆಯೇ ಅವಳು ಮಿಂಚಿನಂತೆ ಬಂದು ಬಾಗಿಲನ್ನು ತೆರೆದು ಡಾಕ್ಟರನ್ನು ಒಳಕ್ಕೆ ಕರೆದುಕೊಂಡು ಬರುತ್ತಾಳೆ. ನಾನು ಅವರನ್ನು ಹಿಂಬಾಲಿಸುತ್ತೇವೆ.

ರಾಜುವಿನ ಜ್ವರ ಹೆಚ್ಚು ಕಮ್ಮಿ ಇಳಿಮುಖವಾಗುತ್ತಿರುತ್ತದೆ. ಸಂಪೂರ್ಣವಾಗಿ ಪರೀಕ್ಷೆ ಮಾಡಿದ ಡಾಕ್ಟರ್, "ಗಾಬರಿಯಾಗಬೇಕಾದದ್ದು ಏನೂ ಇಲ್ಲ," ಎಂದು ಸಿರಿಂಜನ್ನು ಹೊರತೆಗೆದಾಗ ನಾನು ಅಲ್ಲಿಂದ ಹೊರ ನಡೆಯುತ್ತೇನೆ. ಇಂಜಕ್ಷನ್ ಕೊಡುವುದನ್ನು ನೋಡುವುದಾಗಲಿ ರಕ್ತ ಒಸರುತ್ತಿರುವುದನ್ನು ನೋಡುವುದಾಗಲಿ ನನ್ನಿಂದಾಗದು. ಒಂದೆಯೇ ತಲೆ ಸುತ್ತಿ ಬರುವಂತಾಗುತ್ತದೆ.

"ಸಾರ್…" ಧ್ವನಿಯಿಂದಾಗಿ ಎಚ್ಚೆತ್ತು ಬಾಗಿಲತ್ತ ನೋಡುತ್ತೇನೆ. ಎದುರು ಮನೆಯ ಯುವಕನೊಬ್ಬ ನಮ್ಮ ಮನೆಯ ಬಾಗಿಲಿನಲ್ಲಿ ನಿಂತಿರುತ್ತಾನೆ. ಒಂದು ಕ್ಷಣ ಆಶ್ಚರ್ಯದಿಂದ ಅವನತ್ತ ನೋಡುತ್ತೇನೆ. ನನ್ನ ನೋಟವನ್ನು ಭರಿಸಲಾಗದೆ ಅವನು ಚಡಪಡಿಸಿದಾಗ ಸೌಜನ್ಯಕ್ಕಾದರೂ ಅವನನ್ನು ಒಳಕ್ಕೆ ಕರೆಯೋಣವೆನ್ನಿಸಿ, ಒಳಗೆ ಕರೆಯುತ್ತೇನೆ. ಬಾಗಿಲ ಬಳಿಯಲ್ಲಿಯೇ ಮುಂದೇರಿ ನಿಂತ ಅವನು ಅಂಗೈಯನ್ನು ತಿಕ್ಕುತ್ತಾ ಹೇಳಲೋ ಬೇಡವೋ ಎಂಬಂತೆ ನಿಧಾನವಾಗಿ ನುಡಿಯುತ್ತಾನೆ. "ನಿಮ್ಮ ಹುಡುಗ ಮಾಟದ ನೀರಿನ ಮೇಲೆ ಬಿದ್ದು ಜ್ವರ ಬಂದಿದೆ ಅಂತ ಗೊತ್ತಾಯ್ತು. ಆದರೆ ಸಾರ್, ಅದು ನಿಜವಾದ ಮಾಟವಲ್ಲ." ನಾನು ಸರಕ್ಕನೆ ತಲೆಯೆತ್ತಿ ಅವನನ್ನು ನೋಡುತ್ತೇನೆ. ಅವನ ನಸುನಗು ಮಿಂಚುತ್ತದೆ.

"ನಿನ್ನೆ ರಾತ್ರಿ ನಮ್ಮ ಮೂವರಲ್ಲೂ ಮೂಢ ನಂಬಿಕೆಗಳ ಬಗ್ಗೆ ವಾದ-ವಿವಾದಗಳಿದ್ದವು. ನಮ್ಮ ಜನಗಳಲ್ಲಿ ಮೂಢ ನಂಬಿಕೆ ಅನ್ನೋದು ಎಷ್ಟು ಜನರಿಗಿದೆಯೆಂದು ತಿಳಿಯುವದಕ್ಕೋಸ್ಕರವಾಗಿ ನಾವೇ ಕುಂಕುಮದ ನೀರಿನಲ್ಲಿ ಏನೇನೊ ಹಾಕಿ ರಸ್ತೆಗೆ ಚೆಲ್ಲಿದ್ದೀವಿ. ಹಾಗೆಯೇ ಪ್ರತಿಯೊಬ್ಬರನ್ನು ಅವಲೋಕಿಸುತ್ತಾ ಬಂದಿವಿ. ಪ್ರಮಾದವಶಾತ್ ನಿಮ್ಮ ಹುಡುಗ ಅದರ ಮೇಲೆ ಜಾರಿ ಬಿದ್ದ. ಅದು ನೋಡಿ ಬಹುಶಃ ಅವನಲ್ಲಿ ಒಳಜ್ವರ ಇತ್ತೆಂದು ಕಾಣುತ್ತೆ. ಬಿದ್ದಾಗ ಆದ ಷಾಕ್ ನಿಂದಾಗಿ ಆ ಜ್ವರ ಮೇಲೆ ಕಾಣಿಸಿಕೊಂಡಿರಬೇಕು. ಅವನ ಜ್ವರ ನಮ್ಮ ಒಂದು ಪ್ರಯೋಗಕ್ಕೂ ಅನುಕೂಲವಾಯಿತು ನೋಡಿ…" ಇನ್ನೂ ಅವನು ಏನೇನೂ ಹೇಳುತ್ತಲೇ ಇದ್ದ… ನನಗೆ ಮಾತ್ರ ಏನೂ ತಿಳಿಯುತ್ತಿಲ್ಲ… ✡



ಇನ್‌ಕಂ ಟ್ಯಾಕ್ಸ್

ನ್ಯಾಯವೆಂಬುದು ಇಲ್ಲವೇ ಇಲ್ಲ. ನೀವು ನಿಮ್ಮ ಆದಾಯ ತೆರಿಗೆಯನ್ನು ಸರಿಯಾಗಿ ಕಟ್ಟಿದರೆ ನೀವು ವಾಸಿಸಲು ಸಾದಾ ಮನೆಗೆ ಹೋಗಬೇಕು. ಸರಿಯಾದ ಲೆಕ್ಕ ತೋರಿಸಿ ಕಟ್ಟದಿದ್ದರೆ ಜೈಲಿಗೆ ವಾಸಿಸಲು ಹೋಗಬೇಕು.

—ಸಂ: ಯು. ಎಸ್. ಶ್ರೀನಿವಾಸರಾವ್

ಜನಸಂಖ್ಯೆಯ ಸಮಸ್ಯೆ ವೃಥಾ ಗಲಭೆಯೆ?

ಹಿಂದಿನ ಜನವರಿ ಸಂಚಿಕೆಯಲ್ಲಿ ಪ್ರೊ. ವಸಂತ ಗುಮಾಸ್ತೆಯವರ 'ಲೇಖನ ಜನಸಂಖ್ಯೆಯ ಸಮಸ್ಯೆ: ನಿಜವೆಷ್ಟು? ಬೊಬ್ಬೆ ಎಷ್ಟು?' ಪ್ರಕಟವಾಗಿ ಅನೇಕರ ಮೆಚ್ಚುಗೆಯನ್ನು ಗಳಿಸಿತು. ಆದರೆ ಆ ಲೇಖನದ ಮೂಲ ಗ್ರಹಿಕೆಯನ್ನೇ ಪ್ರಶ್ನಿಸಿ ಬೆಂಗಳೂರಿನ 'ಇನ್‌ಸ್ಟಿಟ್ಯೂಟ್ ಫಾರ್ ಸೋಶಿಯಲ್ ಅ್ಯಂಡ್ ಇಕನಾಮಿಕ್ ಚೇಂಜ್'ನಲ್ಲಿ ಸಂಶೋಧನವಿಶ್ಲೇಷಕರಾಗಿರುವ ಶ್ರೀ ಮರಿಭಟ್ಟರು ಸುದೀರ್ಘ ಉತ್ತರ ಬರೆದಿದ್ದಾರೆ. ಅವರ ಗಮನಾರ್ಹ ವಿಚಾರ ಧಾರೆ ಇಲ್ಲಿದೆ.

ಪಿ. ಎಸ್. ಮರಿಭಟ್ಟ

ಯಾವುದೇ ವಿಚಾರಧಾರೆ ಗತಾನುಗತಿಕವಾಗಿ ಬೆಳೆದುಬಂದ ಮನೋಧರ್ಮಕ್ಕೆ ವ್ಯತಿರಿಕ್ತವಿದ್ದಲ್ಲಿ ವಿರೋಧ ವ್ಯಕ್ತವಾಗುವುದು ಸ್ವಾಭಾವಿಕ. 'ಕಸ್ತೂರಿ'ಯ ೧೯೭೭ರ ಜನವರಿ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ ವಸಂತ ಗುಮಾಸ್ತೆಯವರ ಲೇಖನ 'ಜನಸಂಖ್ಯೆಯ ಸಮಸ್ಯೆ: ನಿಜವೆಷ್ಟು? ಬೊಬ್ಬೆ ಎಷ್ಟು?' ಇದಕ್ಕೆ ಒಂದು ದೃಷ್ಟಾಂತ. ಜನಸಂಖ್ಯೆಯ ಸಮಸ್ಯೆಯನ್ನು ವಿನಾಕಾರಣ ದೊಡ್ಡದು ಮಾಡುವ ಪ್ರಯತ್ನ ನಡೆದಿದೆಯೆಂದು ಗುಮಾಸ್ತೆಯವರು ಆಪಾದಿಸಿರುತ್ತಾರೆ. ಅವರ ಈ ವಾದ ಜನಸಂಖ್ಯೆಯ ಸಮಸ್ಯೆಯನ್ನು ಕೂಲಂಕಷವಾಗಿ ಅಭ್ಯಸಿಸಿದವರಿಗೆ ಹೊಸತೇನೂ ಅಲ್ಲ. ಜನಸಂಖ್ಯೆಯ ಹೆಚ್ಚಳದ ಪ್ರಮಾಣವನ್ನು ನಿಯಂತ್ರಿಸಲು ತೃತೀಯ ಜಗದ ಸರಕಾರಗಳು ಕ್ರಮ ಕೈಗೊಂಡಂದಿನಿಂದಲೂ ಈ ರೀತಿಯ ಒಂದಲ್ಲ ಒಂದು ಹುಚ್ಚು ಕೂಗಾಟ ಕೇಳಿಬರುತ್ತಿದೆ. ಒಂದು ವೇಳೆ ಹೀಗಾಗದಿರುತ್ತಿದ್ದಲ್ಲಿ ಜನಸಂಖ್ಯೆಯ ಸಮಸ್ಯೆ ಈಗಾಗಲೇ ಪರಿಹಾರವಾಗಿರುತ್ತಿತ್ತೇನೋ!

ಜನಸಂಖ್ಯಾ ಸಮಸ್ಯೆಯ ಗಂಭೀರತೆಯ ಅರಿವಿಲ್ಲದ ಬಹುಜನ ಗುಮಾಸ್ತೆಯವರ ವಾದ ಸರಣಿಗೆ ಬಲಿಬಿದ್ದಿರಬಹುದು. ಅದು ಕೂಡ ಅವರ ವಾದ ಸಂಪ್ರದಾಯಿಕವಾಗಿ ಬಂದ ಆಚರಣೆಗಳನ್ನು (ನಮ್ಮ ಸಂಸ್ಕೃತಿ ಹೆಚ್ಚು ಮಕ್ಕಳಾಗುವುದನ್ನು ಪ್ರೋತ್ಸಾಹಿಸಿದೆ ಎಂಬುದು ಸರ್ವವಿದಿತ) ಮತ್ತು ಅಭಿಮಾನಗಳನ್ನು (ನಮ್ಮ ಬಡತನಕ್ಕೆ ಶ್ರೀಮಂತ ರಾಷ್ಟ್ರಗಳು ಮಾಡುವ ಶೋಷಣೆಯೇ ಕಾರಣ ಎಂದು ಪ್ರತಿಪಾದಿಸಿ ನಮ್ಮಲ್ಲಿ ದೇಶಾಭಿಮಾನದ ಕಿಚ್ಚೆಬ್ಬಿಸಿದ್ದಾರೆ) ಬಲಪಡಿಸುವಾಗ, ಬಡ ದೇಶಗಳ ಜನಸಂಖ್ಯಾ ಸಮಸ್ಯೆಯ ವಾಸ್ತವಿಕತೆ ಬರಿ 'ಶಬ್ದಗಳ ಮತ್ತು ಸಂಖ್ಯೆಗಳ ಡೊಂಬರಾಟ'ವಲ್ಲ; ಅದು ವಸ್ತುಸ್ಥಿತಿಯ ಸಮಂಜಸ ನಿರೂಪಣೆ ಎಂದಲ್ಲಿ ಯಾರು ತಾನೆ ಅದನ್ನು ನಂಬುತ್ತಾರೆ? ಆದರೂ ಜನ ಸುಶ್ರಾವ್ಯವಾದ ಅಸತ್ಯಕ್ಕಿಂತ ಕರ್ಣಕಠೋರವಾದ ಸತ್ಯಕ್ಕೆ ಹೆಚ್ಚು ಹೆಚ್ಚು ಬೆಲೆ ಕೊಡುತ್ತಾರೆ ಎಂಬುದು ನಮ್ಮ ಆಶೆ.

ಜನಸಂಖ್ಯಾ ಸಮಸ್ಯೆ ಬಡ ರಾಷ್ಟ್ರಗಳಲ್ಲಿ ಸುತರಾಂ ಇಲ್ಲ; ಇದ್ದರೆ ಅದು ಮುಂದುವರಿದ ದೇಶಗಳಲ್ಲಿ ಎಂಬ ತಮ್ಮ ಪ್ರತಿಪಾದನೆಯನ್ನು ಸಮರ್ಥಿಸಲು ಗುಮಾಸ್ತೆಯವರು ಕೊಡುವ ಪ್ರಮುಖ ಕಾರಣ ಕೆಲವು ಶ್ರೀಮಂತ ದೇಶಗಳಲ್ಲಿ ಜನದಟ್ಟಣೆ ಬಡ ದೇಶಗಳಿಗಿಂತ ಜಾಸ್ತಿಯಿರುವುದು. ಆದರೆ, ಜನಸಾಂದ್ರತೆ ನೆಲದ ಸಂಪನ್ಮೂಲದ ವಿಪುಲತೆಯ ಅಥವಾ ಕೊರತೆಯ ಉತ್ತಮ ಅಳತೆಗೋಲಲ್ಲ-

ವೆಂಬುದನ್ನು ಗಮನದಲ್ಲಿರಿಸಬೇಕು. ಇದಕ್ಕೆ ಕಾರಣ ಹಲವು.

೧. ಡಾ॥ ಶಾಸ್ತ್ರಿಯವರೇ ಹೇಳುವಂತೆ ವಿವಿಧ ದೇಶಗಳಲ್ಲಿ, ಒಟ್ಟು ಕ್ಷೇತ್ರಫಲದಲ್ಲಿ ಸಾಗುವಳಿಯಾಗುವ ಇಲ್ಲವೆ ಸಾಗುವಳಿ ಮಾಡಬಹುದಾದ ನೆಲ ಒಂದೇ ಪ್ರಮಾಣದಲ್ಲಿ ಇರುವುದಿಲ್ಲ.

೨. ಬೇರೆ ಬೇರೆ ದೇಶಗಳಲ್ಲಿ ಬೇಸಾಯದಿಂದ ಜೀವಿಸುವ ಜನರ ಪ್ರಮಾಣ ಒಂದೇ ರೀತಿಯಲ್ಲಿರುವುದಿಲ್ಲ. ಬಡ ದೇಶಗಳಲ್ಲಿ ಸಾಧಾರಣ ಶೇ. ೭೫ ರಷ್ಟು ಜನರು ಸಾಗುವಳಿ ಮಾಡಿ ಬದುಕುವರಾದರೆ, ಶ್ರೀಮಂತ ರಾಷ್ಟ್ರಗಳಲ್ಲಿ ಕೇವಲ ಶೇ. ೩೦ ರಷ್ಟು ಜನ ಬೇಸಾಯವನ್ನು ಅವಲಂಬಿಸಿದ್ದಾರೆ.

೩. ಸಾಗುವಳಿ ಮಾಡಲ್ಪಡುವ ಅಥವಾ ಮಾಡಬಹುದಾದ ಜಮೀನು ಬೇರೆ ಬೇರೆ ದೇಶಗಳಲ್ಲಿ ಒಂದೇ ರೀತಿ ಫಲವತ್ತಾಗಿರುವುದಿಲ್ಲ.

೪. ಬೇರೆ ಬೇರೆ ದೇಶಗಳಲ್ಲಿ ಬೇಸಾಯ ಮಾಡುವ ಕ್ರಮದಲ್ಲಿ ಮತ್ತು ಸಾಗುವಳಿ ಮಾಡಲು ಉಪಯೋಗಿಸುವ ಯಂತ್ರೋಪಕರಣಗಳಲ್ಲಿ ಬಹಳ ವ್ಯತ್ಯಾಸವಿದೆ. ಇವುಗಳಿಂದಾಗಿ ವಿವಿಧ ದೇಶಗಳ ಪ್ರತಿ ಎಕರೆಯ ಉತ್ಪತ್ತಿಯಲ್ಲಿ ಮತ್ತು ಕೃಷಿಕನ ತಲಾ ಉತ್ಪಾದನೆಯಲ್ಲಿ ಬಹಳ ಅಂತರವಿದೆ.

೫. ಒಂದು ದೇಶದ ಎಲ್ಲಾ ಪ್ರದೇಶಗಳಲ್ಲಿ ಜನರ ಇಲ್ಲವೆ ಕೃಷಿಕರ ವಿತರಣೆ ಸಮನಾಗಿ ಇರುವುದಿಲ್ಲ. ಆದುದರಿಂದ, ದೇಶದ ಸರಾಸರಿ ಜನದಟ್ಟಣೆಯು ಪ್ರಾಮುಖ್ಯ ಕ್ಷೀಣವಾಗಿದೆ.

ಮೇಲಿನ ಐದು ಅಂಶಗಳನ್ನು ಗಮನದಲ್ಲಿರಿಸಿ, ಕೋಷ್ಟಕ ೧ ರಲ್ಲಿ ತೋರಿಸಿರುವ ಅಂಕಿಸಂಖ್ಯೆಗಳನ್ನು ಪರೀಕ್ಷಿಸೋಣ. ಕೋಷ್ಟಕದಲ್ಲಿ ದಕ್ಷಿಣ ಏಶಿಯದ ಮಟ್ಟ ೧೦೦ ಎಂದಾದರೆ, ಉಳಿದ ಪ್ರದೇಶಗಳಲ್ಲಿ ಎಷ್ಟು ಎಂದು ತೋರಿಸಲಾಗಿದೆ. (ಕೋಷ್ಟಕ ೧)

ಅಮೇರಿಕ, ರಶಿಯಗಳಂತಹ ಮುಂದುವರಿದ ದೇಶಗಳಲ್ಲಿ ಉಳುವ ನೆಲದಲ್ಲಿ ಜನದಟ್ಟಣೆ ದಕ್ಷಿಣ ಏಶ್ಯಾದ ಬಡ ದೇಶಗಳಿಗಿಂತ ಕಡಿಮೆ ಇದೆ ಎಂದು ವ್ಯಕ್ತವಾಗುತ್ತದೆಯಷ್ಟೇ. ಯುರೋಪಿನಲ್ಲಿ ಜನದಟ್ಟಣೆ ಬಡದೇಶಗಳಷ್ಟೇ ಇದ್ದರೂ, ಬೇಸಾಯಗಾರರನ್ನು ಮಾತ್ರವೇ ತೆಗೆದುಕೊಂಡಲ್ಲಿ ಅಲ್ಲಿ ಜನಸಾಂದ್ರತೆ ಕಡಿಮೆ ಇದೆ ಎಂದು ಅರಿವಾಗುತ್ತದೆ ಆದರೆ ಜಪಾನು, ಚೀನಗಳಲ್ಲಿ ದಕ್ಷಿಣ ಏಶ್ಯಾದ ದೇಶಗಳಿಗಿಂತ ಉಳುವ ನೆಲದಲ್ಲಿ ಕೆಲಸಗಾರರ ಜನದಟ್ಟಣೆ ಹೆಚ್ಚಾಗಿದೆ. ಆದರೆ ಈ ದೇಶಗಳಲ್ಲಿ ಉತ್ಪತ್ತಿ ಪ್ರತಿ ಎಕರೆಗೆ, ದಕ್ಷಿಣ ಏಶ್ಯಾದ ದೇಶಗಳಿಗಿಂತ ಹೆಚ್ಚಾಗಿದೆ ಎನ್ನುವುದು ಲಕ್ಷ್ಯದಲ್ಲಿಡಬೇಕಾದ ಅಂಶ.

ಕೋಷ್ಟಕ: ೧

ಜಗತ್ತಿನ ವಿವಿಧ ಪ್ರದೇಶಗಳಲ್ಲಿ ಜನದಟ್ಟಣೆ ಮತ್ತು ಆಹಾರ ಉತ್ಪಾದನೆ ೧೯೫೫

ಪ್ರದೇಶ	ಸಾಗುವಳಿಯಾದ ಪ್ರತಿ ಎಕರೆಗೆ ಜನಸಂಖ್ಯೆ	ಸಾಗುವಳಿಯಾದ ಪ್ರತಿ ಎಕರೆಗೆ ಬೇಸಾಯಗಾರರು (ಗಂಡಸರು)	ಸಾಗುವಳಿಯಾದ ಪ್ರತಿ ಎಕರೆಗೆ ಆಹಾರ ಉತ್ಪಾದನೆ	ಗಂಡಸು ಕೃಷಿಕನ ತಲಾ ಆಹಾರ ಉತ್ಪಾದನೆ
ದಕ್ಷಿಣ ಏಶ್ಯಾ	೧೦೦	೧೦೦	೧೦೦	೧೦೦
ಚೀನ	೨೦೫	೨೨೦	೧೨೦	೮೫-೯೦
ಜಪಾನು	೫೯೦	೨೯೦	೫೧೦	೧೭೫
ಯುರೋಪು	೧೦೦	೪೫	೨೫೦	೫೬೦
ರಶಿಯ	೩೫	೨೦	೭೦	೩೫೦
ಉತ್ತರ ಅಮೇರಿಕ	೩೫	೧೦	೧೨೫	೧೭೮೦

(ಮೂಲ : ಗುನ್ನಾರ್ ಮಿರ್ಡಾಲರ Asian Drama ಗ್ರಂಥದಿಂದ)

ದರಿಯು. ಅಮೇರಿಕದಲ್ಲಿ ಉತ್ಪತ್ತಿ ಪ್ರತಿ ಎಕರೆಗೆ ಬಡ ದೇಶಗಳಷ್ಟೇ ಇದ್ದರೂ, ಬೇಸಾಯಗಾರನ ತಲಾ ಉತ್ಪತ್ತಿ ಈ ದೇಶಗಳಿಗಿಂತ ಎಷ್ಟೋ ಹೆಚ್ಚಾಗಿದೆ. ಇದೇಕೆ ಹೀಗೆ ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ನೋಬೆಲ್ ಪ್ರಶಸ್ತಿ ವಿಜೇತ ಅರ್ಥವಿಜ್ಞಾನಿ ಮಿರ್ಡಾಲರು ಹೇಳುವಂತೆ, ಇದಕ್ಕೆ ಕಾರಣ ಬೇಸಾಯದ ಎರಡು ಪ್ರಮುಖ ವಿಧಗಳು. ಜನದಟ್ಟಣೆ ಕಡಿಮೆ ಇರುವ ಪ್ರದೇಶಗಳಾದ ಉತ್ತರ ಅಮೇರಿಕ, ಆಸ್ಟ್ರೇಲಿಯಾ ಅಥವಾ ರಶಿಯಾಗಳಂತಹ ಮುಂದುವರಿದ ದೇಶಗಳಲ್ಲಿ ನೆಲವನ್ನು ವಿಸ್ತೃತವಾಗಿ ಬೇಸಾಯ (extensive cultivation) ಮಾಡಲಾಗುತ್ತದೆ. ಹೀಗಾಗಿ, ಅಲ್ಲಿ ನೆಲದ ಪ್ರತಿ ಘಟಕದ ಉತ್ಪಾದನೆ ಕೆಳ ಮಟ್ಟದಲ್ಲಿದೆ. ಅಧಿಕ ಮಾನವ – ಭೂಮಿ ಅನುಪಾತ (Man-land ratio) ಇರುವ ಶ್ರೀಮಂತ ದೇಶಗಳಾದ ಜಪಾನು, ಯುರೋಪುಗಳಲ್ಲಿ ಜಮೀನಿನ ಸಾಂದ್ರ ರೀತಿಯ ಬೇಸಾಯ (intensive cultivation) ನಡೆಸಲಾಗುತ್ತದೆ. ಇಲ್ಲಿ ನೆಲದ ಪ್ರತಿ ಘಟಕದ ಉತ್ಪಾದನೆ ಹೆಚ್ಚಿನ ಮಟ್ಟದಲ್ಲಿದೆ. ಆದರೆ, ದಕ್ಷಿಣ ಏಷ್ಯಾದ ಬಡದೇಶಗಳು ಇವೆರಡು ಗುಂಪುಗಳಿಗೂ ಸೇರದೆ, ಇನ್ನೊಂದು ಮೂರನೆಯ ಹಾಗು ನತದೃಷ್ಟ ಗುಂಪಾಗಿ ಪರಿಣಮಿಸಿದೆ. ಇಲ್ಲಿ ವಿಸ್ತೃತ ನೆಲದ ಉಪಯೋಗ ಅಧಿಕ ಮಾನವ– ಭೂಮಿ ಅನುಪಾತದಿಂದ ಜನತೆಯ ತಲಾ ಉತ್ಪಾದನೆ ಕಡಿಮೆ ಇರುವುದಷ್ಟೇ ಅಲ್ಲದೆ ಪ್ರಮುಖ ವರ್ಗ ಸುಮಾರು ಮುಕ್ಕಾಲು ಭಾಗ ತೀರಾ ಕೆಳ ಮಟ್ಟದ ತಲಾ ಉತ್ಪಾದನೆಯಲ್ಲಿ ತೊಡಗುವಂತಾಗಿದೆ.

ಬಡ ದೇಶಗಳ ಆರ್ಥಿಕ ಪ್ರಗತಿಗೆ ಔದ್ಯೋಗೀಕರಣ ಅತಿ ಮುಖ್ಯ ಎಂಬ ಅಂಶ ನಿರ್ವಿವಾದವಷ್ಟೆ? ಆದರೆ, ಕೃಷಿಕರ ತಲಾ ಉತ್ಪಾದನೆಯನ್ನು ಹೆಚ್ಚಿಸದೆ ತಾಂತ್ರಿಕ ಪ್ರಗತಿ ಸಾಧ್ಯವಿಲ್ಲವೆಂಬುದು ಗಮನಾರ್ಹವಾದ ಅಂಶ. ಔದ್ಯೋಗಿಕ ಕ್ರಾಂತಿಯಿಂದ ಜನರು ಹೆಚ್ಚು ಪ್ರಮಾಣದಲ್ಲಿ ಕೈಗಾರಿಕೋದ್ಯಮಗಳಲ್ಲಿ ದುಡಿಯುತ್ತಾರೆ. ಈ ಜನರ ಆಹಾರೋತ್ಪಾದನೆಯ ಭಾರ, ಪ್ರಮಾಣದಲ್ಲಿ ಕಡಿಮೆಯಾದ ಬೇಸಾಯಗಾರರ ಮೇಲೆ ಬೀಳುತ್ತದೆ. ಆದುದರಿಂದಲೇ, ಸಾಮಾನ್ಯವಾಗಿ ಔದ್ಯೋಗಿಕ-ಕ್ರಾಂತಿಯು ಮೊದಲು ಕೃಷಿಕ್ರಾಂತಿಯಾದುದು ಪರರಾಷ್ಟ್ರಗಳ ಆರ್ಥಿಕ ಇತಿಹಾಸಗಳಿಂದ ವಿದಿತವಾಗುತ್ತದೆ. ಬಡ ದೇಶಗಳ ಕೃಷಿಕರ ತಲಾ ಉತ್ಪಾದನೆಯನ್ನು ಎರಡು ರೀತಿಯಿಂದ ಏರಿಸಬಹುದು. ಮೊದಲನೆಯದು ಜಮೀನಿನ ಸಾಂದ್ರರೀತಿಯ ಬೇಸಾಯದಿಂದ. ಆದರೆ, ತತ್ಕಾಲೀನ ಪರಿಸ್ಥಿತಿ ಇದಕ್ಕೆ ಆತಂಕವನ್ನೊಡ್ಡಿದೆ. ಸಾಂದ್ರ ರೀತಿಯ ಬೇಸಾಯದಲ್ಲಿ ಬಂಡವಾಳವನ್ನು ಅಧಿಕ ಪ್ರಮಾಣದಲ್ಲಿ ತೊಡಗಿಸಬೇಕಾಗುತ್ತದೆ. ಇದು ಬಡರೈತನಿಗೆ ಸಾಧ್ಯವೆ? ದಿನಂದಿನದ ಹೊಟ್ಟೆ ಪಾಡಿಗೇ ಗತಿಯಿಲ್ಲದ ಆತನು ಹಲವಾರು ಅಪಾಯಗಳು ಸಾಧ್ಯವಿರುವ ಆಧುನಿಕ ಕೃಷಿ ವಿಧಾನಗಳನ್ನು ಉಪಯೋಗಿಸಲು ಇಚ್ಛೆಪಡಲಾರ. ಇದಲ್ಲದೆ ಜನಸಂಖ್ಯೆಯ ಅಸಾಮಾನ್ಯ ಬೆಳವಣಿಗೆಯಿಂದ ಹಾಗೂ ಬೇಸಾಯಯೋಗ್ಯ ಜಮೀನಿನ ಕೊರತೆಯಿಂದ (ನಮ್ಮ ಇಂದಿನ ಆರ್ಥಿಕ ಮಟ್ಟದ ತುಲನೆಯಲ್ಲಿ) ಜಮೀನು ಚೂರು ಚೂರಾಗಿ ಹರಡಲ್ಪಟ್ಟಿದೆ. ಈ ರೀತಿ ಜಮೀನಿನಲ್ಲಿ ಯಾವ ರೀತಿಯ ಕೃಷಿ ಸುಧಾರಣೆಯೂ ಹೆಚ್ಚು ಲಾಭ ಕೊಡಲಾರದು. ಸಾಗುವಳಿ ಮಾಡುವ ನೆಲವನ್ನು ವಿಸ್ತರಿಸಿ ಕೃಷಿಕನ ತಲಾ ಉತ್ಪಾದನೆಯನ್ನೇಕೆ ಹೆಚ್ಚಿಸಲು ಸಾಧ್ಯವಿಲ್ಲ ? ಎಂಬ ಪ್ರಶ್ನೆ ಇಲ್ಲಿ ಏಳಬಹುದು. ಈ ಮೊದಲೇ ಹೇಳಿದಂತೆ ಮಾನವ– ಭೂಮಿ ಅನುಪಾತ ಅಧಿಕವಿರುವ ಬಡ ದೇಶಗಳು ನೆಲದ ವಿಸ್ತೃತ ಬೇಸಾಯದ ರೀತಿಯಿಂದ ಸಾಂದ್ರ ರೀತಿಯ ಬೇಸಾಯದತ್ತ ಲಕ್ಷ್ಯ ಹೊರಳಿಸುವುದು ಒಳಿತು. ಅಲ್ಲದೆ ಬಡ ದೇಶಗಳ ಇಂದಿನ ತಾಂತ್ರಿಕ ಹಾಗು, ಆರ್ಥಿಕ ಸ್ಥಿತಿಯಲ್ಲಿ ಭೂಮಿಯನ್ನು ಸಾಗುವಳಿಗೆ ಒಳಪಡಿಸುವ ಸಾಧ್ಯತೆಯೂ ಕಡಿಮೆ. ಎಲ್ಲಾ ಬಡ ದೇಶಗಳಲ್ಲಿ ಸಾಗುವಳಿ ಮಾಡಬಹುದಾದ ನೆಲದ

ಶೇ. ೧೦ ಕ್ಕಿಂತಲೂ ಕಡಿಮೆ ನೆಲ ಉಳಲ್ಪಡುತ್ತದೆ ಎಂದು ಗುಮಾಸ್ತೆಯವರು ಹೇಳುತ್ತಾರೆ. ಅವರಿಗೆ ಈ ಅಂಕಿ ಅಂಶಗಳು ಎಲ್ಲಿ ದೊರೆತವೋ ತಿಳಿಯದು. ನಮ್ಮ ದೇಶವನ್ನು ತೆಗೆದುಕೊಂಡಲ್ಲಿ ಒಟ್ಟು ಕ್ಷೇತ್ರಫಲದ ಶೇ. ೫೦ ರಷ್ಟು ಭಾಗದಲ್ಲಿ ಸಾಗುವಳಿಯಾಗುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ೧೯೭೦-೭೧ ರಲ್ಲಿ ಒಟ್ಟು ಕ್ಷೇತ್ರಫಲದ ಶೇ. ೫೪ ರಷ್ಟು ನೆಲದಲ್ಲಿ ಬಿತ್ತನೆಯಾಗಿತ್ತು. ಸಾಗುವಳಿ ಮಾಡಬಹುದಾದ, ಆದರೆ ಸಾಗುವಳಿಯಾಗದ ನೆಲ ಒಟ್ಟು ಕ್ಷೇತ್ರಫಲದ ಶೇ. ೩.೨೫ ರಷ್ಟು ಮಾತ್ರವಿತ್ತು.* ಅಂದರೆ, ಸಾಗುವಳಿ ಮಾಡಬಹುದಾದ ಭಾಗದ ಶೇ. ೯೦ ಕ್ಕಿಂತಲೂ ಹೆಚ್ಚು ಭಾಗದಲ್ಲಿ ಸಾಗುವಳಿಯಾಗುತ್ತಿದೆ ಎಂದಾಯಿತು. ಯಾವ ನೆಲವನ್ನು ಸಾಗುವಳಿ ಮಾಡಬಹುದು, ಯಾವುದು ಸಾಗುವಳಿಗೆ ಯೋಗ್ಯವಲ್ಲದ ಬಂಜರು ಭೂಮಿ ಎನ್ನುವುದು ದೇಶದ ಆರ್ಥಿಕ ಮತ್ತು ತಾಂತ್ರಿಕ ಮಟ್ಟವನ್ನು ಅವಲಂಬಿಸಿರುತ್ತದೆ. ಬೇಸಾಯದಲ್ಲಿ ಯಂತ್ರೋಪಕರಣಗಳ ಬಳಕೆ ಹೆಚ್ಚಿದೆ. ಓರ್ವ ಕೃಷಿಕನು ಕೆಲವು ಎಕರೆಗಳಿಗಿಂತ ಹೆಚ್ಚು ಭೂಮಿಯನ್ನು ಉಳಲಾರ. ನಮ್ಮ ದೇಶದ ಬಡ ರೈತರಿಗೆ ಹೊಸ ನೆಲವನ್ನು ಸಾಗುವಳಿಗೆ ಒಳಪಡಿಸಲು ಕಷ್ಟವಾಗುತ್ತಿದೆ ಎನ್ನುವುದನ್ನು ಸುಲಭದಲ್ಲಿ ಸಿದ್ಧಪಡಿಸಬಹುದು. ಕರ್ನಾಟಕ ರಾಜ್ಯದಲ್ಲಿ ೧೯೬೦-೬೧ ರಿಂದ ೧೯೭೦-೭೧ ರ ವರೆಗಿನ ಹತ್ತು ವರ್ಷಗಳಲ್ಲಿ ಸಾಗುವಳಿಯಾಗುವ ನೆಲ ೧.೪ ರಷ್ಟು ಹೆಚ್ಚಾಗಿದ್ದಲ್ಲಿ ಜನಸಂಖ್ಯೆ ಶೇ. ೨೪ ರಷ್ಟು ಹೆಚ್ಚಾಯಿತೆಂದಲ್ಲಿ ಪರಿಸ್ಥಿತಿಯ ಗಂಭೀರತೆಯು ಅರಿವಾಗುತ್ತದೆ.

ಕೃಷಿಕನ ತಲಾ ಉತ್ಪಾದನೆಯನ್ನು ಹೆಚ್ಚಿಸಲು ಸಹಕರಿಸಬಹುದಾದ ಇನ್ನೊಂದು ಕ್ರಮವೇ ಜನನ ನಿಯಂತ್ರಣ. ಜನನ ನಿಯಂತ್ರಣವನ್ನು ಎರಡು ರೀತಿಯಲ್ಲಿ ಸಾಧಿಸಬಹುದು.

೧) ಅರ್ಥಶಾಸ್ತ್ರಜ್ಞರು ಹೇಳುವಂತೆ, ಬಡ ದೇಶಗಳಲ್ಲಿ ಶ್ರಮಿಕರ ನ್ಯೂನತಮ ಉತ್ಪಾದನೆ (Marginal productivity of labour) ಶೂನ್ಯಕ್ಕೆ ಅತಿ ಸಮೀಪದಲ್ಲಿದೆ. ಅಂದರೆ, ಶ್ರಮಿಕ ದಳದಲ್ಲಿ ಒಬ್ಬ ದುಡಿಮೆಗಾರನ ಹೆಚ್ಚಳದಿಂದ ದೇಶದ ಒಟ್ಟು ಉತ್ಪಾದನೆಯಲ್ಲಿ ಏನೂ ವ್ಯತ್ಯಾಸವಾಗುವುದಿಲ್ಲ. ಇದರಿಂದಾಗಿ, ಜನಸಂಖ್ಯೆಯ ನಿಯಂತ್ರಣದಿಂದ, ಉತ್ಪಾದನೆಯಲ್ಲಿ ವ್ಯತ್ಯಾಸವಾಗದೆ, ಶ್ರಮಿಕ ವರ್ಗ ಕಡಿಮೆಯಾಗುತ್ತದೆ. ಜನನ ನಿಯಂತ್ರಣವು ಒಟ್ಟು ಉತ್ಪಾದನೆಯನ್ನೂ ಹೇಗೆ ಹೆಚ್ಚಿಸಬಲ್ಲುದು ಎಂಬುದು ಮುಂದೆ ವಿದಿತವಾಗುತ್ತದೆ.

೨) ಜನನ ನಿಯಂತ್ರಣ ಭೂ-ಹಿಡುವಳಿ ಚಿಕ್ಕದಾಗುವುದನ್ನು ತಡೆಗಟ್ಟುತ್ತದೆ. ಪ್ರಾಯಶಃ ಬೇಸಾಯದಲ್ಲಿ ಜನಸಂಖ್ಯೆಯ ಅಗಾಧ ಬೆಳವಣಿಗೆಯ ಅತಿ ಕ್ರೂರ ಪರಿಣಾಮವಾದುದು ಭೂ ಹಿಡುವಳಿಯಲ್ಲಿ ಮತ್ತು ಅದರ ವಿತರಣೆಯಲ್ಲಿ. ಬಡ ದೇಶಗಳಲ್ಲಿ ಇಂದಿನ ಜನಸಂಖ್ಯೆಯ ಹೆಚ್ಚಳದಿಂದಾಗಿ ಸರಾಸರಿ ಭೂ ಹಿಡುವಳಿ ಒಂದೇ ತಲೆಮಾರಿನಲ್ಲಿ ಅರ್ಧದಷ್ಟಾಗುತ್ತಿದೆ. ಭೂ ಹಿಡುವಳಿ ಚಿಕ್ಕದಾಗುತ್ತಿದೆ ಮಾತ್ರವಲ್ಲ, ಚೂರು ಚೂರಾಗುತ್ತಿದೆ. ಅಂದರೆ ಒಬ್ಬನ ಭೂ ಹಿಡುವಳಿ ಒಂದೇ ಕಡೆ ಇಲ್ಲದೆ, ಅನೇಕ ಕಡೆ ಪಸರಿಸಿದೆ. ಇಂತಹ ಹಿಡುವಳಿಗಳು ಕೃಷಿಕರ ಉತ್ಪಾದನೆ ಅವರ ನಿಜವಾದ ಸಾಮರ್ಥ್ಯಕ್ಕಿಂತ ಎಷ್ಟೋ ಕಡಿಮೆಯಾಗುವಂತೆ ಮಾಡುತ್ತವೆ ಮಾತ್ರವಲ್ಲದೆ ಕೃಷಿ ಸುಧಾರಣೆಗೆ ಅನೇಕ ಅಡಚಣೆಗಳನ್ನೊಡ್ಡುವೆ. ಇವುಗಳಿಂದಾಗಿ, ಸಣ್ಣ ಹಿಡುವಳಿದಾರರು ತಮ್ಮ ಜಮೀನನ್ನು ದೊಡ್ಡ ಹಿಡುವಳಿದಾರರಿಗೆ ಮಾರುತ್ತಾರೆ ಅಥವಾ ಅವರ ಭೂಮಿ ಲೇವಾದೇವಿ ಮಾಡುವವರ ಕೈವಶವಾಗುತ್ತದೆ. ಆದುದರಿಂದ, ನೆಲದೊಡೆತನವಿಲ್ಲದ ಕೃಷಿ ಕಾರ್ಮಿಕರ ಪ್ರಮಾಣ ಬಡ ರಾಷ್ಟ್ರಗಳಲ್ಲಿ ಹೆಚ್ಚುತ್ತಿರುವುದು ಮಾತ್ರವಲ್ಲದೆ, ದುಡಿಮೆ-

* ಮೈಸೂರು ಸರಕಾರದ Annual Season and Crop Report, 1970—71 ನೋಡಿ

ದಾರರಲ್ಲಿದ್ದ ಭೂಮಾಲೀಕರ ಪ್ರಮಾಣ ಹೆಚ್ಚುತ್ತಿರುವುದು ಅನೇಕ ಕಡೆಗಳಲ್ಲಿ ಕಂಡುಬಂದಿದೆ. ಭೂ ಹಿಡುವಳಿಯ ವಿತರಣೆಯಲ್ಲಾಗುವ ಈ ವ್ಯತ್ಯಾಸಕ್ಕೆ ಮತ್ತೊಂದು ಮುಖ್ಯ ಕಾರಣ ಸಂಪ್ರದಾಯಸ್ಥರಾದ ಬಡ ಜನರು ಜನನ ನಿಯಂತ್ರಿಸದಿರುವುದು ಹಾಗೂ, ಆಧುನಿಕರಾದ ಶ್ರೀಮಂತ ಜನ ಕುಟುಂಬ ಯೋಜನೆಯನ್ನು ಅನುಸರಿಸುತ್ತಿರುವುದು.

ಶ್ರೀ ಗುಮಾಸ್ತೆಯವರ ವಾದದಲ್ಲಿರುವ ಇನ್ನು ಎರಡೂ ದೋಷಗಳ ಬಗ್ಗೆ ಪ್ರಸ್ತಾಪಿಸೋಣ.

೧) ಶ್ರೀಮಂತ ದೇಶಗಳ ಮತ್ತು ಬಡ ದೇಶಗಳ ಜನದಟ್ಟಣೆಯ ತುಲನೆ ಒಂದೇ ಕಾಲ ಮಟ್ಟದಲ್ಲಿ ಮಾಡುವುದು ಸಮಂಜಸವಲ್ಲ; ಜನಸಂಖ್ಯೆಯ ಸಮಸ್ಯೆ ಆರ್ಥಿಕ ಸಮಸ್ಯೆಗೆ ಎಷ್ಟು ಕಾರಣವಾಗಿದೆ ಎನ್ನುವುದನ್ನರಿಯುವುದು ನಮ್ಮ ಗುರಿಯಾಗಿದ್ದಲ್ಲಿ, ಬಡ ದೇಶಗಳ ಜನಸಾಂದ್ರತೆಯ ತುಲನೆ ಈಗಿನ ಶ್ರೀಮಂತ ರಾಷ್ಟ್ರಗಳು ಬಡ ದೇಶಗಳಾಗಿದ್ದಾಗ ಇದ್ದ ಜನದಟ್ಟಣೆಯೊಡನೆ ನಡೆಯಬೇಕು. ಆಗ ಇಂದಿನ ಶ್ರೀಮಂತ ದೇಶಗಳಲ್ಲಿ, ಮಾನವ-ಭೂಮಿ ಅನುಪಾತ ಈಗಿನ ಬಡ ದೇಶಗಳಿಗಿಂತ ಕಡಿಮೆ ಇದ್ದುದು ಮಾತ್ರವಲ್ಲದೆ, ಈಗಿನ ಬಡ ದೇಶಗಳಿಗೆ ಇಲ್ಲದ, ಜನಸಂಖ್ಯೆಯ ಗಾತ್ರವನ್ನು ಕೆಳ ಮಟ್ಟದಲ್ಲಿಡಲು ಸಹಕರಿಸಿದ ಎರಡು ಅವಕಾಶಗಳು ಲಭ್ಯವಿದ್ದವು. ಮೊದಲನೆಯದು, ಹೊಸದಾಗಿ ಕಂಡುಹಿಡಿಯಲ್ಪಟ್ಟ ಖಂಡಗಳಿಗೆ ವಲಸೆ ಹೋಗುವ ಅವಕಾಶ. ಎರಡನೆಯದು ಜನನನಿಯಂತ್ರಣಕ್ಕೆ ಪ್ರಜೆಗಳಲ್ಲಿದ್ದ ಅನುಕೂಲಕರ ಮನೋಭಾವ. ಈ ಈ ಎರಡು ಅವಕಾಶಗಳು ಇಲ್ಲದಿರುತ್ತಿದ್ದಲ್ಲಿ ಪಶ್ಚಿಮ ಯುರೋಪಿನ ದೇಶಗಳಲ್ಲಿ ಇಂದು ಸುಮಾರು ನೂರು ಪಟ್ಟಿಯಷ್ಟು ಜನ ಹೆಚ್ಚಿರುತ್ತಿದ್ದರು.

ಆದುದರಿಂದ ನಾವು ಗುಮಾಸ್ತೆಯವರಿಗೆ ಹಾಕುವ ಪ್ರಶ್ನೆ ಇದು—ನಮ್ಮ ಇಂದಿನ ತಾಂತ್ರಿಕ, ಆರ್ಥಿಕ, ಸಾಮಾಜಿಕ ಹಾಗೂ ಭೌಗೋಲಿಕ ಪರಿಸ್ಥಿತಿಯಲ್ಲಿ ಇಷ್ಟು ಜನದಟ್ಟಣೆ ಯೋಗ್ಯವೇ?

೨) ಜನಸಂಖ್ಯೆಯ ಸಮಸ್ಯೆಯ ಮೂಲವಿರುವುದು ಅದರ ಇಂದಿನ ಗಾತ್ರಕ್ಕಿಂತಲೂ ಹೆಚ್ಚಾಗಿ ಅದರ ಈಗಿನ ಹೆಚ್ಚಳದ ಪ್ರಮಾಣದಲ್ಲಿ ಹಾಗೂ ಅದರ ಪರಿಣಾಮ ಮುಂದಿನ ಜನಸಂಖ್ಯಾ ಪರಿಮಾಣದಲ್ಲಿ. ಉದಾಹರಣೆಗಾಗಿ ಇಂಗ್ಲೆಂಡ್ (ವೇಲ್ಸ್ ಸಂತ) ಮತ್ತು ಭಾರತವನ್ನು ತೆಗೆದುಕೊಳ್ಳೋಣ. ೧೯೭೨ ರಲ್ಲಿ ಇಂಗ್ಲೆಂಡಿನ ಜನಸಾಂದ್ರತೆ ಚ. ಕಿ. ಮೀ. ಗೆ ೩೨೪ ಹಾಗೂ ಭಾರತದಲ್ಲಿ ೧೭೨ ಇತ್ತು. ಆದರೆ ಇಂಗ್ಲೆಂಡಿನ ಜನಸಂಖ್ಯಾ ಹೆಚ್ಚಳದ ಪ್ರಮಾಣದಲ್ಲಿ ಪ್ರತಿವರ್ಷ ಶೇ. ೦·೫ ಇದ್ದರೆ, ಭಾರತದಲ್ಲಿ ಶೇ. ೨.೨ ಇದೆ.* ಇದರಿಂದಾಗಿ, ಜನಸಂಖ್ಯಾ ಹೆಚ್ಚಳದ ದರ ಇದೇ ರೀತಿ ಇದ್ದಲ್ಲಿ ಇನ್ನು ಕೇವಲ ೪೦ ವರ್ಷಗಳಲ್ಲಿ ಪರಿಸ್ಥಿತಿ ತದ್ವಿರುದ್ಧವಾಗುತ್ತದೆ. ೨೦೧೨ರಲ್ಲಿ ಇಂಗ್ಲೆಂಡಿನ ಜನಸಾಂದ್ರತೆ ಚ. ಕಿ. ಮೀ. ಗೆ ೩೯೬ ಇದ್ದರೆ, ಭಾರತದಲ್ಲಿ ೪೧೦ ಇರುತ್ತದೆ. ಆದುದರಿಂದ ನಾವು ಜನಸಂಖ್ಯಾ ಹೆಚ್ಚಳದ ಪ್ರಮಾಣವನ್ನು ನಿಯಂತ್ರಿಸಲು ಈಗಲೇ ಕ್ರಮ ಕೈಗೊಳ್ಳಬೇಕಾಗಿದೆ. ಆದರೆ, ನಾವು ಇಂದಿನಿಂದಲೇ ಜನಸಂಖ್ಯಾ ಹೆಚ್ಚಳದ ಪ್ರಮಾಣವನ್ನು ನಿಯಂತ್ರಿಸಿದರೂ, ಶ್ರಮಿಕ ವರ್ಗ ಇನ್ನು ಸುಮಾರು ಮೂವತ್ತು ವರ್ಷಗಳಲ್ಲಿ ಇಮ್ಮಡಿಯಾಗುವುದನ್ನು ತಪ್ಪಿಸಲು ಅಸಾಧ್ಯ ಎನ್ನುವುದು ವಿಷಾದನೀಯ ಸಂಗತಿ (ಏಕೆಂದರೆ, ಮುಂದಿನ ವರ್ಷಗಳ ಶ್ರಮಿಕರೆಲ್ಲ ಈಗಾಗಲೇ ಹುಟ್ಟಿರುತ್ತಾರೆ). ಜನಸಂಖ್ಯೆಯ ಸಮಸ್ಯೆಯ ವಿಷಯದ ಮೇಲಿನ ನಮ್ಮ ಉದಾಸೀನತೆಯಿಂದಾಗಿ, ಇಮ್ಮಡಿಯಾದ ಈ ಜನರಿಗೆ ಕೆಲಸವನ್ನೊದಗಿಸಿ ಕೊಡುವ ಹೊಣೆ ನಮ್ಮದಾಗಿದೆ.

ಶ್ರೀಮಂತ ರಾಷ್ಟ್ರಗಳಲ್ಲಿ ಜನಸಂಖ್ಯೆಯ

---

* ಅಂಕಿಸಂಖ್ಯೆಗಳನ್ನು ವಿಶ್ವಸಂಸ್ಥೆಯ ೧೯೭೩ರ Statistical Year Book ನಿಂದ ತೆಗೆದುಕೊಳ್ಳ-

ಹೆಚ್ಚಳದ ಪ್ರಮಾಣ ಬಡ ದೇಶಗಳಿಗಿಂತ ಪ್ರಚಂಡ ಪ್ರಮಾಣದಲ್ಲಿ ಹೆಚ್ಚಿತ್ತು ಎಂದು ಗುಮಾಸ್ತೆಯವರು ವಾದಿಸುತ್ತಾರೆ. ಅವರು ಇದನ್ನು ಸಮರ್ಥಿಸಲು ಕೊಡುವ ಅಂಕಿ ಸಂಖ್ಯೆಗಳು ಶುದ್ಧ ತಪ್ಪು. ಅವರೆನ್ನುವ ಯಾವುದೇ ಶ್ರೀಮಂತ ದೇಶದಲ್ಲಿ, ಯಾವುದೇ ಕಾಲದಲ್ಲೂ ಜನನ-ಮರಣದ ವ್ಯತ್ಯಾಸದ ಪ್ರಮಾಣ (rate of natural increase) ಪ್ರತಿವರ್ಷಕ್ಕೆ ಶೇ ೨ ಕ್ಕಿಂತ ಹೆಚ್ಚಿದ್ದಿಲ್ಲ. ಇಂಗ್ಲೆಂಡ್, ಜರ್ಮನಿ ಹಾಗೂ ಜಪಾನುಗಳಿಂದ ಜನರು ಬೇರೆ ದೇಶಗಳಿಗೆ ವಲಸೆ ಹೋಗುತ್ತಿದ್ದ ಕಾರಣ, ಜನಸಂಖ್ಯೆಯ ನಿಜವಾದ ಹೆಚ್ಚಳದ ಪ್ರಮಾಣ ಜನನ-ಮರಣಗಳ ವ್ಯತ್ಯಾಸದ ಪ್ರಮಾಣಕ್ಕಿಂತ ಕಡಿಮೆ ಇತ್ತು ಎಂದು ಬೇರೆ ಹೇಳಬೇಕಾಗಿಲ್ಲ. ಪ್ರಾಯಶಃ ಗುಮಾಸ್ತೆಯವರು ಇಂಗ್ಲೆಂಡ್, ಜರ್ಮನಿ ಮತ್ತು ಜಪಾನುಗಳ ಬಗ್ಗೆ ಕೊಡುವ ಅಂಕಿಸಂಖ್ಯೆಗಳು ಜನನ ಪ್ರಮಾಣ ಇರಬೇಕಷ್ಟೆ ಹೊರತು ಅವರು ಹೇಳುವಂತೆ ಜನಸಂಖ್ಯೆಯ ಹೆಚ್ಚಳದ ಪ್ರಮಾಣ ಮಾತ್ರ ಖಂಡಿತ ಅಲ್ಲ.

೧೯೫೦ ರಿಂದೀಚೆಗಿನ ಜನಸಂಖ್ಯೆಯ ವೃದ್ಧಿಯನ್ನು ನೋಡಿದಲ್ಲಿ, ಜಗತ್ತಿನ ಒಟ್ಟು ಜನಸಂಖ್ಯೆಯ ಪ್ರಮಾಣ ಬಡ ರಾಷ್ಟ್ರಗಳಲ್ಲಿ ಕಡಿಮೆಯಾಗಿರುವುದು ಮತ್ತು ಶ್ರೀಮಂತ ರಾಷ್ಟ್ರಗಳಲ್ಲಿ ಹೆಚ್ಚಿದ್ದು ವ್ಯಕ್ತವಾಗುತ್ತದೆಂದು ಗುಮಾಸ್ತೆಯವರು ಹೇಳುತ್ತಾರೆ. ೧೯೦೦ ರ ಮೊದಲಿನ ಅಂಕಿಸಂಖ್ಯೆಗಳು ಕೇವಲ ಅಂದಾಜಾಗಿರುವ ದೋಷವನ್ನು ಅಲಕ್ಷಿಸಿದರೂ, (ಆಗ ಜಗತ್ತಿನ ಹೆಚ್ಚಿನ ರಾಷ್ಟ್ರಗಳಲ್ಲಿ ಜನಗಣತಿಯ ಪದ್ಧತಿ ಇದ್ದಿಲ್ಲ. ಅದೇಕೆ ಈಗಲೂ ಅನೇಕ ಬಡ ದೇಶಗಳಲ್ಲಿ ಜನಗಣತಿಯ ಪದ್ಧತಿ ಇಲ್ಲ.) ಶ್ರೀ ಗುಮಾಸ್ತೆಯವರು ಹೊಸತನ್ನೇನೂ ಹೇಳುತ್ತಿಲ್ಲ. ಸಾಮಾನ್ಯವಾಗಿ, ೧೯೨೦ರ ವರೆಗೆ ಶ್ರೀಮಂತ ರಾಷ್ಟ್ರಗಳಲ್ಲಿ ಬಡ ರಾಷ್ಟ್ರಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಜನಸಂಖ್ಯೆಯ ವೃದ್ಧಿಯಾಗಿದೆ ಎನ್ನುವುದನ್ನು ಯಾವ ಜನಸಂಖ್ಯಾಶಾಸ್ತ್ರಜ್ಞನೂ ಅಲ್ಲಗಳೆಯುವುದಿಲ್ಲ. ಆದರೆ ೧೯೨೦ ರಿಂದೀಚೆಗೆ, ಜನಸಂಖ್ಯೆಯ ವೃದ್ಧಿ ಬಡ ರಾಷ್ಟ್ರಗಳಲ್ಲಿ ಹೆಚ್ಚಿದೆ. ಇದರಿಂದಾಗಿ, ಜನಸಂಖ್ಯೆಯ ಪ್ರಮಾಣ ಬಡ ರಾಷ್ಟ್ರಗಳಲ್ಲಿ ಹೆಚ್ಚುತ್ತಿದೆ. ಮತ್ತು ಈ ದೇಶಗಳಲ್ಲಿ ಜನಸಂಖ್ಯೆಯ ಹೆಚ್ಚಳದ ಪ್ರಮಾಣ ಶ್ರೀಮಂತ ದೇಶಗಳಲ್ಲಿ ಇದ್ದುದಕ್ಕಿಂತ ಎಷ್ಟೋ ಹೆಚ್ಚಿದೆ ಎನ್ನುವುದು ಅವರ ವಾದ. ಶ್ರೀ ಗುಮಾಸ್ತೆಯವರ ಅಂಕಿಸಂಖ್ಯೆಗಳನ್ನೇ ತೆಗೆದು ನೋಡಿದಲ್ಲಿ (ಕೋಷ್ಟಕ ೨), ೧೯೨೦ರಲ್ಲಿ ಆಫ್ರಿಕ ಮತ್ತು ಏಶ್ಯಾ ಖಂಡಗಳ ಒಟ್ಟು ಜನಸಂಖ್ಯೆ, ಜಗತ್ತಿನ ಜನಸಂಖ್ಯೆಯ ಶೇ. ೬೧ ರಷ್ಟು ಇದ್ದುದು, ೧೯೭೧ಕ್ಕಾಗುವಾಗ ಶೇ. ೬೮ಕ್ಕೇರಿದ್ದು ವ್ಯಕ್ತವಾಗುತ್ತದೆ. ಲ್ಯಾಟಿನ್ ಅಮೇರಿಕದ ಬಡ ದೇಶಗಳಲ್ಲಿ ೧೯೨೦ರ ವರೆಗಿನ ಜನಸಂಖ್ಯೆಯ ಹೆಚ್ಚಳಕ್ಕೆ ಜನರು ವಲಸೆ ಬಂದುದು ಮುಖ್ಯ ಕಾರಣವಾಗಿದ್ದರೆ, ೧೯೨೦ರ ನಂತರದ ವೃದ್ಧಿಗೆ ಜನನ ಪ್ರಮಾಣ ಮತ್ತು ಮರಣ ಪ್ರಮಾಣಗಳಲ್ಲಿದ್ದ ವ್ಯತ್ಯಾಸ ಕಾರಣವಾಯಿತು.

ಕೋಷ್ಟಕ: ೨ ಜಗತ್ತಿನ ಒಟ್ಟು ಜನಸಂಖ್ಯೆಯಲ್ಲಿ ವಿವಿಧ ಪ್ರದೇಶಗಳ ಶೇಕಡಾ ಭಾಗ

ಪ್ರದೇಶ	೧೬೫೦	೧೯೨೦	೧೯೫೭	೧೯೭೧
ಆಫ್ರಿಕ	೧೮.೩	೭.೭	೮.೦	೯.೫
ಏಶ್ಯಾ	೬೦.೦	೫೩.೪	೫೫.೭	೫೮.೩
ಲ್ಯಾಟಿನ್ ಅಮೇರಿಕ	೨.೨	೫.೦	೬.೯	೧೪.೧
ಉತ್ತರ ಅಮೇರಿಕ	೦.೨	೬.೫	೬.೮	
ಯುರೋಪು	೧೮.೯	೨೬.೯	೨೨.೧	೧೮.೬

ಮೂಲ: ಶ್ರೀ ವಸಂತ ಗುಮಾಸ್ತೆಯವರ ಕೋಷ್ಟಕ ೧ ಮತ್ತು ಕೋಷ್ಟಕ ೪ ರಿಂದ.

ಜನಸಂಖ್ಯೆಯ ವೃದ್ಧಿ ಮೊದಲು ಶ್ರೀಮಂತ ದೇಶಗಳಲ್ಲಿ ಹೆಚ್ಚಿದ್ದು ಈಗ ಬಡದೇಶಗಳಲ್ಲಿ ಹೆಚ್ಚಿರಲು ಜನಸಂಖ್ಯೆಯ ಸ್ಥಿತ್ಯಂತರ (Demographic Transition) ಮೊದಲು ಶ್ರೀಮಂತ ದೇಶಗಳಲ್ಲಿ ನಂತರ ಬಡ್ಯ ದೇಶಗಳಲ್ಲಿ ಆರಂಭವಾದುದೇ ಕಾರಣ. ಜನಸಂಖ್ಯೆಯ ಸ್ಥಿತ್ಯಂತರಕ್ಕೆ ಮೊದಲು, ಯಾವುದೇ ದೇಶದಲ್ಲಿ ಜನನ ಮತ್ತು ಮರಣ ಪ್ರಮಾಣಗಳೆರಡೂ ಮೇಲ್ಮಟ್ಟದಲ್ಲಿರುತ್ತವೆ. ಇದರಿಂದಾಗಿ ಜನಸಂಖ್ಯೆಯು ಹೆಚ್ಚಳದ ಪ್ರಮಾಣ ಕಡಿಮೆಯಿರುತ್ತದೆ. ಅನಂತರ, ಮೊದಲು ಮರಣ ಪ್ರಮಾಣದ ಮಟ್ಟ ಕಡಿಮೆಯಾಗಲು ಆರಂಭವಾಗುತ್ತದೆ. ಶ್ರೀಮಂತ ದೇಶಗಳಲ್ಲಿ ಮರಣದ ಪ್ರಮಾಣ ಕಡಿಮೆಯಾಗಲು ಆರ್ಥಿಕ ಪ್ರಗತಿ ನೆರವಾಯಿತು. ಈ ಆರ್ಥಿಕ ಪ್ರಗತಿಯೊಂದಿಗೆ ಬಂದ ಆಧುನಿಕತೆಯಿಂದಾಗಿ ಜನನ ಪ್ರಮಾಣ ಕೂಡ ಮೆಲ್ಲನೆ ಕಡಿಮೆಯಾಗಲು ಪ್ರಾರಂಭವಾಯಿತು. ಹೀಗೆ, ಒಮ್ಮೆ ಹೆಚ್ಚಿದ ಜನಸಂಖ್ಯೆಯ ಹೆಚ್ಚಳದ ಪ್ರಮಾಣ ಪುನಃ ಕಡಿಮೆ ಮಟ್ಟಕ್ಕಿಳಿಯಿತು. ಬಡ ದೇಶಗಳಲ್ಲಿ ಶ್ರೀಮಂತ ದೇಶಗಳಲ್ಲಿ ಕಷ್ಟದಲ್ಲಿ ಸಂಪಾದಿಸಿದ ಜ್ಞಾನ ಮತ್ತು ಅನುಭವಗಳ ಸಹಾಯದಿಂದ, ಹೆಚ್ಚಿನ ಆರ್ಥಿಕ ಪ್ರಗತಿಯಿಲ್ಲದೆ ಮರಣ ಪ್ರಮಾಣವನ್ನು ಕ್ಷಿಪ್ರವಾಗಿ ಕೆಳಗಿಳಿಸಲು ಸಾಧ್ಯವಾಯಿತು. ಆದರೆ, ಪ್ರಮಾಣದ ನಿಯಂತ್ರಣದಲ್ಲಿ ನಾವು ಸಾಧಿಸಿದ ಪ್ರಗತಿ, ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಯಿಲ್ಲದೆ ಬಂದುದರಿಂದ ಜನರ ಮನೋಭಾವ ಬದಲಾಗದೆ ಜನನ ಪ್ರಮಾಣ ಮೇಲ್ಮಟ್ಟದಲ್ಲಿ ಉಳಿದಿದೆ. ಇದುವೆ ಬಡ ದೇಶಗಳಲ್ಲಿ ಜನಸಂಖ್ಯೆಯ ಪ್ರಚಂಡ ಬೆಳವಣಿಗೆಗೆ ಕಾರಣ. ಜನರ ಮನೋಭಾವ ತತ್‌ಕ್ಷಣ ಬದಲಾಗುವುದು ಅಸಂಭವವಾಗಿರುವುದರಿಂದ ಜನಸಂಖ್ಯೆಯ ಸಮಸ್ಯೆಯ ಬಗ್ಗೆ ಇಷ್ಟು ಹಾಹಾಕಾರವೆದ್ದಿದೆ.

ಕಡೆಯದಾಗಿ, ಜನಸಂಖ್ಯೆಯ ನಿಯಂತ್ರಣದ ಪರವಾಗಿ ಜನಸಂಖ್ಯಾಶಾಸ್ತ್ರಜ್ಞರು ಕೊಡುವ ಅತ್ಯಂತ ಪ್ರಬಲ ಕಾರಣವನ್ನು ಪ್ರಸ್ತಾಪಿಸೋಣ. ಇದು ಜನಸಂಖ್ಯೆಯ ನಿಯಂತ್ರಣದಿಂದ, ಜನರ age distribution ನ ಮೇಲಾಗುವ ಅನುಕೂಲಕರ ಪರಿಣಾಮ. ಭಾರತದಂತಹ ಬಡ ರಾಷ್ಟ್ರಗಳಲ್ಲಿ ೧೫ ವರ್ಷ ವಯಸ್ಸಿನೊಳಗಿನ ಜನರು, ಒಟ್ಟು ಜನಸಂಖ್ಯೆಯ ಶೇ. ೪೦ ರಷ್ಟು ಇರುತ್ತಾ-

ಕೋಷ್ಟಕ: ೩

ಭಾರತದಲ್ಲಿ ಜನಸಂಖ್ಯೆಯ age distibuution ೧೯೭೧ ಮತ್ತು ೨೦೦೧ರಲ್ಲಿ

ವಯಸ್ಸಿನ ಗುಂಪು	೧೯೭೧ ಜ. ಸಂ. ಕೋಟಿಗಳಲ್ಲಿ	೧೯೭೧ ಶೇ.	೨೦೦೧ (ಅಂದಾಜು) ಜ. ಸಂ. ಕೋಟಿಗಳಲ್ಲಿ	೨೦೦೧ (ಅಂದಾಜು) ಶೇ.
೦—೧೪	೨೩.೪	೪೨.೦	೨೫.೬	೩೧.೦
೧೫—೫೯	೨೯.೨	೫೨.೪	೫೬.೨	೬೧.೦
೬೦ +	೩.೧	೫.೬	೭.೪	೮.೦
ಮೊತ್ತ	೫೫.೭	೧೦೦.೦	೮೯.೨	೧೦೦.೦
ಜನನ ಪ್ರಮಾಣ (ಪ್ರತಿ ವರ್ಷ ಸಾವಿರ ಜನರಿಗೆ)	೩೮		೨೪	

ಮೂಲ: ರಾಬರ್ಟ್ ಕ್ಯಾಸನ್ ಮತ್ತು ಟಾಂ ಡೈಸನ್ ಅವರ 'New Population Projection for India' ಎಂಬ ಲೇಖನದಿಂದ.

ರಾದರೆ, ಶ್ರೀಮಂತ ದೇಶಗಳಲ್ಲಿ ಅವರ ಪ್ರಮಾಣ ಶೇ. ೨೦ಕ್ಕಿಂತಲೂ ಕಡಿಮೆಯಿದೆ. ಜನನನಿಯಂತ್ರಣದಿಂದ, ಭಾರತದಲ್ಲಿ ಜನರ age distribution ನಲ್ಲಿ ಏನು ವ್ಯತ್ಯಾಸವಾಗಬಲ್ಲುದು ಎನ್ನುವುದನ್ನು ಕೋಷ್ಟಕ ೩ ತೋರಿಸುತ್ತದೆ. (ಜನನ ಪ್ರಮಾಣದಲ್ಲಿ ವ್ಯತ್ಯಾಸವಾಗದಿದ್ದಲ್ಲಿ, ೨೦೦೧ ರಲ್ಲಿ age distribution ೧೯೭೧ ರಲ್ಲಿ ಇದ್ದಂತೆ ಸ್ಥಿರವಿರುತ್ತದೆ.)

೧೫ ರಿಂದ ೬೦ ವರ್ಷದೊಳಗಿನ ಜನರೆಲ್ಲರೂ ದುಡಿಮೆಗಾರರು ಮತ್ತು ಉಳಿದವರು ಅವರ ಅವಲಂಬಿತರು ಎಂದು ತಿಳಿದಲ್ಲಿ, ೧೯೭೧ರಲ್ಲಿ ಪ್ರತಿ ಉತ್ಪಾದಕನು ಇನ್ನೊಬ್ಬ ಅವಲಂಬಿತನನ್ನು ಪೋಷಿಸಬೇಕಿದ್ದಲ್ಲಿ ೨೦೦೧ ರಲ್ಲಿ ಜನಸಂಖ್ಯೆಯ ನಿಯಂತ್ರಣದಿಂದ ಈ ಅವಲಂಬನೆಯ ಅನುಪಾತ (dependency ratio) ಮೂರಕ್ಕೆ ಎರಡರಷ್ಟಾಗುತ್ತದೆ ಎಂದು ಕೋಷ್ಟಕ ೩ ತೋರಿಸಿಕೊಡುತ್ತದೆ. ಜನನ ಪ್ರಮಾಣದ ಇಳಿತ ಇನ್ನೂ ತೀವ್ರವಾಗಿದ್ದಲ್ಲಿ ಅವಲಂಬನೆಯ ಅನುಪಾತ ಈಗಿನ ಅರ್ಧದಷ್ಟಕ್ಕಿಳಿಯಬಹುದು. ಇದರಿಂದಾಗಿ ಆರ್ಥಿಕ ಪರಿಸ್ಥಿತಿಯಲ್ಲಿ ಆಗಬಹುದಾದ ಬದಲಾವಣೆ ಸ್ಪಷ್ಟವಾಗಿಯೇ ಇದೆ. ಮೊದಲನೆಯದಾಗಿ, ಅವಲಂಬಿಗಳಾದ ಜನರ ಪ್ರಮಾಣ ಕಡಿಮೆಯಾಗುವುದರಿಂದ ಉತ್ಪಾದಕನ ಖರ್ಚು ಕಡಿಮೆಯಾಗಿ, ಉಳಿತಾಯ ಮತ್ತು ಬಂಡವಾಳ ಹೂಡುವಿಕೆಯ ಪ್ರಮಾಣ ಹೆಚ್ಚುವುದು. ಉಳಿತಾಯದ ಅನುಪಾತ ಮತ್ತು ಬಂಡವಾಳ ಹೂಡುವಿಕೆಯ ಅನುಪಾತಗಳಲ್ಲಾಗುವ ಈ ವ್ಯತ್ಯಾಸ ಬಡ ರಾಷ್ಟ್ರಗಳ ಆರ್ಥಿಕ ಕ್ರಾಂತಿಗೆ ನಾಂದಿಯಾಗಬಲ್ಲುದು. ಎರಡನೆಯದಾಗಿ, ಶಾಲೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರಮಾಣದಲ್ಲಿ ಕಡಿಮೆಯಾಗುವುದಲ್ಲದೆ, ಶಿಕ್ಷಕರು ಪ್ರಮಾಣದಲ್ಲಿ ಹೆಚ್ಚಾಗುವುದರಿಂದ, ಮುಂದಿನ ಜನಾಂಗಕ್ಕೆ ಉತ್ತಮ ಮಟ್ಟದ ಶಿಕ್ಷಣ ದೊರೆತು, ಅವರ ಉತ್ಪಾದನಾ ಸಾಮರ್ಥ್ಯ ಹೆಚ್ಚುವುದು.

ಜನಸಂಖ್ಯೆಯ ಸಮಸ್ಯೆಯೇ ನಮ್ಮ ಬಡತನದ ಸಮಸ್ಯೆಯ ಆದಿ ಮತ್ತು ಅಂತ್ಯವೆಂದು ನಾವು ಭಾವಿಸಿಲ್ಲ. ಆದರೆ ಕುಟುಂಬ ಯೋಜನೆಯ ಕಾರ್ಯಕ್ರಮದ ಗುರಿ ಕೇವಲ ತಾಯಿ-ಮಕ್ಕಳ ಆರೋಗ್ಯಕ್ಕೆ ಮಾತ್ರ ಸೀಮಿತವಾಗಿಲ್ಲ ಎಂಬುದು ನಮ್ಮ ನಂಬುಗೆ. ಬಡ ರಾಷ್ಟ್ರಗಳ ಆರ್ಥಿಕಸ್ಥಿತಿ ಈ ವಿಷವರ್ತುಲದಿಂದ ಹೊರಬರಲು ಜನಸಂಖ್ಯಾ ನಿಯಂತ್ರಣ ಪ್ರಬಲ ಅಸ್ತ್ರವಾಗಬಲ್ಲುದು ಎನ್ನುವುದು ಅತಿಶಯೋಕ್ತಿಯಲ್ಲವೆಂಬುದು ಮಾತ್ರ ಖಂಡಿತ. ✡

ನಾಯಿ – ಬೆಕ್ಕು

ನಮ್ಮ ಪಕ್ಕದ ಮನೆಯವರ ನಾಯಿ 'ಕಳ್ಳ' ಯಜಮಾನರು ಹೊರಗೆ ಹೋದಾಗ ಮನೆಯಾಚೆ ಮುಂಬಾಗಿಲು ಹಾಕಿಕೊಂಡು ಎದುರು ಮನೆಗೆ ಹೋಗಿ ಮಾತಾಡುತ್ತ ಕುಳಿತರು. ಸ್ವಲ್ಪ ಹೊತ್ತಿನಲ್ಲಿ ಕಳ್ಳ ಬಂದು ಯಜಮಾನತಿಯ ಸೆರಗು ಹಿಡಿದು ಎಳೆಯ ತೊಡಗಿತು. ಏನೋ ಇರಬೇಕೆಂದು ಅವರೆದ್ದು ತಾನು ಕರೆದತ್ತ ನಡೆದರು. ಮನೆಯ ಭಾವಿ ಕಟ್ಟೆಯೇರಿ ನಿಂತು ಅದು ಕುಂಯ್ಗುಡತೊಡಗಿತು. ಬಗ್ಗಿ ನೋಡಿ ಆಶ್ಚರ್ಯದಿಂದ ಅವರು ಒಂದು ಬಿದಿರು ಬುಟ್ಟಿಗೆ ಹಗ್ಗ ಕಟ್ಟಿ ಬಾವಿಯಲ್ಲಿಳಿಬಿಟ್ಟರು. ಅಲ್ಲಿ ಬಿದ್ದು ಒದ್ದಾಡುತ್ತಿದ್ದ ಬೆಕ್ಕು ಅವರು ಸೇರಿದಾಗ ಮೇಲಕ್ಕೆಳೆದರು! ನಾಯಿ ಬೆಕ್ಕುಗಳು ಪರಸ್ಪರ ಶತ್ರುಗಳಂತೆ!

–ಶಿ. ಶಂ. ಕಶ್ಯಪ

ಇದುವೆ ಜೀವ ಇದು ಜೀವನ

ದಾರಿಗುಂಟ ಸಾಗುವಾಗ ಆಗಾಗ್ಗೆ ಭೆಟ್ಟಿಯಾಗುವ ವ್ಯಕ್ತಿಯೊಬ್ಬನು ಪರಿಚಿತ-ನಾಗಿ ಪರಿಣಮಿಸಿ, ಒಮ್ಮೆ ಅನಾರೋಗ್ಯದ ನಿಮಿತ್ತ ಚಿಕಿತ್ಸೆ ಪಡೆಯಬಯಸಿ ದವಾ-ಖಾನೆಗೆ ಬಂದಿದ್ದ. ಅಪರೂಪಕ್ಕೆ ಬಂದ ವ್ಯಕ್ತಿಯಾದ್ದರಿಂದ ಬೇಗ ಗುಣವಾಗುವಂತೆ ಮಾತ್ರವಲ್ಲ ದುಬಾರಿಯಲ್ಲದ ಔಷಧಿಯ ಗುಳಿಗೆಗಳನ್ನು ಕೊಟ್ಟು ಎರಡು ದಿವಸ ತೆಗೆದುಕೊಳ್ಳಲು ಹೇಳಿದೆ. ಬಿಲ್ ಎಷ್ಟೆಂದು ಕೇಳಿದಾಗ, "ಮೊದಲು ಗುಣವಾಗಲಿ ಆ ನಂತರ ಒಂದು ಬಿಲ್ ಕೊಟ್ಟರಾಯಿತು," ಎಂದು ಹೇಳಿ ಕಳಿಸಿದೆ. ಎರಡು ದಿನ ಔಷಧ ತೆಗೆದುಕೊಂಡು ಸಂಪೂರ್ಣ ಗುಣವಾಗಿ ಮೂರನೆಯ ದಿವಸವೇ ಆಸ್ಪತ್ರೆಗೆ ಬಂದು ಆತ ಬಿಲ್ ಎಷ್ಟೆಂದು ಕೇಳಿದ. ಅದಕ್ಕೆ ನಾನು, "ಎರಡು ರೂಪಾಯಿ ಕೊಡಿರಿ," ಎಂದು ಹೇಳಿದೆ.

ಆಗ ಆತ, "ಏನು ಸ್ವಾಮಿ ಬರೀ ನಾಲ್ಕು ಚೀಟಿ ಔಷಧಿಗಾಗಿ ಎರಡು ರೂಪಾಯಿಗಳೇ?" ಎಂದು ಆಶ್ಚರ್ಯದಿಂದ ಪ್ರಶ್ನಿಸಿದ. ಅದಕ್ಕೆ ನಾನು "ನೀವು ನನಗೆ ಇತ್ತೀತ್ತಲಾಗಿ ಅತ್ಯಂತ ಪರಿಚಿತರೂ, ಸ್ನೇಹಿ-ತರೂ, ಆಗಿಬಿಟ್ಟದ್ದರಿಂದ ನಿಮ್ಮಿಂದ ಚಿಕಿತ್ಸೆ-ಗಾಗಿ 'ಬಿಲ್' ಎಂತ ಒಂದು ಪೈಸೆ-ಯನ್ನೂ ತಕ್ಕೊಳ್ಳುತ್ತಿಲ್ಲ. ಆದರೆ ನಿಮ್ಮ ಸಿಕ್‌ನೆಸ್ಸನ್ನು ತೀವ್ರ ವಾಸಿಯಾಗು-ವಂತೆ ಮಾಡಿದ್ದರಿಂದ ಎರಡು ರೂಪಾಯಿ-ಗಳನ್ನು ಬಹುಮಾನ ಎಂದು ಪಡೆಯುವೆ," ಎಂದು ಹೇಳಿದೆ.

ಈ ಮಾತಿನಿಂದ ಅತಿಶಯ ಉಬ್ಬಿ ಹೋಗಿ, "ಒಹೋ ಬಹುಮಾನ ಅಂತ ಇದ್ದರೆ ಎರಡು ರೂಪಾಯಿ ಏಕೆ ನಾಲ್ಕು ರೂಪಾಯಿ ಕೊಡುವೆ," ಎಂದು ನಾಲ್ಕು ರೂಪಾಯಿಗಳನ್ನು ಟೇಬಲ್ಲಿನ ಮೇಲೆ ಇಟ್ಟು ನಮಸ್ಕರಿಸಿ ಗಹಗಹಿಸಿ ನಗುತ್ತ ಹೊರಟು ಹೋದ.

— ಡಾ. ಜಿ. ಎಲ್. ಭಟ್ಟ

ಈ ಮೊದಲು ಮಂಜೇಶ್ವರದಲ್ಲಿ ವಾಸಿಸು-ತ್ತಿದ್ದ ನಾನು ಬಾಡಿಗೆ ನಿಯಂತ್ರಣಾಧಿಕಾರಿ-ಗಳಿಗೆ ಅರ್ಜಿ ಸಲ್ಲಿಸಿ ಶಿವೇಶ್ವರಪುರದಲ್ಲಿ ಒಂದು ಮನೆ ದೊರಕಿಸಿಕೊಂಡ ನಂತರ ಅಲ್ಲಿರುವ ಮಹಿಳಾ ಸೇವಾ ಸಮಾಜದ ಶಾಲೆಗೆ ಮಗಳನ್ನು ಸೇರಿಸಿದೆ. ಈ ಮಾತಿಗೆ ಒಂದು ವಾರದ ನಂತರ ಒಂದು ರಾತ್ರಿ ಊಟ ಮಾಡಿ ಸಿಗರೇಟು ಹಚ್ಚಿಕೊಂಡು 'ರೀಡರ್ಸ್ ಡೈಜೆಸ್ಟ್' ಓದುತ್ತ ಕುಳಿತಾಗ ನನ್ನ ಮಗಳು ಬಂದು, "ಕಾಕಾ, ನೀವು ಜೆಂಟಲ್‌ಮನ್ ಏನು?" ಎಂದು ಕೇಳಿದಳು. ಸ್ಕರ್ಟನೊಡನೆಯೇ ಇವಳು ಬುಷ್‌ಶರ್ಟನ್ನು ಸಹ ಉಪಯೋಗಿಸುತ್ತಿದ್ದ ಈ ಚೋಟುದ್ದದ ಹುಡುಗಿ ನನ್ನನ್ನು ಆ ರೀತಿ ಕೇಳಿದ್ದಕ್ಕೆ ಸ್ವಲ್ಪ ಗಲಿಬಿಲಿಯಾಯಿತು. ಆದರೆ ವಿಷಯವನ್ನು ಮೊಟಕುಗೊಳಿಸಬೇಕೆಂದು, "ಅದೆಲ್ಲಾ ಈಗ ಏಕೆ ಬೇಕು? ಹೋಗಿ ನಿನ್ನ ಅಭ್ಯಾಸ ಮಾಡಿಕೋ" ಎಂದು ಹೇಳಿದೆ. ಆದರೆ ಅವಳು, "ಊಹುಂ ನೀವು ಹೇಳಲಿಕ್ಕೇ ಬೇಕು. ಇಲ್ಲದಿದ್ದರೆ ಇವತ್ತು ಅಭ್ಯಾಸ ಇದ್ದಿ ಎರಡು ಇಲ್ಲ", ಎಂದು ಹೇಳಿದಳು. ಅವಳ ಸಮಾಧಾನಕ್ಕೋಸ್ಕರ "ನಾನು 'ಜೆಂಟಲ್‌ಮನ್', ಎಂದು ಹೇಳಿ ಪ್ರಕರಣ-ವನ್ನು ಮುಕ್ತಾಯಗೊಳಿಸಬಯಸಿದೆ. ಆದರೆ ಅವಳು ಅಷ್ಟಕ್ಕೇ ಬಿಡದೆ, "ನೀವು 'ಜೆಂಟಲ್‌ಮನ್' ಇದ್ದರೆ ನನ್ನ ಶಾಲಿಗೆ ಸೇರಿಸೋ ದಿವ್ಸ ಶಾಲೀ ಒಳಗೆ ಹೇಗೆ ಹೋದಿರಿ?" ಎಂದು ಮರುಸವಾಲು ಹಾಕಿ-ದಳು. ಇದೇನು ಅಸಂಬದ್ಧ ಪ್ರಲಾಪ ಅಂತ-ಸಿಟ್ಟಿನ ನೋಟ ಹಾಕಿ ಅವಳಿಗೆ ಒಳಗೆ

ಹೋಗಿ ಓದಿಕೊಳ್ಳಲು ಹೇಳಿದೆ. 'ಹೋಗ್ತೇನಿ. ಆದರ ಒಂದು ಮಾತು ಮನಸಿನ್ಯಾಗ ಇಟಗೋಳ್ರಿ. ನೀವು ಜಂಟಲ್‌ಮನ್ ಅಂತ ಒಳಗ ಇನ್ನ ಮ್ಯಾಲ ನಮ್ಮ ಸಾಲ್ಯಾಗ ನಿಮಗ ಪ್ರವೇಶ ಇಲ್ಲ. ಯಾಕಂದರ ಪ್ರಿನ್ಸಿಪಾಲರ ರೂಮಿನ ಬಾಗಿಲ ಚೌಕಟ್ಟಿನ ಮ್ಯಾಲ 'Gentlemen are not allowed' ಅಂತ ಒಂದ ಬೋರ್ಡ್ ಅದ" ಎಂದು ಹೇಳಿ ಹೊರಟುಹೋದಳು. ಅವಳ ಮಾತಿನ ಸತ್ಯಾಸತ್ಯವನ್ನು ಒರೆಗೆ ಹಚ್ಚಲು ಮರುದಿನ ಆ ಸಾಲೆಗೆ ಹೋಗಿ ನೋಡಲಾಗಿ ಅವಳು ಹೇಳಿದ ಸ್ಥಳದಲ್ಲಿ ಅಂತಹ ಫಲಕವೊಂದನ್ನು ಗೋಡೆಗೆ ಹಚ್ಚಿಯೇ ಕೂಡಿಸಲಾಗಿತ್ತು. ಅದು "ಪುರುಷರಿಗೆ ಪ್ರವೇಶವಿಲ್ಲ" ಎಂಬ ಪದಗಳ ತರ್ಜುಮೆ ಇರಬೇಕೆಂದು ಎನಿಸಿತು. ಆದರೆ ಎಂತಹ ವಿಪರ್ಯಾಸ!


—ವಾಸುದೇವ ಅಧ್ಯಾಪಕ

ನಾನೊಬ್ಬ ನಗರದ ಕಾರ್ಖಾನೆಯ ನೌಕರ ನಮ್ಮ ಕಾರ್ಖಾನೆಗೆ ಬಿ. ಟಿ. ಎಸ್. ಬಸ್ಸುಗಳನ್ನೇ ಕಾಂಟ್ರಾಕ್ಟಿಗೆ ತೆಗೆದು ಕೊಂಡಿದ್ದಾರೆ. ಎಲ್ಲರಂತೆ ನಾನೂ ಅಂಥದೊಂದು ಬಸ್ಸಿನಲ್ಲಿ ಕಾರ್ಖಾನೆಗೆ ಹೋಗಿ ಬರುವವನು. ನಾನು ಬಸ್ ಮಿಸ್ ಮಾಡಿಕೊಳ್ಳುವುದಂತೂ ತೀರ ಅಪರೂಪ. ಆದರೆ ೯ ನೇ ನವಂಬರ್ ೧೯೭೬ ರಂದು ಈ ಅಪರೂಪದ ವಿಷಯ ನಡೆದೇಹೋಯಿತು.

ಇದಕ್ಕೆ ಅಮ್ಮನೇ ಮುಖ್ಯ ಕಾರಣ. ಏಕೆಂದರೆ ನಾನು ಇನ್ನೇನು ಬಸ್‌ಗೆ ಹೊರಡುವುದರಲ್ಲಿದ್ದಾಗ ಅಮ್ಮ, "ಕಾಫಿ ತೊಗೊ ಆಗೋಯ್ತು" ಎಂದು ಒಳಗೆ ಕರೆದಳು. ನಾನು ಒಳಗೆ ಬಂದು ನೋಡಿದರೆ ಇನ್ನೂ ಡಿಕಾಕ್ಷನ್ ಹಾಕುತ್ತಿದ್ದಳು. ನಾನು ಕಾಫಿಯೇ ಬೇಡವೆಂದು ಹೊರಗೆ ಹೊರಟೆ. ಮತ್ತೆ ಅಮ್ಮ, "ಕಾಫಿ ಆಗೋಯ್ತೋ ರಾಮು, ಆಗೋಯ್ತು" ಎಂದು ಮತ್ತೆ ಒಳಗೆ ಬರುವಂತೆ ಮಾಡಿದರು. ಹೀಗೆ ನಾನು ಮೂರು ನಾಲ್ಕು ಸಾರಿ ಮನೆಯಿಂದ ಒಳಗೆ ಹೊರಗೆ ಬಂದು ಹೋಗಿ ಕೊನೆಗೆ ನಮ್ಮ ಬಸ್ ಸ್ಟಾಪ್‌ಗೆ ಹೋಗುವುದರಲ್ಲಿ ಬಸ್ ನಮ್ಮ ಸ್ಟಾಪನ್ನು ದಾಟಿ, ಆ ರೋಡಿನ ಕೊನೆಯಲ್ಲಿ ತಿರುಗುತ್ತಿದ್ದುದನ್ನು ನೋಡಿದೆ. ನಮ್ಮ ಬಸ್‌ಸ್ಟಾಪ್—ಅಂದರೆ ಮುಖ್ಯ ನಗರದಿಂದ—ಕೊನೆಯ ಬಸ್-ಸ್ಟಾಪ್ ದೇವಯ್ಯ ಪಾರ್ಕ್‌ವರೆಗೆ ಆರು ಸ್ಟಾಪುಗಳಿರುವುದರಿಂದ, ಅಲ್ಲೇ ಇದ್ದ ಒಂದು ರಿಕ್ಷಾ ಹಿಡಿದು ಆ ಬಸ್ಸನ್ನು ಹಿಂಬಾಲಿಸಿದೆ.

ಹೀಗೆ ದೇವಯ್ಯ ಪಾರ್ಕ್‌ವರೆಗೆ ಹಿಂಬಾಲಿಸಿದರೂ ಬಸ್ ಸಿಗಲಿಲ್ಲ. ಕೊನೆಗೆ ಬೇರೆ ಬಸ್ ಹಿಡಿದು ಫ್ಯಾಕ್ಟರಿಯನ್ನು ಸೇರಿದಾಗ ಎಲ್ಲರೂ ನನ್ನ ಸೌಖ್ಯವನ್ನು ವಿಚಾರಿಸುತ್ತಿದ್ದರು. ಏನು ವಿಷಯವೆಂದು ಕೇಳಿದಾಗ, ನಮ್ಮ ಬಸ್ಸು ಗೀತಾಂಜಲಿ ಟಾಕೀಸ್‌ನಿಂದ ಮುಂದೆ ಇರುವ ಚರಂಡಿಯಲ್ಲಿ ಬಿದ್ದು ಅದರಲ್ಲಿದ್ದ ೪೨ ಜನಗಳಿಗೆ ಗಾಯಗಳಾದವೆಂದೂ ಇಬ್ಬರು ಸತ್ತುಹೋದರೆಂದೂ ತಿಳಿಯಿತು. ಸಾಯಂಕಾಲ ನಾನು ವಿಕ್ಟೋರಿಯಾ ಹಾಸ್ಪಿಟಲ್‌ಗೆ ಹೋಗಿ ನೋಡಿದಾಗ ಎಷ್ಟೋ ಜನರ ಗುರುತು ಹಿಡಿಯುವುದೇ ಕಷ್ಟವಾಯಿತು. ಆಗ ಅಮ್ಮ ಮತ್ತು ಆಕೆ ಕೊಟ್ಟ ಕಾಫಿ ಜ್ಞಾಪಕಕ್ಕೆ ಬಾರದೆ ಇರಲಿಲ್ಲ.

—ಎಂ. ಎನ್. ರಾಮಮೂರ್ತಿ



ವಿಟಮಿನ್ ಎ

ಡಾ ಪಿ. ಎಸ್. ನರಸಿಂಹಭಟ್ಟ

ಮಾನವ ದೇಹದ ಪೋಷಣೆಗೆ ಶರ್ಕರ ಪಿಷ್ಟಗಳು, ಸಸಾರಜನಕ, ಕೊಬ್ಬು, ಹಾಗೂ ಲವಣಗಳು ಮಾತ್ರ ಸಾಕೆಂಬ ಭಾವನೆ ಹದಿನೆಂಟನೆಯ ಶತಮಾನ ಕೊನೆಗೊಳ್ಳುವವರೆಗೂ ಸಾರ್ವತ್ರಿಕವಾಗಿತ್ತು. ಆದರೆ ಆ ಶತಮಾನ ಕೊನೆಗೊಳ್ಳುವ ಹೊತ್ತಿಗೆ ಕ್ರಿಶ್ಚಿಯನ್ ಐಜ್ಕಮನ್ ಎಂಬೊಬ್ಬ ವಿಜ್ಞಾನಿ ಡಚ್ ಈಸ್ಟ್ ಇಂಡೀಸ್ ದ್ವೀಪಗಳಲ್ಲಿ ಪ್ರಾಣಿಗಳ ಮೇಲೆ ಪ್ರಯೋಗ ನಡೆಸಿ ಬಿ ಜೀವಸತ್ವ ರಹಿತವಾದ ಹೊಟ್ಟು ತೆಗೆದ ಅಕ್ಕಿಯನ್ನು ನಿರಂತರವಾಗಿ ಸೇವಿಸುವುದಕ್ಕೂ ಬೆರಿಬೆರಿ ರೋಗ ಒದಗುವುದಕ್ಕೂ ಕಾರ್ಯಕಾರಣ ಭಾವವನ್ನು ಕಲ್ಪಿಸಿದ ನಂತರವೇ ಮೇಲೆ ಹೇಳಿದ ಪದಾರ್ಥಗಳಲ್ಲದೆ ಶರೀರ ಪೋಷಣೆಗೆ ಇನ್ನೂ ಕೆಲವು ಪದಾರ್ಥಗಳು ಅಗತ್ಯವಾಗಿವೆಯೆನ್ನುವ ಅಂಶ ಸಾರ್ವಜನಿಕರಿಗೆ ಮನದಟ್ಟಾದದ್ದು. ಪರಿಣಾಮವಾಗಿ ಈ ಶತಮಾನದ ಪ್ರಾರಂಭದಲ್ಲಿ ಅನೇಕ ಶೋಧಗಳು ನಡೆದು ಅನೇಕ ರೋಗಗಳು ಬರಲು ಮೂಲ ಕಾರಣ ರೋಗಾಣುಗಳಾಗಿರದೆ ನಿರಂತರವಾಗಿ ಪೋಷಕಾಂಶರಹಿತವಾದ ಆಹಾರವನ್ನು ಸೇವಿಸುವುದಾಗಿದೆ ಎಂಬ ತೀರ್ಮಾನಕ್ಕೆ ಬರಲಾಯಿತು. ಹೀಗೆ ಶೋಧ ನಡೆಸಿದವರಲ್ಲಿ ಆಸ್ಬರ್ನ್ ಹಾಗೂ ಮೆಂಡೆಲ್ ಅವರು ಪ್ರಮುಖರು. ಅವರಿಬ್ಬರೂ ಸೇರಿ ಸತತವಾಗಿ ಸಂಶೋಧನೆ ನಡೆಸಿ ೧೯೧೨ರಲ್ಲಿ ಎ ಜೀವಸತ್ವವನ್ನು ಕಂಡುಹಿಡಿದರು. ಇದರ ಒಂದು ವರ್ಷದ ನಂತರ ಮ್ಯಾಕ್‌ಕೋಲಮ್ ಹಾಗೂ ಡೇವಿಸ್ ಅವರು ಪ್ರತ್ಯೇಕವಾಗಿ ಸಂಶೋಧನೆಗಳನ್ನು ನಡೆಸಿ ಎ ಜೀವಸತ್ವವನ್ನು ಕಂಡುಹಿಡಿದರಾದರೂ ಪ್ರಪ್ರಥಮವಾಗಿ ಎ ಜೀವಸತ್ವವನ್ನು ಶೋಧಿಸಿದ ಕೀರ್ತಿ ಮೆಂಡೆಲ್, ಆಸ್ಬರ್ನರಿಗೇ ಸಲ್ಲಬೇಕು.

ಸಾಮಾನ್ಯವಾಗಿ ಎಲ್ಲರೂ ಭಾವಿಸಿದ ಹಾಗೆ ವಿಟಾಮಿನ್ ಎ ಒಂದೇ ಜೀವಸತ್ವವಲ್ಲ. ಇದರಲ್ಲಿ A_1 A_2 ಮುಂತಾಗಿ ಅನೇಕ ಭೇದಗಳೂ ಉಂಟು. ಆದರೆ ನಿತ್ಯ ಜೀವನದಲ್ಲಿ ಹೆಚ್ಚಾಗಿ ಕಂಡುಬರುವ A_1 ಅನ್ನೇ ಎ ಜೀವಸತ್ವವೆಂದು ಗುರುತಿಸುವುದು ವಾಡಿಕೆ. ಇದೊಂದು ಬಗೆಯ ಮದ್ಯಾರ್ಕ (ಆಲ್ಕೋಹಾಲ್). ಈ ಜೀವಸತ್ವದ ಶೋಧವಾದರೂ ಇದರ ರಾಸಾಯನಿಕ ರಚನೆಯನ್ನು ($C_{20}H_{29}OH$) ಗುರುತಿಸಲು ಮುಂದೆ ಇಪ್ಪತ್ತು ವರ್ಷಗಳೇ ಹಿಡಿದವು. ಇದಕ್ಕಿಂತ ಎರಡು ಕಡಿಮೆ ಜಲಜನಕದ ಅಣುಗಳನ್ನು ಒಳಗೊಂಡ ರಾಸಾಯನಿಕ ರಚನೆಯುಳ್ಳದ್ದು A_2 ಜೀವಸತ್ವ.

ನಿತ್ಯಜೀವನದಲ್ಲಿ ಇದರ ಮಹತ್ವ ಅಷ್ಟಿಷ್ಟಲ್ಲ. ಇದರ ನಿರಂತರವಾದ ಕೊರತೆಯಿಂದ ಇರುಳುಗುರುಡುತನ ಬರಬಹುದು. ಕಂಜಕ್ಟಿವದ ಕಾಂತಿ ಕಡಿಮೆಯಾಗುವುದು. ಕಂಜಕ್ಟಿವದಲ್ಲಿ ಬೆಳ್ಳಗಿನ ದಟ್ಟ ಸ್ಥಳಗಳುಂಟಾಗು

ತ್ತವೆ. ಕೋರ್ನಿಯಭಾಗದಲ್ಲಿ ಕೆರಟಿನ್ ಅಂಶ ಜಾಸ್ತಿಯಾಗಿ ಅದರ ಪಾರದರ್ಶಕತ್ವ ಕುಂದು-ತ್ತದೆ. ಅದು ಇತರ ರೋಗಗಳಿಗೂ ಬಲಿ-ಯಾಗಬಹುದು. ಇದನ್ನು ಕೆರಟೋಮಲೇ-ಶಿಯಾ ಅನ್ನುವರು.

ಸರಿಯಾದ ದೃಷ್ಟಿಗೂ ಎ ಜೀವಸತ್ವದ ಸೇವನೆ ಅತ್ಯಗತ್ಯ. ಕಣ್ಣುಗಳ ಮೂಲಕ ಬಾಹ್ಯ ಪ್ರಪಂಚದ ಅರಿವು ಉಂಟಾಗಲು ಅಕ್ಷಿಪಟಲ-ದಲ್ಲಿನ ದಂಡ (rod) ಹಾಗೂ ಶಂಕು (cone) ಗಳು ಅವಶ್ಯ. ಇವೆರಡೂ ವಿಚಿತ್ರ ರೀತಿಯಲ್ಲಿ ರಚಿತವಾದ ನರಕಣಗಳು (nerve cells) ಇವುಗಳ ಅಗ್ರಭಾಗದಲ್ಲಿ ರೊಡೋ-ಪ್ಸಿನ್ ಎಂಬ ವರ್ಣದ್ರವ್ಯವುಂಟು. ಸೂರ್ಯ ಕಿರಣಗಳು ಅಕ್ಷಿಪಟಲದ ಮೂಲಕ ಶಂಕು, ದಂಡಗಳ ಮೇಲೆ ಬಿದ್ದಾಗ ರೊಡೊಪ್ಸಿನ್ನಿನಲ್ಲಿ ರಾಸಾಯನಿಕ ಕ್ರಿಯೆ ನಡೆದು ಅದು ರೆಟಿನಿನ್ ಆಗಿ ರೂಪುಗೊಂಡು ಹೊಂದಿ ಅದರ ಸ್ವಲ್ಪ ಭಾಗ ಎ ಜೀವಸತ್ವವಾಗಿಯೂ ಇನ್ನುಳಿದ ಭಾಗ ಪ್ರೋಟೀನ್ ಆಗಿಯೂ ಪರಿವರ್ತಿತ-ವಾಗುತ್ತದೆ. ಮತ್ತೆ ರಾಸಾಯನಿಕ ಕ್ರಿಯೆ ನಡೆದು ಕೆಲ ಸಮಯದ ನಂತರ ಇವೆರಡೂ ಪದಾರ್ಥಗಳು ಪುನಃ ರೊಡೋಪ್ಸಿನ್ ಆಗಿ ಪರಿವರ್ತಿತವಾಗುತ್ತವೆ. ಹೀಗಾಗುವಾಗ ಎ ಜೀವಸತ್ವ ನಷ್ಟಗೊಳ್ಳುವುದು. ಇದನ್ನು ಆ ಶಂಕು, ಕೋನಗಳು ಹೊರಗಿನಿಂದಲೇ ತುಂಬಿ ಕೊಳ್ಳಬೇಕು. ಆದ್ದರಿಂದ ನಾವು ಸೇವಿಸುವ ಆಹಾರದಲ್ಲಿ ಎ ಜೀವಸತ್ವ ತಕ್ಕ ಪ್ರಮಾಣದಲ್ಲಿ-ಲ್ಲದಿದ್ದರೆ ಸ್ವಾಭಾವಿಕವಾಗಿಯೇ ದೃಷ್ಟಿ ಮಾಂದ್ಯವುಂಟಾಗುವುದು.

ಈ ಜೀವಸತ್ವದ ಅಭಾವದಿಂದ ಚರ್ಮದ ಕಣ (Epithelium) ಗಳು ಆರೋಗ್ಯವನ್ನು ಕಳೆದುಕೊಳ್ಳುತ್ತವೆ. ಚರ್ಮದ ಸ್ನಿಗ್ಧತೆ ಮಾಯವಾಗಿ ಚರ್ಮ ಒರಟಾಗಿಯೂ ದಪ್ಪ-ವಾಗಿಯೂ ಆಗುವುದು. ಜಠರ ಹಾಗೂ ಕರುಳಿನ ಚರ್ಮದ ಕಣಗಳು ಆರೋಗ್ಯವನ್ನು ಕಳೆದುಕೊಂಡು ಭೇದಿಯುಂಟಾಗಬಹುದು. ಮೂತ್ರಕೋಶದಲ್ಲಿ ಕಲ್ಲು (Calculi) ಗಳಾ-ಗುವವು. ಶ್ವಾಸನಾಳವೂ ನಾನಾ ಬಗೆಯ ರೋಗಗಳಿಗೆ ಬಲಿಯಾಗುವುದು. ಶರೀರದ ಬೆಳವಣಿಗೆಗೂ ಎ ಜೀವಸತ್ವ ಅತ್ಯಗತ್ಯ.

ಶಾರ್ಕ್ ಹಾಗೂ ಕಾಡ್ ಮೀನುಗಳ ಪಿತ್ತ ಕೋಶದಲ್ಲಿ ಇದರ ಅಂಶ ಬಹಳವಾಗಿರುವುದ ರಿಂದ ಎ ಜೀವಸತ್ವದ ಕೊರತೆ ವಿಶೇಷವಾಗಿರು ವಲ್ಲಿ ಡಾಕ್ಟರುಗಳು ಶಾರ್ಕ್ ಲಿವ್ಹರ್ ಆಯಿಲ್ ಅಥವಾ ಕಾಡ್ ಲಿವ್ಹರ್ ಆಯಿಲ್ ಅನ್ನು ರೋಗಿಗಳಿಗೆ ವಿಧಿಸುವುದಿದೆ. ತಾಯಿಯ ಮೊಲೆಹಾಲಿನಲ್ಲಿ ಎ ಜೀವಸತ್ವ ಸಾಕಷ್ಟು ಪ್ರಮಾಣದಲ್ಲಿದೆ ಎಂಬ ಅಭಿಪ್ರಾಯ ಪ್ರಚಲಿತ ವಾಗಿದೆ. ಆದರೆ ಪರಿಸ್ಥಿತಿ ತೀರ ತದ್ವಿರುದ್ಧ-ವಾಗಿದೆ ತಾಯಿಯ ಮೊಲೆ ಹಾಲಿನಲ್ಲಿಯೂ ದನದ ಹಾಲಿನಲ್ಲಿಯೂ ಎ ಜೀವಸತ್ವದ ಪ್ರಮಾಣ ತೀರ ಕಡಿಮೆ.

ಗಜ್ಜರಿ, ಕ್ಯಾಬೀಜ, ಕಿತ್ತಳೆ, ಮಾವು, ಪಪಾಯಿಗಳಲ್ಲಿ ಎ ಜೀವಸತ್ವವಿದೆಯೆಂದು ಅನೇಕ ಪಠ್ಯಪುಸ್ತಕಗಳಲ್ಲಿ ಉಲ್ಲೇಖಿಸಿದ್ದನ್ನು ನಾವು ಕಾಣುತ್ತೇವೆ, ಆದರೆ ಈ ಮಾತು



ಅರವತ್ತು ನಿಮಿಷಕ್ಕೆ ಒಂದು ಗಂಟೆ ಹೌದು ಸರಿ. ಆದರೆ ನಿಮ್ಮಪ್ಪನ ವಿಷಯದಲ್ಲಿ ಮಾತ್ರ ಒಂದು ನಿಮಿಷಕ್ಕೆ ಒಂದು ಗಂಟೆ.


ಕೂಡ ಅರ್ಧ ಸತ್ಯ. ಈ ಪದಾರ್ಥಗಳಲ್ಲಿ ಸಸ್ಯಗಳ ಹರಿತ್‌ರಂಜಕವನ್ನೊಡಗೂಡಿದ ಕೆರೋಟಿನ್ ಎಂಬ ವಿಟಮಿನ್ ಜನಕವಿದೆ. ಕೆರೋಟಿನ್‌ನಲ್ಲಿಯೂ ಆಲ್ಫಾ, ಗಾಮಾ, ಬೀಟಗಳೆಂದು ಮೂರು ವಿಧ. ಇದರ ಪೈಕಿ ಕಾಯಿಪಲ್ಲೆಗಳನ್ನಾಗಲಿ ಫಲಗಳನ್ನಾಗಲಿ ಸೇವಿಸಿದಾಗ ಕೊನೆಯ ಬಗೆಯ (ಬೀಟ) ಕೆರೋಟಿನ್ ಮಾತ್ರ ಶರೀರದಲ್ಲಿ ಎ ಜೀವಸತ್ವವಾಗಿ ಪರಿವರ್ತಿತವಾಗುತ್ತದೆ.

ಯಾವುದೇ ಆಹಾರ ಪದಾರ್ಥದಲ್ಲಿ ಎ ಜೀವಸತ್ವವಿದೆಯೋ ಇಲ್ಲವೋ ಎಂಬುದನ್ನು ಕಂಡುಹಿಡಿಯುವುದೂ ಸುಲಭ. ಸಾಕಷ್ಟು ನೀರಿರುವ ಒಂದು ಟೆಸ್ಟ್‌ಟ್ಯೂಬಿನಲ್ಲಿ ನೀವು ಪರೀಕ್ಷಿಸಬೇಕೆಂದಿರುವ ಪದಾರ್ಥವನ್ನು ಹಾಕಬೇಕು. ಅನಂತರ ಆಂಟಿಮನಿ ಟ್ರೈಕ್ಲೋರೈಡಿನ ಸ್ಫಟಿಕವನ್ನು ಇಕ್ಕಳದಿಂದ ಪ್ರನಾಳದಲ್ಲಿ ಹಾಕಬೇಕು. ಸ್ವಲ್ಪ ಸಮಯದ ನಂತರ ಇಕ್ಕಳದಿಂದ ಆ ಸ್ಫಟಿಕವನ್ನು ಹೊರತೆಗೆಯಬೇಕು. ಪರೀಕ್ಷಿಸಬೇಕೆಂದಿರುವ ಆಹಾರ ಪದಾರ್ಥದಲ್ಲಿ ಎ ಜೀವಸತ್ವ ಇದ್ದುದಾದರೆ ಸ್ಫಟಿಕ ನೀಲ-ನೇರಿಳೆ ಬಣ್ಣದ್ದಾಗುವುದು. ಪದಾರ್ಥದಲ್ಲಿ ಎ ಜೀವಸತ್ವದ ಪ್ರಮಾಣ ಅಧಿಕವಾದಂತೆ ಸ್ಫಟಿಕದ ಬಣ್ಣ ದಟ್ಟವಾಗುತ್ತ ಹೋಗುತ್ತದೆ.

ಜೀವಸತ್ವದಲ್ಲಿ ಎರಡು ವಿಧ: ಕೆಲವು ನೀರಿನಲ್ಲಿ ಕರಗುವಂಥವು. ಇನ್ನು ಕೆಲವು ಕೊಬ್ಬಿನಲ್ಲಿ ಕರಗುವಂಥವು. ಎ ಜೀವಸತ್ವ ಎರಡನೆ ವಿಧಕ್ಕೆ ಸೇರಿದ್ದು. ಆದುದರಿಂದ ಅದನ್ನು ಬಾಯಿಯ ಮೂಲಕ ಕೊಟ್ಟಾಗ ಅದನ್ನು ಹೀರಲು ಪಿತ್ತರಸ ಅಗತ್ಯ. ಕರುಳಿನಲ್ಲಿ ಹೀರಲ್ಪಟ್ಟ ಈ ಜೀವಸತ್ವವು ಪಿತ್ತಕೋಶದಲ್ಲಿ ಸಂಗ್ರಹಗೊಳ್ಳುತ್ತದೆ. ಹೀಗೆ ಸಂಗ್ರಹಗೊಂಡ ಎ ಜೀವಸತ್ವ ನ್ಯುಮೋನಿಯ, ಕ್ರಾನಿಕ್ ನೆಫ್ರೈಟಿಸ್, ಅಸ್ತಮಾ, ಅರ್ಬುದ, ಅನೀಮಿಯಗಳಂತಹ ಕೆಲವು ರೋಗಗಳಲ್ಲಿ ಮೂತ್ರದಿಂದ ಹೊರಬೀಳುತ್ತದೆ. ಸಾಮಾನ್ಯವಾಗಿ ಪ್ರೌಢ ವಯಸ್ಕನೊಬ್ಬನಿಗೆ ದಿನಕ್ಕೆ ೪೦೦೦ ಇಂಟರ್‌ನ್ಯಾಶನಲ್ ಯೂನಿಟ್ಟುಗಳಷ್ಟು ಎ ಜೀವಸತ್ವ ಅರ್ಥಾತ್ ೨.೪ ಮಿಲಿಗ್ರಾಮುಗಳಷ್ಟು ಕೆರೋಟೀನಿನ್ ಅವಶ್ಯವಾಗಿದೆ. ಗರ್ಭಿಣಿಯರಿಗೆ ಹಾಗೂ ಬಾಣಂತಿಯರಿಗೆ ಅಗತ್ಯವಿರುವ ಪ್ರಮಾಣ ಇದಕ್ಕೂ ಹೆಚ್ಚು.

ಎ ಜೀವಸತ್ವದ ಕೊರತೆಯುಂಟಾದಾಗ ದಿನಾಲು ೩೦,೦೦೦ ದಿಂದ ೫೦,೦೦೦ ಇಂಟರ್‌ನ್ಯಾಶನಲ್ ಯೂನಿಟ್ಟುಗಳಷ್ಟು ಪ್ರಮಾಣದಲ್ಲಿ ಇದನ್ನು ಕೊಡುವುದು ವಾಡಿಕೆ. ಪಿತ್ತಕೋಶ ಆರು ತಿಂಗಳವರೆಗೆ ಇದನ್ನು ಸಂಗ್ರಹಿಸಿಟ್ಟುಕೊಂಡು ಶರೀರಕ್ಕೆ ಅವಶ್ಯವಾದಷ್ಟು ಪ್ರಮಾಣದಲ್ಲಿ ಅದನ್ನು ಪೂರೈಸಬಲ್ಲುದು. ಆದರೆ ಅತಿಯಾದರೆ ಅಮೃತವೂ ವಿಷ. ಎ ಜೀವಸತ್ವವನ್ನು ಅಗತ್ಯಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಸೇವಿಸಿದರೆ ವಾಂತಿಯಾಗಲು ಪ್ರಾರಂಭಿಸುವುದು. ನಾಲಿಗೆಯ ರುಚಿ ಹೋಗುವುದು. ಮೈ ತುರಿಸಲಾರಂಭಿಸುವುದು, ಕೆಲವು ವೇಳೆ ಎಲೋಪೇಶಿಯ ಎಂಬ ಎಲುವಿನ ರೋಗವೂ ಉಂಟಾಗುವುದು.

ಅದರ ಯುಕ್ತ ಪ್ರಮಾಣದಲ್ಲಿ ಸೇವಿಸಿದರೆ ಇದು ಭೀಕರ ವ್ಯಾಧಿಗಳಿಂದ ದೇಹವನ್ನು ಕಾಪಾಡುತ್ತದೆ. ★



ಶ್ರಮವನ್ನು ಕಳೆಯಲು ಬಳಸಲಾಗುತ್ತಿರುವ ಅನೇಕ ಸಾಧನಗಳ ಪೈಕಿ ಎಲ್ಲಕ್ಕಿಂತ ಪ್ರಮುಖವಾದದ್ದು 'ನಾಳೆ' ಎಂಬುದು.

'ಹಡ್‌ಸನ್ ನ್ಯೂಸ್‌ಲೆಟರ್'ನಿಂದ

ಉಡುಗೊರೆ

ಮೂಲ : ಭಗವತೀಚರಣ ವರ್ಮ
ಕನ್ನಡಕ್ಕೆ : ಕಾಮಾಕ್ಷಿ ರಾಮಭಟ್ಟ

ಶ್ಯಾಮ್ ಎಂದು ಕೆತ್ತಲ್ಪಟ್ಟ ಚಿನ್ನದ ಉಂಗುರ ಧರಿಸಿದ್ದ ದೇವೇಂದ್ರ ನಮ್ಮೆಲ್ಲರ ಗಮನವನ್ನು ಉಂಗುರದೆಡೆಗೆ ಸೆಳೆಯುತ್ತಾ, "ತನ್ನ ನೆನಪು ಸದಾ ಇರಲಿ ಎಂದು ನನ್ನ ಸ್ನೇಹಿತ ಶ್ಯಾಮನಾಥನು ನನಗೆ ಈ ಉಂಗುರವನ್ನು ಉಡುಗೊರೆಯಾಗಿ ಕೊಟ್ಟಿದ್ದಾನೆ," ಎಂದು ಹೇಳಿದ.

ಪರಮೇಶ್ವರಿ ಆ ಉಂಗುರವನ್ನೊಮ್ಮೆ ದಿಟ್ಟಿಸಿ ನೋಡಿ ಹೇಳಿದ, "ಉಡುಗೊರೆ ಎಂಬ ಶಬ್ದ ಕೇಳಿದೊಡನೆಯೆ ನನಗೆ ಒಂದು ವಿಚಿತ್ರವಾದ, ಆದರೆ ಸತ್ಯವಾದ ಘಟನೆ ನೆನಪಿಗೆ ಬರುತ್ತದೆ. ನಿಮಗೆಲ್ಲರಿಗೂ ಅದನ್ನು ಕೇಳುವಷ್ಟು ವ್ಯವಧಾನವಿದ್ದರೆ ಹೇಳುತ್ತೇನೆ. ಅದು ಸತ್ಯವಾದುದೆಂಬಲ್ಲಿ ಸಂಶಯವೇ ಇಲ್ಲ. ಏಕೆಂದರೆ ಅದರಲ್ಲಿ ನನ್ನ ಪಾತ್ರವೂ ಇದೆ," ಎಂದು ಮೀಗಳ್ಗೆ ಸೂಸುತ್ತಾ ಹೇಳಿದ.

ನಾವೆಲ್ಲರೂ ಏಕಕಂಠದಿಂದ, "ಅವಸರವೇನಿಲ್ಲ. ಕಥೆ ಪ್ರಾರಂಭಿಸು" ಎಂದೆವು. ಪರಮೇಶ್ವರಿ ಕಥೆ ಹೇಳತೊಡಗಿದ.

ಎರಡು ವರ್ಷಗಳ ಹಿಂದೆ, ನಾನು ನಮ್ಮ ಕಂಪನಿಯ ಮ್ಯಾನೇಜರ್ ಆಗಿ ದೆಹಲಿಗೆ ಹೋಗಿದ್ದೆ. ನಮ್ಮ ಬಂಗಲೆಯ ಮಗ್ಗುಲಿನ ಸಣ್ಣ ಮನೆಯೊಂದರಲ್ಲಿ ಶಶಿಬಾಲಾದೇವಿ ಎಂಬ ಹೆಸರಿನ ಮಹಿಳೆಯೊಬ್ಬಳು ಇರುತ್ತಿದ್ದಳು. ಪದವೀಧರಳಾಗಿದ್ದ ಅವಳು ಯಾವುದೋ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿದ್ದಳು. ಸಂಜೆಯ ವಾಕಿಂಗಿಗೆ ಹೋದಾಗ ನಾವಿಬ್ಬರೂ ಎಷ್ಟೋ ಸಲ ಒಬ್ಬರನ್ನೊಬ್ಬರು ನೋಡಿದ್ದರೂ ಪರಿಚಯವಿಲ್ಲದ ಕಾರಣ ಮಾತನಾಡಿರಲಿಲ್ಲ.

ಒಮ್ಮೆ ನಾನು ಹತ್ತಿರದ ಪಾರ್ಕಿಗೆ ಹೋದಾಗ ಆಕೆಯೂ ಅಲ್ಲಿಯೇ ಇರುವುದನ್ನು ನೋಡಿದೆ. ಅಲ್ಲಿ ತಿರುಗಾಡುತ್ತಿರುವಾಗ ಆಕೆಯ ಕರವಸ್ತ್ರ ಅಕಸ್ಮಾತ್ತಾಗಿ ಕೆಳಗೆ ಬಿತ್ತು. ಆಕೆ ಅದನ್ನು ಗಮನಿಸಿದಂತೆ ಕಾಣಲಿಲ್ಲ. ಅಥವಾ ಬೇಕೆಂದೇ ಗಮನಿಸದಂತೆ ನಟಿಸಿದಳೋ ಏನೋ. ಕರವಸ್ತ್ರವನ್ನು ಎತ್ತಿಕೊಳ್ಳದೇ ಆಕೆ ಹಾಗೆಯೇ ಮುಂದುವರಿದಾಗ, ದೂರದಲ್ಲಿದ್ದ ನಾನು ಬೇಗನೆ ಹೋಗಿ ಕರವಸ್ತ್ರವನ್ನೆತ್ತಿ ಆಕೆಗೆ ಕೊಟ್ಟೆ. ಆಕೆ ಮೆಲುವಾಗಿ ನಗುತ್ತಾ, "ತುಂಬಾ ಥ್ಯಾಂಕ್ಸ್." ಎಂದಳು. ನಾನು ಸಂಕೋಚದಿಂದ ಹೇಳಿದೆ: "ಥ್ಯಾಂಕ್ಸ್ ಹೇಳುವ ಕಾರಣವಾದರೂ ಏನು? ಇದು ನನ್ನ ಕರ್ತವ್ಯವೇ ಅಲ್ಲವೆ?" ಶಶಿಬಾಲೆಯು ಅತ್ಯಂತ ಉತ್ಸುಕಳಾಗಿ ನನ್ನ ಪರಿಚಯ ಮಾಡಿಕೊಂಡಳು. ಅವಳ ಮೆಲುನಗೆ, ವಾಕ್ಚಾತುರ್ಯಗಳು ಬಹು ಬೇಗನೆ ನನ್ನನ್ನು ಆಕರ್ಷಿಸಿದವು. ಸಾಧಾರಣ ರೂಪ, ಮಧ್ಯ


ಮನಸ್ಸು. ಆದರೂ ನೀಳವಾದ ಕೇಶರಾಶಿ, ಕೋಮಲ ಕಾಯ, ವಿಶಾಲ ನಯನಗಳು, ದುಂಡು ಮುಖ, ಹಿತಮಿತವಾದ ಅಲಂಕಾರ. ಅವಳನ್ನು ನೋಡಿದ ಯಾರಾದರೂ ಮರುಳಾಗಬೇಕು. ಅದೇ ರಾತ್ರಿಯಲ್ಲಿಯೇ ಅವಳ ಮನೆಗೆ ಬರುವುದಾಗಿ ಭರವಸೆಕೊಟ್ಟೆ.

*

ಮನೆಯಲ್ಲಿ, ಸುಂದರಳಾದ ಪತ್ನಿಯಿದ್ದರೂ ಅದಾವುದೋ ಆಕರ್ಷಣೆಯಿಂದ ಶಶಿಬಾಲಾದೇವಿಯೊಡನೆ ಅತಿ ಸ್ನೇಹದಿಂದ ವರ್ತಿಸತೊಡಗಿದೆ. ಪ್ರತಿ ನಿತ್ಯ ನಾವು ಒಟ್ಟಿಗೆ ತಿರುಗಾಡಲು ಹೋಗತೊಡಗಿದ್ದೆವು. ಕ್ರಮೇಣ ನಾನು ಇಡಿ ರಾತ್ರಿಗಳನ್ನು ಅವಳೊಡನೆ ಕಳೆಯತೊಡಗಿದೆ.

"ಒಂದು ದಿನ ಬೆಳಿಗ್ಗೆ ನಾನು ಕಣ್ತೆರೆದಾಗ ಶಶಿಬಾಲೆಯು ಆಗಲೇ ಎದ್ದು ಸ್ನಾನ ಮಾಡುತ್ತಿದ್ದಳು. ಗಡಿಯಾರ ೮ ಗಂಟೆಯಾಗಿರುವುದನ್ನು ತೋರಿಸುತ್ತಿತ್ತು. ನಾನು ಎದ್ದು ಆಕಳಿಸುತ್ತ ಕಿಟಕಿಯನ್ನು ತೆರೆದು, ಪುನಃ ಒಳಗೆ ಡ್ರೆಸ್ಸಿಂಗ್ ಟೇಬಲ್ ಬಳಿಗೆ ಬಂದು ಕನ್ನಡಿಯಲ್ಲಿ ನನ್ನ ಮುಖ ನೋಡಿಕೊಂಡೆ. ಆಗ ಆಕಸ್ಮಾತ್ತಾಗಿ ನನ್ನ ದೃಷ್ಟಿ ಟೇಬಲ್ಲಿಗೆ ಅಂಟಿಸಿದ್ದ ಚೀಟಿಯ ಮೇಲೆ ಬಿತ್ತು. ಕುತೂಹಲದಿಂದ ಅದನ್ನು ನೋಡಿದಾಗ ಅದರಲ್ಲಿ 'ಪ್ರಕಾಶ್ ಚಂದ್' ಎಂಬ ಹೆಸರಿತ್ತು. ಈ ವ್ಯಕ್ತಿ ಯಾರಿರಬಹುದೆಂದು ತಲೆ ಕೆರೆದುಕೊಂಡೆ. ಅನಂತರ ಎದುರಿದ್ದ ಆಕೆಯ ಹ್ಯಾಂಡ್ ಬ್ಯಾಗ್ ತೆಗೆದು ಅದರಲ್ಲಿದ್ದ ಸಾಮಾನುಗಳನ್ನು ನೋಡಿದೆ. ಮಹಿಳೆಯರ ಅಲಂಕಾರ ಸಾಮಗ್ರಿಗಳೊಡನೆ ಒಂದು ಚೀಟಿ ಕಂಡಿತು. ಅದನ್ನು ಬಿಡಿಸಿ ನೋಡಿದಾಗ ಅದರಲ್ಲಿ 'ನಟರಾಜ್' ಎಂದಿತ್ತು. ಈಗ ನನಗೆ ಏನೋ ಹೊಳೆದಂತಾಗಿ ಆ ಕೊಠಡಿಯಲ್ಲಿದ್ದ ಪ್ರತಿಯೊಂದು ಬೆಲೆ ಬಾಳುವ ವಸ್ತುಗಳನ್ನೂ ಗಮನಿಸಿದೆ. ಗ್ರಾಮೋಫೋನ್ ಮೇಲೆ 'ಖಯಾಲಿರಾಂ' ಎಂಬ ಹೆಸರಿನ ಚೀಟಿ! ಹಾರ್ಮೋನಿಯಂ ಮೇಲೆ 'ವೀರಸಿಂಹ' ಎಂಬ ಹೆಸರಿನ ಚೀಟಿ!! ಮಂಚದ ಮೇಲೆ 'ಮೊಹಮ್ಮದ್ ಸಿದ್ದೀಕಿ' ಎಂಬ ಹೆಸರಿನ ಚೀಟಿ!!! ಹಾಗೆಯೇ ಉಳಿದ ವಸ್ತುಗಳ ಮೇಲೆ–ರಾಮೇಶ್ವರ್, ಕಾಮೇಶ್ವರ್, ರಾಮನಾಥ ಚಕ್ರವರ್ತಿ, ಶ್ರೀಕೃಷ್ಣ, ರಾಮಕೃಷ್ಣ ಇತ್ಯಾದಿ ಹೆಸರುಗಳ ಚೀಟಿಗಳಿದ್ದವು.

"ಏನೂ ಅರ್ಥವಾಗಲಿಲ್ಲ. ದಿಗ್ಭ್ರಮೆಯಿಂದ ಹಾಸಿಗೆಯ ಮೇಲೆ ಕುಸಿದೆ. ಅದೇ



ವೇಳೆಗೆ ಬಾತ್‌ರೂಮಿನಿಂದ ಶಶಿಬಾಲೆಯು ಬರುತ್ತ, "ಪರಮೇಶ್ವರಿ ಬಾಬು, ಇಂದು ನೀವು ತುಂಬಾ ಹೊತ್ತಾಗಿ ಎದ್ದಿರಿ" ಎಂದಳು. ನಾನು: "ಕ್ಷಮಿಸಿ, ನೀವು ಸ್ನಾನ ಮಾಡಲು ಹೋಗಿದ್ದಾಗ ನಾನು ಅನುಚಿತ ಕೆಲಸವೊಂದನ್ನು ಮಾಡಿದೆ. ನೀವೇನೆಂದುಕೊಳ್ಳುವಿರೋ ಏನೋ," ಎಂದೆ. ಆಕೆ: "ನಾನು ನಿಮ್ಮವಳೇ ಆಗಿರುವಾಗ, ನೀವು ಕ್ಷಮೆ ಕೇಳುವ ಅಗತ್ಯವಿಲ್ಲ. ನಿಸ್ಸಂಕೋಚವಾಗಿ ಹೇಳಿ," ಎಂದಳು. ನಾನು, ಅಕಸ್ಮಾತ್ತಾಗಿ ಡ್ರೆಸ್ಸಿಂಗ್ ಟೇಬಲ್ಲಿಗೆ ಅಂಟಿಸಿದ ಚೀಟಿ ನೋಡಿ, ಬಳಿಕ ಕುತೂಹಲದಿಂದ ಈ ಕೊಠಡಿಯಲ್ಲಿರುವ ಪ್ರತಿ ಸಾಮಾನನ್ನು ನೋಡಿದಾಗ, ಪ್ರತಿಯೊಂದು ವಸ್ತುವಿನ ಮೇಲೆ ಒಬ್ಬೊಬ್ಬ ಪುರುಷನ ಹೆಸರಿನ ಚೀಟಿ ಇತ್ತು. ಇದರ ಅರ್ಥವೇನು? ಈ ರಹಸ್ಯವನ್ನು ನೀವೇ ಬಿಡಿಸಬೇಕು." ಎಂದೆ. ಆಕೆ ಮೊದಮೊದಲು ಇದನ್ನು ವಿವರಿಸಿ ಹೇಳಲು ಇಚ್ಛಿಸಲಿಲ್ಲ. ಕಡೆಗೆ ನನ್ನ ಒತ್ತಾಯಕ್ಕೆ ಮಣಿದು ಹೇಳಿದಳು: "ಪರಮೇಶ್ವರಿ ಬಾಬು! ಈ ರಹಸ್ಯದಲ್ಲಿ ನನ್ನ ಅಸಹಾಯಕತೆ ಹಾಗೂ ಸರ್ವಸ್ವವೂ ಇದೆ. ಈ ಎಲ್ಲಾ ವಸ್ತುಗಳು ನನ್ನ ಪ್ರೇಮಿಗಳಿಂದ ಉಡುಗೊರೆಯಾಗಿ ಬಂದಂಥವು. ಆದರೆ, ನಾನು ಪ್ರತಿಯೊಬ್ಬರಿಂದಲೂ ಕೇವಲ ಒಂದೇ ವಸ್ತುವನ್ನು ಸ್ವೀಕರಿಸಿದ್ದೇನೆಂಬ ಅಂಶವನ್ನು ತಾವು ಗಮನಿಸಬೇಕು. ಈಗ ನನ್ನಲ್ಲಿ ಎಷ್ಟೊಂದು ವಸ್ತುಗಳು ಸಂಗ್ರಹವಾಗಿವೆಯೆಂದರೆ, ಅದನ್ನು ಕೊಟ್ಟವರೆಲ್ಲರ ಹೆಸರನ್ನೂ ನೆನಪಿನಲ್ಲಿಡುವುದೂ ಅಸಾಧ್ಯ. ಆದ್ದರಿಂದ ಅವರೆಲ್ಲರ ನೆನಪಿಗಾಗಿ ಅವರ ಹೆಸರಿನ ಚೀಟಿಯನ್ನು ಅವರವರ ವಸ್ತುಗಳ ಮೇಲೆ ಅಂಟಿಸಿದ್ದೇನೆ. ಪ್ರತಿಯೊಂದು ವಸ್ತುವನ್ನು ಉಪಯೋಗಿಸುವಾಗಲೂ, ಅದನ್ನು ಉಡುಗೊರೆಯಾಗಿತ್ತ ಪ್ರೇಮಿಯ ನೆನಪು ಮರುಕಳಿಸುತ್ತದೆ. ಏನು ಮಾಡಲಿ ಪರಮೇಶ್ವರಿಬಾಬು? ನಾನು ನನ್ನ ಪ್ರೇಮಿಗಳನ್ನು ಮರೆಯಲಾರೆ."

ನಾನು ಕೇಳಿದೆ: "ನಿಮ್ಮ ಹತ್ತಿರ ಒಟ್ಟು ಎಷ್ಟು ವಸ್ತುಗಳಿವೆ?"

"ಎಂಭತ್ತೇಳು."

"ಇಷ್ಟೊಂದು!" ಆಶ್ಚರ್ಯದಿಂದ ನಾನು ಉದ್ಗರಿಸಿದೆ.

"ಹೌದು ಪರಮೇಶ್ವರಿ ಬಾಬು! ಇಷ್ಟೊಂದು ವಸ್ತುಗಳಿವೆ ನನ್ನಲ್ಲಿ! ತಮಗೆ ತಿಳಿದಿರುವಂತೆ ನಾನು ಅವಿವಾಹಿತೆ. ನನಗೆ ವಿವಾಹವಾಗಲು ಇಷ್ಟವಿಲ್ಲವೆಂದು ನೀವು ಖಂಡಿತ ಭಾವಿಸಬೇಡಿ. ಹ್ಞಾಂ! ನಾನು ಒಂದು ಕಾಲದಲ್ಲಿ ಮದುವೆಯ ಕನಸು ಕಂಡಿದ್ದೆ. ಪ್ರತಿಯೊಬ್ಬ ಪ್ರೇಮಿ ನನ್ನ ಬದುಕಿನಲ್ಲಿ ಪ್ರವೇಶಿಸಿ, ನನ್ನ ಹೃದಯದಲ್ಲಿ ಸುಖ ಸ್ವಪ್ನದ ಸೌಧವನ್ನು ನಿರ್ಮಿಸುತ್ತಿದ್ದಾಗ ನಾನು ಅವನೇ ಬಾಳಸಂಗಾತಿಯಾಗುವನೆಂದು ಭ್ರಮಿಸುತ್ತಿದ್ದೆ. ಆದರೆ ಆ ವ್ಯಕ್ತಿ ಉಡುಗೊರೆ ಕೊಡುತ್ತಿದ್ದನೇ, ಹೊರತು ನನ್ನನ್ನು ವಿವಾಹವಾಗಲೂ ತಯಾರಾಗುತ್ತಿರಲಿಲ್ಲ. ಕ್ರಮೇಣ ಈ ಜೀವನವೇ ನನಗೆ ಅಭ್ಯಾಸವಾಗಿ ಹೋಯಿತು. ಎಷ್ಟು ಮುಗ್ಧತೆಯಿಂದ ವಿವಾಹದ ಬಗ್ಗೆ ಪೇಪರಿನಲ್ಲಿ ವಿಜ್ಞಾಪನೆಗಳನ್ನು ಕಳಿಸುತ್ತಿದ್ದೆ ಗೊತ್ತೆ? ಆದರೆ ಪ್ರತಿಯೊಬ್ಬ ವ್ಯಕ್ತಿಯೂ ಒಂದು ತಪ್ಪು ಮಾಡುವಂತೆಯೇ ನಾನೂ ತಪ್ಪು ಮಾಡಿದ್ದೇನೆ. ಈಗಲಾದರೆ ನನಗೆ ಯಾವ ಬಂಧನವೂ ಬೇಕೆನಿಸುವುದಿಲ್ಲ. ನನ್ನ ಬದುಕು ಒಂದು ಆಟದ ವಸ್ತುವಾಯಿತು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಬಂದಂತೆ ಅದನ್ನು ಉಪಯೋಗಿಸಿದ ಅಷ್ಟೇ! ಪರಮೇಶ್ವರಿ ಬಾಬು! ಇದು ನನ್ನ ಗತಕಾಲದ ನೆನಪು."

ನಾನು ಹಿಂಜರಿಯುತ್ತ ಪ್ರಶ್ನಿಸಿದೆ; "ಅದು ಹೇಗೆ ಸಾಧ್ಯ? ಸಾಮಾನ್ಯರಿಗೆ ಮಾತ್ರ ಇದು ಅನ್ವಯಿಸುತ್ತದೆ ಅಷ್ಟೇ!"

ಆಕೆ, "ಸಾಮಾನ್ಯರಿಗಷ್ಟೇ ಏಕೆ? ನಿಮ್ಮ ನಂಬರ್ ೮೮ ಆಗಿದೆ" ಕಿಲಕಿಲನೆ ನಗುತ್ತ ಆಕೆ ಹೇಳಿದಳು.

ನಾನು ದಾರ್ಶನಿಕನಂತೆ ನುಡಿದೆ: "ಹೌದು ನಾವು ಆಡುವವರೆಗೆ ಮಾತ್ರ ಜೀವನ ಒಂದು ಆಟದ ವಸ್ತು. ನಾವು ಅಶಕ್ತರಾದಾಗ ಅದೇ

ಜೀವನ ಒಂದು ಭಯಾನಕ ಹಾಗೂ ಕರಾಳ ಸ್ವಪ್ನವಾಗಿ ಪರಿಣಮಿಸುತ್ತದೆ. ನೀವು ವರ್ತಮಾನದ ಬಗ್ಗೆ ಯೋಚಿಸುತ್ತಿದ್ದೀರಿ, ನಾನು ಭವಿಷ್ಯದ ಬಗ್ಗೆ ಯೋಚಿಸುತ್ತಿದ್ದೇನೆ. ಇನ್ನು ಹತ್ತು ವರ್ಷಗಳ ನಂತರ ನಿಮ್ಮ ಮುಖವು ಸುಕ್ಕುಗಟ್ಟಿರುತ್ತದೆ. ಆಗ ಯಾರೂ ನಿಮ್ಮತ್ತ ಹೊರಳಿ ನೋಡುವುದಿಲ್ಲ. ಆಗ ಈ ಆಭರಣಗಳು ನಿಮಗೆ ಸುಖಾನುಭವವನ್ನುಂಟುಮಾಡುವ ಬದಲು ನಿಮ್ಮ ಹೃದಯಕ್ಕೆ ಕಿಚ್ಚು ಹೊತ್ತಿಸುತ್ತವೆ. ನಿಮಗೆ ಬಂಧುಗಳಾರೂ ಇರುವಂತೆ ಕಾಣುವುದಿಲ್ಲ. ದೈಹಿಕ ಅಲಂಕಾರಕ್ಕಾಗಿಯೇ ನಿಮ್ಮ ದುಡಿಮೆ ವ್ಯಯವಾಗುತ್ತಿರಬಹುದು. ಯೌವನ ಮುಕ್ತಾಯವಾದಾಗ ವೃದ್ಧಾಪ್ಯ, ದೌರ್ಬಲ್ಯ, ಹಸಿವು, ರೋಗಗಳಲ್ಲದೆ ನಿಮ್ಮಲ್ಲಿ ಮತ್ತೇನೂ ಉಳಿಯಲಾರದು. ಆಗ ನಿಮ್ಮ ಗತಜೀವನದ ಬಗ್ಗೆ ನಿಮಗೇ ಪಶ್ಚಾತ್ತಾಪವುಂಟಾಗುತ್ತದೆ. ಆದ್ದರಿಂದ ನಾನು ನಿಮಗೆ ವೃದ್ಧಾಪ್ಯದಲ್ಲಿ ಉಪಯುಕ್ತವಾಗಬಹುದಾದ ಒಂದು ಕೆಲಸವನ್ನು ಮಾಡುತ್ತೇನೆ. ನಿಮ್ಮ ಈ ಸಂಗ್ರಹಣೆ ಅತಿ ಅಮೂಲ್ಯವಾದದ್ದೆಂಬಲ್ಲಿ ಸಂಶಯವೇ ಇಲ್ಲ. ಇನ್ನು ಹತ್ತು ವರ್ಷಗಳ ಬಳಿಕ ಈ ಸಂಗ್ರಹವನ್ನು ನಾನು ೫,೦೦೦ ರೂಪಾಯಿಗೆ ಕೊಳ್ಳುತ್ತೇನೆ. ಇದರಿಂದ ನಿಮಗೆ ವೃದ್ಧಾಪ್ಯದಲ್ಲಿ ಈ ಕಹಿ ಜೀವನದ ಸ್ಮೃತಿ ಉಳಿಯುವುದೆ ದೈವಚಿಂತನೆಯಲ್ಲಿ ಶೇಷಾಯುಷ್ಯವನ್ನು ಕಳೆಯಲು ಸಾಧ್ಯವಾಗುವುದು. ಹಣವೂ ಉಪಯೋಗಕ್ಕೆ ಬರುವುದು.

*

ನಾನು ಪರಮೇಶ್ವರಿಯನ್ನು ಕೇಳಿದೆ, "ಹೀಗೆ ಹೇಳಿದಾಗ ಆಕೆ ಸಿಟ್ಟು ಹಿಡಿದು ನಿನ್ನನ್ನು ಹೊರಗೆ ತಳ್ಳಿರಬೇಕು."

ಪರಮೇಶ್ವರಿ ನಸುನಗುತ್ತ ಹೇಳಿದ: "ನನ್ನ ಮಾತಿಗೆ ಪ್ರತಿಯಾಗಿ ಆಕೆ ಹೀಗೆ ಹೇಳಿದಳು. "ನಾನು ನಿಮ್ಮ ಎಲ್ಲಾ ಮಾತುಗಳನ್ನು ನಂಬದಿದ್ದರೂ ವೃದ್ಧಾಪ್ಯಕ್ಕಾಗಿ ನಾನು ಏನೂ ವ್ಯವಸ್ಥೆ ಮಾಡಿಕೊಂಡಿಲ್ಲವೆಂಬುದಂತೂ ಸತ್ಯ. ಆದ್ದರಿಂದ ಈ ಎಲ್ಲಾ ವಸ್ತುಗಳನ್ನೂ ನಾನು ನಿಮಗೆ ಮಾರಿಬಿಡುತ್ತೇನೆ." ನಾವಿಬ್ಬರೂ ಕರಾರು ಪತ್ರವನ್ನು ತಯಾರಿಸಿ ಸಹಿ ಹಾಕಿದೆವು.

ಇದೆಲ್ಲ ನಡೆದು ಕೇವಲ ಎರಡೇ ವರ್ಷಗಳಾಗಿವೆ. ಮೊನ್ನೆ ಅವಳಿಂದ ಪತ್ರ ಬಂದಿತ್ತು. ಈಗ ಅವಳ ಸಂಗ್ರಹ ನೂರ ಹದಿಮೂರಕ್ಕೆ ಏರಿದೆಯಂತೆ. ✡


ಲೋಭ

ಬೆರಕೆ ಬೆಣ್ಣೆ ಮಾರಿದ ತಪ್ಪಿಗೆ ರಾಜ ಊರಿನ ವರ್ತಕನೊಬ್ಬನಿಗೆ, ಹಿಡಿ ಗಾತ್ರದ ಆರು ಉಂಡೆ ಸಗಣಿ ತಿನ್ನಬೇಕು; ಇಲ್ಲವಾದರೆ ಇಪ್ಪತ್ತು ಛಡಿ ಏಟುಗಳನ್ನು ತಿನ್ನಬೇಕು; ಅದೂ ಆಗದಿದ್ದರೆ ನಾಲ್ಕು ನೂರು ರೂಪಾಯಿಗಳನ್ನು ದಂಡ ತೆರಬೇಕು ಎಂದು ಶಿಕ್ಷೆ ವಿಧಿಸಿದ.

ವರ್ತಕ ಹಣ ಉಳಿಸಿಕೊಂಡು ಛಡಿ ಏಟು ತಪ್ಪಿಸಿಕೊಳ್ಳಬೇಕೆಂಬ ಆಸೆಯಿಂದ ಸಗಣಿ ಉಂಡೆ ತಿನ್ನಲು ಒಪ್ಪಿಕೊಂಡ. ಆ ಪ್ರಕಾರ ಹಿಡಿ ಗಾತ್ರದ ಆರು ಸಗಣಿ ಉಂಡೆಗಳನ್ನು ಅವನ ಮುಂದೆ ತಂದಿರಿಸಲಾಯಿತು. ಬಹಳ ಕಷ್ಟಪಟ್ಟು ಎರಡು ತಿಂದ, ಮುಂದೆ ತಿನ್ನಲು ಆಗದೆ, "ಸ್ವಾಮಿ ಛಡಿ ಏಟು ಕೊಡಿ ಸಗಣಿ ಉಂಡೆ ತಿನ್ನಲಾರೆ," ಎಂದ. ಅದರಂತೆ ವರ್ತಕನಿಗೆ ರಾಜದೂತರು ಛಡಿ ಏಟು ಕೊಡಲು ಪ್ರಾರಂಭಿಸಿದರು. ಮೂರು ಏಟಿಗಿಂತ ಹೆಚ್ಚು ಸಹಿಸಿಕೊಳ್ಳಲಾಗಲಿಲ್ಲ. ನಾಲ್ಕು ನೂರು ರೂಪಾಯಿ ದಂಡ ತೆತ್ತು ಮನೆಗೆ ಬಂದ.

ಆ ಮೂರ್ಖ ವರ್ತಕ ಹಣದ ಲೋಭದಿಂದ ಸಗಣಿ ಉಂಡೆಯನ್ನೂ ತಿಂದದ್ದಲ್ಲದೆ ಛಡಿ ಏಟುಗಳನ್ನೂ ತಿಂದ, ಕೊನೆಗೆ ಹಣವನ್ನೂ ತೆತ್ತ.

— ಬಿ. ಇಂದಿರಾ



ದಂಡೋಪಾಯ...

ಒಬ್ಬ ಶಾಲಾ ಇನಸ್ಪೆಕ್ಟರನು ಶಾಲೆಯ ತಪಾಸಣೆಗಾಗಿ ಒಂದು ಹಳ್ಳಿಯ ಶಾಲೆಗೆ ಹೋದಾಗ ಒಂದು ವರ್ಗವನ್ನು ಪ್ರವೇಶಿಸಿ ವಿದ್ಯಾರ್ಥಿಗಳ ಗಣಿತ ಪರೀಕ್ಷಿಸುವದಕೋಸ್ಕರ, "೫×೫ ಗುಣಾಕಾರ ಮಾಡಿದರೆ ಎಷ್ಟು ಬರುವುದು?" ಎಂದು ಕೇಳಿದ.

ಆಗ ಎಲ್ಲಾ ವಿದ್ಯಾರ್ಥಿಗಳು ೩೫ ಎಂದು ಹೇಳಲು ಶಾಲಾ ಇನಸ್ಪೆಕ್ಟರನಿಗೆ ಆಶ್ಚರ್ಯವಾಯಿತು. ಅಲ್ಲಿಯೇ ಇದ್ದ ಮಾಸ್ತರರನ್ನು ವಿಚಾರಿಸಲು "ನಾನು ಈಗ ಎರಡು ತಿಂಗಳ ಹಿಂದೆ ಇಲ್ಲಿ ಬಂದಾಗ ೧೦೦ ಎಂದು ಹೇಳುತ್ತಿದ್ದರು ಸಾರ್. ಕೊನೆಗೆ ದಂಡೋಪಾಯದಿಂದ ಇಲ್ಲಿಗೆ ತಂದಿದ್ದೇನೆ. ಮುಂದಿನ ಬಾರಿ ನೀವು ಬಂದರೆ ಖಂಡಿತವಾಗಿಯೂ ೨೫ ಎಂದು ಹೇಳಿಸುತ್ತೇನೆ. ಅದರ ಕಾಳಜೀ ಬಿಡಿ ಸಾರ್," ಎಂದು ಉತ್ತರ ಬಂತು.

—ಎಸ್. ಎಚ್ ಶಾಬಾದಿ

ಗಿರಾಕಿ

ಒಬ್ಬ ಗಿರಾಕಿ ಒಂದು ಸ್ಟೇಷನರಿ ಅಂಗಡಿಗೆ ಹೋಗಿ ಅವನಿಗೆ ಬೇಕಾದ ಸಾಮಾನುಗಳನ್ನು ಒಂದೊಂದಾಗಿ ಕೇಳುತ್ತಾ ಬಂದನು. ಅವನು ಕೇಳಿದ ಹಾಗೆಲ್ಲಾ ಅಂಗಡಿಯವನು "ಅದು ಇಲ್ಲ, ಇದು ಬಂದಿಲ್ಲ, ಇದು ಸ್ಟಾಕ್ ಇಲ್ಲ..." ಎಂದೆಲ್ಲಾ ಹೇಳಿದನು. ಕೊನೆಗೆ ಗಿರಾಕಿ ಬೇಸತ್ತು "ಹೋಗಲಿ, ಬೀಗವಾದರೂ ಇದೆಯೋ?" ಎಂದು ಕೇಳಿದ.

"ಇದೆ," ಥಟ್ಟನೆ ಉತ್ತರಿಸಿದ ಅಂಗಡಿಯವ.

"ಹಾಗಾದರೆ (ಅಂಗಡಿಗೆ) ಹಾಕ್ಕೊಂಡು ಮನೆಗೆ ಹೋಗಿ"

—ಪಿ. ಜಿ. ರಮೇಶ

ಅಲೆಗ್ಸಾಂಡರ್ [ಗ್ರಹಾಂ ಬೆಲ್] ಯಾರು? ಟೆಲಿಫೋನು ಕಂಡು ಹಿಡಿದದ್ದು ಯಾವಾಗ? ಎಂದು ಲೇಖನ ಬರೆಯಲು ಮೇಡಂ ಹೇಳಿದಾಗ ಸಿದ್ದು ಬರೆದದ್ದು: "ಗ್ರಹಾಂಬೆಲ್ ಹುಟ್ಟಿ ಪ್ರಾಯಕ್ಕೆ ಬಂದ ಮೇಲೆ ಮಾನವ ಸಹಜವಾಗಿ ಒಂದು ಹುಡುಗಿಯನ್ನು ಒಂದು ಸಂಜೆ ಸಮುದ್ರದ ತಡಿಯಲ್ಲಿ ಪ್ರೀತಿಸಿ ಮದುವೆಯಾಗಿ, ಡೈವೋರ್ಸ್ ಪಡೆದ ನಂತರ ಹತಾಶನಾದ ನಂತರವೇ ಅವನು ಟೆಲಿಫೋನ್ ಕಂಡುಹಿಡಿದದ್ದು."

—ವೈ. ಎಚ್. ಗುಂಡೂರಾವ್

*

ಮುಂಬಯಿ ಎಂಥಾ ಊರು ಗೊತ್ತೆ? ಅದನ್ನು ಒಮ್ಮೆಯಾದರೂ ನೋಡಬೇಕು; ನೋಡಿಯೆ ಸಾಯಬೇಕು ಎಂದು ಗೆಳೆಯರು ಹೇಳುವುದನ್ನು ಕೇಳಿ ರಾಮಯ್ಯ ಒಮ್ಮೆ ಮುಂಬಯಿಗೆ ಹೋದ. ವಿಕ್ಟೋರಿಯಾ ಟರ್ಮಿನಸ್ ನೋಡಿಯೆ ಅವನ ಎದೆಯೊಡೆಯಿತು. ಹೊರಗೆ ಇರುವೆ ಸಾಲಿನ ಹಾಗೆ ಸಾಗುವ ಮೋಟರುಗಳನ್ನು ನೋಡಿ ಅವಕಾಶ ಸಿಕ್ಕಿದರೆ ಅವುಗಳನ್ನು ದಾಟಿ ಆಚೆ ದಾರಿಗೆ ಸೇರಬೇಕು ಎಂದು ಕಾದ. ನಾಲ್ಕು ಗಂಟೆಗಳ ವರೆಗೆ ಅವಕಾಶ ಸಿಗಲಿಲ್ಲ. ಒಂದೆರಡು ಗಂಟೆ ಸ್ಟೇಶನ್ನಿನಲ್ಲಿ ವಿಶ್ರಮಿಸಿ ಮತ್ತೆ ಹೊರಗೆ ಬಂದು ಮತ್ತೆರಡು ಗಂಟೆ ಕಾದ. ಟ್ರಾಫಿಕ್ ಸಿಗ್ನಲ್ ನೋಡಿ ಆಚೆ ಬದಿ ಸೇರುವ ಕುಮ್ಮಕ್ಕು ಅವನಲ್ಲಿ ಬರಲೇ ಇಲ್ಲ, ನಿರುಪಾಯನಾಗಿ ಊರಿಗೆ ಹಿಂದಿರುಗಿದ. ಮುಂಬಯಿಯನ್ನು ನೋಡಿ ಸಾಯಬೇಕು ಎಂಬ ಮಾತಿನ ಅರ್ಥ ಅವನಿಗಾಗಿತ್ತು.

*

ಒಬ್ಬಳು ಫ್ಯಾಶನ್ನಮ್ಮಣ್ಣಿ ಬಜಾರಿನಲ್ಲಿ ಸಾಮಾನುಗಳನ್ನು ಖರೀದಿಸುತ್ತಿದ್ದಾಗ ಪುಟ್ಟ ಅಳುವ ತಪ್ಪಿಸಿಕೊಂಡ. ಆಗ ಅಂಗಡಿಕಾರನೊಬ್ಬ ಪುಟ್ಟನನ್ನು ಹುಡುಕಿ ಆ ಫ್ಯಾಶನ್ನಮ್ಮಣ್ಣಿಗೆ ಒಪ್ಪಿಸುತ್ತಾ ಕೇಳಿದ. "ಏನು ಮರಿ. ನಿನ್ನಮ್ಮನ ಕೈಗಳನ್ನು ಏಕೆ ಹಿಡಿದುಕೊಳ್ಳುವುದಿಲ್ಲ? ಹಾಗೆ ಮಾಡಿದರೆ ನೀನು ತಪ್ಪಿಸಿಕೊಳ್ಳುವುದೇ ಇಲ್ಲ." "ಹೌದು

ಹೌದು, ಅದು ನನಗೆ ಗೊತ್ತು. ಆದರೆ ಅಮ್ಮ ಅಷ್ಟೆಲ್ಲಾ ಸಾಮಾನುಗಳನ್ನು ಕೈಲಿ ಹಿಡಿದುಕೊಂಡಿರುವಾಗ ನಾನು ಅವಳ ಕೈ ಹಿಡಿದುಕೊಳ್ಳುವುದಾದರೂ ಹೇಗೆ?" "ಹಾಗಿದ್ದರೆ ನಿನ್ನಮ್ಮನ ಸ್ಕರ್ಟನ್ನಾದರೂ ನೀನು ಹಿಡಿದುಕೊಳ್ಳಬಹುದಲ್ಲ," ಅಂಗಡಿಕಾರ ಸಲಹೆ ನೀಡಿದ. "ಊಹುಂ! ಅದಂತೂ ಸಾಧ್ಯವೇ ಇಲ್ಲ. ನನ್ನ ಕೈಗಳು ಅಷ್ಟು ಅಷ್ಟು ಎತ್ತರಕ್ಕೆ ಹೋಗುವುದೇ ಇಲ್ಲ," ಪುಟ್ಟ ನಿರ್ಧಾರದ ಸ್ವರದಲ್ಲಿ ಉತ್ತರಿಸಿದ.

*

ಐವತ್ತರ ಅಂಚಿನಲ್ಲಿರುವ ರಾಮಯ್ಯನಿಗೆ ಇಪ್ಪತ್ತೈದು ವರ್ಷಗಳ ಹಿಂದೆ ತಾನು ವಾಸಿಸುತ್ತಿದ್ದ ಯೂನಿವರ್ಸಿಟಿ ಹಾಸ್ಟೆಲ್ ಹೇಗಿದೆ ಎಂಬುದನ್ನು ನೋಡಿಬರುವ ವಿಚಾರ ಬಂತು. ಕೂಡಲೇ ಆತ ಹಳೆಗಾಲದ ನೆನಪುಗಳನ್ನು ಮೆಲುಕುಹಾಕುತ್ತಾ ಅತ್ತ ನಡೆದೇಬಿಟ್ಟ.

ಹಾಸ್ಟೆಲ್ ಇದ್ದಲ್ಲಿಯೇ ಇತ್ತು. ಅದರ ಸುತ್ತಮುತ್ತ ಬೆಳೆದ ಗಿಡಮರಗಳೂ ಇದ್ದಲ್ಲಿಯೇ ಇದ್ದವು. ತಾನು ಹಾಸ್ಟೆಲ್ ಬಿಡುವ ಮುಂದೆ ಬಳಿಸಿದ್ದ ಬಣ್ಣವೂ ಇದ್ದಲ್ಲೇ ಇತ್ತು. ಸಾವಧಾನವಾಗಿ ಆತ ಹಾಸ್ಟೆಲ್ಲಿನ ಅಟ್ಟವನ್ನು ಏರಿಹೋಗಿ ತಾನು ವಾಸಿಸುತ್ತಿದ್ದ ೪೩ನೆಯ ನಂಬರಿನ ಕೋಣೆಯ ಮುಂದೆ ಬಂದು ನಿಂತು ಮೆಲ್ಲನೆ ಕದ ತಟ್ಟಿದಾಗ ಒಳಗೆ ಇದ್ದಾತ ಹೊರಬಂದು, "ಏನು ಸ್ವಾಮಿ, ಏನು ಬೇಕು ನಿಮಗೆ?" ಎಂದ.

"ನೋಡಯ್ಯಾ, ನಾನು ಇಪ್ಪತ್ತೈದು ವರ್ಷಗಳ ಹಿಂದೆ ಇದೇ ಕೋಣೆಯಲ್ಲಿದ್ದೆ. ಏನೋ ಸ್ವಲ್ಪ ನೋಡಿ ಹೋಗೋಣ ಎಂದು ಇಲ್ಲಿಗೆ ಬಂದಿದ್ದೇನೆ. ಒಳಗೆ ಬರಲು ಅಭ್ಯಂತರವಿಲ್ಲ ತಾನೆ?" ಎಂದ. "ಇಲ್ಲ ಸ್ವಾಮಿ ಬಿಲ್‌ಕುಲ್ ಇಲ್ಲ ಖಂಡಿತಾ ಒಳಗೆ ಬನ್ನಿ," ಎಂದು ವಿದ್ಯಾರ್ಥಿ ರಾಮಯ್ಯನನ್ನು ಸ್ವಾಗತಿಸಿದ.

ರಾಮಯ್ಯ ಒಳಬಂದು ಸುತ್ತಲೂ ಕಣ್ಣಾಡಿಸಿದ. ತಾನು ಗೋಡೆ ಮೇಲೆ ಗೀಚಿದ ಅವಾಚ್ಯ ಶಬ್ದಗಳು ಈ ಇಪ್ಪತ್ತೈದು ವರ್ಷಗಳಲ್ಲಿ ಬಹಳಷ್ಟು ಮರಿ ಹಾಕಿದ್ದನ್ನು ಬಿಟ್ಟರೆ ಯಾವ ಬದಲಾವಣೆಯೂ ಕಂಡು ಬರಲಿಲ್ಲ. ಅಷ್ಟರಲ್ಲಿ ಕೈಗೆ ಏನೋ ಕಡಿದಂತಾಯಿತು ಕಪಾಟಿನ ಸಂದಿಯಿಂದ ಒಂದು ತಿಗಣೆ ಹೊರ ಬಂದು ಕೈಯನ್ನು ಕಚ್ಚಿತ್ತು. ಎಲಾ! ಇಲ್ಲಿಯೂ ಏನೂ ಬದಲಾವಣೆಯಿಲ್ಲ. ಇವೂ ಇಷ್ಟು ವರ್ಷ ಇಲ್ಲಿದ್ದುಕೊಂಡು ರಜತೋತ್ಸವವನ್ನು ಆಚರಿಸಿಕೊಳ್ಳುತ್ತಿವೆಯೋ ಏನೋ! ಅಂದುಕೊಂಡು ಮೆಲ್ಲನೆ ಕಪಾಟನ್ನು ತೆರೆದಾಗ ಒಳಗಿನಿಂದ ಒಂದು ಹುಡುಗಿ ಹೆದರಿಕೆಯಿಂದ ಹೊರಬಿತ್ತು.

ರಾಮಯ್ಯ ಬಾಯಿ ತೆರೆಯುವ ಮೊದಲೇ ವಿದ್ಯಾರ್ಥಿ, "ಆಕೆ ನನ್ನ ಸಿಸ್ಟರ್ ಸಾರ್. ಅಪರಿಚಿತರೆಂದರೆ ತುಂಬಾ ಭಯ. ಅದಕ್ಕೇ..." ಎಂದ. "ಗೊತ್ತಯ್ಯಾ ಗೊತ್ತು. ಏನೂ ಬದಲಾವಣೆಯಿಲ್ಲ ಅದೇ ಹಳೆಯ ಕಥೆ," ಎಂದು ಗೊಣಗಿದ ರಾಮಯ್ಯ.

ಭಯಂಕರ ಬೆಕ್ಕುಗಳ ದ್ವೀಪ

ಡಿ. ಎನ್. ಶ್ರೀನಾಥ

ಪುಕ್ಕಟೆಯಾಗಿ ಕೊಟ್ಟರೂ ಅದನ್ನು ಯಾರೂ ತೆಗೆದುಕೊಳ್ಳುವವರಿಲ್ಲ.

ಶಾಂತ ಮಹಾಸಾಗರದಲ್ಲಿ ಫಲಪುಷ್ಪಗಳಿಂದ ಭರಿತವಾದ ಸುಂದರ ದ್ವೀಪವೊಂದಿದೆ. ಈ ದ್ವೀಪ ಹೇಗೆ ಸುಂದರವಾಗಿದೆಯೋ ಅಲ್ಲಿನ ಯುವತಿಯರೂ ಹಾಗೆಯೇ ಸುಂದರವಾಗಿದ್ದಾರೆ. ಎಲ್ಲೆಲ್ಲೂ ಗಿರಿಕಂದರಗಳಿಂದಲೂ ವನರಾಜಿಗಳಿಂದಲೂ ಸುಶೋಭಿಸುವ ಅಪ್ಸರೆಯರ ಈ ದ್ವೀಪಕ್ಕೆ ತಾಹಿತಿ ಎಂಬ ಹೆಸರುಂಟು. ಅದು ಸುಮಾರು ಇನ್ನೂರು ವರ್ಷಗಳ ಹಿಂದೆ ಫ್ರಾನ್ಸಿನ ಅಧಿಪತ್ಯಕ್ಕೊಳಪಟ್ಟಿತು. ಆಗ ನಡೆದ ಒಂದು ಸ್ವಾರಸ್ಯಕರ ಘಟನೆಯನ್ನು ಕುರಿತೇ ನಾನೀಗ ಹೇಳುತ್ತಿರುವುದು.

ಒಂದು ದಿನ ಜಾಕ್ವಿಲ್ ಲೇಟುರ್ಕ್ ಎಂಬ ಫ್ರೆಂಚ್ ಯುವಕ ತಾಹಿತಿಗೆ ಬಂದ. ಅಲ್ಲಿನ ಹಿತಕರವಾದ ಹವಾಮಾನ ಹಾಗೂ ಉತ್ತಮವಾದ ಆಹಾರದಿಂದ ದುಷ್ಟಪುಷ್ಟನಾಗಿ ಬೆಳೆದ.

ಹೀಗಿರುವಾಗ ಒಂದು ದಿನ ಅವನಿಗೆ ಅಲ್ಲಿನ ಫ್ರೆಂಚ್ ರಾಜ್ಯಪಾಲನಿಂದ ಕರೆ ಬಂತು. ಎಲ್ಲರನ್ನೂ ಬಿಟ್ಟು ತನ್ನನ್ನು ರಾಜ್ಯಪಾಲರು ಕರೆಯುವರೆಂದರೇನು! ಎಂದು ಲೆಟುರ್ಕನಿಗೆ ಆಶ್ಚರ್ಯವೇ ಆಶ್ಚರ್ಯ. ಅಂಥಾ ಮಹಾಮಹಿಮರನ್ನು ಹೇಗೆ ಭೇಟಿಯಾಗುವುದು? ಎಂದು ಆಶ್ಚರ್ಯದೊಡನೆಯೇ ಭಯ. ರಾಜಾಜ್ಞೆಯನ್ನು ಮನ್ನಿಸಲೇಬೇಕಲ್ಲ. ಭಯಾಶ್ಚರ್ಯಯುಕ್ತವಾಗಿ ಆತ ಮೆಲ್ಲ ಮೆಲ್ಲನೆ ರಾಜಭವನದೆಡೆಗೆ ಸಾಗಿ ಹೋದ.

ಅಲ್ಲಿ ರಾಜ್ಯಪಾಲ ನೀಡಿದ ಆದರಾತಿಥ್ಯದಿಂದಾಗಿ ಜಾಕ್ವಿಲ್ ಲೇಟುರ್ಕನ ಭಯ ನೂರಡಿ ದೂರಹಾರಿಹೋಯಿತು. ಔಪಚಾರಿಕ ಮಾತುಕತೆಗಳಾದ ನಂತರ ರಾಜ್ಯಪಾಲ ತಾನು ಅವನನ್ನು ಅಲ್ಲಿಗೆ ಕರೆಸಿದ್ದರ ಕಾರಣವನ್ನು ವಿವರಿಸಿದ: "ಇಲ್ಲಿಂದ ನಲವತ್ತು ಮೈಲುಗಳ ದೂರದಲ್ಲಿ ಒಂದು ಪುಟ್ಟ ದ್ವೀಪವಿದೆ. ಎಲ್ಲ ಋತುಗಳಲ್ಲಿ ಅಲ್ಲಿನ ಗಿಡಮರಗಳು ಫಲಭರಿತವಾಗಿರುತ್ತವೆ. ಕುಡಿಯಲು ಸ್ಫಟಿಕದಷ್ಟು ಶುಭ್ರವಾದ ನೀರು ದೊರೆಯುತ್ತದೆ. ಸಮುದ್ರತೀರವೂ ಬಹು ಚೆಂದ. ಯಾವನಾದರೂ ಸಾಹಸಿಯಾದ ವ್ಯಕ್ತಿ ಅಲ್ಲಿಗೆ ಹೋಗಿ ಆ ದ್ವೀಪದಲ್ಲಿ ಜನರು ನೆಲಸುವಂತೆ ಮಾಡಿದರೆ

ಆ ದ್ವೀಪವನ್ನೇ ಅವನಿಗೆ ಬಹುಮಾನವಾಗಿ ಕೊಡಬೇಕೆಂದು ಮಾಡಿದ್ದೇನೆ. ಇಂಥ ಸಾಹಸಿ ವ್ಯಕ್ತಿಗಳಲ್ಲಿ ನೀನೇ ಮೊದಲು ನನ್ನ ಲಕ್ಷ್ಯಕ್ಕೆ ಬಂದಿದ್ದರಿಂದ ನಿನ್ನನ್ನು ಇಲ್ಲಿಗೆ ಕರೆಸಿಕೊಂಡಿದ್ದೇನೆ.

"ಆದರೆ ಒಂದು ವಿಷಯ. ಅಲ್ಲಿ ಇಲಿಗಳ ಹಾವಳಿ ಹೆಚ್ಚಾಗಿದೆ. ತಿನ್ನುವ ಯಾವ ವಸ್ತುಗಳನ್ನೂ ಹಾಗೆಯೇ ಬಿಡುವುದಿಲ್ಲ. ಏನಾದರೊಂದು ಖಾದ್ಯ ಪದಾರ್ಥ ಅವುಗಳ ಕಣ್ಣಿಗೆ ಬಿದ್ದರೆ ತೀರಿತು, ಸಾವಿರಗಟ್ಟಳೆಯಲ್ಲಿ ಅವು ಅದಕ್ಕೆ ಮುಕುರುತ್ತವೆ. ಆದ್ದರಿಂದ ಸುಮಾರಾಗಿ ಯಾರೂ ಅಲ್ಲಿ ಹೋಗಲು ಇಷ್ಟಪಡುವುದಿಲ್ಲ.

"ಇಲಿಗಳ ಹಾವಳಿ ಅಲ್ಲಿರುವುದಕ್ಕೆ ಕಾರಣವೂ ಇದೆ. ಒಂದೊಮ್ಮೆ ಒಂದು ಹಡಗು ಅಲ್ಲಿನ ತೀರದಲ್ಲಿ ಸಿಕ್ಕಿಕೊಂಡಿತ್ತು. ಆಗ ಹಡಗಿನಿಂದ ಕೆಲವು ಇಲಿಗಳು ಕೆಳಗಿಳಿದು ದ್ವೀಪದಲ್ಲಿ ಪ್ರವೇಶಿಸಿದವು. ಪರಿಸರ ಬಹು ಚೆನ್ನಾಗಿದ್ದರಿಂದಲೂ ಅವುಗಳಿಗೆ ತಕ್ಕುದಾದ ಖಾದ್ಯ-ಪದಾರ್ಥಗಳು ಹೇರಳವಾಗಿ ಬೆಳೆಯುತ್ತಿದ್ದುದರಿಂದಲೂ ಅವುಗಳ ಸಂಖ್ಯೆ ವಿಪರೀತವಾಗಿ ಬೆಳೆದುಕೊಂಡಿತು. ಅವುಗಳನ್ನು ನಾಶಪಡಿಸಲು ಬೆಂಕಿ, ಹೊಗೆ, ಬೋನು, ವಿಷ ಹೀಗೆ ಯಾವ ತಂತ್ರವನ್ನು ಬಳಸಿದರೂ ಪ್ರಯೋಜನವಾಗಲಿಲ್ಲ. ಬದಲು ಅವುಗಳ ಸಂಖ್ಯೆ ಬೆಳೆಯುತ್ತಲೇ ನಡೆಯಿತು.

"ಆದ್ದರಿಂದಲೇ ಇಂದು ಆ ದ್ವೀಪಕ್ಕೆ ಹೋಗುವವರಿಲ್ಲ. ಹೋಗುವವರಿದ್ದರೂ ನಾಲ್ಕು ಜನ ನೆಲಸುವ ಪರಿಸ್ಥಿತಿಯನ್ನು ನಿರ್ಮಿಸುವೆನೆನ್ನುವ ಧೈರ್ಯ ಅವರಲ್ಲಿಲ್ಲ. ನೀನು, ಈ ಜವಾಬ್ದಾರಿಯನ್ನು ಹೊತ್ತುಕೊಳ್ಳುವೆಯಾ? ಅಲ್ಲಿ ಹೋಗಲು ನಿನಗೆ ಎಲ್ಲ ಸೌಕರ್ಯವನ್ನೂ ಒದಗಿಸುತ್ತೇನೆ. ಆ ದ್ವೀಪದಲ್ಲಿ ತೆಂಗು ಚೆನ್ನಾಗಿ ಬೆಳೆಯಬಲ್ಲವು. ಬೇಕಾದರೆ ತೆಂಗು ಬೆಳೆಯುವ ವಿಧಾನವನ್ನೂ ನಿನಗೆ ಕಲಿಸಿಕೊಡುತ್ತೇನೆ. ಜನ ಅಲ್ಲಿಗೆ ನೆಲಸುವಂತಾದ ಮೇಲೆ ಆ ದ್ವೀಪವನ್ನು ನಿನಗೆ ಉಡುಗೊರೆಯಾಗಿ ಕೊಡುತ್ತೇನೆ. ಆದರೆ ಒಂದು ಮಾತು. ಒಮ್ಮೆ ಒಪ್ಪಿಕೊಂಡ ನಂತರ ಈ ಮಾತಿನಿಂದ ಹಿಂದೆಗೆಯುವಂತಿಲ್ಲ."

ತೆಂಗಿನ ತೋಟ ಮಾಡಿ ಶ್ರೀಮಂತನಾಗುವ ಕನಸನ್ನು ಜಾಕ್ವಿಲ್ ಲೇಟುರ್ಕ್ ಮೊದಲಿನಿಂದಲೂ ಕಾಣುತ್ತಿದ್ದ. ಈಗ ಆ ಸುಸಂಧಿ ಒದಗಿಬಂದಿರುವುದಲ್ಲದೆ ಇಡಿ ದ್ವೀಪವೇ ಬಹುಮಾನವಾಗಿ ದೊರೆಯುವುದನ್ನು ತಿಳಿದು ಬಾಯಲ್ಲಿ ನೀರು ಬಂತು. ಅವನು ರಾಜ್ಯ-ಪಾಲನ ಆಹ್ವಾನವನ್ನು ಕೂಡಲೆ ಸ್ವೀಕರಿಸಿದ.

ಬೆಕ್ಕುಗಳ ಆಹಾರ ಇಲಿ ತಾನೆ? ಇಲಿ-ಗಳನ್ನು ನಾಶಪಡಿಸಲು ವಿಷ, ಬೋನು, ಬೆಂಕಿ ಇತ್ಯಾದಿಯಾಗಿ ಅನೇಕ ತಂತ್ರಗಳನ್ನು ಬಳಸಿದ್ದರೂ ಇಲಿಗಳ ನೈಸರ್ಗಿಕ ಶತ್ರುಗಳಾದ ಬೆಕ್ಕುಗಳನ್ನೇ ಇದುವರೆಗೆ ಯಾರೂ ಬಳಸ-ದಿರುವುದು ಲೇಟುರ್ಕನಿಗೆ ಆಶ್ಚರ್ಯಕರವಾಗಿ ಕಂಡಿತು. ಕೂಡಲೆ ಆತ ತಾಹಿತಿಯ ರಾಜ-ಧಾನಿಯಾದ ಪಾತೀತಕ್ಕೆ ಹೋಗಿ ಸಾಧ್ಯವಾದಷ್ಟು ಗಂಡು-ಹೆಣ್ಣು ಬೆಕ್ಕುಗಳನ್ನು ಕೂಡಿಹಾಕಿದ. ಅನಂತರ ಒಂದು ದಿನ ಅವೆಲ್ಲವನ್ನೂ ಆ ದ್ವೀಪಕ್ಕೆ ತೆಗೆದುಕೊಂಡು ಹೋಗಿ ಬಿಟ್ಟುಬಂದ.

ಇದಾಗಿ ಕೆಲವು ಕಾಲದ ನಂತರ ಆತ ಆ ದ್ವೀಪಕ್ಕೆ ಹೋಗಿ ನೋಡಿದಾಗ ಇಡೀ ದ್ವೀಪ ಹಚ್ಚಹಸುರಾಗಿ ರಾರಾಜಿಸುತ್ತಿತ್ತು. ಇಲಿಗಳೆಲ್ಲೂ ಕಾಣಿಸಲಿಲ್ಲ. ಜಾಕ್ವಿಲ್ ಲೇಟುರ್ಕ್ ತನ್ನ ಹಳೆಯ ಕನಸನ್ನು ಜ್ಞಾಪಿಸಿಕೊಂಡು ಅಲ್ಲಿ ತಳವೂರಿದ. ಆತ ಅಲ್ಲಿ ತಳವೂರಿದ ಮೊದಲ ವ್ಯಕ್ತಿಯಾದ್ದರಿಂದ ಕೆಲ ಕಾಲದಲ್ಲಿ ಆ ದ್ವೀಪಕ್ಕೆ ಲೆಟುರ್ಕನ ಹೆಸರು ಬಂತು

ಹೀಗಿರುವಾಗ ತನ್ನ ಹಟ್ಟಿಯಿಂದ ಕೋಳಿ, ಬಾತುಕೋಳಿಗಳು ಕ್ರಮೇಣವಾಗಿ ಕಡಿಮೆ-ಯಾಗುತ್ತಿರುವುದು ಒಂದು ದಿನ ಆತನ ಗಮನಕ್ಕೆ ಬಂತು. ಅವುಗಳನ್ನು ಯಾರು ಕದಿಯುತ್ತಾರೆಂಬುದನ್ನು ಗಮನಿಸಲು ನಿಗಾಯಿರಿಸಿದ. ಪ್ರಯೋಜನವಾಗಲಿಲ್ಲ. ರಾತ್ರಿ ಕಾಲದಲ್ಲಿ ಕಾವಲಿಟ್ಟಾಗ ಬಲಿಷ್ಠವಾಗಿ ಬೆಳೆದ ಬೆಕ್ಕುಗಳು ಬೇಲಿ ಜಿಗಿದು ಬಂದು ಕೋಳಿ, ಬಾತುಗಳನ್ನು ಹಾರಿಸುತ್ತಿರುವುದು ಗೊತ್ತಾಯಿತು, ಒಂದು


ದಣ್ಣೆಯು ಹಿಂದೆ ಅವೆಲ್ಲ ಒಟ್ಟಾಗಿ ವಾಸಿಸುತ್ತಿದ್ದವು. ಹಸಿವೆಯಾದಾಗಲೆಲ್ಲ ಸಮುದ್ರದಡದಲ್ಲಿ ಸಮಯ ಸಾಧಿಸಿ ಮೀನುಗಳ ಬೇಟೆಯಾಡಿ ತಿಂದು ಕೊಬ್ಬುತ್ತಿದವು.

ಲೇಟುರ್ನ್ ಟಾಹೀತಿಗೆ ಹೋಗಿ ದ್ವೀಪದಲ್ಲಿನ ಮಾರ್ಜಾಲವಂಶವನ್ನು ಮುಗಿಸಿಬಿಡಲು ಒಂದು ಬಂದೂಕವನ್ನು ತಂದ. ಕಂಡ ಕಂಡ ಬೆಕ್ಕಿಗೆ ಗುಂಡಿಕ್ಕಿದ. ಆದರೆ ಬೆಕ್ಕುಗಳ ಸಂತತಿ ನಾಶಗೊಳ್ಳಲೇ ಇಲ್ಲ.

ಒಂದು ಸಾಯಂಕಾಲ ಜಾಕ್ವಿಲ್ ಲೇಟುರ್ನ್ ಅಡುಗೆ ಮನೆಯಲ್ಲಿ ಮಾಂಸ ಬೇಯಿಸುತ್ತಿದ್ದ. ಅದರ ವಾಸನೆ ಹಿಡಿದು ಕೆಲವು ಬೆಕ್ಕುಗಳು ಅಲ್ಲಿಗೆ ಬಂದವು. ಲೇಟುರ್ನ್‌ನ ಮೇಲೆ ಹಾರಿ ಅವನನ್ನು ಪರಚಿ ತುಂಬಾ ಗಾಯಗೊಳಿಸಿದುವು. ಬಹು ಕಷ್ಟದಿಂದ ಅತ ಅಲ್ಲಿಂದ ಪಾರಾದ.

ಕೊನೆಗೆ ಆತ ಬೆಕ್ಕುಗಳ ಕಾಟ ಸಹಿಸಲಾಗದೆ ಆ ದ್ವೀಪವನ್ನೆ ಬಿಟ್ಟ. ಅಂದಿನಿಂದ ಆ ದ್ವೀಪಕ್ಕೆ 'ಬೆಕ್ಕುಗಳ ದ್ವೀಪ'ವೆಂದೇ ಹೆಸರು ಬಂತು. ಇಂದು ಪುಕ್ಕಟೆಯಾಗಿ ಕೊಟ್ಟರೂ ಆ ದ್ವೀಪವನ್ನು ಯಾರೂ ತೆಗೆದುಕೊಳ್ಳುವವರಿಲ್ಲ.

ಈಗ ಅಲ್ಲಿ ಕೋಳಿ ಹಾಗೂ ಬಾತುಗಳಿಲ್ಲ. ಆದರೆ ಬೆಕ್ಕುಗಳಿಗೆ ಅದೊಂದೂ ಸಮಸ್ಯೆಯಾಗಿ ಪರಿಣಮಿಸಿಲ್ಲ. ಸಮುದ್ರಲ್ಲಿ ಮೀನು ಹಾಗೂ ಕೈಗೆ ಸಿಕ್ಕಿದ ಪಕ್ಷಿಗಳೇ ಅವುಗಳ ಕ್ಷುಧಾಬಾಧೆಯನ್ನು ಹಿಂಗಿಸುತ್ತವೆ. ಇಂದು ಅವುಗಳಿಗೆ ಅಲ್ಲಿ ಶತ್ರುಗಳೇ ಇಲ್ಲ. ನಿಶ್ಚಿಂತೆಯಿಂದ ಮಜವಾಗಿ ವಾಸಿಸುತ್ತಿರುವ ಆ ಬೆಕ್ಕುಗಳಿಗೆ ತಮ್ಮ ಅಳವಿನಲ್ಲಿ ಬರುವ ಯಾವ ಪ್ರಾಣಿಯಾದರೂ ಆಹಾರವಾಗಿ ಬಿಡುತ್ತದೆ. ✡



ಥಾಮಸ್ ಹೈಗ್ ಎಂಬ ಜಾಹೀರಾತೋದ್ಯಮಿಯೊಬ್ಬ ಒಮ್ಮೆ ತನ್ನ ಮಿತ್ರರನ್ನು ಕರೆದುಕೊಂಡು ಹ್ಯೂಗೀ ಪ್ರೈಸನ ಚಿತ್ರಕಲಾ ಪ್ರದರ್ಶನಕ್ಕೆ ಹೋದ. ಆ ಚಿತ್ರ, ಈ ಚಿತ್ರ ನೋಡುತ್ತಿರುವಾಗ ತನ್ನ ಹೆಂಡತಿಯ ನಗ್ನ ಚಿತ್ರಗಳು ಕಣ್ಣಿಗೆ ಬಿದ್ದು ಬಿಡಬೇಕೆ! "ಯಾರೋ ಇದನ್ನು ತೆಗೆದದ್ದು! ಈ ಹೆಣ್ಣುಮಗಳು ಚಿತ್ರಕ್ಕೆ ಪೋಜ್ ಕೊಟ್ಟಳೇನು?". ಥಾಮಸ್ ಹೈಗ್ ಗರ್ಜಿಸಿದ.

"ಇಲ್ಲಾ ಸ್ವಾಮಿ ಇಲ್ಲ. ನಾನೇ ತೆಗೆದದ್ದು ನನ್ನ ಪೆನ್ಸಿಲಿನಿಂದ," ಹ್ಯೂಗೀ ಪ್ರೈಸ್ ನಗುತ್ತಾ ಉತ್ತರಿಸಿದ. ಹೈಗ್ ಸಮಾಧಾನಗೊಂಡ. ಆದರೆ ಒಂದೆರಡು ಕ್ಷಣಗಳಲ್ಲಿ ಮನಸ್ಸಿನ ಟ್ಯೂಬ್ ಲೈಟ್ ಹತ್ತಿಕೊಂಡಿದ್ದರಿಂದ ಒಂದೇ ಸಮನೆ ಹ್ಯೂಗೀ ಪ್ರೈಸನನ್ನು ಬಡಿಯಲಾರಂಭಿಸಿದ. ಈ ಬಗ್ಗೆ ಮುಂದೆ ಕೋರ್ಟಿನಲ್ಲಿ ವಿಚಾರಣೆಯಾಗಿ ಆ ನಗ್ನ ಚಿತ್ರಗಳನ್ನು ಹ್ಯೂಗೀ ಪ್ರೈಸನಿಗೆ ಮರಳಿಸಲಾಯಿತಲ್ಲದೆ ಹೈಗನನ್ನು ಎರಡು ವರ್ಷ ಪ್ರೊಬೇಷನ್ ಮೇಲೆ ಇರಿಸಲಾಯಿತು.

* * *

ಒಂದು ಗಂಟೆಯವರೆಗೆ ತೂಗುಯ್ಯಾಲೆ ಆಡಿದರೂ ನೀವು ಒಂದೇ ಒಂದು ಮೈಲಿನಷ್ಟಾದರೂ ಮುಂದೆ ಹೋಗುವುದಿಲ್ಲ. ಚಿಂತೆಯ ವಿಷಯವೂ ಹಾಗೆಯೇ.


ಗಂಗಾಧರ ಪಂತರ
ಪಾನಿಪತ್
ಮೂಲ ಮರಾಠಿ :
ಜಯಂತ ನಾರಳೀಕರ
ಕನ್ನಡಕ್ಕೆ :
ಕೃಷ್ಣ ಕೊಲ್ಹಾರ ಕುಲಕರ್ಣಿ

ಗಂಗಾಧರಪಂತರ ಪಾನೀಪತ್

ಡಾ. ಜಯಂತ ನಾರ್ಳೀಕರ ಪ್ರಖ್ಯಾತ ಖಗೋಲ ವಿಜ್ಞಾನಿ. ಈಗ ಮುಂಬ-ಯಿಯ ಟಾಟಾ ಮೂಲಭೂತ ವಿಜ್ಞಾನ ಸಂಶೋಧನ ಸಂಸ್ಥೆಯಲ್ಲಿ ಪ್ರಾಧ್ಯಾಪಕ-ರಾಗಿದ್ದಾರೆ. ಮರಾಠಿಯಲ್ಲಿ ಅವರು ವೈಜ್ಞಾನಿಕ ಕಥೆಗಳನ್ನು ಆಗೀಗ ಬರೆಯು-ತ್ತಿದ್ದಾರೆ. ಅವು ಸಾಕಷ್ಟು ಜನಪ್ರಿಯತೆಯನ್ನು ಗಳಿಸಿವೆ. 'ಗಂಗಾಧರಪಂತರ ಪಾಣೀಪತ್' ಅವರ ಇಂಥದೊಂದು ಕಲ್ಪಕತೆ. ಮರಾಠಿ 'ಕಿರ್ಲೋಸ್ಕರ' ಮಾಸಿಕದಲ್ಲಿ ಇದು ಈ ಮೊದಲು ಪ್ರಕಟವಾಗಿದೆ. ನಿಮ್ಮ ಕುತೂಹಲಕ್ಕೆ ತಕ್ಕ ಆಹಾರ ಇಲ್ಲಿದೆ.

ದಿನಾಂಕ ೩೧, ಅಗಸ್ಟ ೧೯೭೫ರ ಸಾಯಂಕಾಲದ ಸಮಯ. ಪ್ರಾಧ್ಯಾಪಕ ಗಂಗಾಧರಪಂತ ಗಾಯತೊಂಡೆಯವರು ಒಂದು ವಿಲಕ್ಷಣ ಚರ್ಚಾಕೂಟದ ಅಧ್ಯಕ್ಷ ಪದವನ್ನು ಅಲಂಕರಿಸಿ ತಿರುಗಿ ಬರುತ್ತಿದ್ದರು. ಚರ್ಚಾಕೂಟದ ವಿಷಯ 'ಕೆಟಾಸ್ಟ್ರೊಫಿ ಥಿಯರಿ' ಎಂಬುದಾಗಿತ್ತು. ಇದನ್ನೇ ಕನ್ನಡದಲ್ಲಿ ಹೇಳುವುದಾದರೆ 'ಆಕಸ್ಮಿಕ ವಿಪತ್ತುಗಳ ಸಿದ್ಧಾಂತ' ಎನ್ನಬಹುದು. ವಾಸ್ತವದಲ್ಲಿ ಇದು ಆಧುನಿಕ ಗಣಿತದಲ್ಲಿಯ ಒಂದು ಹೊಸ ಭಾಗ. ಆದರೆ ಅಮೂರ್ತವಾಗಿದ್ದರು ಕೂಡ ಅದು ಪ್ರತ್ಯಕ್ಷ ಜೀವನದಲ್ಲಿ ಅನೇಕ ಸಲ ಕಾಣುತ್ತದೆ. ಉದಾಹರಣಾರ್ಥ...ಹಾಂ! ಇಲ್ಲಿ ಈ ಗಣಿತಶಾಸ್ತ್ರದ ಪರಿಚಯವನ್ನು ಮಾಡಿ-ಕೊಳ್ಳುವ ಮೊದಲು ನಾವು ಗಂಗಾಧರಪಂತರ ಪರಿಚಯವನ್ನು ಮಾಡಿಕೊಳ್ಳಬೇಕು.

ಗಂಗಾಧರಪಂತರು ಇತಿಹಾಸ ಸಂಶೋಧಕರೆಂದು, ಪ್ರಾಧ್ಯಾಪಕರೆಂದು ಪುಣೆಯಲ್ಲಿ, ಮಹಾರಾಷ್ಟ್ರದಲ್ಲಿ, ಅಷ್ಟೇಕೆ ಭಾರತ ಖಂಡದಲ್ಲಿಯೇ ಪ್ರಸಿದ್ಧರಾಗಿದ್ದಾರೆ. ಆದರೂ ಅವರ ವಿದ್ವತ್ಪೂರ್ಣವಾದ ಪುಸ್ತಕಗಳನ್ನು ಓದದ ಅಥವಾ ಅವರ ಪ್ರಭಾವಪೂರ್ಣವಾದ ಭಾಷಣಗಳನ್ನು ಕೇಳದ ಜನರು ಕೂಡ ಇರ-ಬೇಕಲ್ಲ. ಆದ್ದರಿಂದಲೇ ಈ ಪೀಠಿಕೆಯನ್ನು ಹೇಳಬೇಕಾಯಿತು. ಗಂಗಾಧರಪಂತರ ಒಂದು ಖ್ಯಾತಿಯೆಂದರೆ, ಸಾರ್ವಜನಿಕ ಸಮಾ-ರಂಭಗಳ ಅವರ ಅಧ್ಯಕ್ಷ ಪದವಿಯದು. ಗಂಗಾ-ಧರಪಂತರು ತಮ್ಮ ೫೫ ವರುಷಗಳ ಆಯು-ಷ್ಯದಲ್ಲಿ ೯೯೯ ಸಲ ಅಧ್ಯಕ್ಷ ಪದವಿಯನ್ನು ಅಲಂಕರಿಸಿದ್ದಾರೆ. ಈ ಸಂಖ್ಯೆಯನ್ನು ನೋಡಿ ಗಾಬರಿಯಾಗಬೇಡಿ. ಅದರ ಲೆಕ್ಕವೂ ಸುಲಭವಾಗಿದೆ. ವಾರದಲ್ಲಿ ಒಂದೇ ಒಂದು ಸಲ ಎಂದರೂ. ವರ್ಷದಲ್ಲಿ ೫೨. ಅದರಂತೆ ೯೯೯ ರ ಸಂಖ್ಯೆಯನ್ನು ಮುಟ್ಟಲು ಇಪ್ಪತ್ತು ವರುಷಗಳು ಕೂಡ ಹಿಡಿಯುವುದಿಲ್ಲ. ಗಂಗಾಧರ-ಪಂತರು ಈ ಲೆಕ್ಕವನ್ನು ಮುಂಚೆಯೇ ಮಾಡಿಟ್ಟುಕೊಂಡಿದ್ದರು. ಅವರು ಮೂವತ್ತ-ರಲ್ಲಿದ್ದಾಗ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಲು ಆಮಂತ್ರಣಗಳು ಬರಹತ್ತಿದುವು. ಮೊದ-ಮೊದಲು ಅವರು ಕೇವಲ ತಮ್ಮ ವಿಷಯಕ್ಕೆ ಸಂಬಂಧಿಸಿದ ಸಮಾರಂಭಗಳ ಆಮಂತ್ರಣಗಳ-ನ್ನಷ್ಟೇ ಒಪ್ಪಿಕೊಳ್ಳುತ್ತಿದ್ದರು. ಆದರೆ ಮುಂದೆ ಮಾತ್ರ ಈ ಸುಯಂತ್ರ ಎಲ್ಲಿ ಹೋಯಿತೋ? ಕೊನೆಗೆ ಯಾವುದೇ ಸಮಾರಂಭಕ್ಕೆ 'ಸುಲಭವಾಗಿ ದೊರೆಯುವ ಅಧ್ಯಕ್ಷ' ಎಂದರೆ ಗಂಗಾಧರಪಂತರು ಎನ್ನುವಂತಾಯಿತು. ಯಾವುದಾದರೊಂದು ಗ್ರಂಥ ಪ್ರಕಾಶನ, ಶಾಲೆಯ ವಾರ್ಷಿಕದಿನ, ಜಂಜಬಿ ಚರ್ಚಾಕೂಟ

ಗಳು. ಅರವತ್ತೊಂದು ಎಪ್ಪತ್ತೊಂದು ಇಲ್ಲವೆ ಯಾವುದೋ ವರುಷದ, ಜನ್ಮದಿನ ಅಥವಾ ಪುಣ್ಯದಿನ ಆದು ವ್ಯಕ್ತಿಯದೂ- ಆದೀತು. ಇಲ್ಲವೆ ಸಂಸ್ಥೆಯದೂ ಆದೀತು- ಗಂಗಾಧರ ಪಂತರು ಅಧ್ಯಕ್ಷರೆಂದು ಹಾಜರಿರುತ್ತಿದ್ದರು! ಒಂದೊಂದು ಸಲ ತಾವು ಸಮಾರಂಭದ ಅಧ್ಯಕ್ಷರಿರದಿದ್ದರೂ ರಥಿಯಿಂದ ವೇದಿಕೆಯ ಮೇಲೆ ಹತ್ತಿ ಹಾಗೂ ಅಧ್ಯಕ್ಷರ ಖುರ್ಚಿಯನ್ನು ಅಲಂಕರಿಸಿಬಿಡುತ್ತಿದ್ದರು; ಆಮೇಲೆ ಯಥಾಪ್ರಕಾರ ತಡವಾಗಿ ಬಂದ ನಿಯೋಜಿತ ಅಧ್ಯಕ್ಷರು ಹಿಂದೆ ಕುಳಿತು ಕೊಳ್ಳಬೇಕಾಗುತ್ತಿತ್ತು. ಅಂದ ಮೇಲೆ ಅವರು [illegible] ೯೯೯ ಸಲ ಅಧ್ಯಕ್ಷಪಟ್ಟವನ್ನು ಅಲಂಕರಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ. ಆದರೆ ಒಂದು ಸಾವಿರದ, ತಮ್ಮ ಅಧ್ಯಕ್ಷ ಪದವನ್ನು ಅವರು ಇತಿಹಾಸದ ವಿಷಯಕ್ಕಾಗಿಯೇ ಮೀಸಲಾಗಿಟ್ಟಿದ್ದರು. ಆ ಮುಂದೆ ಒಂದೆರಡು ವಾರಗಳಲ್ಲಿಯೇ ನಡೆಯುವ 'ಪಾನೀಪತ್— ಯುದ್ಧ' ಚರ್ಚಾಕೂಟದ ನಿಯೋಜಿತ ಅಧ್ಯಕ್ಷರಾಗಿದ್ದರು. ಈ ಮಧ್ಯದ ಕಾಲಾವಧಿಯಲ್ಲಿ ಬಂದ ಇತರ ಸುಮಾರು ೨೦-೨೫ ಆಮಂತ್ರಣಗಳನ್ನು ಅವರು ಬಹಳ ಸಂಯಮದಿಂದ ನಿರಾಕರಿಸಿದ್ದರು.

'ಕೆಟಾಸ್ಟ್ರೊಫಿ ಥಿಯರಿ' ಎಂದರೆ ಏನು? ಈ ಪ್ರಶ್ನೆಯ ಉತ್ತರ ಅವರಿಗೆ ಗೊತ್ತಿರದಿದ್ದರೂ ಅವರ ೯೯೯ನೆಯ ಅಧ್ಯಕ್ಷ ಪದವು ಆ ವಿಷಯದ ಚರ್ಚಾಕೂಟದ್ದಾಗಿತ್ತು. ಮುಂದೆ ಅದು ಅವರಿಗೆ ಗೊತ್ತಾಯಿತೋ ಇಲ್ಲವೋ ಎನ್ನುವುದು ಬೇರೆ ವಿಷಯ. ಆದರೆ ಈ ಕಥೆಗಾಗಿ ನಾವು ಆ ವಿಷಯದ ಕುರಿತು ತುಸುವಾದರೂ ಪರಿಚಯ ಮಾಡಿಕೊಳ್ಳುವುದು ಅವಶ್ಯವಾಗಿದೆ. ಯಾಕೆಂದರೆ, ಗಂಗಾಧರ ಪಂತರಿಗೆ ಬಂದ ಒಂದು ವಿಲಕ್ಷಣ ಅನುಭವವು ಅದರೊಂದಿಗೆ ಸಂಬಂಧಿಸಿದ್ದಾಗಿದೆ.

ಯಾವುದೊಂದು ಪರಿಣಾಮದ ಹಿಂದೆ ಏನೋ ಕಾರಣ ಇರುತ್ತದೆ. ಮತ್ತು ಆ ಕಾರಣದಲ್ಲಿ ತುಸು ಅಂತರವಾದರೆ ಪರಿಣಾಮದಲ್ಲಿಯೂ ಬದಲಾವಣೆಗಳಾಗುತ್ತವೆ. ನಾವು ಒಂದು ನಿರ್ದಿಷ್ಟ ವೇಗದಿಂದ ಮೇಲೆ ಎಸೆದ ಚೆಂಡು ನಿರ್ದಿಷ್ಟ ಎತ್ತರವನ್ನು ಮುಟ್ಟುತ್ತದೆ. ಆವೇಗದಲ್ಲಿ ತುಸು ಹೆಚ್ಚು ಕಡಿಮೆ ಯಾದರೆ ಚೆಂಡು ಮುಟ್ಟುವ ಎತ್ತರದಲ್ಲಿಯೂ ಹೆಚ್ಚು ಕಡಿಮೆಯಾಗುತ್ತದೆ. ಈ ವಿಧಾನವನ್ನು ನ್ಯೂಟನ್ನನ ಗುರುತ್ವಾಕರ್ಷಣ ಶಕ್ತಿ ಹಾಗು ಗತಿ ಸಿದ್ಧಾಂತದಲ್ಲಿ ಹೇಳಿದೆ. ಶಾಸ್ತ್ರಜ್ಞರು ಗಣಿತದ ಮುಖಾಂತರ ಈ ವಿಷಯವನ್ನು ಸಿದ್ಧಮಾಡಿ ತೋರಿಸುತ್ತಾರೆ.

ಆದರೆ ಈ ಜಗತ್ತಿನಲ್ಲಿಯ ಎಲ್ಲ ಆಗು-ಹೋಗುಗಳಿಗೂ ಈ ತರದ ಗಣಿತವನ್ನು ಉಪಯೋಗಿಸಲು ಬರುವುದಿಲ್ಲ. ಉದಾಹರಣೆಗೆ, ಎರಡು ನಾಯಿಗಳು ಜಗಳಾಡುತ್ತವೆ. ಅವುಗಳ ಜಗಳದ ಕೊನೆಗೆ ಒಂದು ನಾಯಿ ಓಡಿ ಹೋಗುತ್ತದೆ. ಆದರೆ ಈ ಜಗಳ ನಡೆದಾಗ ಉಭಯ ನಾಯಿಗಳಲ್ಲಿಯೂ ಭಯ-ಸಿಟ್ಟು ಎರಡೂ ಇರುತ್ತವೆ. ಅವುಗಳ ಪ್ರಮಾಣದಲ್ಲಿ ಮಾತ್ರ ಹೆಚ್ಚು ಕಡಿಮೆಯಾಗುತ್ತಿರುತ್ತದೆ. ಮತ್ತು ಒಮ್ಮಿಂದೊಮ್ಮೆಲೆ ಒಂದು ನಾಯಿಯಲ್ಲಿಯ ಭಯವು ತನ್ನ ನಿರ್ದಿಷ್ಟ ಕಕ್ಷೆಯನ್ನು ಮೀರಿದಾಗ ಅದು ಓಡಿಹೋಗುವುದು ಅನಿವಾರ್ಯವಾಗುತ್ತದೆ. ಈ ಅಂತರವು ಮಾತ್ರ ಅನಿರೀಕ್ಷಿತವಾಗಿರುತ್ತದೆ. ಇದರಂತೆ ಆಟಗಳಲ್ಲಿಯೂ ಘಟಿಸುತ್ತದೆ. ಕ್ರಿಕೆಟ್ ಆಟದಲ್ಲಿ ಬ್ಯಾಟಿಂಗ್ ಮಾಡುವಾಗ ಒಂದು ಕಡೆಯವರು ಒಮ್ಮೆಲೆ ಕುಸಿದುಬಿಡುತ್ತಾರೆ! ಮೊದಲಿನ ಒಂದೆರಡು ವಿಕೆಟ್ಟುಗಳು ಬಿದ್ದಾಗ ಇನ್ನೂ ಆಟ ಇದೆ ಎನ್ನುವ ಆತ್ಮವಿಶ್ವಾಸ ಪಕ್ಷದ ಆಟಗಾರರಲ್ಲಿರುತ್ತದೆ. ಆದರೆ ಮತ್ತೆ ಒಂದೆರಡು ವಿಕೆಟ್ಟುಗಳು ಬೇಗನೆ ಬಿದ್ದುಬಿಟ್ಟರೆ ಒಮ್ಮೆಲೇ ಇಡೀ ಪಕ್ಷವು 'ನರ್ವಸ್‌ನೆಸ್'ನಲ್ಲಿ ಪರಿವರ್ತಿತವಾಗುತ್ತದೆ.

ಇಂಥ ಘಟನೆಗಳ ಕಾರಣಗಳನ್ನು ತಿಳಿಯಲು ಗಣಿತ ಪದ್ಧತಿಯಿಂದ ಬಿಡಿಸಲು ಬರುವುದಿಲ್ಲವೆಂದು ಶಾಸ್ತ್ರಜ್ಞರು ತಿಳಿಯಬಹುದು. ಅಥವಾ ಈ ಘಟನೆಗಳು ಗಣಿತದಿಂದ ದೂರವಾಗಿವೆ ಎನ್ನಬಹುದು. ಆದರೆ ಕಳೆದ ದಶಕದಲ್ಲಿ ಇಂಥ ಘಟನೆಗಳನ್ನು ಕೂಡ ಗಣಿತದ

ಕಕ್ಷೆಯಲ್ಲಿ ಕೂಡಿಸಲು ಬರುವಂತಹ ಹೊಸ ಗಣಿತದ ನಿರ್ಮಾಣವಾಗಿದೆ. ಅದುವೇ– 'ಕೆಟಾಸ್ಟ್ರೊಫಿಥಿಯರಿ' ಅಥವಾ 'ಆಕಸ್ಮಿಕ ವಿಪತ್ತುಗಳ ಸಿದ್ಧಾಂತ'.

ಸಭೆಯಲ್ಲಿಯ ಜನಸಮುದಾಯ ಒಮ್ಮೆಲೇ ಚದುರುತ್ತದೆ; ಶೇರ ಬಜಾರದಲ್ಲಿ ಒಮ್ಮೊಮ್ಮೆ ಗಾಬರಿಯುಂಟಾಗಿ ಬೆಲೆಗಳು ಇಳಿದುಬಿಡುತ್ತವೆ; ಯುದ್ಧಗಳು ಒಮ್ಮೆಲೇ ತಿರುವು ಮುರುವಾಗುತ್ತವೆ...ಈ ಎಲ್ಲ ಘಟನೆಗಳ ಹಿಂದೆ ಮೇಲೆ ಹೇಳಿದ ಹೊಸ ಗಣಿತವಿದೆ. ಯಾವುದೊಂದು ಘಟನೆ ಒಂದು ವಿಶಿಷ್ಟ ಸ್ಥಿತಿಗೆ ಮುಟ್ಟಿದಾಗ ಕಾರಣಗಳಲ್ಲಿ ತುಸುವೇ ಅಂತರವಾದರೂ ಸಾಕು, ಪರಿಣಾಮ ಮಾತ್ರ ವಿಲಕ್ಷಣವಾದದ್ದು ಕಂಡುಬರುತ್ತದೆ. ಇಂಥ ಪರಿಸ್ಥಿತಿಗಳನ್ನು ಬಿಡಿಸಿಹೇಳಲು ಗಣಿತವು ಸಮರ್ಥವಾಗಿದೆ.

ಅಂದು ಚರ್ಚಾಕೂಟದಲ್ಲಿ ಅನೇಕ ಭಾಷಣಗಳಾದುವು. ಆದರೆ ಅವುಗಳಲ್ಲೆಲ್ಲ ಅತ್ಯಂತ ಪ್ರಭಾವೀ ಭಾಷಣವನ್ನು ಮಾಡಿದವರು ರಾಜೇಂದ್ರ ದೇಶಪಾಂಡೆ. ಅವರೊಬ್ಬ ಯುವಕ ಪ್ರತಿಭಾಶಾಲಿ ಶಾಸ್ತ್ರಜ್ಞ. ಅವರ ಕೀರ್ತಿ ಈ ದೇಶದಾಚೆಯೂ ಹರಡಿತ್ತು. ಅವರ ಹಾಗು ಗಂಗಾಧರಪಂತರ ಸ್ನೇಹ ಗಾಢವಾಗಿತ್ತು. ಬೇರೆ–ಬೇರೆ ಪರಿಸ್ಥಿತಿಗಳಲ್ಲಿ ಕೆಟಾಸ್ಟ್ರಾಫಿ ಥಿಯರಿಯ ಉಪಯೋಗ ಹೇಗಾಗುತ್ತದೆಂಬುದನ್ನು ಅವರು ಬಹಳ ಸುಂದರವಾಗಿ ಅಂದು ತೋರಿಸಿಕೊಟ್ಟಿದ್ದರು.

ಚರ್ಚಾಕೂಟ ಮುಗಿದ ನಂತರ ಕೂಡ ಗಂಗಾಧರಪಂತರು ರಾಜೇಂದ್ರನ ಭಾಷಣದ ಕುರಿತು ಯೋಚಿಸುತ್ತಿದ್ದರು. ಅವರ ಇತಿಹಾಸ ಸಂಶೋಧಕ ಮನಸ್ಸು ಬೇರೊಂದು ದಿಕ್ಕಿನಲ್ಲಿ ಹಾರುತ್ತಿತ್ತು. ಇತಿಹಾಸ ಹೇಗೆ ಸಿದ್ಧವಾಗುತ್ತದೆ? ಪರಸ್ಪರ ಸಂಬಂಧವಿದ್ದ ಕೆಲವು ಘಟನೆಗಳು–ಅವುಗಳಲ್ಲಿಯೇ ಇತಿಹಾಸಕ್ಕೆ ಮಾರ್ಗ ದೊರಕುತ್ತದೆ. ಎಷ್ಟೋ ಸಲ ಈ ಘಟನೆಗಳ ಸರಪಳಿ ಒಂದು ವಿಶಿಷ್ಟ ಮೂಲದಿಂದ ಪ್ರಾರಂಭವಾಗಿರುತ್ತದೆ. ಆ ಮೂಲವನ್ನೇ ಒಂದು ವೇಳೆ ಬದಲಿಸಿಬಿಟ್ಟರೆ ಈ ಸರಪಳಿ ಎಲ್ಲಿ ಹೋಗಬಹುದು? ಕೆಟಾಸ್ಟ್ರೊಫಿಗೆ ಇಲ್ಲಿ ಬಹಳ ಮಹತ್ವವಿದೆ. ಗಂಗಾಧರಪಂತರಿಗೆ ತಮ್ಮ ಒಂದು ಸಾವಿರದ ಅಧ್ಯಕ್ಷೀಯ ಭಾಷಣಕ್ಕೆ ವಿಷಯ ಸಿಕ್ಕಿದೆಯೆಂದು ತಿಳಿಯಿತು...

"ಬಾಜೂ... ಬಾಜೂ... ರೇ... ಲೇ... ಬಾಜೂ..." ಹಾರ್ನಿನ ಕರ್ಕಶ ದನಿಯಲ್ಲಿ ಟ್ರಕ್ ಡ್ರೈವರನ ಗರ್ಜನೆ ಕೂಡಿಹೋಗಿತ್ತು. ಗಂಗಾಧರಪಂತರಿಗೆ ಒಮ್ಮೆಲೇ ಆಘಾತವಾಯಿತು. ಅವರು ಪ್ರಜ್ಞೆಯನ್ನು ಕಳೆದುಕೊಂಡುಬಿಟ್ಟರು. ಟ್ರಕ್ಕನ್ನು ನಿಲ್ಲಿಸಿ ಅದರ ಡ್ರೈವ್ಹರ್ ಮತ್ತು ಕ್ಲೀನರುಗಳು ಕೆಳಗೆ ಇಳಿದರು. ಸೇನಾಪತಿ ಬಾಪಟ ಮಾರ್ಗದಲ್ಲಿ ಗದ್ದಲ ಕಡಿಮೆಯೆಂದು ಟ್ರಕ್ ಡ್ರೈವರ್ ತನ್ನ ಗಾಡಿಯನ್ನು ವೇಗದಿಂದ ಓಡಿಸುತ್ತಿದ್ದ. ಮನುಷ್ಯ ವಿಚಾರ ಮಾಡುತ್ತ ತನ್ನನ್ನೇ ತಾನು ಮರೆಯುತ್ತಾನೆಂಬುದು ಆ ಟ್ರಕ್ ಡ್ರೈವ್ಹರನಿಗೇನು ಗೊತ್ತು? ಒಮ್ಮಿಂದೊಮ್ಮೆಲೇ ಸೂಟು ಬೂಟುಧಾರಿಯಾದ ಪ್ರೊ. ಗಾಯತೋಂಡೆಯವರನ್ನು ಎದುರಿಗೆ ಕಂಡಾಗ ಆತ ಬ್ರೇಕನ್ನು ಒತ್ತಿದ್ದ. ಆದರೆ ಪಂತರಿಗೆ ಮಾತ್ರ ಆಘಾತವಾಗಿತ್ತು. ಡ್ರೈವ್ಹರನಿಗೆ ಕೂಡ ತಾನು ಪ್ರತಿಷ್ಠಿತ ವ್ಯಕ್ತಿಯೊಬ್ಬನನ್ನು ಅಪಘಾತದಲ್ಲಿ ಸಿಲುಕಿಸಿದೆನೆಂಬುದು ತಿಳಿದಿತ್ತು. ಆತನೂ ಕ್ಲೀನರನೂ ಗಾಬರಿಯಿಂದ ಟ್ರಕ್ಕಿನ ಮುಂದೆ ಬಂದು ನೋಡಿದರು.

ಟ್ರಕ್ಕಿನ ಎದುರಿಗೆ ಯಾರೂ ಇರಲಿಲ್ಲ!

ಇಬ್ಬರೂ ಟ್ರಕ್ಕಿನ ನಾಲ್ಕೂ ಕಡೆಗೆ, ಮೇಲೆ ಕೆಳಗೆ ಎಲ್ಲ ಕಡೆಗೂ ನೋಡಿದರು. ಆದರೆ ಪಂತರ ಸುಳಿವೇ ಇರಲಿಲ್ಲ! ದಾರಿಯಲ್ಲಿ ಕೂಡ ಯಾರೂ ಇರಲಿಲ್ಲ. ಇದೇನೋ ಯಾವುದೋ ಭೂತಚೇಷ್ಟೆ ಇರಬಹುದೆಂದು ಬಗೆದು ಅವರಿಬ್ಬರೂ ಟ್ರಕ್ಕಿನೊಂದಿಗೆ ಹೋದಿಬಿಟ್ಟರು.

ಮೇಲಿನ ಘಟನೆಯಾಗಿ ಅರವತ್ತು ಗಂಟೆಗಳ ನಂತರ ಪ್ರೊ. ಗಾಯತೋಂಡೆಯವರು ಮುಂಬಯಿಯ ಆಜಾದ ಮೈದಾನಿನಲ್ಲಿ

ಅವತರಿಸಿದರು. ಆಗ ಬೆಳಗಿನ ಐದು ಘಂಟೆಯಾಗಿತ್ತು. ಅಸ್ತವ್ಯಸ್ತ ಬಟ್ಟೆಗಳಲ್ಲಿದ್ದ ಅವರ ಕೋಟಿನ ಗುಂಡಿಗಳು ಮುರಿದಿವೆ, ಕಾಲರು ಹರಿದಿದೆ, ಜೇಬು ಖಾಲಿ; ಆದರೂ ಎಲ್ಲೂ ವಿಶೇಷ ಧಕ್ಕೆಗೊಂಡಿರದಿದ್ದ ಅವರನ್ನು ಅಕ್ಕಪಕ್ಕದ ಜನರು ನಿದ್ರೆಯಿಂದ ಎಚ್ಚರಿಸಿದರು.

"ಸಾಹೇಬರs... ಯಾರು ನೀವು? ಇಲ್ಲಿ ಹ್ಯಾಂಗ ಮಲಗಿದಿರಿ?" ಎಂದು ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಕೇಳಿದ. ಈ ಪ್ರತಿಷ್ಠಿತನಂತೆ ಟಾಪುಟೀಪಾಗಿ ಕಾಣುವ ಗೃಹಸ್ಥನಿಗೆ ಮುಂಬಯಿ ಮವಾಲಿಯ ಪ್ರಸಾದ ದೊರೆತಿರಬಹುದೇ?

"ನಾನು ಗಂಗಾಧರ ಗಾಯತೊಂಡೆ, ಇತಿಹಾಸದ ಪ್ರಾಧ್ಯಾಪಕ. ಪುಣೆ ನಗರದಲ್ಲಿರುತ್ತೇನೆ. ಆದರೆ ಇಲ್ಲಿ? ಈಗ ನಾನಿರುವುದು ಎಲ್ಲಿ?" ಎಂದು ಪಂತರು ಕನಲುತ್ತ ಕೇಳಿದರು. ಅವರ ವಿಚಾರಶಕ್ತಿ, ಸ್ಮರಣಶಕ್ತಿಗಳು ಜಾಗ್ರತವಾಗಿರುವಂತೆ ತೋರುತ್ತಿರಲಿಲ್ಲ.

"ಅರೇ, ಇವರು...ಹಾಂ! ಮೊನ್ನೆಯಿಂದ ಕಾಣೆಯಾಗಿರುವ ಗಾಯತೊಂಡೆ ಇತಿಹಾಸಕಾರರು!" ಪೋಲೀಸ್ ಪೇದೆ ಉತ್ತರ ಕೊಡುವ ಮೊದಲೇ ಪ್ರೇಕ್ಷಕರಲ್ಲೊಬ್ಬ ಉದ್ಗರಿಸಿದ.

ಗಾಯತೊಂಡೆಯವರನ್ನು ಪೋಲೀಸ್ ಸ್ಟೇಶನ್ನಿಗೆ ತಂದರು, ಮುಂಬಯಿಯಲ್ಲಿ ಕೆಲಸ ಮಾಡುತ್ತಿದ್ದ ಅವರ ಏಕಮಾತ್ರ ಪುತ್ರ ವಿನಯನಿಗೆ ಹೇಳಿ ಕಳಿಸಿದರು. ವಿನಯ ಬಂದು ತಂದೆಯನ್ನು ಮನೆಗೆ ಕರೆದುಕೊಂಡು ಹೋದನು. ಕಳೆದ ಕೆಲವು ಗಂಟೆಗಳಿಂದ ಅವರಿಗೆ ತಾವೆಲ್ಲಿದ್ದೇವೆಂಬುದು ಗೊತ್ತೇ ಆಗಿರಲಿಲ್ಲ. ಡಾಕ್ಟರರ ಪರೀಕ್ಷೆಯಿಂದ ಏನೂ ಹೊರಬೀಳಲಿಲ್ಲ. ಮನಸ್ಸಿಗೆ ಆಘಾತವಾಗಿ, ಬಹುಶಃ ಅವರ ಸ್ಮರಣಶಕ್ತಿಗೆ ತಾತ್ಪೂರ್ತಿಕ ಪೆಟ್ಟು ಬಿದ್ದಿರಬಹುದೆಂದು ಮುಂಬಯಿಯ ಒಬ್ಬ ಸುಪ್ರಸಿದ್ಧ ಮನಶ್ಶಾಸ್ತ್ರಜ್ಞರು ಅಭಿಪ್ರಾಯಪಟ್ಟರು.

ಸ್ವತಃ ಗಾಯತೊಂಡೆಯವರಿಗೆ ಈ ರಹಸ್ಯ ತಿಳಿದಿರಲಿಲ್ಲ. ಸ್ಮರಣಶಕ್ತಿ ಹೋಗುವಷ್ಟು ತಮಗೆ ಏನೂ ಆಗಿಲ್ಲವೆಂದು ಅವರ ನಿಶ್ಚಿತ ಅಭಿಪ್ರಾಯವಾಗಿತ್ತು. ಒಂದೆರಡು ದಿನ ಮುಂಬಯಿಯಲ್ಲಿದ್ದ ಮೇಲೆ ಅವರು ತಿರುಗಿ ಪುಣೆಗೆ ಹೋಗಲು ಆಗ್ರಹಪಟ್ಟರು. ಯಾಕೆಂದರೆ ಪಾನೀಪತ್ ಚರ್ಚಾಕೂಟಕ್ಕೆ ತುಸುವೇ ದಿನಗಳು ಉಳಿದಿದ್ದವು. ಅದರ ಅಧ್ಯಕ್ಷಸ್ಥಾನವನ್ನು ಅವರು ಅಲಂಕರಿಸಬೇಕಿತ್ತಷ್ಟೆ. ಕೊನೆಗೆ ವಿನಯ ಅವರನ್ನು ಡೆಕ್ಕನ್ ಕ್ವೀನಿನಲ್ಲಿ ಕೂಡಿಸಿ ಬಂದ.

ಟ್ರೇನಿನಲ್ಲಿ ಕೂಡುತ್ತಿದ್ದಂತೆ ಗಂಗಾಧರಪಂತರು ಯೋಚಿಸಲು ಪ್ರಾರಂಭಿಸಿದರು. ತಾವು ಪುಣೆಯಿಂದ ಮುಂಬಯಿಗೆ ಬಂದದ್ದು ಹೇಗೆ? ತಮ್ಮ ಸ್ಮರಣಶಕ್ತಿ ಹೋಗಿದ್ದಾಗಲೇ ಈ ನೂರಕ್ಕಿಂತ ಹೆಚ್ಚು ಮೈಲಿನ ಪ್ರವಾಸವನ್ನು ತಾವು ಮಾಡಿದ್ದು ಹೇಗೆ? ಯಾಕೆಂದರೆ, ಮುಂಬಯಿಗೆ ಬರಬೇಕೆಂದು ಅವರು ಯೋಚಿಸಿರಲಿಲ್ಲ. ಅಥವಾ ಅವರು ಮುಂಬಯಿಗೆ ಬರಲು ಕಾರಣಗಳೂ ಇರಲಿಲ್ಲ. ಅಲ್ಲದೆ ಈ ಅರವತ್ತು ಗಂಟೆಗಳನ್ನು ಅವರು ಎಲ್ಲಿ ಕಳೆದರು? ಏನು ತಿಂದರು-ಉಂಡರು? ಎಲ್ಲಿ ಮಲಗಿದ್ದರು? ಅದೆಲ್ಲದರ ಸಾಕ್ಷಿ ಪುರಾವೆಗಳೇನಾದರೂ ದೊರೆಯಬಹುದೆ...?

ಅವರು ತೊಟ್ಟ ಎಂದಿನ ಬಟ್ಟೆಗಳೇ ಅವರ ಮೈಮೇಲಿದ್ದುವು. ಅವರ ಅರವತ್ತು ಗಂಟೆಗಳ ಅನುಭವದ ಜೊತೆಗೆ ಅವರ ಮೈಮೇಲಿನ ಬಟ್ಟೆಗಳೂ ಇದ್ದುವು. ಅವುಗಳ ಮೇಲೆ ತುಸು ಅತ್ಯಾಚಾರವೂ ಆಗಿತ್ತು. ಜೇಬಿನಲ್ಲಿಯ ದುಡ್ಡಿನ ಚೀಲ ಹೋಗಿತ್ತು. ಇಂದು ಅದೇ ಸೂಟು ಅವರ ಮೈಮೇಲಿತ್ತು.

ಲೋಣಾವಳಾ ನಿಲ್ದಾಣ ದಾಟಿದ ನಂತರ ವೇಟರನು ಅವರ ಚಹಾ ತಿಂಡಿಯ ಬಿಲ್ಲನ್ನು ತಂದಿಟ್ಟ. ಅದನ್ನು ಕೊಡಲು ಅವರು ಜೇಬಿನಲ್ಲಿ ಕೈ ಹಾಕಿದಾಗ...ಕೋಟಿನ ಲೈನಿಂಗಿನಲ್ಲಿ ಕಾಗದದ ದಪ್ಪ ತುಣುಕೊಂದು ಸೇರಿದ್ದಂತೆ ಅನಿಸಿತು. ವೇಟರನ ಬಿಲ್ಲನ್ನು ಕೊಟ್ಟು ಅವರು ಮತ್ತೆ ಜೇಬಿನಲ್ಲಿ ಕೈ ಹಾಕಿ ಲೈನಿಂಗಿಗೆ ಬಿದ್ದ ತೂತಿನಿಂದ ಆ ಕಾಗದವನ್ನು ಹೊರಕ್ಕೆ ತೆಗೆದರು.

ಅದು ಹಳೆಯ ಪುಸ್ತಕವೊಂದರ ಪುಟಗಳ ಒಂದು ಭಾಗವಾಗಿತ್ತು. ಅದರಲ್ಲಿಯ ವಿಷಯ ಕಣ್ಣೆದುರಿಗೆ ಬರುತ್ತಿದ್ದಂತೆ ಗಂಗಾಧರಪಂತರ ಎಲ್ಲ ಸುಪ್ತ ಸ್ಮೃತಿಗಳು ಒಮ್ಮೆಲೆ ಜಾಗ್ರತವಾದವು. ಆ ಅರವತ್ತು ಗಂಟೆಗಳಲ್ಲಿ ನಡೆದ ಘಟನೆಗಳೆಲ್ಲ ಅವರ ಮನಃಚಕ್ಷುಗಳ ಮುಂದೆ ಬಂದು ನಿಂತವು. ಕ್ಷಣಹೊತ್ತು ಅವರು ರೋಮಾಂಚನಗೊಂಡರು.

'ಆದರೆ, ಅದನ್ನೆಲ್ಲ ಯಾರು ನಂಬಬಹುದು?' ಎಂದು ತಮ್ಮಷ್ಟಕ್ಕೆ ತಾವೇ ಅಂದುಕೊಂಡರು. 'ಈ ಕಾಗದವೇ ಸಾಕ್ಷಿ... ಛೇ...ಛೇ! ಇದು ನನ್ನ ಸ್ಮೃತಿಯನ್ನು ತಿರುಗಿ ತರಲು ಕಾರಣವಾಗಿದ್ದರೂ ಜನ ಇದನ್ನು ನಂಬುವರೆ!' ಕೊನೆಗೆ ಬಹಳಷ್ಟು ವಿಚಾರಮಾಡಿದ ನಂತರ ಅವರು ರಾಜೇಂದ್ರ ದೇಶಪಾಂಡೆಯನ್ನು ಭೆಟ್ಟಿಯಾಗುವುದೆಂದು ನಿರ್ಧರಿಸಿದರಲ್ಲದೆ ಇನ್ನು ಮುಂದೆ ಯಾವುದೇ ಸಭೆಯ ಅಧ್ಯಕ್ಷಸ್ಥಾನ ಸ್ವೀಕರಿಸಬಾರದೆಂಬ ಮಹತ್ವದ ನಿರ್ಣಯವನ್ನೂ ಕೈಕೊಂಡರು.

ಈ ಭೀಷ್ಮಪ್ರತಿಜ್ಞೆಯ ಕಾರಣಗಳನ್ನು ಹುಡುಕುವುದಕ್ಕಿಂತ ಅವರು ಪುಣೆಯಲ್ಲಿ ಇಳಿದ ಮೇಲೆ ರಾಜೇಂದ್ರನನ್ನು ಭೆಟ್ಟಿಯಾಗಿ ಅವನೆದುರಿಗೆ ಹೇಳಿದ ಕಥೆಯನ್ನು ಕೇಳೋಣ.

ಟ್ರಕ್ಕಿನ ಆಘಾತದಿಂದ ಸ್ಮೃತಿ ಕಳೆದುಕೊಂಡ ಗಂಗಾಧರಪಂತರಿಗೆ ತಿರುಗಿ ಸ್ಮೃತಿ ಬಂದಾಗ ಅವರು ಒಂದು ಆಸ್ಪತ್ರೆಯ ಖಾಸಗೀ ವಾರ್ಡಿನಲ್ಲಿ ಹಾಸಿಗೆಯ ಮೇಲಿದ್ದರು. ಅವರ ಬದಿಗೆ ಶ್ವೇತಾಂಬರಿಯಾದ ನರ್ಸ್ ಹಾಗೂ ಕೊರಳಲ್ಲಿ ಸ್ಟೆತಸ್ಕೋಪ್ ಧರಿಸಿದ ಡಾಕ್ಟರು ನಿಂತಿದ್ದರು.

"ನಿಮಗೆ ಇಷ್ಟರಾಗ ಸ್ಮೃತಿ ಬರತದಂತ ನನಗ ಅನಿಸಿತ್ತು. ಅದಕ್ಕs ನಿಂತಿದ್ದೆ. ಆಗಲಿ. ಸ್ವಲ್ಪ ಹೊತ್ತು ಬಿಟ್ಟು ಬರತೀನಿ, ನೀವು ವಿಶ್ರಾಂತಿ ತಕ್ಕೊಳ್ಳಿ. ಆಮೇಲೆ ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ," ಎಂದು ಮುಗುಳ್ನಗುತ್ತ ಡಾಕ್ಟರು ಹೇಳಿದರು.

"ನಾನೀಗ ಚೆನ್ನಾಗಿದ್ದೇನೆ. ಸ್ವಲ್ಪ ದಣಿದಂತೆ ಮಾತ್ರ ಅನಿಸುತ್ತಿದೆ. ಕೇಳಿರಿ ನಿಮ್ಮ ಪ್ರಶ್ನೆಗಳನ್ನು. ಅದಕ್ಕೇನೂ ಹರಕತ್ತಿಲ್ಲ! ಆದರೆ ನಾನs ಮೊದಲು ತಮಗೊಂದು ಪ್ರಶ್ನೆ ಕೇಳಬೇಕೆಂದಿದ್ದೇನೆ. ನಾನು ಎಲ್ಲಿದ್ದೇನೆ?" ಪಂತರು ಕೇಳಿದರು.

"ಅರೇ, ಅಗದೀ ಹಿಂದೀ ಸಿನೆಮಾದಲ್ಲಿಯ ನಾಯಕನ ಪ್ರಶ್ನೀನs ಕೇಳಿದಿರಲ್ಲ ನೀವು! ಮೈ ಕಹಾಂ ಹೂಂ?" ಎನ್ನುತ್ತ ಡಾಕ್ಟರು ಹೇಳಿದರು: "ನೀವೀಗ ವಿಶ್ವಾಸರಾವ ಆಸ್ಪತ್ರೆಯಲ್ಲಿದ್ದೀರಿ"

ಪಂತರಿಗೆ ಪುಣೆಯಲ್ಲಿಯ ಸುಪ್ರಸಿದ್ಧ ಆಸ್ಪತ್ರೆಗಳೆಲ್ಲ ಗೊತ್ತಿದ್ದುವು. ಆದರೆ ಈ ಆಸ್ಪತ್ರೆಯ ಹೆಸರು ಮಾತ್ರ ಹೊಸದಾಗಿತ್ತು. ಅದರ ಅಡಿಗಲ್ಲು ಸಮಾರಂಭಕ್ಕಾಗಲಿ, ಉದ್ಘಾಟನೆಗಾಗಲಿ ಇಲ್ಲವೆ ಅದು ಹಳೆಯದಾಗಿದ್ದರೆ ಅದರ ಹೊಸ ನಾಮಕರಣ ಸಮಾರಂಭಕ್ಕಾಗಲೀ ಪಂತರು ಅಧ್ಯಕ್ಷರೆಂದು ಹೇಗೆ ಹೋಗಿರಲಿಲ್ಲವೆಂಬುದೇ ಅವರಿಗೆ ತುಸು ಆಶ್ಚರ್ಯವನ್ನುಂಟುಮಾಡಿತು. ಅಂತೆಯೇ ಅವರು ಕೇಳಿದರು: "ಈ ಆಸ್ಪತ್ರೆ ಎಲ್ಲಿದೆ?"

"ವಿಶ್ವಾಸರಾವ ಪೇಠ ಬೀದಿಯಲ್ಲಿ." ಡಾಕ್ಟರು ಇನ್ನಷ್ಟು ತಿಳಿವಾಗಿ ಹೇಳಿದರು. "ಆಸ್ಪತ್ರೆ ಹಾಗು ಈ ಮಾರ್ಗ ಎರಡೂ ಒಂದು ನೂರು ವರ್ಷಗಳಷ್ಟು ಹಿಂದಿನವು. ಈಗ ಆ ಬೀದಿಯಿಂದಲೇ ಆಸ್ಪತ್ರೆಗೆ ಹೆಸರಿಟ್ಟರೋ ಅಥವಾ ಆಸ್ಪತ್ರೆ ಇದ್ದುದರಿಂದ ಆ ಬೀದಿಗೆ ಈ ಹೆಸರು ಬಂದಿತೋ ಎಂಬ ಪ್ರಶ್ನೆಗೆ ನನಗಿನ್ನೂ ಉತ್ತರ ದೊರೆತಿಲ್ಲ. ಕೋಳಿ ಮೊದಲೋ. ತತ್ತಿ ಮೊದಲೋ ಎಂಬಷ್ಟು ಗಹನವಾಗಿದೆ, ಈ ಪ್ರಶ್ನೆ...ಹ್ಹ!...ಹ್ಹ...! ಹ್ಹ...! ತಾವು ಭಾರಿ ಹಾಸ್ಯಚಟಾಕಿ ಹಾರಿಸಿದೆವೆಂದು ಭಾವಿಸಿ ಡಾಕ್ಟರು. ನಗಹತ್ತಿದರು.

"ಅಂದರs ...ನಾನು ಪುಣೆದಾಗ ಇಲ್ಲೇನು?"

ಪಂತರು ವಿಶಾಸರಾವ ಬೀದಿಯ ಹೆಸರನ್ನೂ ಕೇಳಿರಲಿಲ್ಲ.

"ಆಕ್ರಪಾ, ನೀವು ಪುಣೆದಾಗs ಇದ್ದೀರಿ! ಅಲ್ಲ ಗಣೇಶಖಿಂಡಿಯ ಅಡಿವ್ಯಾಗ ನೀವು ಏನು ಮಾಡಲಿಕ್ಕಹತ್ತಿದ್ದಿರಿ? ಸುದೈವದಿಂದ ನೀವು ಹಾಕರ್ಸರಿಗೆ ಸಿಕ್ಕಿರಿ ಛೇಶಾತು. ಇಲ್ಲಾಂದರs...ಈ ಆಸ್ಪತ್ರೆಗಿಂತ..."

"ನಾನು ಅಡಿವ್ಯಾಗ ಗಿಡಿವ್ಯಾಗ ಇದ್ದಿದ್ದಿಲ್ಲ," ಡಾಕ್ಟರರ ಮಾತನ್ನು ನಡುವೆಯೇ ತುಂಡರಿಸುತ್ತ ಪಂತರು ಹೇಳಿದರು. "ನಾನಾಗ [illegible] ನಗರಮಧ್ಯದಲ್ಲಿಯ ರಸ್ತೆಯಲ್ಲೇ-ಬಾಪಟ ಮಾರ್ಗದಲ್ಲಿ."

"ಬಾಪಟ ಮಾರ್ಗ...?" ನರ್ಸ್ ಆಶ್ಚರ್ಯದಿಂದ ಕೇಳಿದಳು. ಆದರೆ ಡಾಕ್ಟರು ಅವಳಿಗೆ ಸನ್ನೆ ಮಾಡಿ ಸುಮ್ಮನಿರಿಸಿ ವಿಷಯ ಬದಲಿಸುತ್ತ ಕೇಳಿದರು: "ಇರಲಿ ಬಿಡ್ರಿ... ಅಲ್ಲ. ನಿಮ್ಮ ಹೆಸರೇನು?... ಊರು ಕೆಲಸ... ವಿಳಾಸ... ಇತ್ಯಾದಿ...?"

"ನನ್ನ ಹೆಸರು, ಗಂಗಾಧರಪಂತ ಗಾಯತೊಂಡೆ, ಇತಿಹಾಸದ ಸಂಶೋಧಕ ಹಾಗು ಪ್ರಾಧ್ಯಾಪಕ..." ಎಂದು ಹೇಳುತ್ತ ತಮ್ಮ ಹೆಸರೂ ಗೊತ್ತಿರದ ಡಾಕ್ಟರಗೆ ಅದೇ ಅರ್ಥದ ಪ್ರಶ್ನೆ ಕೇಳಿದರು. "ನೀವು ಪುಣೇಕ್ಕೆ ಹೊಸಬರಂತ ಕಾಣ್ತದ! ಅಲ್ಲ?"

"ಛೇ... ಛೇ... ನಾನು ಪಕ್ಕಾ ಪುಣೇರೀ-ರೆಪಾ, ಸದಾಶಿವಪೇಠದವ, ಕೇವಲ ಐದು ವರುಷ ಅಭ್ಯಾಸಕ್ಕಂತ ಹಿಂದುಸ್ತಾನ ಬಿಟ್ಟು ಹೊರಗ ಅಂದರ ವಿಲಾಯತಿಗೆ ಹೋಗಿದ್ದೆ," ಎಂದು ಹೇಳುತ್ತ ಡಾಕ್ಟರು ಕೇಳಿದರು.

"ಆದರs... ನೀವು ಇರುವುದೆಲ್ಲಿ ?"

"ಫರ್ಗ್ಯೂಸನ್ ಕಾಲೇಜಿನ ಹಿಂದಿನ ಮರುಣ ಹೌಸಿಂಗ್ ಕಾಲನಿಯೊಳಗ," ಎಂದು ಪಂತರು ವಿಳಾಸ ಹೇಳಿದರು.

"ಅಂದರs... ನೀವು ಮುಂಬಯಿ ಕಡೆಯವರು ಅಂದಂತಾಯಿತು...!"

"ಅಲ್ಲರೀ, ನೀವು ಹಿಂಗ್ಯಾಕ ಮಾಡ್ತೀರಿ ? ಫರ್ಗ್ಯೂಸನ್ ಕಾಲೇಜು ಪುಣೇದಾಗs ಅದ, ಮುಂಬಯಿಯೊಳಗ ಇಲ್ಲ." ಪಂತರು ಬಿಡಲಿಲ್ಲ.

ನರ್ಸ್ ಮತ್ತೆ ಏನೋ ಮಾತನಾಡಬೇಕೆನ್ನುವುದರಲ್ಲಿದ್ದಳು. ಆದರೆ ಡಾಕ್ಟರು ಕಣ್ಣು ಮಿಟುಕಿಸಿ ಅವಳನ್ನು ಮೂಲೆಯಲ್ಲಿ ಕರೆದೊಯ್ದು ಪಿಸು ಮಾತಿನಲ್ಲಿ ಅವಳಿಗೇನೋ ಸೂಚನೆಗಳನ್ನು ಕೊಟ್ಟರು. ಆದರೂ, 'ಮಾನಸಿಕ ಆಘಾತ...ವಾದ ಹಾಕಬಾರದು... ಸುಮ್ಮನೆs ಕೇಳಬೇಕು...' ಇತ್ಯಾದಿ ಕೆಲವು ಶಬ್ದಗಳು ಪಂತರ ತೀಕ್ಷ್ಣ ಕಿವಿಗಳಿಗೆ ಬಿದ್ದಿದ್ದವು. ಡಾಕ್ಟರು ತಿರುಗಿ ಬಂದು ಹೇಳಿದರು: "ಸಾರಿ! ನನ್ನದು ತಪ್ಪಾಯ್ತು." ಆದರೆ ಅವರು ಹೇಳುವ ರೀತಿ ಚಿಕ್ಕ ಮಕ್ಕಳಿಗೆ ತಿಳಿಸಿ ಹೇಳುವಂತಿತ್ತು. ಅವರು ಮತ್ತೆ ನಸುನಗುತ್ತ ನುಡಿದರು: "ನಿಮ್ಮ ಆ ಇತಿಹಾಸ ಮಾತ್ರ ನನಗೆ ಮೊದಲಿನಿಂದ ಕಠಿಣ ವಿಷಯ ಅನಿಸ್ತಿತ್ತರೆಪಾ! ಆ ಹದಿನೇಳು ಪೇಶವೆಗಳು, ಇಪ್ಪತ್ತು ಮೊಗಲರ ಹೆಸರು ಪಾಠ ಮಾಡೂತನಕಾ ಸೊಂಡಿ ಒಣಗಿ ಹೋಗ್ತಿತ್ತು! ಇನ್ನ ಉಳಿದದ್ದಂತೂ ದೂರs ಉಳೀತು!"

'ಹದಿನೇಳು ಪೇಶವೇ ? ಇಪ್ಪತ್ತು ಮೊಗಲಬಾದಶಹರು ? ಈ ಹುಡುಗನ ಇತಿಹಾಸ ಕಚ್ಚಾ ಅದನೋ ಏನ ಗಣೇತೊ ?' ಪಂತರಿಗೆ ಸಮಸ್ಯೆಯಾಯಿತು. ಈ ಹುಚ್ಚ ಡಾಕ್ಟರೊಂದಿಗೆ ವಾದ ಹಾಕುವುದರಲ್ಲಿ ಏನೂ ಅರ್ಥವಿಲ್ಲವೆಂದುಕೊಂಡರು, ಆದರೂ ಅವರಿಗೊಂದು ವಿಚಿತ್ರ ಪ್ರಶ್ನೆಯನ್ನು ಕೇಳಿದರು: "ಇವತ್ತ ತಾರೀಖೆಷ್ಟು... ?"

"ಇವತ್ತ ಶ್ರಾವಣ ವದ್ಯ ದಶಮೀ, ಶಕೆ ೧೮೯೭. ನಿಮಗ ಮುಂಬಯಿ ತಾರೀಖು ಬೇಕಂದರ, ಇಂದು ಸಪ್ಟಂಬರ್ ಒಂದು, ೧೯೬೫." ಡಾಕ್ಟರು ತಕ್ಷಣ ಉತ್ತರಿಸಿದರು.

'ಪುಣೆ ಮತ್ತು ಮುಂಬಯಿ ಎರಡು ಊರುಗಳಲ್ಲಿ ಬೇರೆ ಬೇರೆ ಕ್ಯಾಲೆಂಡರುಗಳ ಅರ್ಥ ಏನು ? ಅಥವಾ ನಾನು ಇತಿಹಾಸದ ಸಂಶೋಧಕರೆಂದು ಡಾಕ್ಟರರು ಬೇಕೆಂದೇ ಭಾರತೀಯ ಕ್ಯಾಲಂಡರಿನ ತಿಥಿಯನ್ನು ಹೇಳಿದರೆ ? ಆದರೆ ಹಾಗೆ ಹೇಳುವಾಗ ಡಾಕ್ಟರ ಮುಖದ ಮೇಲೆ ತುಂಟತನವೂ ಇರಲಿಲ್ಲ. ಲೆಕ್ಕ ಹಾಕಿ ನೋಡಿದರೆ ತಿಥಿ ಕೂಡ ಸರಿಯಾಗಿತ್ತು.

ಈ ಹೊತ್ತಿಗೆ ಪಂತರಿಗೆ ಟ್ರಿಕ್ಕಿನ ಆಘಾತವಾಗಿ ಒಂದು ರಾತ್ರಿಯಷ್ಟೆ ಉರುಳಿತ್ತು.

*

ಡಾಕ್ಟರು ಪಂತರಿಗೆ ವಂದಿಸಿ ಹೋದವರು ಮರುದಿನ ಬೆಳಿಗ್ಗೆ ಏಳು ಗಂಟೆಗೆ ಪ್ರತ್ಯಕ್ಷರಾದರು. ಈ ಮಧ್ಯದ ಸಮಯದಲ್ಲಿ ಪಂತರಿಗೆ ಸುಮ್ಮನೆ ಮಲಗಿಕೊಂಡಿರಲು ಹೇಳಲಾಗಿತ್ತು. ಓದು ಪೂರ್ಣ ನಿಷೇಧಿಸಲ್ಪಟ್ಟಿತ್ತು. ಆದ್ದರಿಂದ ಪಂತರಿಗೆ ಕೇವಲ ವಿಚಾರ ಮಾಡುವುದರ ಹೊರತು ಬೇರೇನೂ ಸಾಧ್ಯವಿರಲಿಲ್ಲ. ಆದರೆ ಎಷ್ಟು ವಿಚಾರ ಮಾಡಿದರೂ ಡಾಕ್ಟರ ಅಸಂಬದ್ಧ ಉಪಚಾರದ ಅರ್ಥ ಪಂತರಿಗೆ ಆಗಲಿಲ್ಲ.

ಡಾಕ್ಟರು ಪಂತರ ಸಂಪೂರ್ಣ ವೈದ್ಯಕೀಯ ಪರೀಕ್ಷೆಯನ್ನು ಮಾಡಿದರು. ಪರೀಕ್ಷೆ ಮಾಡುವಾಗ ಅವರ ಬಾಯಿ ಮಾತ್ರ ತೆಪ್ಪಗಿರಲಿಲ್ಲ. ಹದಿನೈದು ನಿಮಿಷಗಳ ಪರೀಕ್ಷೆಯಲ್ಲಿ ಏನಿಲ್ಲವೆಂದರೂ ಸುಮಾರು ಹದಿನೈದು ಜೋಕ್ಸ್ ರೋಗಿಯ ಕಿವಿಯ ಮೇಲೆ ಬೀಳಬೇಕೆಂದು ಅವರ ಅಭಿಪ್ರಾಯವಾಗಿತ್ತು. ಕೊನೆಗೆ ಅವರು ಹೇಳಿದರು: "ಪ್ರೊಫೆಸರ್ ಸಾಹೇಬರs ನೀವು ಇನ್ನೇನೂ ಕಾಳಜೀ ಮಾಡುವ ಕಾರಣವಿಲ್ಲ. ನಿಮ್ಮ ದೈವ ಭಾಳ ಛಲೋ ಇತ್ತಂತ ಸರಿಯಾದ ಸಮಯಕ್ಕ ನಮಗ ನಿಮ್ಮ ಸಂಶೋಧನ ಆಯಿತು. ಇಲ್ಲದಿದ್ದರ ನೀವೂ ಇತಿಹಾಸ-

ದೊಳಗs ಜಮಾ ಆಗಿಬಿಡತ್ತಿದ್ದಿರಿ... ಹ್ಹ...ಹ್ಹ...ಹ್ಹ...!... ಆಗಲಿ, ನಾನು ನೈಟ್‌ಡ್ಯೂಟಿಗ್ದೆ ಈಗ ಮನೆಗೆ ಹೋಗ್ತೀನಿ. ಬೇಕಿದ್ರೆ ನಿಮ್ಮನ್ನ ಎಲ್ಲಿ ಬಿಡಬೇಕು ಹೇಳಿ?"

ಗಂಗಾಧರಪಂತರು ಡಾಕ್ಟರಿಗೆ ಕೃತಜ್ಞತೆಗಳನ್ನು ಅರ್ಪಿಸಿದರು. ಆಸ್ಪತ್ರೆಯ ಸಮವಸ್ತ್ರಗಳನ್ನು ಕಳಚಿ ಹಿಂದಿನ ತಮ್ಮ ಸೂಟು ಬೂಟಿನಲ್ಲಿ ಪಂತರು ಡಾಕ್ಟರೊಂದಿಗೆ ಹೊರಟರು. ಇನ್ನೊಂದರ್ಧ ಗಂಟೆ ಡಾಕ್ಟರ ಅಸಂಬದ್ಧ ಜೋಕ್ಸ್ ಕೇಳಲು ಅವರು ಮನಸ್ಸನ್ನು ಗಟ್ಟಿ ಮಾಡಿಕೊಂಡರು. ಆಸ್ಪತ್ರೆಯಿಂದ ಹೊರಗೆ ಬರುವಾಗ ಅಲ್ಲಿಯ ವಾತಾವರಣ, ಕರ್ಮಚಾರಿಗಳ ಯುನಿಫಾರ್ಮ್, ಬೇರೆ-ಬೇರೆ ವಿಭಾಗಗಳಿಗೆ ಕೊಟ್ಟ ಹೆಸರುಗಳು ಇವೆಲ್ಲ ಅವರಿಗೆ ಅಪರಿಚಿತ ಎನಿಸಿದುವು. ಅಲ್ಲಲ್ಲಿ ನಾನಾತರದ ಸೂಚನೆಗಳನ್ನು ಉರ್ದು, ಇಂಗ್ಲೀಷ್, ಮರಾಠಿ ಭಾಷೆಯಲ್ಲಿ ಬರೆದಿದ್ದರು. ಕೆಲವು ಸ್ಥಳಗಳಲ್ಲಿ ಹಿಂದೂಸ್ತಾನಿಯನ್ನೂ ಉಪಯೋಗಿಸಿದ್ದರು. ಇದೆಲ್ಲ ಯೋಚಿಸುತ್ತಿರುವಾಗ ಡಾಕ್ಟರು ಬಾಗಿಲಲ್ಲಿ ತಮ್ಮ ಕಾರನ್ನು ತೆಗೆದುಕೊಂಡು ಬಂದರು. ಕಾರಿನ ಮಾಡೆಲ್ ಕೂಡ ಪಂತರಿಗೆ ಬೇರೆಯಾಗಿಯೇ ಕಂಡಿತು. ಸಾಕಷ್ಟು ದೊಡ್ಡದಾಗಿದ್ದ ಆ ಕಾರಿನ ಹೆಸರು 'ಚಕ್ರವರ್ತಿ' ಎಂದಿತ್ತು. ಅದನ್ನು ನೋಡಿ ಪಂತರು: "ಇದು ಹೊಸ ಮಾಡೆಲ್ ಏನು?" ಎಂದು ಕೇಳಿದರು.

"ಛೇ! ಎಷ್ಟೋದಿನ, ಈ ಮಾಡೆಲ್ ಯಾವಾಗ ಮುರಿದೀತೆಂಬುವ ಭಯ ನನಗ ಯಾವಾಗಲೂ ಇರತದ. ಬದಿ ಮಾಡಿ ಫಲೋ ಇದು ಮಾರ್ದುವು." ಅವರತ್ತ ಉತ್ಸುಕರಾಗಿ ನೋಡುತ್ತ ಡಾಕ್ಟರು ಮತ್ತೆ ಹೇಳಿದರು, "ಗಾಬರಿಯಾಗಬೇಡಿ ಸಾಹೇಬರs ಕ್ಷಮಿಸಿರಿ, ನಾನು ಇನ್ನೂ ನನ್ನ ಪರಿಚಯ ನಿಮಗ ಮಾಡಿಕೊಟ್ಟಿಲ್ಲ. ನನ್ನ ಹೆಸರು ಅರವಿಂದ ಮೋಡಕ; ಸ್ವಾರ್‌ಗೇಟಿನ ಹತ್ತಿರ ಇರುತ್ತೇನೆ."

"ಅಂದಮ್ಯಾಲ ನಿಮಗ ಎಸ್. ಟಿ. ಸ್ಟ್ಯಾಂಡಿನ ತ್ರಾಸ ಆಗ್ತಿರಬೇಕಲ್ಲ?"

"ಎಸ್. ಟಿ. ಸ್ಟ್ಯಾಂಡ್ ಅಂದರ ಏನ್ರೀ?" ಡಾಕ್ಟರರು ಪ್ರತಿ ಪ್ರಶ್ನೆ ಹಾಕಿದರು. ಮತ್ತೆ ಪಂತರಿಗೆ ಪೇಚಾಟಕ್ಕಿಟ್ಟುಕೊಂಡಿತು. ತಾವು ಕೇಳಿದ ಔಪಚಾರಿಕ ಪ್ರಶ್ನೆಗಳು ಕೂಡ ಡಾಕ್ಟರಿಗೆ ವಿಚಿತ್ರವಾಗಿ ತೋರುತ್ತಿವೆಯಲ್ಲ! ಆದರೂ ಹೇಗೋ ಅವರು ಡಾಕ್ಟರಿಗೆ ಉತ್ತರ ಕೊಟ್ಟರು... "ಎಸ್. ಟಿ. ಅಂದರs... ಸ್ಟೇಟ್ ಟ್ರಾನ್ಸ್‌ಪೋರ್ಟ್... ಸರಕಾರೀ ಬಸ್ಸುಗಳು ಬಿಡತಾವಲ್ಲ... ಸ್ವಾರ್‌ಗೇಟಿನಿಂದ...!"

"ನೀವು ಹೇಳುವ ಬಸ್ಸುಗಳು ರೇಲ್ವೆ ನಿಲ್ದಾಣದಿಂದಲೂ ಬಿಡತಾವ. ಆದರ ಅವು

ಸರಕಾರೀ ಅಲ್ಲ, ಖಾಸಗೀ ಕಂಪನೀವು. ಸ್ವಾಟಗೇಟಿನೊಳಗೆ ಅವರ ಹೆಸರಿಗೆ ತಕ್ಕಂತೆ ಒಂದು ಗೇಟು ಅದ, ಒಬ್ಬ ಸ್ವಾರನೂ ಇದ್ದಾನೆ. ಇರಲಿ. ಆದರ ನಾನು ನಿಮ್ಮನ್ನ ಎಲ್ಲಿ ಬಿಡಲಿ?" ಎಂದು ಡಾಕ್ಟರು ಆಸ್ಪತ್ರೆಯ ಆವಾರದಿಂದ ತಮ್ಮ ಕಾರನ್ನು ಹೊರಗೆ ತರುತ್ತ ಕೇಳಿದರು.

ಬರುವಾಗ ಪಂತರಿಗೆ ಈ ಪರಿಸರವು ಅಪರಿಚಿತವೆನಿಸಿತ್ತು. ಇದ್ದರಿಂದ ತಾವು ಎಲ್ಲಿ ಹೋಗಬೇಕೆಂಬುದನ್ನು ಹೇಳಲು ಅವರು ಅಸಮರ್ಥರಾಗಿದ್ದರು. ಈಗ ಹೇಳಿದರು. "ಶನಿವಾರ ವಾಡೆಯ ಮೇಲಿಂದ ನಡೀರಿ, ಅಲ್ಲಿ ನಿಮಗ ನನ್ನ ಮನೆಯ ದಾರಿಯನ್ನು ಹೇಳುವೆ." ಕನಿಷ್ಠ ಶನಿವಾರ ವಾಡೆಯು ಗುರುತಾದರೂ ಅವರ ಮಾತು ಡಾಕ್ಟರಲ್ಲಿ ಗೊಂದಲವಾಗಲಿಕ್ಕಿಲ್ಲ! ಅದರಂತೆ ಡಾಕ್ಟರು ಕೂಡ ಶನಿವಾರ ವಾಡೆ ಅಂದರೆ ಏನು? ಎಂದು ಕೇಳಲಿಲ್ಲ ಪಂತರಿಗೆ ಬದುಕಿದೆ ಎನಿಸಿತು.

"ಕ್ಷಮಿಸಿ, ಇತಿಹಾಸ ವಿಷಯದ ಬಗ್ಗೆ ನಿನ್ನೆ ನಾ ಮಾಡಿದ್ದು ತುಸು ಅತಿ ಅನಿಸಬಹುದು. ಆದರೆ ಒಂದು ಮಾತು ಮಾತ್ರ ನಾ ಒಪ್ಪಲೇಬೇಕು. ನಾ ಸಣ್ಣವನಿದ್ದಾಗ ನಿಮ್ಮದೇ ಹೆಸರಿನ ಒಬ್ಬರು ಬರೆದ ಪುಸ್ತಕಾನ ನಮಗ ಹಚ್ಚಿದ್ದರು. ಅದು ವಿದ್ವತ್ಪೂರ್ಣವೆನಿಸುವುದರ ಜೊತೆಗೇನೆ ಮಕ್ಕಳಿಗೆ ಚೆನ್ನಾಗಿ ತಿಳಿಯುವಂತಿತ್ತು." ಡಾಕ್ಟರು ಒಂದು ರೇಲ್ವೆ ಸೇತುವೆಯ ಕೆಳಗಿನಿಂದ ಹೋಗುತ್ತ ಹೇಳುತ್ತಿದ್ದರು. "ಮುಂದ ಆ ಗಾಯತೋಂಡೆಯವರು ಅಕಾಲ ಮರಣಕ್ಕ ತುತ್ತಾದರು. ಅವರ ಹಿಂದೆಯೇ ಅವರ ಪುಸ್ತಕಾನೂ ಮಾಯವಾಯಿತು! ಆ ಐದು ಖಂಡಗಳ ಪುಸ್ತಕದಲ್ಲಿ ನನಗ ಮಾತ್ರ ಮೂರು ಖಂಡಗಳು ಹೇಗೋ ಪಠನ ಆದುವು ನೋಡ್ರಿ."

ಗಂಗಾಧರಪಂತರು ಹತ್ತು ವರುಷಗಳಷ್ಟು ಹಿಂದೆಯೇ ಶಾಲೆಯ ಮಕ್ಕಳಿಗಾಗಿ ಭಾರತ ಇತಿಹಾಸವನ್ನು ಬರೆದಿದ್ದರು. ಐದು ಖಂಡಗಳಲ್ಲಿದ್ದ ಆ ಪುಸ್ತಕದ ಹೆಸರು 'ಭಾರತದ ಸಂಕ್ಷಿಪ್ತ ಇತಿಹಾಸ' ಎಂದಿತ್ತು. ಪಂತರು ತುಸು ಗಾಬರಿಯಿಂದಲೇ ಕೇಳಿದರು.

"ಆ ಪುಸ್ತಕದ ಹೆಸರೇನಿತ್ತು? ಈ ಗಾಯತೋಂಡೆ ಯಾವಾಗ ಸತ್ತರು...?"

"ಪುಸ್ತಕದ ಹೆಸರು ನನಗಷ್ಟು ಪಕ್ಕಾ ನೆನಪಿಲ್ಲ. ಆದರೂ 'ಹಿಂದುಸ್ಥಾನದ ಸಂಕ್ಷಿಪ್ತ ಇತಿಹಾಸ' ಅಂತೇನೋ ಇರಬೇಕು. ನಮಗ ವಿದ್ಯಾರ್ಥಿಗಳಿಗೆಲ್ಲ ಸೋಜಿಗವಾಗಿತ್ತು. ಅಲ್ಲರಿ, ಅಂಥ ದಪ್ಪ, ಒಂದು ಮಣ ಒಜ್ಜೆಯಿದ್ದ ಪುಸ್ತಕಾನs ಸಂಕ್ಷಿಪ್ತ ಇತಿಹಾಸ ಅಂದರ, ಇನ್ನ ವಿಸ್ತಾರ ಇತಿಹಾಸ ಎಷ್ಟು ಇರಬೇಕಂತ ನಾವೆಲ್ಲ ತರ್ಕ ಮಾಡತಿದ್ವಿ. ನನಗ ಅನಿಸುವ ಮಟ್ಟಿಗೆ ಅವರು ಹೀಂಗs ಒಂದು ವಿಸ್ತಾರ ಇತಿಹಾಸ ಬರೆಯುವುದರಲ್ಲೇ ಒಂದು ದಿವಸ ಸಂಪುಷ್ಟಕ್ಕ ಬಂದಿರಬೇಕು," ಡಾಕ್ಟರು ಮನದಲ್ಲಿ ಏನೋ ಲೆಕ್ಕ ಹಾಕಿದಂತೆ ಮಾಡಿ ಮತ್ತೆ ಹೇಳಿದರು. "ಆಯ್ತು, ನನಗ ನೆನಪು ಇದ್ದಂತೆ ಅವರು ಸತ್ತು ಸುಮಾರು ಹದಿನೈದು ವರುಷ ಆಗಿರಬೇಕು ನೋಡ್ರಿ, ಅಲ್ಲರೀ, ಅವರ ಪರಿಚಯ ನಿಮಗಿಲ್ಲ? ಖರೇ ಅಂದ್ರ ಇದು ನನಗ ಆಶ್ಚರ್ಯ ಅನಸತದರೆಪಾ!" ತಾವು ಒಂದು 'ಟ್ರ್ಯಾಕ್‌ಪ್ಲೇಸ್' ಉಪಾಯ ಬಳಸಿದರೆಂಬ ಕಲ್ಪನೆ ಡಾಕ್ಟರಿಗೆ ಕಿಂಚಿತ್ತಾದರೂ ಬರಲಿಲ್ಲ.

ಗಂಗಾಧರಪಂತರು ಡಾಕ್ಟರರಿಗೆ ಉತ್ತರ ಕೊಡಲಿಲ್ಲ. ತಮ್ಮ ಹೆಸರಿನ ಒಬ್ಬ ಇತಿಹಾಸಕಾರ ತಮ್ಮಂತೆಯೇ ಪುಸ್ತಕಗಳನ್ನು ಬರೆದು ಹೋಗುತ್ತಾನೆಂದರೆ ಹೇಗೆ? ಅವರಿಗೆ ಈ ಎರಡನೆಯ ಗಾಯತೋಂಡೆಯ ಪರಿಚಯ ಇರಲಿಲ್ಲ. ಅವರಿಗೊಂದು ಕ್ಷಣ ವಿಚಿತ್ರ ಸಂಶಯವೂ ಬಂತು. ತಾವೇ ಗಾಯತೋಂಡೆ ಅಲ್ಲವಾಗಿದ್ದರೆ? ಮತ್ತೆ ಅವರು ಡಾಕ್ಟರರನ್ನು ಅಂದಿನ ತಾರೀಖೇನೆಂದು ಕೇಳಿದರು. ಡಾಕ್ಟರು ಗಡಿಯಾರ ನೋಡಿಕೊಳ್ಳುತ್ತ ಹೇಳಿದರು. "ಶ್ರಾವಣ ವದ್ಯ ಏಕಾದಶೀ, ಶಕೆ ೧೮೯೭,"

ಅಂದರೆ ವರ್ತಮಾನದಲ್ಲಿ ಅದು ಸಪ್ಟೆಂಬರ ೨, ೧೯೭೫ ಎಂದಾಗಿತ್ತು! ಅವರಿಗಿಷ್ಟು

ಯಾವುದರ ಮೇಲೆಯೂ ಧಕ್ಕೆ ಆಗದಂತಿದ್ದುದರಿಂದ ಗಂಗಾಧರಪಂತರು ತಮ್ಮ ಮುಂದಿನ ವಿಚಾರಗಳಿಗೆ ಬ್ರೇಕ್ ಹಾಕಿದರು. ಅಷ್ಟರಲ್ಲಿ ದೂರದಿಂದ ಶನಿವಾರ ವಾಡೆಯ ಕೋಟೆಯ ಗೋಡೆಗಳು ಕಾಣತೊಡಗಿದವು.

"ಇದು ವಾಡೆಯ ಹಾಗಿದೆ. ಸರಕಾರದಲ್ಲಿಂದ ಬಂದರೋ? 'ಹಿಜ್ ಪರ್ ಪ್ರೇದ ಸ್ತ್ರೀ ! ಸಾದರ ನಡೆದಿದೆಯೋ?" ದೂರದಿಂದ ಕಾಣುವ ವ್ಯಕ್ತಿಯೊಬ್ಬನತ್ತ ನೋಡುತ್ತ ಪಂತರು ಡಾಕ್ಟರನ್ನು ಕೇಳಿದರು.

"ಇವತ್ತಿನ್ನಿಲ್ಲ ವಿಶೇಷವಿಲ್ಲ, ಇವರೆಲ್ಲ ದಿನಾ ಇಲ್ಲೇ ಇರುತ್ತಾರೆ. ಅವರ್ಸ್ ಇದ್ದಾರೆ." ಎಂದು ಡಾಕ್ಟರರು ಹೇಳುವಷ್ಟರಲ್ಲಿ ಕಾರು ವಾಡೆಯ ಮುಂದುಗಡೆ ಬಂದಿತು. ಪಂತರಿಗೆ ಆಶ್ಚರ್ಯದ ಇನ್ನೊಂದು ಆಘಾತವಾಯಿತು.

ಶನಿವಾರವಾಡೆಯು ಅಖಂಡ ಕಟ್ಟಡ ಯಾವುದೇ ಧಕ್ಕೆಯಿಲ್ಲದೆ, ಎಲ್ಲಿಯೂ ಮುಕ್ಕಾಗದೆ ಪೇಶವಾಯಿ ಥಾಟಿನಲ್ಲಿ ಪಂತರ ಮುಂದೆ ನಿಂತಿತ್ತು. ಪಂತರಿಗೆ ತಲೆ ಗಿರ್ರೆಂದು ತಿರುಗಿದಂತಾಯಿತು. ಅದನ್ನು ಸರಿಸುತ್ತ ಡಾಕ್ಟರಿಗೆ ತುಸು ಹೊತ್ತು ಕಾರನ್ನು ನಿಲ್ಲಿಸಲು ಹೇಳಿದರು. ಕೆಳಗಿಳಿದು ಸಾವಧಾನದಿಂದ ಅವರು ಗಾಡಿಯಿಂದ ವಾಡೆಯತ್ತ ಬಂದು ಮುಖ್ಯ ದ್ವಾರದತ್ತ ನೋಡಿದಾಗ ಅದರ ಮೇಲ್ಗಡೆ ಇದ್ದ ನೋಟೀಸನ್ನು ಓದಿದರು.

"ಇದು ಪೇಶವೆಗಳ ಐತಿಹಾಸಿಕ ವಾಡೆ, ಸಾರ್ವಜನಿಕರಿಗಾಗಿ ಮಧ್ಯಾಹ್ನ ಒಂದರಿಂದ ಐದರ ವರೆಗೆ ತೆರೆದಿಡಲಾಗುತ್ತದೆ. ಪ್ರವೇಶ ಧನ ರೂ. ೧. ಹನ್ನೆರಡು ವರ್ಷದೊಳಗಿನ ಮಕ್ಕಳಿಗೆ ಪ್ರವೇಶಧನವಿಲ್ಲ.

-ವ್ಯಂಕೋಜಿ ನಾಯಿಕ
ಕೊತವಾಲ, ಪುಣೆ."

ಈ ನೋಟೀಸು ಉರ್ದುವಿನಲ್ಲಿ ಕೂಡ ಇತ್ತು. ಐತಿಹಾಸಿಕ ಕಾಗದ ಪತ್ರಗಳ ಅಧ್ಯಯನದಿಂದ ಅವರು ಯಾವ ಚಿತ್ರವನ್ನು ಮನಸ್ಸಿನಲ್ಲಿ ರೂಪಿಸಿಕೊಂಡಿದ್ದರೋ ಆ ಶನಿವಾರವಾಡೆ ಇಂದು ಅವರ ಕಣ್ಣುಗಳ ಮುಂದೆ ನಿಂತಿದೆ. ಆದರೆ ಒಳಗೆ ಹೋಗಿ ವಾಡೆಯನ್ನು ನೋಡುವ ಇಚ್ಛೆಯನ್ನು ಅವರು ಅನಿವಾರ್ಯವಾಗಿ ತಡೆಯಬೇಕಾಯಿತು, ಯಾಕೆಂದರೆ ಇನ್ನೂ ಮುಂಜಾವಿನ ಸಮಯವಾಗಿತ್ತು.

"ಇನ್ನು ಎಲ್ಲಿಗೆ ಹೋಗುವುದು?" ಎಂಬ ಡಾಕ್ಟರ ಪ್ರಶ್ನೆಯಿಂದ ಅವರು ಮತ್ತೆ

ವಾಸ್ತವಲೋಕಕ್ಕೆ ಇಳಿದರು. ಈಗವರು ತಿರುಗಿ ಒಂದು ಕಾರಿನಲ್ಲಿ ಕುಳಿತು ತಮ್ಮ ಗೃಹಾಭಿಮುಖವಾಗಿ ಮಾರ್ಗದರ್ಶನ ಪ್ರಾರಂಭಿಸಿದರು. ಆದರೆ ಮತ್ತೆ ಅವರ ಪರಿಚಯದ ಪುಣೆ ನಗರ ಬಹುಬೇಗ ಹಿಂದುಳಿಯಿತು. ಡೆಕ್ಕನ್ ಜಿಮಖಾನಾ ಬರುವವರೆಗೂ ಅವರಿಗೆ ಬೇರೊಂದು ಪಟ್ಟಣದಲ್ಲಿದ್ದಂತೆ ಭಾಸವಾಗಿತ್ತು. ಫರ್ಗ್ಯುಸನ್ ಕಾಲೇಜು ಇದ್ದ ಸ್ಥಳದಲ್ಲೀಗ ದಟ್ಟ ಅಡವಿ ಇತ್ತು. ಆ ಭಾಗಕ್ಕೆ ಬಂದಾಗ ಕಾರು ಹೋಗಬಲ್ಲ ದಾರಿಯೂ ಮುಗಿದಿತ್ತು. ಡಾಕ್ಟರು ಕಾರನ್ನು ಅನಿವಾರ್ಯವಾಗಿ ನಿಲ್ಲಿಸಿದರು. ಈ ಹುಚ್ಚ ಪ್ರಾಧ್ಯಾಪಕ ತಮ್ಮನ್ನು ಎಲ್ಲಿ ತಂದನೆಂಬುದು ಅವರಿಗೂ ತಿಳಿಯಲಿಲ್ಲ. ಮತ್ತೆ ಮಂತರ ಬುದ್ಧಿ ಸ್ಥಿಮಿತದಲ್ಲಿರಲಿಕ್ಕಿಲ್ಲವೇ?

ಮಂತರಿಗೆ ತುಸು ಹೊತ್ತು ಏನು ಮಾಡಲೂ ತಿಳಿಯಲಿಲ್ಲ. ಈ ಭಾಗದಲ್ಲಿದ್ದ ಜನವಸತಿ, ಕಟ್ಟಡಗಳು, ಮನೆಗಳು, ಅಂಗಡಿಗಳು ಒಮ್ಮೆಲೇ ಎಲ್ಲಿ ಹೋದುವು? ತಮ್ಮ ಮನೆ ಏನಾಯಿತು? ಇನ್ನು ಎಲ್ಲಿ ಹೋಗಬೇಕು...? ಅವರೀಗ ಗಾಬರಿಯಾಗಿದ್ದರು.

ಆದರೆ ಇದೆಲ್ಲ ಕೆಲವೇ ನಿಮಿಷಗಳು ಮಾತ್ರ! ಬಹು ಬೇಗ ಅವರ ಮುಖದ ಮೇಲೆ ಒಂದು ನಿರ್ಧಾರದ ಭಾವ ಕಾಣಹತ್ತಿತು...

"ಡಾಕ್ಟರs... ನೀವು ನನ್ನನ್ನ ಹುಚ್ಚ... ಅರೆವು ಮರೆವು ಆಗಿದವ... ಇಲ್ಲ ಚಕ್ರಮ್ ಅಂತ ತಿಳಕೋತಿರಬೇಕು. ಆದರ, ಖರೇ ಅಂದರ ಮನಸ್ಥಿತಿ ಹಾಂಗಿಲ್ಲ. ಖರೇ ಪರಿಸ್ಥಿತಿ ಏನದ ಅನ್ನೋದು ನನ್ನದು ನನಗೆ ಹೇಳಲಿಕ್ಕೆ ಬರಲೊಲ್ಲದು. ಮೊನ್ನಿನ ತನಕ ಈ ಭಾಗದಲ್ಲಿಯ ಗಲ್ಲಿ ನಾನೇ ನೋಡೀನಿ. ನನ್ನ ಮನೆ ಇಲ್ಲಿಂದ ದೂರ ಇದ್ದಿಲ್ಲ. ನನ್ನ ಗೆಳೆಯರೆಲ್ಲ ಇಲ್ಲಿಯೇ ಇರುತ್ತಿದ್ದರು. ಈ ಭಾಗವೆಲ್ಲಾ ನಿರ್ಜನ ಹೇಗಾಯಿತು? ಈ ಅಡವಿ ಎಂದಿನಿಂದ, ಎಲ್ಲಿಂದ ಬಂತು? ಅಥವಾ ನಾವೇನಾದರೂ ಕನಸು ಕಾಣುತ್ತಿರುವೆವೇ...? ಡಾಕ್ಟರs... ನನಗೇನೂ ತಿಳೀಲಾರದ್ಹಂಗ ಆಗೇದ..."

ಡಾಕ್ಟರು ಸಹಾನುಭೂತಿ ತೋರಿಸುತ್ತ ಕೇಳುತ್ತಿದ್ದರು. ಮಂತರು ಮಾತ್ರ ಮುಂದೆ ಹೇಳಿದರು: "ನನ್ನ ಮಗ, ಮುಂಬಯಿಯಲ್ಲಿ ಫೋರ್ಬ್ಸ್-ಫೋರ್ಬ್ಸ್ ಆ್ಯಂಡ್ ಕ್ಯಾಂಪ್‌ಬೆಲ್ ಕಂಪನಿಯೊಳಗ ಕೆಲಸ ಮಾಡ್ತಾನ, ಅಥವಾ ಮಾಡತಿದ್ದ ಅಂತ ಇಂದು ಹೇಳಬಹುದು. ಅವನೇ ಒಬ್ಬ ನನ್ನ ಅತಿ ಹತ್ತಿರದ ಸಂಬಂಧಿಕ. ಅದಕ್ಕ ನಾನು ಇಂದs ಅವನ ಹತ್ತಿರ ಹೋಗಲೇನೂ ಅಂತ... ಆದರs ಆ ಕಂಪನೀಯುರೇ ಅಲ್ಲಿ ಅದ ಏನ್ರೀ ಡಾಕ್ಟರ?"

"ಹೌದು ಆ ಹೆಸರಿನ ಒಂದು ದೊಡ್ಡ ಕಂಪನಿ ಮುಂಬಯಿಯೊಳಗದ. ನಿಮ್ಮ ನಿರ್ಣಯನೂ ಸರೀನs," ಗಡಿಯಾರದತ್ತ ನೋಡಿಕೊಳ್ಳುತ್ತ ಡಾಕ್ಟರು ಹೇಳಿದರು: "ಈಗ ಸದ್ಯ ಬೇಕಾದರ 'ಜೇಜಾಮಾತಾ ಎಕ್ಸ್‌ಪ್ರೆಸ್' ಅದ. ಒಂದು ತಾಸಿನೊಳಗ ಮುಂಬಯಿಕ್ಕ ಬಿಡತದ. ನಡೀರಿ ನಿಮ್ಮನ್ನ ನಾನು ಸ್ಟೇಶನ್ನಿನ ತನಕ ಬಿಟ್ಟು ಬರತೀನಿ ಬೇಕಾದರ... ಆದರs ತಿಕೀಟಿಗೆ ದುಡ್ಡು ಅದs ಏನು ನಿಮ್ಮ ಹತ್ತಿರ?"

ಮಂತರು ಜೇಬಿನಿಂದ ಪಾಕೀಟನ್ನು ತೆರೆದರು. ಅದರಲ್ಲಿ ಹತ್ತರ ಹದಿನೈದು ನೋಟುಗಳಿದ್ದವು. ಆದರೆ ಅವುಗಳನ್ನು ನೋಡಿ ಡಾಕ್ಟರೆಂದರು. "ಅರೇ,... ಈ ನೋಟುಗಳನ್ನ ಎಲ್ಲಿಂದ ತಂದಿರಿ? ಬೇರೇನs ಇವೆಯಲ್ಲ! ಇವುಗಳನ್ನ 'ಮೊನಾಪಲಿ' ಆಡಲಿಕ್ಕೆ ಉಪಯೋಗಿಸಬಹುದು ನೋಡ್ರಿ. ಇವು ಇಲ್ಲೀ ನಡಿಯೂದಿಲ್ಲ. ಇತ್ತ ನೋಡ್ರಿ, ನನ್ನ ಹತ್ತಿರ ಇದ್ದ ಒಂದಿಷ್ಟು ಈ ಖರೇ ನೋಟುಗಳನ್ನ ತಗೋಳ್ರಿ... ನಿಮ್ಮಲ್ಲಿಯ ಕೆಲವನ್ನು ಬೇಕಾದರೆ ನನಗೆ ಕೊಡ್ರಿ, ನನ್ನ ಮಕ್ಕಳಿಗೆ ಆಡಲಿಕ್ಕೆ ಬರತಾವ."

ಮಂತರು ಮಾತನಾಡದೆ ನೋಟುಗಳ ವಿನಿಮಯ ಮಾಡಿಕೊಂಡರು. ನೂರರ ನೋಟಿನ ಮೇಲೆ ಕುತುಬಮಿನಾರದ ಚಿತ್ರವಿತ್ತು. ಮತ್ತ ... ಮೊಸ್ತಾನಕೆ ಶಾಹನ್'ಶಾಹ ಕೆ ಖಜಾಂ-

ಟಿಕೆಟ್ ಪ್ರಿಸ್ಟಾತ್ ಸೆ ಇಸಕೆ ಲಾನೆವಾಲೆಕೊ ಸೌ ರುಪಯೇ ದೇನೇಕಾ ವಾದಾ ಕರತಾ ಹೂಂ ಎಂದು ಹಿಂದಿಯಲ್ಲಿ ಹಾಗೂ ಉರ್ದುವಿನಲ್ಲಿ ಬರೆಯಲಾಗಿದ್ದಿತು. ಹಾಗೂ ಕೊನೆಯಲ್ಲಿ ಸಹಿಯೂ ಇದ್ದಿತು. ಪತ್ರದ ನೋಟಿನ ಮೇಲೆ ದಕ್ಷಿಣದ ಒಂದು ದೊಡ್ಡ ದೇವಾಲಯದ ಚಿತ್ರವಿತ್ತು.

ಪುಣೆ ರೈಲು ನಿಲ್ದಾಣದ ಮುಂದೆ, ಡಾಕ್ಟರು ತಮ್ಮ ಕಾರನ್ನು ತಂದು ನಿಲ್ಲಿಸಿದರು. ಪಂತರನ್ನು ತಿಕೀಟ ಆಫೀಸಿನ ಹತ್ತಿರ ಕರೆದೊಯ್ದರು. ಮುಂಬಯಿಗಾಗಿ ಪ್ರತ್ಯೇಕ ಒಂದು ಕಿಡಿಕಿ ಇದ್ದಿತಲ್ಲದೆ ಅದರ ಮೇಲೆ ಒಂದು ನೋಟೀಸನ್ನೂ ಬರೆಯಲಾಗಿತ್ತು. 'ಅಪ್ಪಣೆಯಿಲ್ಲದೆ ತಿಕೀಟು ದೊರೆಯುವುದಿಲ್ಲ', ಎಂದು. ಈಗ ಈ ಅಪ್ಪಣೆಯ ಬಗ್ಗೆ ಪಂತರಿಗೆ ದಿಗಿಲು ಬಿದ್ದಿತು.

"ಸಾಹೇಬರ ರಾಜ್ಯದಲ್ಲಿ ಹೋಗಲಿಕ್ಕೆ ಪರವಾನಗಿ ಬೇಕಾಗ್ತದ; ಮರೆತಿರೇನು? ನಿಮ್ಮ ಹತ್ತಿರ ಇಲ್ಲದಿದ್ದರ ನನ್ನ ಹಿಂದೆ ಬರ್ರಿ; ಇಲ್ಲೇ ಅದರ ಆಫೀಸದ," ಎನ್ನುತ್ತ ಡಾಕ್ಟರರು ಹತ್ತಿರದ ಆಫೀಸಿಗೆ ಕರೆದೊಯ್ದರು.

ಅಲ್ಲಿ ಒಂದು ಫಾರ್ಮಿನಲ್ಲಿ ಅವರ ಹೆಸರು, ವಿಳಾಸ, ಮುಂಬಯಿ ವಿಳಾಸ ಹಾಗೂ ಪ್ರವಾಸದ ಉದ್ದೇಶಗಳನ್ನು ಪಂತರ ಹಸ್ತಾಕ್ಷರದಲ್ಲಿ ಬರೆಯಿಸಿಕೊಂಡು ಅವರ ರುಜುವನ್ನು ಪಡೆದರು. ಪೋಲರಾಯ್ಡ್ ಕ್ಯಾಮರಾದಿಂದ ಅವರ ಬಣ್ಣದ ಫೋಟೋ ತೆಗೆದುಕೊಂಡರು. ಕ್ಯಾಮರಾ ಕೆಳಗಿನ ಯಂತ್ರದ ಗುಂಡಿಯನ್ನು ಒತ್ತುತ್ತಿದ್ದಂತೆ ಅದರಿಂದ ಎರಡು ಮೂರಿಂಚಿನ ಒಂದು ಕಾರ್ಡು ಹೊರಬಂತು. ಅದರಲ್ಲಿ ಒಂದು ಬದಿಗೆ ರುಜು ಸಹಿತ ಪಂತರ ಬಣ್ಣದ ಫೋಟೋ, ಇನ್ನೊಂದು ಬದಿಗೆ, ಫಾರ್ಮಿನಲ್ಲಿ ಬರೆದುಕೊಟ್ಟ ಎಲ್ಲ ಮಜಕೂರನ್ನು ನಮೂದಿಸಲಾಗಿದ್ದಿತು. ಆ ಕಾರ್ಡನ್ನು ಒಂದು ಪಾರದರ್ಶಕ ಪ್ಲಾಸ್ಟಿಕ್ ಕವರಿನಲ್ಲಿ ಸಂಪ್ರವಿಷ್ಟವಾಗಿಟ್ಟು ಪಂತರಿಗೆ ಕೊಟ್ಟರು.

ಪಂತರು ಇದಕ್ಕಾಗಿ ಹತ್ತರ ಒಂದು ನೋಟನ್ನು ಹಾರಿಸಬೇಕಾಯಿತು.

ಅಪ್ಪಣೆ ಕಾರ್ಡನ್ನು ತೋರಿಸಿ, ಮುಂಬಯಿಯ ಒಂದು ಪ್ರಥಮ ವರ್ಗದ ಟಿಕೇಟನ್ನು ತೆಗೆದುಕೊಂಡ ನಂತರ, ಡಾಕ್ಟರು ಅವರನ್ನು ಪ್ಲಾಟ್‌ಫಾರ್ಮ್ ನಂಬರ್ ಒಂದರ ಮೇಲೆ ನಿಂತಿದ್ದ ಜಂಜಾಮಾತಾ ಎಕ್ಸ್‌ಪ್ರೆಸ್‌ನಲ್ಲಿ ಕೂಡಿಸಿದರು. ಪಂತರು ಅವರಿಗೆ ಮನಃಪೂರ್ವಕವಾಗಿ ಕೃತಜ್ಞತೆಗಳನ್ನರ್ಪಿಸಿ ಅವರನ್ನು ಬೀಳ್ಕೊಟ್ಟರು.

ಜಂಜಾಮಾತಾ ಎಕ್ಸ್‌ಪ್ರೆಸ ಡಬ್ಬಗಳಿಗೆ ಕೇಸರಿ ಬಣ್ಣ ಬಳಿಯಲಾಗಿತ್ತು, ಅವುಗಳ ಮೇಲೆ 'ಮರಾಠಾ ರೇಲ್ವೆ' ಎಂದು ಬರೆದಿದ್ದರು. ಪಂತರು ಕುಳಿತ ಡಬ್ಬಿ ಬ್ರಿಟಿಶ್ ಕಾಲದ ಥಾಟಿನ ಪ್ರಥಮ ವರ್ಗದ ಡಬ್ಬಿ, ಸುಸಜ್ಜಿತವಾಗಿತ್ತು. ಜೊತೆಗಿದ್ದ ಇಬ್ಬರು ಪ್ರಯಾಣಿಕರಲ್ಲಿ ಒಬ್ಬ ಕೆಂಪು ಮೋತಿಯ ಸಾಹೇಬ ಹಾಗು ಇನ್ನೊಬ್ಬ ಕೆಂಪ್ಟೆ ಬಟ್ಟೆಗಳ ಮೇಲಿಂದ ಮುಸಲ್ಮಾನನಂತೆ ಕಾಣುವ ಗೃಹಸ್ಥನಾಗಿದ್ದನು. ಕೆಂಪು ಸಾಹೇಬ ದಿನಪತ್ರಿಕೆಯಲ್ಲಿ ತಲೆಹಾಕಿಕೊಂಡು ಕುಳಿತಿದ್ದರೆ ಮುಸಲ್ಮಾನ ಭಾಯಿ ತಾನು ತಂದ ಊಟದ ಡಬ್ಬಿಯನ್ನು ಬಿಚ್ಚಿ ಉಣ್ಣುವುದರಲ್ಲಿ ಗರ್ಕಾಗಿದ್ದ.

"ಆಪ ಕಿಧರ ಜಾ ರಹೇ ಹೋ?" ಎಂದು ಪಂತರು ಮುಸಲ್ಮಾನ ಭಾಯಿಯನ್ನು ವಿಚಾರಿಸಿದರು.

"ಜೀ ನಾನು ಮುಂಬಯಿ ಮಾರ್ಗದಿಂದ ಪೇಶಾವರಕ್ಕೆ ಹೋಗುತ್ತಿರುವೆ." ಎಂದ.

"ಪೇಶಾವರ? ಅಲ್ಲಿ ಹೋಗಲು ಪಾಸ್‌ಪೋರ್ಟ್ ಬೇಕಾಗುತ್ತದೆಯಲ್ಲವೆ?" ಪಂತರು ನಿಂತು ನಿಂತು ಕೇಳಿದರಾದರೂ ಮಿಯಾಭಾಯಿಯು ಹುಚ್ಚು ನೋಟ ನೋಡಿದಾಗ ಮಾತ್ರ ಮತ್ತೆ ತಾವೇನೋ ದೊಡ್ಡ ತಪ್ಪು ಮಾಡಿದೆವೆಂದುಕೊಂಡರು.

"ನೀವೇನು ಒಳ್ಳೆ ಆಶ್ಚರ್ಯದ ಪ್ರಶ್ನೆ ಕೇಳ್ತಾ ಇದ್ದೀರಲ್ಲ, ಅಣ್ಣಾಸಾಹೇಬರೇ! ನಮ್ಮ ದೇಶದಲ್ಲಿ ಹೋಗಲು ಪಾಸ್‌ಪೋರ್ಟ್‌ನ ಅವಶ್ಯಕತೆ ಎಲ್ಲಿದೆ? ಈ ಮುಂಬಯಿಂದ ಹೋಗುವುದಾದರೆ ಪರ್ಮಿಟ್ ಬೇಕು," ಎಂದರು ಮಿಯಾಭಾಯಿ.

ಅಂದರೆ ಪೇಶಾವರ ನಗರ ಭಾರತದಲ್ಲಿ, ಮುಂಬಯಿ ಮಾತ್ರ ಸಾಹೇಬರ ರಾಜ್ಯದಲ್ಲಿ! ಇತಿಹಾಸ ಸಂಶೋಧಕರಾಗಿದ್ದರೂ ಗಂಗಾಧರ ಪಂತರು ಹತಬುದ್ಧರಾದರು. ನೋಟಿನ ಮೇಲೆ ಬರೆದ ಒಂದುಸ್ಥಾನ ಶಾಹನ್‌ಶಾಹ ಎಂದರೇನು? ಶನಿವಾರವಾಡೆ ಇನ್ನೂ ಪೇಶವಾಯಿ ಕಾಲದ ಐಶ್ವರ್ಯದಲ್ಲಿ ಹೇಗೆ ಮೆರೆಯುತ್ತಿದೆ? ತಾವು ಭೂತಕಾಲದಲ್ಲಿ ತಿರುಗುತ್ತಿದ್ದೇವೆಯೆ? ಹಾಗೆ ತಿಳಿಯಬೇಕೆಂದರೆ, ಮೋಟರ್ ಕಾರು, ಟ್ರೇನು, ಸ್ಟೇಶನ್ನಿನಲ್ಲಿಯ ಫೋಟೋ, ಮಶೀನು ಇತ್ಯಾದಿಗಳೆಲ್ಲ ಭೂತಕಾಲವನ್ನು ಸುಳ್ಳಾಗಿಸುತ್ತಿವೆ. ಭವಿಷ್ಯಕಾಲದಲ್ಲಿದ್ದೇನೆಂದು ತಿಳಿದುಕೊಳ್ಳಬೇಕೆಂದರೆ ಮುಂಬಯಿಯಲ್ಲಿಯ ಬ್ರಿಟಿಶ್ ರಾಜಸತ್ತೆ, ದಿಲ್ಲಿಯಲ್ಲಿಯ ಬಾದಶಹ, ಪೇಶ್ವೆ ಥಾಟಿನ ಶನಿವಾರವಾಡೆ, ಇವೆಲ್ಲ ಹೇಗೆ? ಇಷ್ಟಾಗಿಯೂ ಇಂದಿನ ತಾರೀಖು ಮಾತ್ರ ಸಪ್ಟೆಂಬರ್ ಎರಡು ೧೯೭೫ ಆಗಿದೆ! ಅಂದರೆ ಟ್ರಕ್ಕಿನ ಆಘಾತವಾಗಿ ಇನ್ನೂ ಎರಡು ದಿನಗಳೂ ಕಳೆದಿಲ್ಲ.

ಅವರಿಗೆ ಪರಿಚಿತವಾಗಿದ್ದ ಪುಣೆ–ಮುಂಬಯಿ ಮಾರ್ಗದಿಂದಲೇ ಗಾಡಿ ಓಡುತ್ತಿತ್ತು. ಪುಣೆಯ ಪರಿಸರದಲ್ಲಿ ಔದ್ಯೋಗೀಕರಣವಾಗಿರಲಿಲ್ಲ. ಖಡಕಿಯ ಹತ್ತಿರ ಸೈನ್ಯದ ಠಾಣೆಯೂ ಇರಲಿಲ್ಲ. ಲೋಣಾವಳಾ ನಿಲ್ದಾಣ ತೀರ ಚಿಕ್ಕದಾಗಿತ್ತು. ಖಂಡಾಳಾದಿಂದ ಕರ್ಜತ್‌ವರೆಗಿನ ಮಾರ್ಗ ಮಾತ್ರ ಅವರ ಚಿರಪರಿಚಿತ ಘಟ್ಟಗಳ ಮಾರ್ಗವೇ ಆಗಿತ್ತು. ಅವರೀಗ ಇಂಥ ಚಿಕ್ಕ ಪುಟ್ಟ ಅಂತರಗಳನ್ನು ಗಮನಿಸಲು ಸಿದ್ಧರಾಗಿದ್ದರು. ಕಂಡದ್ದನ್ನು ಸುಮ್ಮನೆ ನೋಡುವುದು; ಅತಿ ಅವಶ್ಯವೆನಿಸಿದರೆ ಇತರರಿಗೆ ಪ್ರಶ್ನೆ ಕೇಳುವುದು ಮಾತ್ರ, ಸಾಧ್ಯವಾದಷ್ಟು ಮೌನ ವ್ರತವನ್ನು ಪಾಲಿಸುವುದೆಂದು ಅವರು ನಿರ್ಧರಿಸಿದರು. ಹೀಗೆ ನಿರ್ಧರಿಸುವುದಕ್ಕೆ ಅವರಿಗೊಂದು ಕಾರಣವೂ ಇತ್ತು. ಅವರು

[illegible] ಬರದಿರಬೇಕಲ್ಲ? [illegible] ಗಳಲ್ಲಿ, [illegible] ಸಂಶೋಧನೆ [illegible] ಹೋರಾಡಬೇಕೆಂದುಕೊಂಡಿದ್ದರು. ಪ್ರೊ. ಗಾಯತೊಂಡೆ.

ರಾಜೇಂದ್ರ ದೇಶಪಾಂಡೆಯು ಕೆಲವು [illegible]. ಕೆಲವು [illegible] ಚರ್ಚೆಗೂ [illegible]? [illegible] ರುತ್ತವೆ. ಅವನನ್ನು ಪುಣೆಯಲ್ಲಿ ಕಾಣಬೇಕೆಂದು ನಿರ್ಧರಿಸಿದರು.

[illegible] ಈ ಸೃಷ್ಟಿಯಲ್ಲಿ ರಾಜೇಂದ್ರ ಇರಬಹುದೆ...? ಹೀಗೆ ವಿಚಾರಿಸುತ್ತಿದ್ದಂತೆ ಅವರ ತಲೆಯಲ್ಲಿ ಇನ್ನೊಂದು ವಿಚಾರವು [illegible] ಪಂತರನ್ನು [illegible] ಅಸ್ವಸ್ಥರನ್ನಾಗಿಸಿತು. [illegible] ಜೀವಂತ [illegible]? ಹೊರಡುವ ಮೊದಲು ಒಂದು ಸಲ ಫೋನನ್ನಾದರೂ ಮಾಡಬೇಕಾಗಿತ್ತು ಎಂದುಕೊಂಡರು,

ಕಲ್ಯಾಣ ನಿಲ್ದಾಣವೂ ದಾಟಿತು. ಪಾರಸಿಕ ಸುರಂಗ ಮಾರ್ಗ ದಾಟಿದ ನಂತರ ಚಿಕ್ಕ ನಿಲ್ದಾಣವೊಂದು ಬಂದಿತು. ಅದು ಬಹುತೇಕ ಗಡಿ ನಿಲ್ದಾಣವಿರಬೇಕು. ಆಂಗ್ಲೋ-ಇಂಡಿಯನ್ [illegible] ಗಾಡಿಯನ್ನೇರಿ [illegible] ಗಳನ್ನು ಪರೀಕ್ಷಿಸಿದ. ಇಳಿಯುವವರೆಲ್ಲ [illegible] ಕಾಗದಗಳನ್ನು [illegible]. ಅವುಗಳನ್ನು ನೋಡಿ ಆತ "ಥ್ಯಾಂಕ್ಯೂ" ಎನ್ನುತ್ತ ಹಿಂತಿರುಗಿಸುತ್ತಿದ್ದ.

"ಈಗ ಇಲ್ಲಿಂದ ಇಂಗ್ಲೀಷರ ರಾಜ್ಯ ಪ್ರಾರಂಭವಾಯಿತು," ಎಂದು ವಿಂಯಾಭಾಯಿ ಹೇಳಿದರು. "ನೀವು [illegible]

ಬಹುಶಃ ಇದೇ ಮೊದಲ ಸಲ ಎಂದು ಕಾಣುತ್ತದೆ ಅಲ್ಲವೆ?"

"ಹೌದು..." ಎಂಬ ಪಂತರ ಉತ್ತರ ಹೇಳಿಕೊಳ್ಳುವಷ್ಟು ಅಸತ್ಯವೇನಾಗಿರಲಿಲ್ಲ. ಇಲ್ಲಿದ್ದರೂ ಇಂದು ಕಂಡ ಈ ಮುಂಬಯಿಗೆ ಈ ಮೊದಲು ಅವರು ಬಂದಿರಲಿಲ್ಲ.

"ನೀವು ಪೇಷಾವರಕ್ಕೆ ಹೇಗೆ ಹೋಗುತ್ತೀರಿ?" ಎಂದು ಪಂತರು ಕೇಳಿದರು.

"ಫ್ರಂಟಿಯರ್ ಮೇಲಿನಿಂದ ಹೋಗುವೆ. ಇಂದು ರಾತ್ರಿ ಇಲ್ಲಿಂದ ಬಿಟ್ಟು ನಾಡಿದ್ದಿನ ಹೊತ್ತಿಗೆ ಮುಟ್ಟುವೆ."

ಅನಂತರ ಅವರಿಬ್ಬರೂ ಸಾಕಷ್ಟು ಮಾತನಾಡಿದರು. ಆದರೆ ಮಾತನಾಡುವ ಕೆಲಸ ಮಾತ್ರ ಮಿರ್ಜಾಭಾಯಿಯವರದು. ಕೇಳುವ ಕೆಲಸ ಗಂಗಾಧರಪಂತರದು. ವಾಸ್ತವದಲ್ಲಿ ಈ ಅನುಭವ ಪಂತರಿಗೆ ಹೊಸದಾಗಿತ್ತು. ಆದರೆ ಅವರು ಏನು ಮಾತನಾಡಿದರೂ ನವಲು ದಾ[illegible]ಯಾಗುತ್ತದೆಂದು ಅವರು ಸುಮ್ಮನಾಗಿದ್ದರು.

ಮುಂಬಯಿಯ ಉಪನಗರಗಳನ್ನು ಒಂದೊಂದಾಗಿ ದಾಟುತ್ತ ಎದುರಿಗೆ ಬರುವ, ಜೊತೆಯಾಗಿ ಹೋಗುತ್ತಿರುವ ಉಪನಗರಗಳ ಗಾಡಿಗಳೊಂದಿಗೆ ಸ್ಪರ್ಧೆ ನಡೆಸುತ್ತ ಪಂತರ ಗಾಡಿ ಕೊನೆಗೊಮ್ಮೆ ವಿಕ್ಟೋರಿಯಾ ಟರ್ಮಿನಸ್ ನಿಲ್ದಾಣಕ್ಕೆ ಬಂದು ಮುಟ್ಟಿತು. ನಿಲ್ದಾಣದಲ್ಲಿ ನೌಕರರಲ್ಲಿ ಸುಮಾರಾಗಿ ಕಪ್ಪು [illegible] ಸಾಹೇಬರು, ಪಾರಸಿಗಳು ಮತ್ತು ಆಂಗ್ಲೋ-ಇಂಡಿಯನ್ನರೇ ಹೆಚ್ಚಿನವರೆಂದು ಕಂಡಿತು, ಅಲ್ಲಲ್ಲಿ ಬೇರೆ ಬೇರೆ ತರದ ಸೂಚನೆಗಳನ್ನು ಇಂಗ್ಲೀಷಿನಲ್ಲಿ ಬರೆಯಲಾಗಿತ್ತು. ನಿಲ್ದಾಣದಲ್ಲಿಯ ಸ್ವಚ್ಛತೆ ಹಾಗೂ ಸುವ್ಯವಸ್ಥೆ ಕಣ್ಣು ತುಂಬುವಂತಿದ್ದುವು. ನಿಲ್ದಾಣದಿಂದ ಹೊರಗೆ ಬರುತ್ತಿರುವಂತೆ ಪಂತರ ಎದುರಿಗೆ ಆರು ಅಂತಸ್ತಿನ ದೊಡ್ಡ ಕಟ್ಟಡ ಕಂಡಿತು. ಆದರ ಮೇಲೆ ದೊಡ್ಡ ಅಕ್ಷರಗಳಲ್ಲಿ ಹೆಸರನ್ನು ಬರೆಯಲಾಗಿತ್ತು.

EAST INDIA HOUSE
THE HEAD—QUARTERS
OF THE EAST INDIA
COMPANY

ಈಸ್ಟ್ ಇಂಡಿಯಾ ಕಂಪನಿ? ೧೮೫೭ರ ಬಂಡಾಯದ ನಂತರ ಅಸ್ತಂಗತವಾದ ಕಂಪನಿ ಮತ್ತೆ ಹೇಗೆ ಬಂತು...? ಆದರೆ ಅಂದು ಅದು ನಿಜವಾಗಿಯೂ ಅಸ್ತಂಗತವಾಗಿತ್ತೆ? ಪಂತರ ಮನಸ್ಸು ಮತ್ತೆ ದ್ವಂದ್ವದಲ್ಲಿ ಬಿದ್ದಿತು. ತಮಗೆ ಕಾಣುವ ಇತರ ಬದಲಾವಣೆಗಳನ್ನು ಗಮನಿಸಿದರೆ ಈ ಇತಿಹಾಸದ ಬದಲಾವಣೆ ಅಷ್ಟೇನೂ ಹೆಚ್ಚೆಂದು ಅನಿಸುವುದಿಲ್ಲ. ಈ ಇತಿಹಾಸ ಹೇಗೆ ಬದಲಾಯಿತು...? ಎಲ್ಲಿ ಬದಲಾಯಿತು...? ಪಂತರ ಎದೆ ಬಡಿದುಕೊಳ್ಳುತ್ತಿತ್ತು. ಆದರೆ ಕಾಲುಗಳು ಮಾತ್ರ ಹಿಂದಿನ ವೇಗದಲ್ಲಿ ಫೋರ್ಟ್ ಕಂಪನಿಯತ್ತ ನಡೆದಿದ್ದುವು. ಆ ರಾಜಮಾರ್ಗ ಅವರ ಪರಿಚಯದ್ದಾಗಿತ್ತು. ಆದರೆ ಮಾರ್ಗದಲ್ಲಿಯ ಅಂಗಡಿಗಳು, ಆಫೀಸುಗಳು ಬದಲಾಗಿದ್ದುವು. ಹ್ಯಾಂಡ್‌ಲೂಮ್ ಹೌಸ್ ಅಲ್ಲಿರಲಿಲ್ಲ. ವಿದೇಶಿ ಸಂಚಾರ ಭವನ ಇನ್ನೂ ಎದ್ದಿರಲಿಲ್ಲ. ಬೂಟ್ಸ್ ಡಿಪಾರ್ಟ್‌ಮೆಂಟಲ್ ಸ್ಟೋರ್ಸ್, ಲ್ಯಾಡ್ಸ್ ಆ್ಯಂಡ್ ಬರ್ಕಲೇಸ್ ಬ್ಯಾಂಕಿನ ಶಾಖೆ ಇತ್ಯಾದಿ ಬ್ರಿಟಿಶರ ಮಳಿಗೆಗಳು ಕಾರ್ಯಾಲಯಗಳು ಮಾತ್ರ ಇನ್ನೂ ಇದ್ದುವು.

ಜೋನ್ಸ್ ಸ್ಟ್ರೀಟಿನಲ್ಲಿ ಹೊರಳಿ ಎದುರಿಗೆ ಕಾಣುವ ಫ್ರೇಮ್ಸ್ ಕಟ್ಟಡವನ್ನು ಅವರು ಪ್ರವೇಶಿಸಿದರು.

"ಮಿ. ವಿನಯ ಗಾಯತೊಂಡೆಯವರನ್ನು ನಾನು ಭೆಟ್ಟಿಯಾಗಬೇಕಾಗಿದೆ," ಎಂದು ಅವರು ವಿಚಾರಣಾ ಆಫೀಸಿನಲ್ಲಿ ಕುಳಿತ ಗೌರಾಂಗನೆಯೊಬ್ಬಳಿಗೆ ಹೇಳಿದರು. ಆದರೆ, ಸ್ಟಾಫ್ ಲಿಸ್ಟ್, ಫೋನ್ ಲಿಸ್ಟ್, ಇತ್ಯಾದಿಗಳನ್ನೆಲ್ಲ ನೋಡಿ, ಒಂದಿಬ್ಬರಿಗೆ ಫೋನು ಮಾಡಿ ವಿಚಾರಿಸಿ ಕೊನೆಗೆ ಹೇಳಿದಳು: "ವಿನಯ ಗಾಯತೊಂಡೆ ಎಂಬ ಹೆಸರಿನ ಯಾವ ನೌಕರನೂ ಇಲ್ಲಿಲ್ಲ; ಅಷ್ಟೇನು—ಅವರು ಈ ಕಂಪನಿಯ ಯಾವ ಶಾಖೆಯಲ್ಲೂ ಇಲ್ಲ."




ಕೋಲ್ಗೇಟ್ ಡೆಂಟಲ್ ಕ್ರೀಮ್‌ನಿಂದ ಉಸಿರಿನ ದುರ್ವಾಸನೆಯನ್ನು ನಿವಾರಿಸಿರಿ... ದಂತಕ್ಷಯವನ್ನು ಎದುರಿಸಿರಿ

ಪ್ರತಿ ಸಲ ಊಟವಾದ ಮೇಲೆ ಕೋಲ್ಗೇಟ್‌ನಿಂದ ಹಲ್ಲುಜ್ಜಿರಿ. ಅದು ಜಗತ್ತಿನಾದ್ಯಂತ ದಂತವೈದ್ಯರು ಶಿಫಾರಸು ಮಾಡುವ ರೀತಿಯಲ್ಲಿ ನಿಮ್ಮ ಹಲ್ಲುಗಳಿಗೆ ರಕ್ಷಣೆ ನೀಡುತ್ತದೆ.

ಹಲ್ಲುಗಳೆಡೆಯಲ್ಲಿ ಉಳಿಯುವ ಆಹಾರಕಣಗಳಲ್ಲಿ ರೋಗಾಣುಗಳು ಬೆಳೆಯುತ್ತವೆ. ಇವು ಉಸಿರಿನ ದುರ್ವಾಸನೆಗೆ ಕಾರಣವಾಗುತ್ತವೆ—ಅಮೇಲೆ ಇವು ನೋಯುವ ದಂತಕ್ಷಯವನ್ನು ಉಂಟುಮಾಡುತ್ತವೆ.


ಆದುದರಿಂದ ಯಾವಾಗಲೂ ಆಹಾರವನ್ನು ಸೇವಿಸಿದ ನಂತರ ಕೂಡಲೇ ಕೋಲ್ಗೇಟ್ ರೀತಿಯಲ್ಲಿ ಹಲ್ಲುಜ್ಜಿರಿ. ನಿಮ್ಮ ಶ್ವಾಸವನ್ನು ಶುಚಿಗೊಳಿಸಲು, ಹಲ್ಲುಗಳನ್ನು ಬಿಳುಪಾಗಿಸಲು ಮತ್ತು ದಂತಕ್ಷಯವನ್ನು ಎದುರಿಸಲು ಅದು ಅತ್ಯಂತ ಪರಿಣಾಮಕಾರಿ ಎಂದು ಪ್ರಮಾಣಿತವಾಗಿದೆ.




ಕೋಲ್ಗೇಟ್‌ನ ವಿಶ್ವಸನೀಯ ಸೂತ್ರವು ಕೆಲಸ ಮಾಡುವ ರೀತಿ:



ಉಸಿರಿನ ದುರ್ವಾಸನೆಯನ್ನು ಮತ್ತು ದಂತಕ್ಷಯವನ್ನು ಉಂಟುಮಾಡುವ ರೋಗಾಣುಗಳು ನಿಮ್ಮ ಹಲ್ಲುಗಳೆಡೆಯಲ್ಲಿ ಸಿಕ್ಕಿಕೊಂಡ ಆಹಾರ ಕಣಗಳಲ್ಲಿ ಬೆಳೆಯುತ್ತವೆ.



ಕೋಲ್ಗೇಟ್‌ನ ಅಪೂರ್ವವಾದ ಕಾರ್ಯಶೀಲ ನೊರೆ ಹಲ್ಲುಗಳೆಡೆಯನ್ನು ಆಳವಾಗಿ ಪ್ರವೇಶಿಸುತ್ತದೆ ಮತ್ತು ಅಪಾಯಕರವಾದ ಆಹಾರಕಣಗಳನ್ನೂ ರೋಗಾಣುಗಳನ್ನೂ ಹೋಗಲಾಡಿಸುತ್ತದೆ.



ಫಲಿತಾಂಶ: ಆಕರ್ಷಕವಾದ ಬಿಳುಪಾದ ಹಲ್ಲುಗಳು, ಆತ್ಮವಿಶ್ವಾಸವನ್ನುಂಟು ಮಾಡುವ ಶುಚಿಯಾದ ಉಸಿರು. ಮತ್ತು ದಂತಕ್ಷಯದ ವಿರುದ್ಧ ರಕ್ಷಣೆ.

ಅಧಿಕ ಶುಚಿಯಾದ, ದುರ್ವಾಸನೆ ರಹಿತವಾದ ಉಸಿರಿಗಾಗಿ ಮತ್ತು ಅಧಿಕ ಬಿಳುಪಾದ ಹಲ್ಲುಗಳಿಗಾಗಿ ಹೆಚ್ಚು ಜನರು ಜಗತ್ತಿನಲ್ಲಿ ಬೇರೆ ಯಾವುದೇ ಟೂಥ್‌ಪೇಸ್ಟ್‌ಗಿಂತ ಅಧಿಕವಾಗಿ ಕೋಲ್ಗೇಟನ್ನು ಕೊಳ್ಳುತ್ತಾರೆ.

ದಂತವೈದ್ಯರು ಮಾತ್ರ ನಿಮಗೆ ಉತ್ತಮತರ ದಂತರಕ್ಷಣೆಯನ್ನು ನೀಡಬಲ್ಲರು

DC.G.62 KN

ಪಂತರು ಈ ಅಧ್ಯಾಯವನ್ನು ಪರೀಕ್ಷಿಸಿದ್ದರು. ಅದಕ್ಕೆ ಅವರು ಸಿದ್ಧರಾಗಿದ್ದರು ಕೂಡ. ಈಗ ಮಗನ, ಅಸ್ತಿತ್ವ ಸಿಕ್ಕದಿದ್ದ ಮೇಲೆ ಅವರು ಮುಂಬಯಿಯಲ್ಲಿ ಇರಬೇಕಾದರೂ ಏಕೆ? ತಿರುಗಿ ಪುಣೆಗೆ ಹೋಗಲು ಕೂಡ ಮಾರ್ಗವಿರಲಿಲ್ಲ. ಯಾಕೆಂದರೆ, ಅಲ್ಲಿಯಾದರೂ ಅವರ ಮನೆ ಎಲ್ಲಿದೆ? ಅಲ್ಲಲ್ಲಿ ಅವರ ಮಿತ್ರರು ಜೀವಂತ ಇದ್ದರೂ ಅವರು ಕೂಡ ಅನೇಕ ವರುಷಗಳ ಹಿಂದೆ ಗಾಯತೋಂಡೆಯವರು ಸ್ವರ್ಗಸ್ಥರಾಗಿದ್ದಾರೆಂದು ತಿಳಿದುಕೊಂಡವರಾಗಿದ್ದರು. ಅವರ ಮನಸ್ಸನ್ನು ಅಸ್ವಸ್ಥಗೊಳಿಸುವ ಈ ಎಲ್ಲ ಘಟನೆಗಳು ನಡೆದಿದ್ದರೂ ಅವರ ಇತಿಹಾಸ ಸಂಶೋಧಕ ವೃತ್ತಿ ಅವರನ್ನು ಬಡಿದೆಬ್ಬಿಸಿತು. ಮೊದಲು ಅವರು ಈ ಅಧ್ಯಾಯದ ತಳಬುಡವನ್ನು ನೋಡಬೇಕೆಂದುಕೊಂಡರು. ಫೋರ್ಟಿನಲ್ಲಿಯ ಒಂದು ರೆಸ್ಟೋರೆಂಟಿನಲ್ಲಿ ಊಟ ಮಾಡಿ ಅವರು ರಾಯಲ್ ಏಶಿಯಾಟಿಕ್ ಸೋಸಾಯಟಿಯತ್ತ ಹೆಜ್ಜೆ ಹಾಕಿದರು.

ಅಲ್ಲಿಯ ಲೈಬ್ರರಿಗೆ ಹೋದ ನಂತರ ಅವರು ಭಾರತದ ಇತಿಹಾಸದ ಕುರಿತು ಸಾಕಷ್ಟು ಪುಸ್ತಕಗಳನ್ನು ಓದಲು ತೆಗೆದುಕೊಂಡರು. ಅವರು ಸ್ವತಃ ಬರೆದ ಪುಸ್ತಕಗಳ ಸಂಗ್ರಹವೂ ಅಲ್ಲಿತ್ತು. ಅವುಗಳನ್ನು ನೋಡಲು ಅವರು ಪ್ರಾರಂಭಿಸಿದರು.

ಪ್ರಥಮ ಖಂಡ ಕ್ರಿಸ್ತಪೂರ್ವ ಕಾಲದ್ದು. ದ್ವಿತೀಯ ಖಂಡ ಸಮುದ್ರಗುಪ್ತನ ವರೆಗೆ, ಮೂರನೆಯ ಖಂಡ ಮಹಮ್ಮದ ಘೋರಿಯ ವರೆಗೆ ಮತ್ತು ನಾಲ್ಕನೆಯದು ಔರಂಗಜೇಬನ ಮೃತ್ಯುವಿನ ಪರ್ಯಂತ. ಈ ನಾಲ್ಕು ಖಂಡಗಳು ಅವರಿಗೆ ಗೊತ್ತಿದ್ದ ಇತಿಹಾಸವನ್ನೇ ಹೇಳುತ್ತಿದ್ದುವು. ಐದನೆಯ ಖಂಡ ಮಾತ್ರ ಬದಲಾದಂತೆ ಕಂಡಿತು. ಅಲ್ಲಿಯೂ ಪ್ರಾರಂಭ ಅವರಿಗೆ ಗೊತ್ತಿದ್ದಂತೆಯೇ ಆಗಿತ್ತು. ಆದರೆ ಪರಿಣಾಮ ಮಾತ್ರ ಬೇರೆಯಾಗಿತ್ತು. ಎರಡೂ ಕೈಗಳಿಂದ ಆ ಖಂಡವನ್ನು ಸೋಸಿ ತೆರೆಯುವಾಗ ಒಂದು ಪುಟಕ್ಕೆ ಬಂದು ನಿಂತರು. ಅಲ್ಲಿ ಇತಿಹಾಸಕ್ಕೆ ತಿರುವು ದೊರಕಿತ್ತು.

ಆ ಪುಟದಲ್ಲಿಯ ಮಹತ್ವದ ಘಟನೆಯೆಂದರೆ ಪಾನೀಪತ್ ಯುದ್ಧ. ಅದು ಈ ಬದಲಾದ ಇತಿಹಾಸವನ್ನು ಹೇಳುತ್ತಿತ್ತು. ಆ ಯುದ್ಧದಲ್ಲಿ ಮರಾಠರಿಗೆ ಜಯ ದೊರೆತಿತ್ತು. ಅವರು ಸಾಕಷ್ಟು ಜನ–ಧನ ಹಾನಿಯನ್ನುಂಟುಮಾಡಿ ಅಬ್ದಾಲಿಯನ್ನು ಸಂಪೂರ್ಣವಾಗಿ ಸೋಲಿಸಿದ್ದರು. ಅವನನ್ನು ಉತ್ತರದ ಕಡೆಗೆ ಓಡಿಸುತ್ತ ಅಟಕ್ ವರೆಗೆ ಬೆನ್ನಟ್ಟಿ, ಸದಾಶಿವರಾವ ಭಾವು ಹಾಗೂ ವಿಶ್ವಾಸರಾವ ಇಬ್ಬರೂ ಅವನನ್ನು ಕಾಬೂಲ ಮಾರ್ಗದಲ್ಲಿ ಬಿಟ್ಟು ಬಂದಿದ್ದರು.

ವಾಸ್ತವದಲ್ಲಿ ಪಾನೀಪತ್ ಯುದ್ಧದ ಕುರಿತು ಆ ಪುಸ್ತಕದಲ್ಲಿ ವಿಶೇಷವೇನೂ ಇರಲಿಲ್ಲ. ಆದರೆ ಯುದ್ಧಾನಂತರದ ಪರಿಣಾಮದ


ನಾಳೆಯ
ಟೂಥ್‌ಪೇಸ್ಟ್
ಇಂದೇ!
ನವೀನ
ಕ್ಲೋಸ್-ಅಪ್
ಟೂಥ್‌ಪೇಸ್ಟ್ ಮತ್ತು ಮೌಥ್‌ವಾಶ್
ಎರಡೂ ಒಂದರಲ್ಲಿಯೇ
Close-up
Close-up
ಉಸಿರಿಗೆ ಅನ್ಯೋನ್ಯವಾದ ಕ್ಲೋಸ-ಅಪ ಆಹ್ಲಾದ
ಮತ್ತು ಹಲ್ಲುಗಳಿಗೆ ಐಕ್ಯವಾದ ಕ್ಲೋಸ-ಅಪ ಬಿಳಿಪು.
ಕರ್ನಾಟಕ, ಮಹಾರಾಷ್ಟ್ರ, ಮಧ್ಯ ಪ್ರದೇಶ,
ಗುಜರಾತ, ಗೋವಾ, ತಮಿಳನಾಡು, ಆಂಧ್ರ ಪ್ರದೇಶ ಮತ್ತು
ಕೇರಳ ಈ ರಾಜ್ಯಗಳಲ್ಲಿಯ ಆಯ್ದ ನಗರಗಳಲ್ಲಿ ದೊರೆಯುತ್ತದೆ.

ಬಗ್ಗೆ ಸವಿವರ ಚರ್ಚೆಯನ್ನು ಅದರಲ್ಲಿ ಮಾಡಲಾಗಿದ್ದಿತು. ಪುಸ್ತಕದ ಬರವಣಿಗೆಯು ಶೈಲಿ ಪಂತರದೇ ಆಗಿತ್ತಾದರೂ ವಿಷಯ ಮಾತ್ರ ಅವರಿಗೆ ಹೊಸದಾಗಿತ್ತು. ಅವರು ಆ ವಿಷಯವನ್ನು ಓದುತ್ತಿರುವುದು ಮೊದಲ ಸಲವಾಗಿತ್ತು.

ಪಾನೀಪತ್ ಜಯದಿಂದ ಮರಾಠರ ವರ್ಚಸ್ಸು ಹಿಂದುಸ್ತಾನದ ಮೇಲೆ ಬಹಳ ಹೆಚ್ಚಿತ್ತು. ಉತ್ತರದಲ್ಲಿಯ ನವಾಬರು, ಸುಬೇದಾರರು ಮತ್ತು ಈಸ್ಟ್ ಇಂಡಿಯಾ ಕಂಪನಿಯವರು ಮರಾಠರಿಗೆ ಅಂಜಿ ನಡೆಯುತ್ತಿದ್ದರು. ಪೇಶವೆಗಳಿಗೆ ಸಮಯಾನುಸಾರ ಸೈನ್ಯ ಬಲದೊಂದಿಗೆ ಬುದ್ಧಿ ಬಲವೂ ಇದ್ದುದರಿಂದ ಅವರು ಇಂಗ್ಲೀಷರ ಬೇಳೆಯನ್ನು ಭಾರತದಲ್ಲಿ ಬೇಯಗೊಡಲಿಲ್ಲ. ಫ್ರೆಂಚ್ ಹಾಗೂ ಪೋರ್ತುಗೀಜ್ ವಸಾಹತುಗಳಂತೆ ಕಂಪನಿಯ ಅಧಿಕಾರ ಕೇವಲ ಮುಂಬಯಿ, ಕಲಕತ್ತಾ ಹಾಗೂ ಮದ್ರಾಸ ನಗರಗಳ ಸುತ್ತಮುತ್ತ ಮಾತ್ರ ಮರ್ಯಾದಿತವಾಗಿತ್ತು. ಭಾರತೀಯ ರಾಜಕಾರಣಿಗಳು ಇಂಗ್ಲೀಷರ ತತ್ವಜ್ಞಾನ ಹಾಗೂ ಸುವ್ಯವಸ್ಥಿತ ಕಾರ್ಯಪದ್ಧತಿಯ ಉಪಯೋಗ ಮಾಡಿಕೊಂಡರು. ಭಾರತದ ಸಾರ್ವಭೌಮತ್ವವನ್ನು ತಮ್ಮಲ್ಲಿಯೇ ಉಳಿಸಿಕೊಂಡಿದ್ದರು. ಈಸ್ಟ್ ಇಂಡಿಯಾ ಕಂಪನಿಯವರಿಗೆ ಭಾರತದಲ್ಲಿ ವಸಾಹತನ್ನು ಬೆಳೆಸಲು ಅವಕಾಶವನ್ನೇ ಕೊಡಲಿಲ್ಲ. ಅದನ್ನು ಕಂಡು ಕಂಪನಿಯವರು ತಮ್ಮ ಜ್ಞಾನದ ಮಾರಾಟವನ್ನು ಪ್ರಾರಂಭಿಸಿದರು. ರೈಲು, ತಂತಿ-ಸಮಾಚಾರ ಸೇವೆಗಳನ್ನು ಕಂಪನಿಯವರು ತಮ್ಮ ಮುಖಾಂತರ ಕಾಂಟ್ರ್ಯಾಕ್ಟ್ ತಳಹದಿಯ ಮೇಲೆ ಪ್ರಾರಂಭಿಸಿದರು. ಭಾರತೀಯರಿಗೆ ಇದು ಕೂಡ ತುಟ್ಟಿಯಾಗುವುದೆಂದು ತಿಳಿದಾಗ ಇವುಗಳ ವಿದ್ಯೆಯನ್ನು ನಮ್ಮವರಿಗೇ ಕಲಿಯಲು ಪ್ರಚೋದಿಸಿದರು. ಹೀಗಾಗಿ ಕಂಪನಿಯ ಮಹತ್ವ ಭಾರತದಲ್ಲಿ ಸಾವಕಾಶವಾಗಿ ಇಳಿಯತೊಡಗಿತು. ಇಪ್ಪತ್ತನೆಯ ಶತಮಾನದ ಆರಂಭಕ್ಕೆ ಮೊನೆ ಕಂಪನಿಯವರು ಮದ್ರಾಸ ಹಾಗೂ ಕಲಕತ್ತಾ ನಗರಗಳ ಸಾರ್ವಭೌಮತ್ವವನ್ನು ಹಿಂದುಸ್ತಾನ ಸರಕಾರಕ್ಕೆ ತಿರುಗಿ ಬಿಟ್ಟುಕೊಟ್ಟರು. ಬ್ರಿಟಿಶರೊಂದಿಗಾದ ಒಂದು ಒಪ್ಪಂದದನ್ವಯ ಮುಂಬಯಿ ನಗರ ಮಾತ್ರ ಕ್ರಿ. ಶ. ೨೦೦೦ ದ ವರೆಗೆ ಈಸ್ಟ್ ಇಂಡಿಯಾ ಕಂಪನಿಯ ರಕ್ಷಣೆಯಲ್ಲುಳಿಯಿತು. ಅನಂತರ ಇದು ಭಾರತದಲ್ಲಿ ವಿಲೀನವಾಗಲಿತ್ತು.

ಪಾನೀಪತ್ ಯುದ್ಧಾನಂತರ ನಾಡಿನಲ್ಲಿ ಭಾವೂಸಾಹೇಬ ಹಾಗೂ ವಿಶ್ವಾಸರಾಯರ ಪ್ರತಿಷ್ಠೆ ಬೆಳೆಯಿತು ಮತ್ತು ಪೇಶವೆ ದರಬಾರಿನಲ್ಲಿ ದಾದಾಸಾಹೇಬರ ಬೆಲೆ ಸಾಕಷ್ಟು ಕಡಿಮೆಯಾಯಿತು. ಸ್ವತಃ ನಾನಾಸಾಹೇಬ ಪೇಶವೆಯವರು ಕ್ರಿ. ಶ. ೧೭೮೦ರ ವರೆಗೆ ಮರಾಠಾ ಸತ್ತೆಯನ್ನು ಮಾನಿಸುತ್ತಿದ್ದರು. ಅವರ ಕಾಲದಲ್ಲಿಯೇ ವಿಶ್ವಾಸರಾವ ಹಾಗೂ ಮಾಧವರಾವ ಬಂಧುಗಳು ಬಾಜೀರಾವ ಚಿಮಾಜಿಯ ನೆನಪನ್ನು ತಂದುಕೊಡುವ ಪರಾಕ್ರಮವನ್ನು ತೋರಿಸಿದರು. ಒಂದು ಒಪ್ಪಂದದ ಪ್ರಕಾರ ಹೈದರಾಬಾದ ನಿಜಾಮನು ನಿರ್ದಿಷ್ಟ ಸೀಮೆಯನ್ನು ದಾಟಿ ತನ್ನ ಸೈನ್ಯವನ್ನು ಇಡದಂತೆ ಮಾಡಿ ಅವನನ್ನು ಶಕ್ತಿಹೀನನನ್ನಾಗಿ ಮಾಡಿದರು. ಉತ್ತರದಲ್ಲಿ ಅಫಗಾನಿಸ್ತಾನ, ಪೂರ್ವದಲ್ಲಿ ಬಂಗಾಲದ ವರೆಗೆ ಮೇಲಿಂದ ಮೇಲೆ ಸವಾರಿ ಮಾಡಿ ಅಲ್ಲೆಲ್ಲ ತಮ್ಮ ವಿಶ್ವಾಸಿಕ ಸುಬೇದಾರರನ್ನು ನಿಯಮಿಸಿದರು. ದಿಲ್ಲಿಯ ಬಾದಶಹನನ್ನು ಪಂದ್ಯಗಳಲ್ಲಿಯ ರಾಜನಂತೆ ನಿಷ್ಪತ್ವನನ್ನಾಗಿ ಮಾಡಿದರು. ನಾನಾಸಾಹೇಬರ ನಂತರ ವಿಶ್ವಾಸರಾವ, ಅನಂತರ ಅವರ ವಂಶಜರು ಹೀಗೆ ಹತ್ತೊಂಬತ್ತನೆಯ ಶತಮಾನದ ಅಂತ್ಯದ ವರೆಗೂ ನಡೆಯಿತು. ಈಗ ಅಮೇರಿಕದ ಆಂತರಿಕ ಯುದ್ಧದಿಂದ ಪ್ರಾರಂಭವಾದ ಗಾಳಿ ಹಿಂದುಸ್ತಾನದಲ್ಲಿಯೂ ಬೀಸತೊಡಗಿತು, ಪೇಶವೆಯರ ಪ್ರಭಾವ ಕಡಿಮೆಯಾಗತೊಡಗಿತು. ಪಾಶ್ಚಾತ್ಯ ದೇಶಗಳಲ್ಲಿ ಪ್ರಚಲಿತವಾಗುತ್ತಿದ್ದ ಪ್ರಜಾಪ್ರಭುತ್ವ

ಭಾರತವರ್ಷಕ್ಕೆ ಕೂಡ ಬರಲಿ ಎಂಬ ಇಚ್ಛೆಯುಳ್ಳ ಹಾಗೂ ಅದನ್ನು ಕೃತಿರೂಪದಲ್ಲಿ ತರುವಂಥ ರಾಜಪುರುಷರೂ ಉದಯಿಸಿದರು. ಆತನೇ ಹದಿನೇಳನೆಯ ಪೇಶವೆಯ ಕಾಲದಲ್ಲಿ ಪ್ರಾರಂಭವಾದ ಅರಾಜಕತೆಗೆ ಬೇರೆಯೇ ಒಂದು ತಿರುವು ದೊರಕಿತು. ಆ ತಿರುವಿನಲ್ಲಿಯೇ ಪ್ರಜಾಪ್ರಭುತ್ವದ ನಿರ್ಮಾಣವಾಯಿತು. ಬ್ರಿಟಿಶ್ ರಾಜರಂತೆ ದಿಲ್ಲಿಯ ಬಾದಶಹ ಸಾಮ್ರಾಜ್ಯಕ್ಕೆ 'ಶಾಹನ್‌ಶಾಹ' ಎಂದು ಉಳಿದ. ಐತಿಹಾಸಿಕ ಕಾರಣಗಳಿಂದ ದೇಶದ ಹೆಸರು 'ಹಿಂದುಸ್ತಾನ' ಎಂದೇ ಉಳಿಯಿತಾದರೂ ದೇಶದ ಸಂವಿಧಾನ ಧರ್ಮನಿರಪೇಕ್ಷವಾಗಿತ್ತು.

ಇದನ್ನೆಲ್ಲ ಓದಿ ಗಂಗಾಧರಪಂತರ ಅನೇಕ ಪ್ರಶ್ನೆಗಳಿಗೆ ಉತ್ತರ ಸಿಕ್ಕಿತು. ಅವರು ನೋಡುತ್ತಿರುವ 'ಹಿಂದುಸ್ತಾನ' ಒಂದು ಬೇರೆ ಇತಿಹಾಸವಿದ್ದ ದೇಶವಾಗಿತ್ತು. ಅದಕ್ಕೆ ಪಾಶ್ಚಾತ್ಯ ರಾಷ್ಟ್ರಗಳ ಗುಲಾಮಗಿರಿಯ ಪರಿಚಯವೇ ಇರಲಿಲ್ಲ. ಆದರೆ ಪ್ರತಿಯೊಂದು ಹೆಜ್ಜೆಯ ಹಿಂದೆ ಒಂದು ರೀತಿಯ ಆತ್ಮವಿಶ್ವಾಸವಿತ್ತು, ಕೀಳರಿಮೆಯಿರಲಿಲ್ಲ. ಭಾರತೀಯ ವಸ್ತುಗಳು ಬ್ರಿಟೀಷ ವಸ್ತುಗಳ ನಕಲಿ ಮಾಲು, ಆದರೆ 'ಇಂಪೋರ್ಟೆಡ್' 'ಪರದೇಶೀ ಸಾಮಾನುಗಳೆಂದರೆ ಅತಿ ಶ್ರೇಷ್ಠವೆಂಬ ಭಾವನೆಗೆ ಅಲ್ಲಿ ಆಸ್ಪದವೇ ಇರಲಿಲ್ಲ. ಮುಂಬಯಿಯಲ್ಲಿಯ ಕೆಲವು ಸಾಹೇಬರು ಕೂಡ ದೇಶೀಯರೊಂದಿಗೆ ನಮ್ರತೆಯಿಂದ ವರ್ತಿಸುತ್ತಿದ್ದರು. ಭಾರತೀಯರ ಹಿಂದೆ ಒಂದು ಸಾಮರ್ಥ್ಯಶಾಲೀ ರಾಜಪಡೆಯೆಂಬ ಅರಿವು ಈ ವಿದೇಶೀಯರಿಗಿತ್ತು.

ಪಂತರಿಗೆ ಸಮ್ರಾಟ ಅಶೋಕನ ಕಾಲದ ಭಾರತದ ನೆನಪಾಯಿತು. ಜೊತೆಗೆ ತಮಗೆ ಪರಿಚಯವಿದ್ದ ಸಮಕಾಲೀನ ಭಾರತ ದೇಶವನ್ನು ನೆನಪಿಸಿಕೊಂಡರು. ಅನೇಕ ಶತಮಾನಗಳ ಗುಲಾಮಗಿರಿಯನ್ನು ಅನುಭವಿಸಿ ಈಗ ಸ್ವತಂತ್ರವಾಗಿದ್ದ ದೇಶ ಅದು. ಒಂದು ದೇಶದ ಕಾಲಖಂಡದಲ್ಲಿ ಇಪ್ಪತ್ತೆಂಟು ವರುಷಗಳೆಂದರೆ ಬಹಳ ಕಡಿಮೆ. ಒಂದು ಬದಿಗೆ ವಾಸ್ತವಕ್ಕಿಂತ ಹೆಚ್ಚಿನ ಆತ್ಮವಿಶ್ವಾಸ, ಇನ್ನೊಂದು ಬದಿಗೆ ಕೀಳರಿಮೆ– ಇವೆರಡರ ಮಧ್ಯದ ಕಂದಕದಲ್ಲಿ ಕುಸಿದು ಬೀಳದೆ ಸಾಕಷ್ಟು ಜಾಗ್ರತೆ ವಹಿಸಿ ಒಂದು ನಿರ್ದಿಷ್ಟ ಮಾರ್ಗದದಿ ನಡೆದರೆ ನಮ್ಮ ದೇಶ ಕೂಡ ಇನ್ನು ಅನೇಕ ದಶಕಗಳಲ್ಲಿ ಸಮ್ರಾಟ ಅಶೋಕನ ಕಾಲದ ಪರಿಸ್ಥಿತಿಗೆ ಬಂದೇ ಬರುತ್ತದೆ! ಆದರೆ ಅದಕ್ಕಾಗಿ ಭಾರತೀಯರಲ್ಲಿ ಶಿಸ್ತು ಹಾಗು ಜವಾಬ್ದಾರಿಯ ಅರಿವು ಮಾತ್ರ ಬೇಕು... ಗಂಗಾಧರಪಂತರು ಭವಿಷ್ಯಕಾಲದ ಬಗ್ಗೆ ಆಶಾವಾದಿಯಾಗಿದ್ದರು.

ಉಕ್ಕಿ ಬರುತ್ತಿರುವ ತಮ್ಮ ವಿಚಾರಧಾರೆಗಳನ್ನು ತಡೆಹಿಡಿದು ಪಂತರು, ಇತರ ಪುಸ್ತಕಗಳನ್ನು, ಕಾಗದ ಪತ್ರಗಳು, ಬಖರು ಇತ್ಯಾದಿಗಳನ್ನು ನೋಡಲು ಪ್ರಾರಂಭಿಸಿದರು. ಅವರ ಪರಿಚಯದ 'ಭಾವೂಸಾಹೇಬರ ಬಖರ'ನ್ನು ಬೇರೆ ದೃಷ್ಟಿಕೋನದಿಂದ ಬರೆದುದಾಗಿತ್ತು. ಯುದ್ಧದ ವರ್ಣನೆಯನ್ನು ಓದುತ್ತಿದ್ದಂತೆ ಅವರ ಕಣ್ಣೆದುರು ಒಂದು ಘಟನೆ ಬಂತು.

"...ಆ ಸಮಯದಲ್ಲಿ ವಿಶ್ವಾಸರಾಯರು ಹುಂಜೂರಾತಿಯ ಜನರ ನಡುವೆ ಬಂದು ಮುಂತ್ತಿಗೆ ಹಾಕಿದರು. ಅದೊಂದು ಈಶ್ವರೀಯ ಇಚ್ಛೆಯಂತೆ ಒಮ್ಮಿಂದೊಮ್ಮೆಲೆ ಅವರ ಕಿವಿಯ ಹತ್ತಿರದಿಂದ ಗುಂಡೊಂದು ಹಾರಿಹೋಯಿತು. ಎಳ್ಳು ಕಾಳಷ್ಟು ಅಂತರವಾಗಿದ್ದರೆ ನಾನಾಸಾಹೇಬರು ವಿರೂ ಸಾಯುತ್ತಿದ್ದರು..."

ರಾತ್ರಿ ಎಂಟು ಗಂಟೆಯಾಗಿತ್ತು. ಗ್ರಂಥಪಾಲರು ಬಂದು ಮುಚ್ಚುವ ಸಮಯವಾಯಿತೆಂದು ವಿನಮ್ರವಾಗಿ ಸೂಚಿಸಿದರು. ಪಂತರು ತಮ್ಮ ಅಭ್ಯಾಸದ ಗುಂಗಿನಿಂದ ಒಮ್ಮೆಲೇ ಎಚ್ಚೆತ್ತರು. "ಇವೆಲ್ಲ ಕಾಗದಪತ್ರಗಳು ನಾಳೆ ನನಗೆ ಪುನಃ ನೋಡಲಿಕ್ಕೆ ಬೇಕು." ಎಂದು ಅವನಿಗೆ ಸೂಚಿಸಿ ಹೊರಗೆದ್ದು ಬಂದರು.

ಮರೆವಿನಿಂದಾಗಿ 'ಭಾವೂಸಾಹೇಬರ ಬಖರ' ಮಾತ್ರ ಅವರ ಜೇಬಿನಲ್ಲಿಯೇ ಉಳಿದಿತ್ತು.

ಆ ರಾತ್ರಿಗಾಗಿ ಅವರು ಒಂದು ಗೆಸ್ಟ್-ಹೌಸಿನಲ್ಲಿ ಕೋಣೆಯನ್ನು ಹಿಡಿದರು. ಊಟ ಮಾಡಿ ಕಾಲು ಸಡಿಲಾಗಲು ನಾಲ್ಕು ಹೆಜ್ಜೆಗಳನ್ನು ಆಜಾದ ಮೈದಾನದತ್ತ ಹಾಕಿದರು. ಮೈದಾನದಲ್ಲಿ ಒಂದು ಒಡಿಗೆ ಮಂಟಪ ಹಾಕಿದ್ದರು. ಎದುರಿಗೆ ಸಾಕಷ್ಟು ಜನರ ಗದ್ದಲವಿದ್ದಿತು. ಯಾರದೋ ಉಪನ್ಯಾಸವೂ ನಡೆದಿತ್ತು. ಸ್ಟೇಜಿನ ಮೇಲೆ ಒಂದೇ ಒಂದು ಖುರ್ಚಿಯಿತ್ತು. ಅದರಲ್ಲಿ ಯಾರೂ ಕೂತಿರಲಿಲ್ಲ. ಎದುರಿನ ಟೇಬಲ್ ಮೇಲೆ ಹೂದಾನಿಯಲ್ಲಿ ಹೂವುಗಳನ್ನು ಚೊಕ್ಕಟವಾಗಿ ಹೊಂದಿಸಿಟ್ಟಿದ್ದರು.

ಸ್ಟೇಜು. ಖಾಲಿ ಖುರ್ಚಿ... ಭಾಷಣ... ದೀಪದತ್ತ ಕೀಟವು ಆಕರ್ಷಿತವಾಗುವಂತೆ ಪಂತರು ಆ ಖಾಲಿ ಖುರ್ಚಿಯತ್ತ ಆಕರ್ಷಿತರಾದರು. ತಮ್ಮ ವಿಚಾರ ತಂದ್ರಿಯಲ್ಲಿಯೇ ಅವರು ಸ್ಟೇಜನ್ನು ಏರಿ ಆ ಖುರ್ಚಿಯಲ್ಲಿ ಆಸೀನರಾದರು. ಈ ಘಟನೆ ನಡೆಯುತ್ತಿದ್ದಂತೆ ವ್ಯಾಖ್ಯಾನಕಾರರು ತಮ್ಮ ವಾಗ್ಧಾರೆಯನ್ನು ನಿಲ್ಲಿಸಿದರು. ಶ್ರೋತೃಗಳು ಕೂಗ ಹತ್ತಿದರು.

"ಖುರ್ಚಿ ಖಾಲಿ ಮಾಡಿರಿ."

"ಈ ವ್ಯಾಖ್ಯಾನ ಮಾಲೆಗೆ ಅಧ್ಯಕ್ಷರಿರುವುದಿಲ್ಲ"

"Get off the chairs"

"The chair is symbolic"

"ಖುರ್ಚಿಯ ಮೇಲೆ ಯಾರೂ ಕೂಡ್ರಬಾರದು."

'ಅಧ್ಯಕ್ಷರಿಲ್ಲದ ಸಭೆ! ಆಶ್ಚರ್ಯ!' ಗಂಗಾಧರ ಪಂತರ ಪಿತ್ತ ನೆತ್ತಿಗೇರಿತು. ಮರುಕ್ಷಣ ಮೈಕಿನತ್ತ ಹೋಗಿ ವ್ಯಾಖ್ಯಾನಕಾರರನ್ನು ಒಡಿಗೆ ಸರಿಸಿ ಮಾತಿಗೆ ಪ್ರಾರಂಭಿಸಿದರು: "ಸಭ್ಯಸ್ತ್ರೀ-ಪುರುಷರೇ. ಅಧ್ಯಕ್ಷರಿಲ್ಲದ ಸಭೆಯೆಂದರೆ, ಡೆನ್ಮಾರ್ಕ ರಾಜಪುತ್ರನಿಲ್ಲದ ಹ್ಯಾಮ್ಲೆಟ್ ನಾಟಕ!" ಆದರೆ ಕೇಳುಗರು ಅವರಿಗೆ ಮುಂದೆ ಮಾತನಾಡಲು ಆಸ್ಪದವನ್ನೇ ಕೊಡಲಿಲ್ಲ.

"ಸಾಕು, ಸಾಕು! ಸ್ವಾಗತ ಭಾಷಣ, ಅಧ್ಯಕ್ಷೀಯ ಭಾಷಣ, ಸಮಾರೋಪ ಭಾಷಣಗಳನ್ನು ಕೇಳಿ, ಕೇಳಿ ಸಾಕಾಗಿ ಹೋಗಿದೆ."

"ನಮಗೆ ಕೇವಲ ಉಪನ್ಯಾಸ ಕೇಳಬೇಕಾಗಿದೆ."

"ಆ ನಿಮ್ಮ ಹಳೆಯ ಪದ್ಧತಿ ನಮಗೆ ಬೇಡ"

೯೯೯ ಸಭೆಗಳಲ್ಲಿ ಗರ್ಜಿಸಿದ ಗಂಗಾಧರಪಂತರು ಈ ಗದ್ದಲಕ್ಕೆ ಮಣಿಯಲಿಲ್ಲ; ತಮ್ಮ ಮಾತನ್ನು ಮುಂದುವರಿಸಿದರು. ಅವರ ಮೈಮೇಲೆ ತತ್ತಿ, ಟೊಮ್ಯಾಟೊ, ಬಟಾಟೆ ಇತ್ಯಾದಿಗಳ ಮಳೆಯೇ ಪ್ರಾರಂಭವಾಯಿತು. ಆದರೂ ಅವರು ಮಾತನಾಡುತ್ತಲೇ ಇದ್ದರು. ಈಗ ಕೇಳುಗರು ಸ್ಟೇಜಿನ ಮೇಲೆಯೇ ಆಕ್ರಮಣ ಮಾಡಿದರು. ಆ ಗದ್ದಲದಲ್ಲಿ ಅದೃಶ್ಯರಾದ ಗಂಗಾಧರಪಂತರು ಮತ್ತೆ ಯಾರಿಗೂ ಕಾಣಲಿಲ್ಲ!

"ಮುಂದಿನ ವಿಷಯ ನಿನಗೆ ಗೊತ್ತಿದ್ದದ್ದೇ ಇದೆಯಲ್ಲ. ಮರುದಿನ ನಾನು ಆಜಾದ ಮೈದಾನದಲ್ಲಿ ಸಿಕ್ಕೆ." ಎಂದು ತಮ್ಮ ಕಥೆಯನ್ನು ಮುಗಿಸುತ್ತ ಪ್ರೊಫೆಸರ್ ಗಾಯತೊಂಡೆಯವರು ಉದ್ಗರಿಸಿದರು; "ರಾಜೇಂದ್ರ! ಈ ಎಲ್ಲವನ್ನು ನಿನ್ನೊಬ್ಬನ ಎದುರಿಗೆ ಮಾತ್ರ ಹೇಳಿರುವೆ. ಯಾಕೆಂದರೆ, ನೀನೊಬ್ಬನೇ ಈ ಎಲ್ಲದರ ಕಾರಣ ಮೀಮಾಂಸೆಯನ್ನು ಮಾಡಲು ಸಮರ್ಥ."

"ಪಂತರೆ! ಈ ಅನುಭವ ಆಗುವುದಕ್ಕಿಂತ ಮೊದಲು ನೀವು ಏನು ಮಾಡುತ್ತಿದ್ದಿರಿ?" ರಾಜೇಂದ್ರ ಕೇಳಿದ.

"ನಾನು ಕೆಟಾಸ್ಟ್ರೊಫಿ ಚರ್ಚಾಕೂಟವನ್ನು ಮುಗಿಸಿ ಮನೆಗೆ ಹೊರಟಿದ್ದೆ. ನಿನ್ನ ಭಾಷಣದ ಕುರಿತೇ ವಿಚಾರ ಮಾಡುತ್ತ ನಡೆದಿದ್ದೆ," ಪಂತರು ಹೇಳಿದರು.

"ಅಂದರೆ, ಆ ಚರ್ಚಾಕೂಟದಲ್ಲಿ ಮಂಡಿಸಿದ ವಿಚಾರಗಳು ನಿಮ್ಮ ತಲೆಯಲ್ಲಿ ಸುತ್ತುತ್ತಿರಬೇಕಲ್ಲ? ಅದರೊಂದಿಗೆ ನೀವು ಪಾನೀಪತ್ ಯುದ್ಧದ ಕುರಿತು ಸಹ ವಿಚಾರ ಮಾಡುತ್ತಿದ್ದಿರೇನು...?" ರಾಜೇಂದ್ರನ ಮುಖದಲ್ಲಿ ತುಂಟತನವಿತ್ತು.


ಅಯೊಡೆಕ್ಸ್
ಗುಣಪಡಿಸುವ
ಮುಲಾಮು ಹಚ್ಚಿರಿ.
ಬೇರೆ ಮುಲಾಮುಗಳು ನೋವನ್ನು ಉಪಶಮನ ಗೊಳಿಸಬಹುದು. ಆದರೆ ಅಯೊಡೆಕ್ಸ್ ಉಪಶಮನ ಗೊಳಿಸುತ್ತಲೇ ನೋವನ್ನು ಗುಣಪಡಿಸುತ್ತದೆ. ಏಕೆಂದರೆ ಅದರಲ್ಲಿ ಅಯೋಡಿನ್ ಇದೆ.
ಸ್ನಾಯು ಮತ್ತು ಸಂದು ನೋವುಗಳಿಗೆ ಏಕಮಾತ್ರ ಮುಲಾಮು—ಅಯೊಡೆಕ್ಸ್.
IODEX
Methyl Salicylate
ಅಯೊಡೆಕ್ಸ್ ಹಚ್ಚಿರಿ, ಮತ್ತೆ ಓಡಾಡಿರಿ.

"ಹೌದು, ಅಪ್ಪರಲ್ಲಿ ಟ್ರಕ್ಕಿನ ಆಘಾತದಿಂದ ನನ್ನ ಸ್ಮೃತಿ ತಪ್ಪಿತು. ಈ ವಿಚಾರ ನನ್ನ ನೆನಪಿನಲ್ಲಿ ಇದ್ದುದರಿಂದ ನಾನು ಹೇಳುವ ಕಥೆಯೆಲ್ಲ, ವಾಸ್ತವದಲ್ಲಿ ನಡೆದಂತೆಯೇ ನನಗನಿಸಿತು.' ಇಷ್ಟೇ ತಾನೆ ಇಲ್ಲಿ ನೀನು ಹೇಳುವುದು? ಹೌದು! ಅದು ನನಗೆ ಗೊತ್ತಿದೆ. ನನಗೆ ಕೂಡ ಮೊದಮೊದಲು ಅದೇ ಕಲ್ಪನೆಯಿದ್ದಿತ್ತು. ಸ್ಮೃತಿ ತಪ್ಪಿದುದರಿಂದಲೇ ನಾನು ಹೇಗೋ ಮುಂಬಯಿಗೆ ಹೋಗಿರಬಹುದೆಂದು ನನಗೂ ಮೊದಲು ಅನಿಸಿತ್ತು. ಬಹುತೇಕ ಇತರರ ಅಭಿಪ್ರಾಯವೂ ಇದೇ ಆಗಿದೆ. ಅಷ್ಟನ್ನು ಕೇಳಲು ನಾನು ನಿನ್ನ ಹತ್ತಿರ ಬರುತ್ತಿರಲಿಲ್ಲ. ಆದರೆ ನನಗೆ ಬಂದ ಅನುಭವ ಸತ್ಯಸೃಷ್ಟಿಯದ್ದೇ ಆಗಿತ್ತು. ಇದು ನನಗೆ ಖಾತ್ರಿಯಾಗಿದೆ. ಇಲ್ಲಿ ನೋಡು ಈ ಸಾಕ್ಷಿಯನ್ನು." ಎನ್ನುತ್ತ ಪಂತರು ಜೇಬಿನಿಂದ ಒಂದು ಕಾಗದದ ತುಂಡನ್ನು ಹೊರಕ್ಕೆ ತೆಗೆದರು. 'ಭಾವೂಸಾಹೇಬರ ಬಖರ್'ನಲ್ಲಿಯ ಆ ಮುದ್ರಿತ ಪುಟವನ್ನು ರಾಜೇಂದ್ರನಿಗೆ ಕೊಟ್ಟರು. ಅದರಲ್ಲಿಯ ವಿಷಯವನ್ನು ಓದುತ್ತ ಇತಿಹಾಸದ ಅಷ್ಟೊಂದು ಅಭ್ಯಾಸವಿಲ್ಲದ ರಾಜೇಂದ್ರನ ಮುಖ ಕೂಡ ಗಂಭೀರವಾಯಿತು. ಪಂತರು ಮುಂದುವರೆದು ಹೇಳಿದರು. "ಈ ಕಾಗದ ನನಗೆ ನನ್ನ ಕೋಟಿನ ಲೈನಿಂಗಿನಲ್ಲಿ ಸಿಕ್ಕಿತು. ಅದು ನಾನು ಮುಂಬಯಿಯಲ್ಲಿ ಲೈಬ್ರರಿಗೆ ಹೋದಾಗ ತಪ್ಪಿ ನನ್ನ ಕೋಟಿನ ಜೇಬನ್ನು ಸೇರಿತ್ತು. ಮರುದಿನ ನಾನು ಅದನ್ನು ತಿರುಗಿ ಲೈಬ್ರರಿಯನ್ನಿಗೆ ಕೊಡಲು ಬಯಸಿದ್ದೆ. ಆದರೆ ಅಂದಿನ ಆಜಾದ ಮೈದಾನದ ಗದ್ದಲದಲ್ಲಿ ಆ 'ಬಖರ್' ಎಲ್ಲೋ ಬಿದ್ದು ಇದೊಂದು ಪುಟ ಮಾತ್ರ ಉಳಿದಿದೆ."

ರಾಜೇಂದ್ರನ ವಿಚಾರಚಕ್ರ ಇನ್ನೂ ತಿರುಗುತ್ತಲೇ ಇತ್ತು. ಬಖರಿನ ಪುಟವನ್ನು ಮತ್ತೆ ಮತ್ತೆ ನೋಡುತ್ತ ಗಂಟಲು ಸರಿಪಡಿಸಿಕೊಂಡು ಹೇಳಲು ಪ್ರಾರಂಭಿಸಿದ.

"ನಾನು ನಿಮ್ಮ ಹೇಳಿಕೆಗಳ ಬಗ್ಗೆ ಎಷ್ಟೋ ಸಂಶಯ ಪಡುವುದಿಲ್ಲ. ನಿಮಗೆ ಬಂದ ಅನುಭವಗಳು ಸತ್ಯವಾಗಿವೆ ಎಂದು ತಿಳಿದುಕೊಂಡೇ ನಾನು ಹೇಳುತ್ತಿರುವೆ. ಅದು ಎರಡು ತರ್ಕಗಳ ಮೇಲೆ ನಿಂತಿದೆ. ಆ ತರ್ಕಗಳು ಬಹಳ ವಿಲಕ್ಷಣವಾಗಿವೆ. ನೀವು ಪ್ರತ್ಯಕ್ಷ ಅನುಭವಿಸಿದವರಾಗಿದ್ದರು ಕೂಡ ಅವುಗಳನ್ನು ನಂಬುತ್ತೀರೆಂಬ ಖಾತ್ರಿ ನನಗಿಲ್ಲ. ಆದರೂ ನಾನು ಪ್ರಯತ್ನ ಮಾಡುವೆ. ಕೆಲವು ದಿನಗಳ ಹಿಂದೆ ನಾನು ನಿಮಗೆ ಕೆಟಾಸ್ಟ್ರೊಫಿ ಕುರಿತು ತುಸು ಹೇಳಿದ್ದೆನಷ್ಟೆ."

"ಹೌದು, ಚರ್ಚಾಕೂಟದಲ್ಲಿಯ ನಿನ್ನ ಭಾಷಣವನ್ನು ನಾನು ಬಹಳ ಲಕ್ಷ್ಯಗೊಟ್ಟು ಕೇಳಿದ್ದೆ." ಅಧ್ಯಕ್ಷರಾಗಿದ್ದರೂ ಇತರರ ಭಾಷಣವನ್ನು ಲಕ್ಷ್ಯಪೂರ್ವಕವಾಗಿ ಕೇಳುವುದು ಪಂತರ ಪದ್ಧತಿಯಾಗಿತ್ತು.

"ಈಗ ನಾವು ಆ ಸಿದ್ಧಾಂತವನ್ನು ಪಾನೀಪತ್ ಯುದ್ಧಕ್ಕೆ ಹಚ್ಚೋಣ." ರಾಜೇಂದ್ರ ಹೇಳಹತ್ತಿದ. "ನಾನೇನೂ ಇತಿಹಾಸ ಸಂಶೋಧಕನಲ್ಲ. ಆಗ ಮರಾಠರು ಪಾನೀಪತ್ ಯುದ್ಧದಲ್ಲಿ ಯಾಕೆ ಸೋತರು? ಎಂಬುದರ ಪೋಸ್ಟ್‌ಮಾರ್ಟೆಮ್ ಮಾಡುತ್ತ ಕೂಡುವುದಿಲ್ಲ. ಆದರೆ ಯುದ್ಧಗಳು ರಣಾಂಗಣದಲ್ಲಿ ಎದುರೆದುರು ನಿಂತೇ ಆಗುತ್ತಿದ್ದುದು ಕೆಟಾಸ್ಟ್ರೊಫಿ ಥಿಯರಿಯ ಉತ್ಕೃಷ್ಟ ಉದಾಹರಣೆಯಾಗಿವೆ. ಉಭಯ ಪಕ್ಷಗಳಲ್ಲಿ ಸಾಕಷ್ಟು ಯುದ್ಧಸಾಮಗ್ರಿಗಳು ಸೈನ್ಯಬಲ ಇತ್ಯಾದಿಗಳಿದ್ದರೂ ಯುದ್ಧದ ಪರಿಣಾಮ ಸೇನಾಪತಿಯ ಮೇಲೆಯೇ ಅವಲಂಬಿಸಿರುತ್ತದೆ. ಪ್ರಾರಂಭದಲ್ಲಿಯೇ ಜೇರಿಗೆ ಬಂದ ಮರಾಠರಿಗೆ 'ಗುಂಡು ಬಡಿದು ವಿಶ್ವಾಸರಾವ ಸತ್ತ' ಎಂಬ ಘಟನೆ ಕೆಟಾಸ್ಟ್ರೊಫಿಯ ಗರಿಷ್ಠ ಮಿತಿ ಎಂದಾಯಿತು. ಈ ನಿರ್ದಿಷ್ಟ ಮರ್ಯಾದೆಯನ್ನು ದಾಟಿದ ಕ್ಷಣಕ್ಕೆ ಯುದ್ಧ ಪರಿಸ್ಥಿತಿಯಲ್ಲಿ ಒಮ್ಮೆಲೇ ಬದಲಾವಣೆಗಳಾಗುತ್ತವೆಂಬುದು ನಮ್ಮ ಸಿದ್ಧಾಂತ. ಭಾವೂಸಾಹೇಬರು ಆ ಗದ್ದಲದಲ್ಲಿ [illegible] ಇತರ

[illegible]


ಪ್ರಸಾಧನಗಳು ನಿಮ್ಮ
ತ್ವಚೆಯ ದೋಷಗಳನ್ನು

ಸರದಾರರು ಹತಬುದ್ಧರಾದರು-ಸೈನ್ಯದಲ್ಲಿ ಹಾಹಾಕಾರವೆದ್ದು ಮರಾಠರು ಸೋಲನ್ನಪ್ಪಿದರು..."

"ನಿಜ, ಇದು ನಮ್ಮ ಇತಿಹಾಸ .." ಪಂತರು ಹೇಳಿದರು.

"ಆದರೆ ನೀವು ಈಗ ತೋರಿಸಿದ ಬಖರದ ಪುಟ ಬೇರೆ ಇತಿಹಾಸವನ್ನೇ ಹೇಳುತ್ತದೆ; ವೈರಿಯ ಗುಂಡು ವಿಶ್ವಾಸರಾಯನಿಗೆ ಗಾಯ ಮಾಡದೆ ಬದಿಯಿಂದ ಹಾದುಹೋಯಿತು! ಇದರಿಂದ ಘಟನೆಯಲ್ಲಿ ತದ್ವಿರುದ್ಧ ಪರಿಣಾಮವಾಯಿತು. ಮರಾಠರು ಇದೊಂದು ಈಶ್ವರೀ ಸಂಕೇತವೆಂದು ತಿಳಿದು ಮತ್ತೆ ಜೀವದ ಹಂಗು ತೊರೆದು ಕಾದಾಡಿ ಅಬ್ದಾಲಿಯನ್ನು ಸೋಲಿಸಿದರು. ಒಂದು ಸಣ್ಣ ಕಾರಣದಿಂದ ವಿಪರೀತ ಪರಿಣಾಮಗಳಾದ ಇಂಥ ಯುದ್ಧಗಳ ಉದಾಹರಣೆಗಳು ಇತಿಹಾಸದಲ್ಲಿ ಸಾಕಷ್ಟು ಸಿಕ್ಕುತ್ತವೆ. ಆದರೆ ಅವುಗಳು ಕೆಟಾಸ್ಟ್ರೊಫಿ ಸಿದ್ಧಾಂತದ ವಿಶಿಷ್ಟ ಮರ್ಯಾದೆಯಲ್ಲಿ ಬರಬೇಕಾಗಿತ್ತು. ವಾಟರ್ಲೂ ಯುದ್ಧದ ಕುರಿತು ಕೂಡ ಇದೇ ರೀತಿ ಹೇಳಿಕೆಗಳಿವೆ."

"ಹೌದಪ್ಪಾ, ಇದೆಲ್ಲಾ ಒಪ್ತೀನಿ. ಆದರ ಪಾನೀಪತ್ ಯುದ್ಧದ ಪರಿಣಾಮ ಏನಾಗೇದs ಅಂಬೂದು ನಮಗೆಲ್ಲ ಗೊತ್ತಿದೆಯಲ್ಲ! ಆದ್ದರಿಂದ ಹೀಗೆ ಘಟಿಸಿದ್ದರೂ ಈ ತರದ ಚರ್ಚೆ ನನಗೆ ಅಸಂಬದ್ಧ ಅವಾಸ್ತವ ಅನಗತ್ಯದ," ಗಂಗಾಧರಪಂತರು ನಿಷ್ಠುರವಾಗಿ ಹೇಳಿದರು.

"ಅವಾಸ್ತವ ಎಂದರೇನು? ಇಲ್ಲಿಯೇ ನನ್ನ ಎರಡನೆಯ ತರ್ಕ ಬರುತ್ತದೆ. ಈ ಸೃಷ್ಟಿಯಲ್ಲಿ ಪ್ರತ್ಯಕ್ಷ ನಡೆದುದನ್ನು ನಾವು ನಮ್ಮ ಅನುಭವ ಎಂದು ನಿರ್ಧರಿಸುತ್ತೇವೆ. ಈ ಅನುಭವ ನಮ್ಮ ಇಂದ್ರಿಯಗಳಿಂದ ಪ್ರತ್ಯಕ್ಷವಾಗಿ ಅಥವಾ ಯಂತ್ರಗಳ ಉಪಯೋಗದಿಂದ ಅಪ್ರತ್ಯಕ್ಷವಾಗಿ ಹೀಗೆ ಎರಡು ಪದ್ಧತಿಗಳಿಂದ ನಿರ್ಧರಿಸುತ್ತೇವೆ. ನಮ್ಮ ಮುಟ್ಟ ಕಾಣುವುದರ ಮೇಲಿದೆ. ಆದರೆ ನಾವು ನೋಡಿದ್ದೇ ಪುಸ್ತಕದಲ್ಲಿ ಘಟಿಸುತ್ತದೆಯೇ? ಅಥವಾ ಅದರ ಹಿಂದೆ ಮತ್ತೇನಾದರೂ ಸ್ವರೂಪಗಳಿವೆಯೇ?" ತನ್ನ ಪ್ರಶ್ನೆಗೆ ತಾನೇ ಉತ್ತರ ಕೊಡುತ್ತ ರಾಜೇಂದ್ರ ಮುಂದುವರಿದ. "ಈ ಅನೇಕ ಸ್ವರೂಪಗಳ ಅನುಭವವನ್ನು ವಿಜ್ಞಾನಿಗಳು ಅತಿ ಸೂಕ್ಷ್ಮ ವಸ್ತುವಿನ ವ್ಯವಹಾರ ಸಂಬಂಧದಲ್ಲಿಯೂ ಮಾಡಿಕೊಂಡಿದ್ದಾರೆ. ಪರಮಾಣು ಅಥವಾ ಅದರಲ್ಲಿದ್ದ ಇಲೆಕ್ಟ್ರಾನ್, ಪ್ರೋಟಾನಿನಂಥ ಮೂಲ ಕಣಗಳು ನಮ್ಮ ವ್ಯವಹಾರದಲ್ಲಿ ಬಹುರೂಪಿತನವನ್ನು ತೋರಿಸುತ್ತವೆ. ಯಾವುದೋ ಒಂದು ಚೆಂಡನ್ನು ಒಂದು ದಿಕ್ಕಿನತ್ತ ಎಸೆದಾಗ ನಿರ್ದಿಷ್ಟ ವೇಗದಿಂದ ಚಲಿಸಿದ ಆ ಚೆಂಡು ಗೋಡೆಗೆ ಅಪ್ಪಳಿಸಿ ಎಲ್ಲಿ ಬೀಳಬಹುದೆಂಬುದನ್ನು ನಾವು ಗಣಿತದ ಸಹಾಯದಿಂದ ಅಥವಾ ಪ್ರಯೋಗದಿಂದ ನಿಶ್ಚಿತವಾಗಿ ಹೇಳಬಹುದು. ಆದರೆ ಸೂಕ್ಷ್ಮ ವಸ್ತುಗಳ ವಿಷಯದಲ್ಲಿ ಹಾಗೆ ಹೇಳಲು ಬರುವುದಿಲ್ಲ. ಒಂದು ಪ್ರೋಟಾನಿನತ್ತ ನಿರ್ದಿಷ್ಟ ವೇಗದಿಂದ ಒಗೆದ ಇಲೆಕ್ಟ್ರಾನ್ ಮುಂದೆ ಎಲ್ಲಿ ಹೋಗುತ್ತದೆಂಬುದನ್ನು ನಿಶ್ಚಿತವಾಗಿ ಹೇಳಲು ಬರುವುದಿಲ್ಲ. ಅಷ್ಟೇ ಏಕೆ? ಒಂದು ವೇಗದ ಇಲೆಕ್ಟ್ರಾನ್ ಇಂಥ ಒಂದು ಸ್ಥಳದಲ್ಲಿಯೇ ಇದೆ ಎಂದು ಕೂಡ ಹೇಳಲು ಬರುವುದಿಲ್ಲ. ಅದರರ್ಥ ಪರಮಾಣುವು ನಿಯಮಬಾಹಿರವಾಗಿವೆ ಎಂದೇನೂ ಅಲ್ಲ. ಆದರೆ ಅನಿಶ್ಚಿತತೆ ಸೃಷ್ಟಿಯ ಮೂಲಭೂತ ನಿಯಮಗಳಲ್ಲೊಂದಾಗಿದೆ ಎಂಬುದು ಈಗಾಗಲೇ ಸಿದ್ಧವಾಗಿದೆ." — ರಾಜೇಂದ್ರ ಸಾವಕಾಶವಾಗಿ ಹೇಳುತ್ತಿದ್ದ.

"ವೈಜ್ಞಾನಿಕ ವಿಷಯದ ಜ್ಞಾನವಿಲ್ಲದ ನನ್ನಂಥವನಿಗೆ ಇದೆಲ್ಲ ಬಹಳ ಆಶ್ಚರ್ಯವಾಗಿ ಕಾಣುತ್ತದೆ! ಆದರೆ ನೀನು ಹೇಳಿದ್ದಕ್ಕೂ ನನ್ನ ಅನುಭವಕ್ಕೂ ಎಲ್ಲಿಯ ಸಂಬಂಧ?" ಪಂತರು ಕೇಳಿದರು.

"ಈಗ ಅದು ನಿಮಗೆ ಗೊತ್ತಾಗ್ತದ! ನಾನು ಹೇಳಿದ ಈ ಸಿದ್ಧಾಂತವನ್ನು ತಿಳಿದುಕೊಳ್ಳಲು ೧೯೨೦ ರಿಂದ ೧೯೩೦ ರ ದಶಕದ ಪ್ರಮುಖ ವಿಜ್ಞಾನಿಗಳು ಕೂಡ ಬಹಳ ಕಷ್ಟಪಡಬೇಕಾಯಿತು. ಇಂದು ನಾವು ಹೇಳುವ ಪುಂಜ

ವಾದ ಈ ಸಿದ್ಧಾಂತದ ಆಧಾರದ ಮೇಲೆಯೇ ನಿಂತಿದೆ. ಅದರಲ್ಲಿ ಮೊದಲು ತಿಳಿದುಕೊಳ್ಳುವ ವಿಷಯವೆಂದರೆ, ಯಾವುದೇ ಒಂದು ವಸ್ತು ನಿರ್ದಿಷ್ಟ ಸ್ಥಿತಿಯಲ್ಲಿರುತ್ತದೆಂದು ಹೇಳಲಾರದು. ಅದರ ಅನೇಕ ಸ್ಥಿತಿಗಳು ಇರುವ ಶಕ್ಯತೆ ಇದೆ ವಿಶೇಷತಃ ಅತಿ ಸೂಕ್ಷ್ಮ ವಸ್ತುವಿನ ವಿಷಯದಲ್ಲಿ ಈ ಬೇರೆ ಬೇರೆ ಸ್ಥಿತಿಗಳು ಅವುಗಳ ಸ್ಥಿತ್ಯಂತರಗಳ ಮಾರ್ಗಗಳು ಬಹಳ ಮಹತ್ವದ್ದಾಗಿವೆ. ಅಣುವಿನಲ್ಲಿಯ ಇಲೆಕ್ಟ್ರಾನು ಕೇಂದ್ರಬಿಂದುವಿನ ಸುತ್ತ ಬೇರೆ ಬೇರೆ ಕಕ್ಷೆಯಲ್ಲಿ ಸುತ್ತುತ್ತಿರುತ್ತದೆ. ಆದರೆ ಅದು ಇಂಥದೇ ಒಂದು ಕಕ್ಷೆಯ ನಿರ್ದಿಷ್ಟ ಸ್ಥಳದಲ್ಲಿ (ಈ ಪೃಥ್ವಿ ಸೂರ್ಯನ ಸುತ್ತ ತಿರುಗುವಾಗ ನಿರ್ದಿಷ್ಟ ಕಕ್ಷೆಯಲ್ಲಿ, ನಿರ್ದಿಷ್ಟ ಸಮಯದಲ್ಲಿ. ನಿರ್ದಿಷ್ಟ ಸ್ಥಳದಲ್ಲಿದೆಯೆಂದು ಹೇಳಲು ಶಕ್ಯವಿರುವಂತೆ) ಇದೆಯೆಂದು ಸಾಧಿಸಲು ಶಕ್ಯವಿಲ್ಲ. ಅದರ ಕಕ್ಷೆ ಬದಲಾಗುತ್ತಿರುತ್ತದೆ. ಒಮ್ಮೊಮ್ಮೆ ತಾನಾಗಿಯೇ ಇಲೆಕ್ಟ್ರಾನು ತನ್ನ ಕಕ್ಷೆಯನ್ನು ಬದಲಿಸಿಕೊಳ್ಳುತ್ತದೆ ಅಂಥ ವೇಳೆಯಲ್ಲಿ ಅಣುವಿನಿಂದ ಶಕ್ತಿ (Energy)ಯ ಪ್ರಕ್ಷೇಪಣವಾಗುತ್ತದೆ. ಈ ಕ್ರಿಯೆ–ಅಂದರೆ ತಾನಾಗಿ ಕಕ್ಷೆಯನ್ನು ಬದಲಿಸುವುದು ಮತ್ತು ಶಕ್ತಿ ಹೊರಗೆ ಬರುವುದು ಯಾವಾಗ ಆದೀತು ಹಾಗು ಆ ಬರುವ ಶಕ್ತಿ ಯಾವ ದಿಕ್ಕಿನಿಂದ ತೂರಿ ಬಂದೀತೆಂಬ ಸಂಭವವನ್ನೂ ಹಚ್ಚಾಗಿ ಹೇಳಲು ಬರುವುದಿಲ್ಲ"

"ಅಂದರೆ ರೇಸಿನಲ್ಲಿ ಇಂಥದೇ ಒಂದು ಕುದುರೆ ಮೊದಲು ಬರುತ್ತದೆಂಬ ಸಂಭವವನ್ನು ಅಂಕಿ–ಸಂಖ್ಯೆಗಳಿಂದ ವ್ಯಕ್ತಪಡಿಸಿದಂತೇನು...?" ಪಂತರು ಮಧ್ಯದಲ್ಲಿಯೇ ಕೇಳಿದರು.

"ಹೌದು, ಆದರೆ ಪುಂಜವಾದದ ಗಣಿತದಿಂದ ವ್ಯಕ್ತಪಡಿಸಿದ ಸಂಭವವು ರೇಸಿನ ಸಂಭಾವ್ಯಕ್ಕಿಂತ ನಿಶ್ಚಿತವಾಗಿಯೂ ಹೆಚ್ಚು ಸರಿಯಾಗಿರುತ್ತದೆ." ರಾಜೇಂದ್ರ ತುಂಟತನದಿಂದ ಹೇಳಿದ. "ಆದರೆ ನಾನು ಇಲ್ಲಿ ಪುಂಜವಾದದ ಕುರಿತು ಹೆಚ್ಚಿಗೆ ಬಡಬಡಿಸುವುದಿಲ್ಲ. ಯಾಕೆಂದರೆ, ಅದೊಂದು ವ್ಯಾಖ್ಯಾನವೇ ಆದೀತು. ತಾತ್ಪರ್ಯವೆಂದರೆ ಪುಂಜವಾದದ ಅನೇಕ ನಿಯಮಗಳು ಪ್ರಯೋಗಸಿದ್ಧವಾಗಿವೆ. ನನ್ನ ತರ್ಕದ ಪ್ರಕಾರ ಇದೇ ತರದ ನಿಯಮಗಳು ಸೂಕ್ಷ್ಮ ಸೃಷ್ಟಿಯಂತೆ ಬೃಹತ್ ಸೃಷ್ಟಿಗೆ ಕೂಡ ಅನ್ವಯವಾಗುತ್ತಿದ್ದರೆ? ಅದರ ಅರ್ಥ ನಾವು ನೋಡುತ್ತಿರುವ ಈ ಸೃಷ್ಟಿ ಒಂದು ವಿಶಿಷ್ಟ ಪರಿಸ್ಥಿತಿಯಲ್ಲಿದೆ. ಇದರ ಹೊರತು ಈ ಸೃಷ್ಟಿಯು ಇನ್ನೂ ಅನೇಕ ರೂಪಗಳೂ ಇರುವ ಶಕ್ಯತೆ ಇದೆ ಮತ್ತು ಇಲೆಕ್ಟ್ರಾನಿನ ಸ್ಥಿತ್ಯಂತರದಂತೆ ಈ ದೊಡ್ಡ ವಸ್ತು ಕೂಡ ಒಂದು ರೂಪದಿಂದ ಇನ್ನೊಂದು ರೂಪಕ್ಕೆ ಬದಲಾಗಬಹುದು..." ಎಂದು ಹೇಳುತ್ತ ರಾಜೇಂದ್ರನು ತನ್ನ ಹೇಳಿಕೆ ಪಂತರಿಗೆ ಎಷ್ಟರ ಮಟ್ಟಿಗೆ ತಿಳಿದಿದೆಯೆಂದು ನೋಡಲು ಕ್ಷಣ ಹೊತ್ತು ನಿಂತನು.

"ಈಗ ನನ್ನ ತಲೆಯೊಳಗೆ ತುಸು ಪ್ರಕಾಶ ಬೀಳಲಿಕ್ಕೆ ಹತ್ತೇದ .." ಪಂತರು ಒಮ್ಮೆಲೆ ಉತ್ತೇಜಿತರಾಗಿ ಕೋಣೆಯಲ್ಲಿ ಅತ್ತಿಂದಿತ್ತ ಇತ್ತಿಂದತ್ತ ತಿರುಗಹತ್ತಿದರು. "ನನ್ನ ಸ್ಥಿತ್ಯಂತರವಾಗಿ ನಾನು ಈ ಪೃಥ್ವಿಯ ಮೇಲಿನ ಇದೇ ಭರತಖಂಡದಲ್ಲಿ ನಡೆದ ಬೇರೊಂದು ಸೃಷ್ಟಿಯಲ್ಲಿ ಹಾಯ್ದು ಬಂದೆ ಹೌದಲ್ಲೊ?..."

"ನೀವು ಹೇಳುವುದು ಸರಿ! ನೀವು ನೋಡಿದ ಸೃಷ್ಟಿಯಲ್ಲಿ, ಪಾನೀಪತ್ ಯುದ್ಧದಲ್ಲಿ ಮರಾಠರು ಜಯಶಾಲಿಗಳಾಗಿದ್ದರೆ... ಏನಾಗುತ್ತಿತ್ತು ಎಂಬುದಾಗಿತ್ತು. ನೀವು ಕಾಣುತ್ತಿರುವ ಈ ಸೃಷ್ಟಿಯಷ್ಟೇ ಅದರಲ್ಲಿಯ ಜನರಿಗೆ ಆ ಸೃಷ್ಟಿ ಸತ್ಯವಾಗಿ ಕಾಣುತ್ತದೆ."

"ಹೀಗೆ ಎಷ್ಟು ಸೃಷ್ಟಿಗಳು ಅಸ್ತಿತ್ವದಲ್ಲಿರಬಹುದು?" "ಸೃಷ್ಟಿಯ ಅನೇಕ, ಅಸಂಖ್ಯ ರೂಪಗಳಿರಬಹುದು. ಕೆಟಾಸ್ಟ್ರೋಫಿಯಿಂದಾಗಿ ಅನೇಕ ಸಲ ಅದರ ವಿಭಕ್ತೀಕರಣವಾಗುತ್ತಿರಬೇಕು. ಪಾನೀಪತ್ ಯುದ್ಧದ ಎರಡು ಸಂಭಾವ್ಯ ಪರಿಣಾಮಗಳಿಂದಾದ ವಿಭಕ್ತೀಕರಣವನ್ನು ನೋಡಲು ನಿಮಗೆ ಸಿಕ್ಕಿತು. ನಿಮ್ಮ ಸ್ಥಿತ್ಯಂತರದಲ್ಲಿಯ ಸ್ಥಳ ಹಾಗು ಸಮಯ ಬದಲಾಗಲಿಲ್ಲ. ಆ ಸೃಷ್ಟಿಯಲ್ಲಿ

ದಂತವೈದ್ಯರು ಹೇಳುತ್ತಾರೆ.

ನಿಯಮಿತವಾಗಿ ಹಲ್ಲುಗಳನ್ನು ಸ್ವಚ್ಛಮಾಡಿ ಒಸಡುಗಳನ್ನು ಮಸಾಜು ಮಾಡಿಕೊಂಡರೆ ದಂತಕ್ಷಯ ತಡೆದು ಒಸಡುಗಳ ತೊಂದರೆ ನಿವಾರಣೆಯಾಗುತ್ತದೆ

ಫೋರ್‌ಹೆನ್ಸ್ ಉಪಯೋಗಿಸುತ್ತಿರುವವರು ಸ್ವಸಂತೋಷದಿಂದ ಹೇಳುತ್ತಾರೆ

"ನನ್ನ ಒಸಡುಗಳು ಸುದೃಢ ಮತ್ತು ಸ್ವಾಸ್ಥ್ಯಪೂರ್ಣವಾಗಿವೆ"

"'ನಿಮ್ಮ ಫೋರ್‌ಹೆನ್ಸ್ ಟೂಥ್‌ಪೇಸ್ಟ್' ಉಪಯೋಗಿಸಿ ನನ್ನ ಒಸಡುಗಳು ಸುದೃಢ ಮತ್ತು ಸ್ವಾಸ್ಥ್ಯಪೂರ್ಣವಾಗಿವೆ. ಮೊದಲು ನನ್ನ ಒಸಡುಗಳು ತೊಂದರೆ ಕೊಡುತ್ತಿದ್ದವು... ಈಗ ನಾನು ನಿಮ್ಮ ಟೂಥ್‌ಪೇಸ್ಟ್‌ನಿಂದಾಗಿ ಈ ತೊಂದರೆಯಿಂದ ಪಾರಾಗಿದ್ದೇನೆ"

(ಸಹಿ) ಡಿ.ಎನ್. ದಾಸ್, ಶಿಖರಪುರ್.


"ನನ್ನ ಬಾಯಿಯ ದುರ್ವಾಸನೆ ಹೋಯಿತು ಒಸಡುಗಳ ತೊಂದರೆ ಇಲ್ಲವಾಯಿತು"

"....ರಾಜಮಹೇಂದ್ರಿಯ ಒಬ್ಬ ದಂತವೈದ್ಯರು... ಫೋರ್‌ಹೆನ್ಸ್ ಉಪಯೋಗಿಸಲು ನನಗೆ ಹೇಳಿದರು. ಮತ್ತು ಅತ್ಯಲ್ಪ ಕಾಲದಲ್ಲಿ ನನ್ನ ಬಾಯಿಯ ದುರ್ವಾಸನೆ ಹೋಯಿತು. ಒಸಡುಗಳ ತೊಂದರೆ ಇಲ್ಲವಾಯಿತು."

(ಸಹಿ) ಪಿ.ಜೆ. ಲಾಝುರ್, ಚೀರಾಲಾ, ಆಂಧ್ರಪ್ರದೇಶ್.

(ಈ ಪತ್ರಗಳ ಫೋಟೋ-ಪ್ರತಿಗಳನ್ನು ಜೆಫ್ರಿ ಮೇನರ್ಸ್ ಅಂಡ್ ಕಂ.ಲಿ. ಅವರ ಯಾವುದೇ ಆಫೀಸಿನಲ್ಲಿ ಬೇಕಾದರೂ ನೀವು ಕಾಣಬಹುದು).

ಹಲ್ಲುಗಳ ಸರಿಯಾದ ಸಂರಕ್ಷಣೆಗಾಗಿ ಪ್ರತಿದಿನ ರಾತ್ರಿ ಮತ್ತು ಮುಂಜಾನೆ ನಿಮ್ಮ ಹಲ್ಲುಗಳನ್ನು ಬ್ರಶ್ ಮಾಡಲು ಮತ್ತು ನಿಮ್ಮ ಒಸಡುಗಳನ್ನು ಮಸಾಜು ಮಾಡಲು ಫೋರ್‌ಹೆನ್ಸ್ ಉಪಯೋಗಿಸಿರಿ. ಜೊತೆಗೆ ಫೋರ್‌ಹೆನ್ಸ್ ಡಬ್ಬಲ್ ಆ್ಯಕ್ಶನ್ ಟೂಥ್‌ಬ್ರಶ್ ಉಪಯೋಗಿಸಿರಿ, ಯಾಕೆಂದರೆ ಹಲ್ಲುಗಳನ್ನು ಸ್ವಚ್ಛಗೊಳಿಸಲು ಮತ್ತು ಒಸಡುಗಳನ್ನು ಮಸಾಜು ಮಾಡಲು ಇದನ್ನು ವಿಶೇಷವಾಗಿ ತಯಾರಿಸಲಾಗಿದೆ.



ಫ್ಲೋರ್‌ಹೆನ್ಸ್
ದಂತವೈದ್ಯರಿಂದ
ಸೃಷ್ಟಿಸಲ್ಪಟ್ಟ ಟೂಥ್‌ಪೇಸ್ಟ್

ಉಚಿತ! ಹಲ್ಲು ಮತ್ತು ಒಸಡುಗಳ ರಕ್ಷಣೆಯ ಬಗ್ಗೆ ಬೋಧಪ್ರದ ವರ್ಣರಂಜಿತ ಪುಸ್ತಿಕೆ. ಕೃಪೆ ಮಾಡಿ 25 ಪೈಸೆಯ ಅಂಚೆಯ ಸ್ಟ್ಯಾಂಪನ್ನು ಜೊತೆಗಿಟ್ಟು ಫೋರ್‌ಹೆನ್ಸ್ ಡೆಂಟಲ್ ಎಡ್ವೈಜರಿ ಬ್ಯೂರೋ. ಡಿಪಾರ್ಟಮೆಂಟ್ T 139-168 ಪೋಸ್ಟ್ ಬ್ಯಾಗ್ ನಂ. 11463. ಬೊಂಬಾಯಿ 400 020. ಈ ವಿಳಾಸಕ್ಕೆ ಬರೆಯಿರಿ, ಬೇಕಾದ ಭಾಷೆಯನ್ನು ನಮೂದಿಸಿರಿ.

PIN CODE FOR FAST MAIL

163 F-152 Kan

ಹೋಗುವಾಗ ನಿಮ್ಮ ಸ್ಥಿತ್ಯಂತರವು ಪುಣೆಯಲ್ಲಿ ಆಗಸ್ಟ್ ೩೧, ೧೯೭೫ರಂದು ಆಯಿತು. ಮತ್ತೆ ತಿರುಗಿ ಬರುವಾಗ ಅದೇ ಸ್ಥಿತ್ಯಂತರ ಮುಂಬಯಿಯಲ್ಲಿ ಸಪ್ಟೆಂಬರ್ ೨, ೧೯೭೫ ಆಯಿತು. ಆ ಸೃಷ್ಟಿಯಲ್ಲಿ ಬದಲಾದ ಸಮಗ್ರ ರಾಷ್ಟ್ರದ ಪರಿಸ್ಥಿತಿಯೊಂದಿಗೆ ಸಾಮಾನ್ಯ ಜನಜೀವನದಲ್ಲಿಯ ಬದಲಾವಣೆಯೂ ನಿಮಗೆ ಗೋಚರಿಸಿತು. ಇತಿಹಾಸಕಾರ ಗಾಯತೋಂಡೆಯವರು ಮೊದಲೇ ನಿಧನರಾಗಿದ್ದರು. ಅವರ ಮಗನೇ ಅವರಿಗೆ ಖಾತ್ರಿಯಾಗಿ ಗೊತ್ತಿರಲಿಲ್ಲ. ಶನಿವಾರವಾಡೆ ತನ್ನ ಪೂರ್ಣಾವಸ್ಥೆಯಲ್ಲಿತ್ತು. ಆದರೆ ವಿದೇಶ ಸಂಚಾರ ಭವನ ಮುಂಬಯಿಯಲ್ಲಿರಲಿಲ್ಲ. ಬಹಳ ಜನರ, ವಸ್ತುಗಳ, ಕಟ್ಟಡಗಳ ಮಾಡೆಲ್ಲುಗಳು ಬೇರೆಯಾಗಿದ್ದುವು. ನಿಮಗೆ ಗೊತ್ತಿದ್ದ ಈ ಎಲ್ಲ ಘಟನೆಗಳು ನಿಮ್ಮ ಸ್ಥಿತ್ಯಂತರದ ದ್ಯೋತಕವಾಗಿವೆ. ಆದರೆ ಈ ರೀತಿ ನನ್ನ ಸ್ಥಿತ್ಯಂತರವಾಗಲು ಕಾರಣ ಏನು?" ಪಂತರು ಕೇಳಿದರು.

"ಪಂತರೇ! ಇದು ನನಗೆ ಗೊತ್ತಿದ್ದರೆ ಎಲ್ಲ ಸಮಸ್ಯೆಗಳೂ ಪರಿಹಾರವಾಗುತ್ತಿದ್ದುವು." ರಾಜೇಂದ್ರ ಗಂಭೀರನಾಗಿ ಹೇಳಿದ. "ವಿಶ್ವದಲ್ಲಿಯ ಇನ್ನೂ ಅನೇಕ ರಹಸ್ಯಮಯ ಘಟನೆಗಳ ಅರ್ಥವನ್ನು ವಿಜ್ಞಾನಿಗಳು ಕಾಣಬೇಕಾಗಿದೆ. ಎಷ್ಟೋ ವಿಷಯಗಳಲ್ಲಿ ವಿಚಾರಯೋಗ್ಯ ಪ್ರಶ್ನೆಗಳು ಕೂಡ ಅವರಿಗೆ ಗೊತ್ತಿಲ್ಲ. ಅಂದ ಮೇಲೆ ಉತ್ತರ ಕೊಡುವ ಮಾತಂತೂ ದೂರ ಉಳಿಯಿತು. ಆದರೆ ನನ್ನ ತರ್ಕದಂತೆ, ಸ್ಥಿತ್ಯಂತರ ಘಟಿಸುವಾಗ ಎರಡೂ ಸ್ಥಿತಿಗಳನ್ನು ಜೋಡಿಸಲು ಏನಾದರೂ ಕೊಂಡಿಗಳಿರಬೇಕು. ನಿಮ್ಮ ವಿಷಯದಲ್ಲಿ ಒಂದು, ಕೆಟಾಸ್ಟ್ರೊಫಿ ಚರ್ಚಾಕೂಟದ ನಿಮ್ಮ ಅಧ್ಯಕ್ಷ ಪದವಿ, ಹಾಗೂ ಪಾನೀಪತ್ ಕುರಿತು ನೀವು ವಿಚಾರ ಮಾಡುತ್ತಿರುವಾಗ ಆದ ಟ್ರಕ್ಕಿನ ಆಘಾತ ಎರಡನೆಯದು. ಹೀಗೆ ಎರಡು ಕೊಂಡಿಗಳೆನ್ನಬಹುದು. ಟ್ರಕ್ಕಿನ ಆಘಾತ ಹಾಗು ಆಜಾದ ಮೈದಾನದಲ್ಲಿಯ ಗದ್ದಲ ಇವೆರಡೂ ನಿಮ್ಮ ಸ್ಥಿತ್ಯಂತರಕ್ಕೆ ನಿಮಿತ್ತ ಮಾತ್ರವಾಗಿರಬೇಕು."

"ಹೌದು, ನಾನು ಪಾನೀಪತ್ ಚರ್ಚಾಕೂಟದ ಅಧ್ಯಕ್ಷೀಯ ಭಾಷಣದ ಕೆಲವು ರೂಪರೇಷೆಗಳನ್ನು ಚಿಂತಿಸುತ್ತಿದ್ದೆ. ಆ ಯುದ್ಧದಲ್ಲಿ ಬೇರೇನಾದರೂ ಪರಿಣಾಮವಾಗಿದ್ದರೆ ಮುಂದಿನ ಇತಿಹಾಸ ಹೇಗೆ ಬದಲಾಗುತ್ತಿತ್ತೆಂಬುದನ್ನು ಯೋಚಿಸುತ್ತ ನಡೆದದ್ದು ನಿಜ," ಎಂದು ಪಂತರು ಏನೋ ಲೆಕ್ಕ ಹಾಕುತ್ತ ಹೇಳಿದರು. "ಅದು ನನ್ನ ಒಂದು ಸಾವಿರದ ಅಧ್ಯಕ್ಷ ಭಾಷಣವಾಗುತ್ತಿತ್ತು!"

"ಮತ್ತೆ ಈಗಂತೂ ನೀವು ಪ್ರತ್ಯಕ್ಷ ಅನುಭವಿಸಿ ಭಾಷಣ ಮಾಡಬಹುದಲ್ಲ! ಅಂದು ನಾನೂ ಅವಶ್ಯ ಕೇಳಲು ಬರುವೆ." ಎಂದು ರಾಜೇಂದ್ರ ಹೇಳಿದ. ಆದರೆ ಪಂತರು ತಲೆ ಅಲ್ಲಾಡಿಸುತ್ತ ಹೇಳಿದರು.

"ಇಲ್ಲ ರಾಜೇಂದ್ರ! ನನ್ನ ಒಂದು ಸಾವಿರದ ಹಾಗು ಕೊನೆಯ ಅಧ್ಯಕ್ಷೀಯ ಭಾಷಣ ಸಪ್ಟೆಂಬರ್ ಎರಡರಂದು ರಾತ್ರಿ ಆಜಾದ ಮೈದಾನದಲ್ಲಿಯೇ ಆಗಿದೆ. ಸಭೆಗೊಬ್ಬ ಅಧ್ಯಕ್ಷನ ಅವಶ್ಯಕತೆ ಇದೆಯೆಂಬ ತತ್ತ್ವವನ್ನು ಮಂಡಿಸುತ್ತ ಅಂದಿನ ಗದ್ದಲದಲ್ಲಿ ಅದೃಶ್ಯರಾದ ಪ್ರಾಧ್ಯಾಪಕ ಗಂಗಾಧರಪಂತ ಗಾಯತೋಂಡೆಯವರು ಇನ್ನೆಂದೂ ವ್ಯಾಸಪೀಠದ ಮೇಲೆ ಕಾಣಲಾರರು. ಪಾನೀಪತ್ ಚರ್ಚಾಕೂಟದ ಆಯೋಜಕರಿಗೆ ನಾನು ಅಧ್ಯಕ್ಷಪದವನ್ನು ವಹಿಸಲಾರೆನೆಂದು ತಿಳಿಸಿರುವೆ."

Printed & published by Shri K. Janardana for the Karnataka Patrika Private Ltd. at the Samyukta Karnatak Press, Koppikar Road, Hubli. Rep : Bombay: V. S. Mani, Phone: 472794, Calcutta: H. Muzamdar, Phone : 46-4238 : Madras : P. N. Srinivasan, Phone: 83748; New Delhi : P. R. Chopra , Phone : 224130.

Statement about ownership and other particulars about newspaper **Kasturi**, *to be published in the first issue every year after the last day of February.*

FORM IV

(See Rule 8)

1. Place of publication .. HUBLI
2. Periodicity of its publication: Monthly
3. Printer's name .. K. Janardana
   Whether citizen of India? .. Yes
   If foreigner, state the country of origin .. —
   Address .. Karnataka Patrika (Pri) Ltd Post Box No. 30, Hubli-20
4. Publisher's name .. K. Janardana
   Whether citizen of India? .. Yes
   If foreigner, state the .. —
   country of origin. .. Karnataka Patrika (Pri) Ltd
   Address Post Box No. 30, Hubli-20
5. Editor's name .. Khadri Shamanna
   Whether citizen of India? .. Yes
   If foreigner, state the country of origin .. —
   Address .. Karnataka Patrika (Pri) Ltd 2, Residency Road, Bangalore-25
6. Names and addresses of individuals who own the newspaper and partners or share-holders holding more than one percent of the total capital. .. Sri. T. Krishanamurty Director, Tekur House, Gandhinagar, Bellary. Sri K. S. Veerbhadrappa Director, Sandur

I, K. Janardana, hereby declare that the particulars given above are true to the best of my knowledge and belief.

Hubli

Dated 1-3-1977

K. Janardana

Signature of Publisher

KASTURI PRICE: 1-25 Regd. No. KRNG 43
Registered with the Registrar of Newspapers for India under No. 3633/57

